ಪ್ರಜಾವಾಣಿ
ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಬಿಜೆಪಿ ಶಾಸಕ ಯತ್ನಾಳ ಆರೋಪ: ಎಸಿಬಿ ತನಿಖೆಗೆ ಡಿಕೆಶಿ ಆಗ್ರಹ

‘ಸಿ.ಎಂ ಸ್ಥಾನಕ್ಕೆ ₹2,500 ಕೋಟಿ’

ಪ್ರಜಾವಾಣಿ ವಾರ್ತೆ

ಬೆಂಗಳೂರು/ಬೆಳಗಾವಿ: ‘ದೆಹಲಿಯಿಂದ ನನ್ನ ಬಳಿಗೆ ಬಂದಿದ್ದ ಕೆಲವರು, ನಿಮ್ಮನ್ನು ಮುಖ್ಯಮಂತ್ರಿ ಮಾಡ್ತೀವಿ ₹2,500 ಕೋಟಿ ಸಿದ್ಧವಿಟ್ಟುಕೊಳ್ಳಿ ಎಂದಿದ್ದರು’ ಎಂದು ವಿಜಯಪುರ ನಗರ ಬಿಜೆಪಿ ಶಾಸಕ ಬಸನಗೌಡ ಪಾಟೀಲ ಯತ್ನಾಳ ಹೇಳಿದ್ದು, ಚರ್ಚೆಗೆ ಗ್ರಾಸವಾಗಿದೆ.

ಯತ್ನಾಳ

ಲಿಂಗಾಯತ ಪಂಚಮಸಾಲಿ ಸಮಾಜಕ್ಕೆ ಹಿಂದುಳಿದ ವರ್ಗ 2ಎ ಮೀಸಲಾತಿಗೆ ಆಗ್ರಹಿಸಿ ಜಿಲ್ಲೆ ರಾಮದುರ್ಗದಲ್ಲಿ ಗುರುವಾರ ನಡೆದ ಪ್ರತಿಭಟನಾ ಸಮಾವೇಶದಲ್ಲಿ ಅವರು ಮಾತನಾಡಿದ ವಿಡಿಯೊ ಸಾಮಾಜಿಕ ಜಾಲತಾಣಗಳಲ್ಲಿ ಶುಕ್ರವಾರ ವೈರಲ್ ಆಗಿದೆ.

‘₹ 2,500 ಕೋಟಿ ಎಂದರೆ ಏನೆಂದು ತಿಳಿದಿದ್ದೀರಿ?! ಅಷ್ಟು ಹಣ ಹೆಂಗ್ ಇಡೋದು? ಕೋಣೆಯಲ್ಲಾ? ಗೋದಾಮಿನಲ್ಲಾ?! ಎಂದು ಅವರಿಗೆ ಕೇಳಿದ್ದೆ’ ಎಂದು ಅವರು ಹೇಳಿರುವುದು ವಿಡಿಯೊದಲ್ಲಿದೆ.

ಆಗ್ರಹ: ಮುಖ್ಯಮಂತ್ರಿ ಹುದ್ದೆ ನೀಡಲು ₹ 2,500 ಕೋಟಿ ನೀಡುವಂತೆ ದೆಹಲಿಯವರು ಬೇಡಿಕೆ ಇಟ್ಟಿದ್ದರು ಎಂಬ ಬಿಜೆಪಿ ಶಾಸಕ ಬಸನಗೌಡ ಪಾಟೀಲ ಯತ್ನಾಳ ಆರೋಪದ ಕುರಿತು ಭ್ರಷ್ಟಾಚಾರ ನಿಗ್ರಹ ದಳ (ಎಸಿಬಿ) ಎಫ್‌ಐಆರ್ ದಾಖಲಿಸಿ, ತನಿಖೆ ನಡೆಸಬೇಕು ಎಂದು ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಆಗ್ರಹಿಸಿದರು.

ಬೆಂಗಳೂರಿನಲ್ಲಿ ಸುದ್ದಿಗಾರರ ಜತೆ ಶುಕ್ರವಾರ ಮಾತನಾಡಿದ ಅವರು, ‘ಮುಖ್ಯಮಂತ್ರಿ ಆಗಬೇಕಾದರೆ ₹ 2,500 ಕೋಟಿ, ಮಂತ್ರಿ ಆಗಬೇಕಾದರೆ ₹ 100 ಕೋಟಿ ಕೊಡಬೇಕು ಎಂದು ಯತ್ನಾಳ ಹೇಳಿದ್ದಾರೆ. ಅವರು ಸಾಮಾನ್ಯ ವ್ಯಕ್ತಿಯಲ್ಲ. ಸಂಸದರೂ, ಕೇಂದ್ರ ಸಚಿವರೂ ಆಗಿದ್ದವರು. ಅವರ ಹೇಳಿಕೆಯನ್ನು ಹಗುರವಾಗಿ ಪರಿಗಣಿಸಬಾರದು. ಈ ಬಗ್ಗೆ ರಾಷ್ಟ್ರ ಮಟ್ಟದಲ್ಲಿ ದೊಡ್ಡ ಚರ್ಚೆ ಆಗಬೇಕು ’ ಎಂದು ಒತ್ತಾಯಿಸಿದರು.

ಬಿಜೆಪಿ ಸರ್ಕಾರದಲ್ಲಿ ಪಿಎಸ್ಐ, ತಹಶೀಲ್ದಾರ್ ಸೇರಿದಂತೆ ಎಲ್ಲ ಹುದ್ದೆಗಳಿಗೂ ದರ ನಿಗದಿ ಮಾಡಲಾಗಿದೆ. ಮುಖ್ಯಮಂತ್ರಿ, ಮಂತ್ರಿ ಹುದ್ದೆಗೂ ದರ ನಿಗದಿ ಮಾಡಿರುವುದನ್ನು ಯತ್ನಾಳ ಹೇಳಿದ್ದಾರೆ. ಎಸಿಬಿ ಸ್ವಯಂಪ್ರೇರಿತ ಪ್ರಕರಣ ದಾಖಲಿಸಿಕೊಂಡು ತನಿಖೆ ನಡೆಸಬೇಕು ಎಂದರು.

ಪರಿಹಾರಕ್ಕೆ ಆಗ್ರಹ: ‘ಕೋವಿಡ್‌ನಿಂದ ರಾಜ್ಯದಲ್ಲಿ 4.5 ಲಕ್ಷ ಜನರು ಮೃತಪಟ್ಟಿದ್ದಾರೆ ಎಂದು ನಾವು ಹೇಳಿದಾಗ ಸರ್ಕಾರ ಅಲ್ಲಗಳೆದಿತ್ತು. ಆರೋಗ್ಯ ಸಚಿವರು ಸಾವಿನ ಸಂಖ್ಯೆಯನ್ನು ಮುಚ್ಚಿಟ್ಟಿದ್ದರು. ಕೋವಿಡ್‌ನಿಂದ ಭಾರತದಲ್ಲಿ 47 ಲಕ್ಷ ಮಂದಿ ಸತ್ತಿದ್ದಾರೆ ಎಂದು ವಿಶ್ವ ಆರೋಗ್ಯ ಸಂಸ್ಥೆ ವರದಿ ನೀಡಿದೆ. ಈಗಲಾದರೂ ಸರ್ಕಾರ ಸತ್ಯ ಒಪ್ಪಿಕೊಂಡು ಮೃತ ಕುಟುಂಬಗಳಿಗೆ ಪರಿಹಾರ ನೀಡಬೇಕು’ ಎಂದು ಶಿವಕುಮಾರ್ ಒತ್ತಾಯಿಸಿದರು.

‘ರಾಜ್ಯಪಾಲರು ತನಿಖೆಗೆ ಆದೇಶಿಸಲಿ’

ಬೆಂಗಳೂರು: ಮುಖ್ಯಮಂತ್ರಿ ಹುದ್ದೆ ನೀಡಲು ₹ 2,500 ಕೋಟಿಗೆ ಬೇಡಿಕೆ ಬಂದಿತ್ತು ಎಂಬ ಬಸನಗೌಡ ಪಾಟೀಲ ಯತ್ನಾಳ ಹೇಳಿಕೆ ಕುರಿತು ರಾಜ್ಯಪಾಲ ಥಾವರಚಂದ್ ಗೆಹಲೋತ್ ಅವರು ತನಿಖೆಗೆ ಆದೇಶಿಸಬೇಕು ಎಂದು ವಿಧಾನ ಪರಿಷತ್ ವಿರೋಧ ಪಕ್ಷದ ನಾಯಕ ಬಿ.ಕೆ. ಹರಿಪ್ರಸಾದ್ ಆಗ್ರಹಿಸಿದರು.

ಸುದ್ದಿಗಾರರ ಜತೆ ಶುಕ್ರವಾರ ಮಾತನಾಡಿದ ಅವರು, ‘ಮುಖ್ಯಮಂತ್ರಿ ಸ್ಥಾನಕ್ಕಾಗಿ ₹ 2,500 ಕೋಟಿಗೆ ಬೇಡಿಕೆ ಇಟ್ಟಿರುವುದು ಕರ್ನಾಟಕದ ಜನರು ತಲೆ ತಗ್ಗಿಸುವಂತಹ ಬೆಳವಣಿಗೆ. ಚುನಾವಣೆಗಳು ನಮಗೆ ವ್ಯವಹಾರ ಇದ್ದಂತೆ ಎಂದು ಕೇಂದ್ರ ಗೃಹ ಸಚಿವ ಅಮಿತ್ ಶಾ ಹಿಂದೆ ಹೇಳಿದ್ದರು. ಅದಕ್ಕೆ ಪೂರಕವಾಗಿ ಬಿಜೆಪಿಯ ಕೇಂದ್ರ ನಾಯಕರು ಯತ್ನಾಳರಿಗೆ ಬೇಡಿಕೆ ಇಟ್ಟಿರಬಹುದು’ ಎಂದು ಹೇಳಿದರು.

‘ಹಣ ಕೇಳಿದವರು ಯಾರು ಎಂಬುದನ್ನು ಯತ್ನಾಳ ಸ್ಪಷ್ಟಪಡಿಸಬೇಕು. ಅಮಿತ್ ಶಾ ಕೇಳಿದ್ದರೆ? ಆರ್‌ಎಸ್‌ಎಸ್ ಸರಸಂಘಚಾಲಕ ಮೋಹನ್ ಭಾಗವತ್ ಕೇಳಿದ್ದರೆ? ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ಜೆ.ಪಿ. ನಡ್ಡಾ ಅಥವಾ ಪ್ರಧಾನಿ ನರೇಂದ್ರ ಮೋದಿ ಹಣ ಕೇಳಿದ್ದರೆ ಎಂಬುದನ್ನು ಬಹಿರಂಗಪಡಿಸಬೇಕು’ ಎಂದು ಬಿ.ಕೆ.ಹರಿಪ್ರಸಾದ್ ಒತ್ತಾಯಿಸಿದರು.

‘ಯತ್ನಾಳ ಹೇಳಿಕೆಗೂ ಪಕ್ಷಕ್ಕೂ ಸಂಬಂಧವಿಲ್ಲ’

ಬೆಂಗಳೂರು: ಬಸನಗೌಡ ಪಾಟೀಲ ಯತ್ನಾಳರ ಹೇಳಿಕೆಗೂ ಬಿಜೆಪಿಗೂ ಸಂಬಂಧವಿಲ್ಲ. ಅದು ಅವರ ವೈಯಕ್ತಿಕ ಹೇಳಿಕೆ ಎಂದು ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ನಳಿನ್ ಕುಮಾರ್ ಕಟೀಲ್ ಹೇಳಿದ್ದಾರೆ.

‘ಮುಖ್ಯಮಂತ್ರಿ ಹುದ್ದೆಗೆ ಹಣಕ್ಕೆ ಬೇಡಿಕೆ ಇಡಲಾಗಿತ್ತು’ ಎಂಬ ಹೇಳಿಕೆ ಕುರಿತು ಪ್ರತಿಕ್ರಿಯೆ ನೀಡಿರುವ ಅವರು, ‘ಯತ್ನಾಳ ಅವರು ನಿರ್ದಿಷ್ಟವಾಗಿ ಬಿಜೆಪಿ ನಾಯಕರ ವಿರುದ್ಧ ಆರೋಪ ಮಾಡಿಲ್ಲ. ಬಿಜೆಪಿ, ಕಾಂಗ್ರೆಸ್, ಜೆಡಿಎಸ್ ಎಲ್ಲ ಪಕ್ಷಗಳ ಬಗ್ಗೆಯೂ ಚರ್ಚಿಸುತ್ತಾ, ಹೇಳಿಕೆ ನೀಡಿದ್ದಾರೆ. ಅವರು ಎಲ್ಲಿಯೂ ಬಿಜೆಪಿ ನಾಯಕತ್ವದ ವಿರುದ್ಧ ಆಪಾದನೆ ಮಾಡಿಲ್ಲ’ ಎಂದಿದ್ದಾರೆ.

ವಿಡಿಯೊ ನೋಡಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ
ಪ್ರಜಾವಾಣಿ ನೋಡಿಯೊ

‘ಮಸೀದಿಗಳಲ್ಲಿ ಧ್ವನಿವರ್ಧಕ: ಮೂಲಭೂತ ಹಕ್ಕಲ್ಲ’

ಪ್ರಜಾವಾಣಿ ವಾರ್ತೆ

ಲಖನೌ: ‘ಮಸೀದಿಗಳಲ್ಲಿ ಆಜಾನ್ ಕೂಗಲು ಧ್ವನಿವರ್ಧಕ ಬಳಸುವುದು ಮೂಲಭೂತ ಹಕ್ಕಲ್ಲ. ಇದು ಕಾನೂನಿನಲ್ಲಿ ಸ್ಪಷ್ಟವಾಗಿದೆ’ ಎಂದು ಉತ್ತರ ಪ್ರದೇಶದ ಅಲಹಾಬಾದ್ ಹೈಕೋರ್ಟ್ ಶುಕ್ರವಾರ ತೀರ್ಪು ನೀಡಿದೆ.

ಆಜಾನ್ ಧ್ವನಿವರ್ಧಕಕ್ಕೆ ಪ್ರತಿಯಾಗಿ, ಅಲಹಾಬಾದ್‌ನಲ್ಲಿ ಧ್ವನಿ ವರ್ಧಕಗಳಿಂದ ಭಜನೆ ಆರಂಭಿಸುವುದಾಗಿ ಹಿಂದೂ ಸಂಘಟನೆಗಳು ಪ್ರಕಟಿಸಿದ ಹಿನ್ನೆಲೆಯಲ್ಲಿ ಉಂಟಾದ ವಿವಾದದ ವೇಳೆ ಹೈಕೋರ್ಟ್‌ನಿಂದ ಮಹತ್ವದ ತೀರ್ಪು ಬಂದಿದೆ.

ಉತ್ತರ ಪ್ರದೇಶದಲ್ಲಿ ಮಸೀದಿಗಳಲ್ಲಿ ಧ್ವನಿವರ್ಧಕಗಳ ಬಳಕೆ ನಿಷೇಧಿಸಿರುವ ಸರ್ಕಾರದ ಆದೇಶವನ್ನು ಪ್ರಶ್ನಿಸಿ, ಇದು ಕಾನೂನು ಬಾಹಿರ ಮತ್ತು ಮೂಲಭೂತ ಹಕ್ಕಿನ ಉಲ್ಲಂಘನೆ ಎಂದು ವಾದಿಸಿ ಬದೌನ್ ಜಿಲ್ಲೆಯ ಇರ್ಫಾನ್ ಕೋರ್ಟ್ ಮೊರೆ ಹೋಗಿದ್ದರು.

ವಿಚಾರಣೆ ನಡೆಸಿದ ನ್ಯಾಯಮೂರ್ತಿಗಳಾದ ವಿವೇಕ್ ಕುಮಾರ್ ಬಿರ್ಲಾ ಮತ್ತು ವಿಕಾಸ್ ಬುಧ್ವಾರ್ ನೇತೃತ್ವದ ದ್ವಿಸದಸ್ಯ ಪೀಠವು, ‘ಈ ಅರ್ಜಿ ತಪ್ಪುಗ್ರಹಿಕೆಯಿಂದ ಕೂಡಿದ್ದು, ವಜಾಗೊಳಿಸಲಾಗುತ್ತಿದೆ’ ಎಂದು ತಿಳಿಸಿದೆ.

ಧ್ವನಿವರ್ಧಕ ಬಳಕೆ ನಿರಾಕರಣೆಗೆ ಅಧಿಕಾರಿಗಳು ಸಕಾರಣ ನೀಡಬೇಕು ಎಂದು ಪೀಠವು ಸೂಚಿಸಿದೆ.

ಉತ್ತರ ಪ್ರದೇಶ ಸರ್ಕಾರ ಇತ್ತೀಚೆಗೆ ಸುಮಾರು 54 ಸಾವಿರ ‘ಅಕ್ರಮ’ ಧ್ವನಿವರ್ಧಕಗಳನ್ನು ತೆರವುಗೊಳಿಸಿದೆ. ಪ್ರಸಿದ್ಧ ಗೋರಖನಾಥ ದೇವಸ್ಥಾನದ ಮೇಲಿನ ಧ್ವನಿವರ್ಧಕವನ್ನು, ನಿವಾಸಿಗಳು ಹೆಚ್ಚಿನ ಡೆಸಿಬಲ್ ಶಬ್ದ ಕೇಳಿಸಿಕೊಳ್ಳಲಾಗದು ಎಂದಿದ್ದಕ್ಕೆ ಇತ್ತೀಚೆಗೆ ರಸ್ತೆ ಕಡೆಗೆ ತಿರುಗಿಸಲಾಗಿತ್ತು.

All chicken product contain added MONOSODIUM GLUTAMATE
NOT RECOMMENDED FOR INFANTS BELOW 12 MONTHS AND PREGNANT WOMEN
Limited period offer. T&Cs apply. for details refer to online.kfc.co.in/promotions. Delivery available in select stores.
Prices exclusive of taxes. All product images are for illustration purposes only, actual product may vary. *Vis-á-vis same á la carte order

ಪಂಜಾಬ್ ಪೊಲೀಸರಿಂದ ಬಿಜೆಪಿ ಮುಖಂಡನ ಸೆರೆ

ಬಗ್ಗಾ ಬಂಧನ ಪ್ರಹಸನ

ನವದೆಹಲಿ/ಚಂಡೀಗಡ (ಪಿಟಿಐ): ದೆಹಲಿ ಬಿಜೆಪಿಯ ಮುಖಂಡ ತಜಿಂದರ್ ಸಿಂಗ್ ಬಗ್ಗಾರನ್ನು ಪಂಜಾಬ್ ಪೊಲೀಸರು ದೆಹಲಿಯಲ್ಲಿ ಬಂಧಿಸಿ, ಮೊಹಾಲಿಯತ್ತ ಒಯ್ದಿದ್ದಾರೆ. ಪಂಜಾಬ್ ಪೊಲೀಸರನ್ನು ಕುರುಕ್ಷೇತ್ರದ ಬಳಿ ಹರಿಯಾಣ ಪೊಲೀಸರು ತಡೆಹಿಡಿದಿದ್ದಾರೆ. ಕುರುಕ್ಷೇತ್ರಕ್ಕೆ ಬಂದ ದೆಹಲಿ ಪೊಲೀಸರು, ಬಗ್ಗಾರನ್ನು ದೆಹಲಿಗೆ ವಾಪಸ್ ಕರೆದೊಯ್ದಿದ್ದಾರೆ. ಇದು ಬಿಜೆಪಿ ಮತ್ತು ಎಎಪಿ ಮಧ್ಯೆ ಜಟಾಪಟಿಗೆ ಕಾರಣವಾಗಿದೆ.

ಮುಖ್ಯಾಂಶಗಳು

- ಬಂಧನಕ್ಕೆ ಹರಿಯಾಣ ಪೊಲೀಸರಿಂದ ತಡೆ
- ದೆಹಲಿ ಪೊಲೀಸರಿಂದ ಬಗ್ಗಾ ರಕ್ಷಣೆ
- ಪಂಜಾಬ್ ಸರ್ಕಾರದಿಂದ ಹೈಕೋರ್ಟ್‌ನಲ್ಲಿ ಹೇಬಿಯಸ್ ಕಾರ್ಪಸ್ ಅರ್ಜಿ

ಈ ಕಾರ್ಯಾಚರಣೆ ಸಂಬಂಧ ಪಂಜಾಬ್–ಹರಿಯಾಣ ಹೈಕೋರ್ಟ್‌ನಲ್ಲಿ ಪಂಜಾಬ್ ಸರ್ಕಾರವು ಹೇಬಿಯಸ್ ಕಾರ್ಪಸ್ ಅರ್ಜಿ ಸಲ್ಲಿಸಿದೆ. ಪಂಜಾಬ್ ಸರ್ಕಾರವು ಹೇಬಿಯಸ್ ಕಾರ್ಪಸ್ ಅರ್ಜಿ ಸಲ್ಲಿಸಿರುವುದನ್ನು ದೆಹಲಿ ಪೊಲೀಸರ ಪರ ವಕಾಲತ್ತು ವಹಿಸಿಕೊಂಡಿರುವ ಹೆಚ್ಚುವರಿ ಸಾಲಿಸಿಟರ್ ಜನರಲ್ ಸತ್ಯಪಾಲ್ ಜೈನ್ ಪ್ರಶ್ನಿಸಿದ್ದಾರೆ. ಪಂಜಾಬ್ ಸರ್ಕಾರವು, ಬಗ್ಗಾ ಅವರನ್ನು ದೆಹಲಿ ಪೊಲೀಸರ ವಶಕ್ಕೆ ನೀಡಬಾರದು ಮತ್ತು ಹರಿಯಾಣದಲ್ಲೇ ಬಂಧನದಲ್ಲಿ ಇರಿಸಬೇಕು ಎಂದು ಕೋರಿದೆ. ಈ ಎರಡೂ ಮನವಿಯನ್ನು ಹೈಕೋರ್ಟ್ ನಿರಾಕರಿಸಿದೆ ಮತ್ತು ವಿಚಾರಣೆಯನ್ನು ಶನಿವಾರಕ್ಕೆ ಮುಂದೂಡಿದೆ.

ಏಪ್ರಿಲ್‌ನಲ್ಲಿ ಪ್ರಕರಣ ದಾಖಲು: ಕೋಮು ಭಾವನೆ ಕೆರಳಿಸಿದ, ಎರಡು ಕೋಮುಗಳ ಮಧ್ಯೆ ದ್ವೇಷ ಹುಟ್ಟುಹಾಕಿದ ಆರೋಪದಲ್ಲಿ ಪಂಜಾಬ್‌ನ ಮೊಹಾಲಿಯಲ್ಲಿ ಬಗ್ಗಾ ವಿರುದ್ಧ ಏಪ್ರಿಲ್ 1ರಂದು ಪ್ರಕರಣ ದಾಖಲಿಸಲಾಗಿತ್ತು. ಎಎಪಿ ನಾಯಕರು ನೀಡಿದ್ದ ದೂರಿನ ಆಧಾರದ ಮೇಲೆ ಈ ಪ್ರಕರಣವನ್ನು ದಾಖಲಿಸಲಾಗಿತ್ತು.

ದೆಹಲಿಯ ಜನಕಪುರಿಯಲ್ಲಿರುವ ಬಗ್ಗಾ ಅವರ ನಿವಾಸಕ್ಕೆ ಶುಕ್ರವಾರ ಬೆಳಿಗ್ಗೆ ಪಂಜಾಬ್ ಪೊಲೀಸರು ಬಂದಿದ್ದಾರೆ. ಬಗ್ಗಾರನ್ನು ಬಂಧಿಸಿ, ಮೊಹಾಲಿಯತ್ತ ಪ್ರಯಾಣ ಆರಂಭಿಸಿದ್ದಾರೆ. ಅದರ ಬೆನ್ನಲ್ಲೇ ಬಗ್ಗಾ ಅವರ ತಂದೆ ಪ್ರೀತ್‌ಪಾಲ್ ಸಿಂಗ್ ಬಗ್ಗಾ ಅವರು ದೆಹಲಿ ಪೊಲೀಸರಲ್ಲಿ ಅಪಹರಣದ ದೂರು ನೀಡಿದ್ದಾರೆ

‘ಮನೆಗೆ 10–15 ಜನರು ನುಗ್ಗಿದರು. ನನ್ನ ಮುಖಕ್ಕೆ ಗುದ್ದಿದರು. ನನ್ನ ಮಗನನ್ನು ಎಳೆದೊಯ್ದರು. ವಿಡಿಯೊ ಮಾಡಲು ಆರಂಭಿಸಿದಾಗ, ನನ್ನ ಫೋನ್ ಅನ್ನು ಕಸಿದುಕೊಂಡರು’ ಎಂದು ಪ್ರೀತ್‌ಪಾಲ್ ಸಿಂಗ್ ತಮ್ಮ ದೂರಿನಲ್ಲಿ ಆರೋಪಿಸಿದ್ದಾರೆ. ಈ ದೂರಿನ ಅನ್ವಯ ದೆಹಲಿ ಪೊಲೀಸರು ಎಫ್‌ಐಆರ್ ದಾಖಲಿಸಿದ್ದಾರೆ. ಅಷ್ಟರಲ್ಲಾಗಲೇ ಪಂಜಾಬ್ ಪೊಲೀಸರು ಹರಿಯಾಣದ ಕುರುಕ್ಷೇತ್ರವನ್ನು ಹಾದು ಹೋಗುತ್ತಿದ್ದರು.

ಅವರನ್ನು ಹೆದ್ದಾರಿಯಲ್ಲೇ ತಡೆದ ಹರಿಯಾಣ ಪೊಲೀಸರು, ಕುರುಕ್ಷೇತ್ರದ ಠಾಣೆಯೊಂದಕ್ಕೆ ಕರೆದೊಯ್ದಿದ್ದಾರೆ.

‘ತಜಿಂದರ್ ಬಗ್ಗಾ ಅವರನ್ನು ಬಲವಂತವಾಗಿ ಹೊತ್ತೊಯ್ಯಲಾಗಿದೆ ಎಂದು ಮಾಹಿತಿ ಬಂದಿದೆ. ಹೀಗಾಗಿ ಪರಿಶೀಲನೆ ನಡೆಸಬೇಕಿದೆ’ ಎಂದು ಹರಿಯಾಣ ಪೊಲೀಸರು ಹೇಳಿದ್ದಾರೆ. ಕೆಲವೇ ನಿಮಿಷಗಳಲ್ಲಿ ಅಲ್ಲಿಗೆ ಬಂದ ದೆಹಲಿ ಪೊಲೀಸರು, ಬಗ್ಗಾ ಅವರನ್ನು ಪಂಜಾಬ್ ಪೊಲೀಸರಿಂದ ಬಿಡಿಸಿಕೊಂಡು ದೆಹಲಿಗೆ ಕರೆದೊಯ್ದಿದ್ದಾರೆ.

ಬಗ್ಗಾ ಅವರ ತಂದೆಯ ದೂರಿನ ಆಧಾರದ ಮೇಲೆ ಪಂಜಾಬ್ ಪೊಲೀಸರ ವಿರುದ್ಧ ದೆಹಲಿ ಪೊಲೀಸರು ಅತಿಕ್ರಮ ಪ್ರವೇಶ, ಆಸ್ತಿಗೆ ಹಾನಿ, ಅಪಹರಣ, ದರೋಡೆ ಮತ್ತು ಧಾರ್ಮಿಕ ಭಾವನೆಗೆ ಧಕ್ಕೆ ತಂದ ಆರೋಪದಲ್ಲಿ ಪ್ರಕರಣ ದಾಖಲಿಸಿದ್ದಾರೆ.

‘ಹರಿಯಾಣ ಪೊಲೀಸರ ಕ್ರಮ ಕಾನೂನುಬಾಹಿರ’

‘ಬಗ್ಗಾ ಅವರನ್ನು ಬಂಧಿಸಿ ಕರೆತರುತ್ತಿದ್ದ ಪಂಜಾಬ್ ಪೊಲೀಸರನ್ನು, ಹರಿಯಾಣ ಪೊಲೀಸರು ತಡೆಹಿಡಿದದ್ದು ಸಂಪೂರ್ಣ ಕಾನೂನುಬಾಹಿರ’ ಎಂದು ಪಂಜಾಬ್ ಪೊಲೀಸರು, ಹರಿಯಾಣ ಪೊಲೀಸರಿಗೆ ಪತ್ರ ಬರೆದಿದ್ದಾರೆ.

ಪಂಜಾಬ್‌ನ ಮೊಹಾಲಿಯ ಹಿರಿಯ ಪೊಲೀಸ್ ವರಿಷ್ಠಾಧಿಕಾರಿ ವಿವೇಕ್ ಶೀಲ್ ಸೋನಿ ಅವರು ಈ ಸಂಬಂಧ, ಹರಿಯಾಣದ ಕುರುಕ್ಷೇತ್ರದ ಪೊಲೀಸ್ ವರಿಷ್ಠಾಧಿಕಾರಿಗೆ ಪತ್ರ ಬರೆದಿದ್ದಾರೆ. ‘ಬಗ್ಗಾ ವಿರುದ್ಧ ಏಪ್ರಿಲ್ 1ರಂದೇ ಎಫ್‌ಐಆರ್ ದಾಖಲಾಗಿದೆ. ವಿಚಾರಣೆಗೆ ಹಾಜರಾಗುವಂತೆ ಅವರಿಗೆ ಐದು ಬಾರಿ ನೋಟಿಸ್ ನೀಡಲಾಗಿದೆ. ಆದರೆ ಅವರು ಉದ್ದೇಶಪೂರ್ವಕವಾಗಿ ವಿಚಾರಣೆಯಿಂದ ತಪ್ಪಿಸಿಕೊಳ್ಳುತ್ತಿದ್ದಾರೆ. ಹೀಗಾಗಿ ಅವರನ್ನು ಬಂಧಿಸಿ ಕರೆತರಲಾಗುತ್ತಿತ್ತು’ ಎಂದು ಸೋನಿ ಅವರು ತಮ್ಮ ಪತ್ರದಲ್ಲಿ ವಿವರಿಸಿದ್ದಾರೆ.

‘ಬಗ್ಗಾ ಅವರನ್ನು ಬಂಧಿಸಿ ಕರೆತರುತ್ತಿದ್ದ ಪಂಜಾಬ್ ಪೊಲೀಸರನ್ನು, ಹರಿಯಾಣ ಪೊಲೀಸರು ತಡೆಹಿಡಿದಿದ್ದಾರೆ. ನಮ್ಮ ಪೊಲೀಸರನ್ನು ತಡೆದು, ಠಾಣೆಗೆ ಕರೆದೊಯ್ದಿದ್ದು ಅಕ್ರಮ ಬಂಧನಕ್ಕೆ ಸಮ. ಜತೆಗೆ ಅಪರಾಧ ನ್ಯಾಯ ವ್ಯವಸ್ಥೆಯ ಕರ್ತವ್ಯಕ್ಕೆ ಅಡ್ಡಿಪಡಿಸಿದ್ದಕ್ಕೆ ಸಮ’ ಎಂದು ಸೋನಿ ಹೇಳಿದ್ದಾರೆ.

ಯಾವುದೇ ರಾಜ್ಯದ ಪೊಲೀಸರು, ಬೇರೊಂದು ರಾಜ್ಯದಲ್ಲಿ ಯಾರನ್ನಾದರೂ ಬಂಧಿಸುವ ಮುನ್ನ ಸ್ಥಳೀಯ ಪೊಲೀಸರಿಗೆ ಮಾಹಿತಿ ನೀಡಬೇಕು. ಪಂಜಾಬ್ ಪೊಲೀಸರು ಇದನ್ನು ಮಾಡಿಲ್ಲ

ನೂಪುರ್ ಶರ್ಮಾ, ಬಿಜೆಪಿ ನಾಯಕಿ

ಬಗ್ಗಾ ಅವರ ಬಂಧನದ ಬಗ್ಗೆ ದೆಹಲಿ ಪೊಲೀಸರಿಗೆ ಮಾಹಿತಿ ನೀಡಲು ನಮ್ಮ ಸಿಬ್ಬಂದಿ ಬೆಳಿಗ್ಗೆಯಿಂದ ಜನಕಪುರಿ ಠಾಣೆಯಲ್ಲಿದ್ದರು. ಆದರೆ ದೆಹಲಿ ಪೊಲೀಸರು ಮಾಹಿತಿ ದಾಖಲಿಸಿಕೊಂಡಿಲ್ಲ

ಪಂಜಾಬ್ ಪೊಲೀಸರು

ತಜಿಂದರ್ ಸಿಂಗ್ ಬಗ್ಗಾ ಅವರನ್ನು ಶುಕ್ರವಾರ ಬಂಧಿಸುವ ಬಗ್ಗೆ ಪಂಜಾಬ್ ಪೊಲೀಸರಿಂದ ನಮಗೆ ಯಾವುದೇ ರೀತಿಯ ಮಾಹಿತಿ ಬಂದಿರಲಿಲ್ಲ

ದೆಹಲಿ ಪೊಲೀಸರು

ನಿವೃತ್ತ ನ್ಯಾಯಮೂರ್ತಿ ಕೆ.ಚಂದ್ರು ಬೇಸರ

ದ್ವೇಷ ರಾಜಕಾರಣಕ್ಕೆ ಪ್ರಯೋಗ ಶಾಲೆಯಾದ ಕರ್ನಾಟಕ

ಪ್ರಜಾವಾಣಿ ವಾರ್ತೆ

ಮೈಸೂರು: ‘ದ್ವೇಷ ರಾಜಕಾರಣಕ್ಕೆ ಕರ್ನಾಟಕ ಪ್ರಯೋಗಶಾಲೆಯಾಗುತ್ತಿದೆ’ ಎಂದು ಮದ್ರಾಸ್ ಹೈಕೋರ್ಟ್‌ನ ನಿವೃತ್ತ ನ್ಯಾಯಮೂರ್ತಿ ಕೆ.ಚಂದ್ರು ಬೇಸರ ವ್ಯಕ್ತಪಡಿಸಿದರು.

ಇಲ್ಲಿನ ಜೆಎಸ್‌ಎಸ್ ಕಾನೂನು ಕಾಲೇಜಿನಲ್ಲಿ ಶುಕ್ರವಾರ ವಿಶೇಷ ಉಪನ್ಯಾಸ ನೀಡಿದ ಬಳಿಕ ಅವರು ಸುದ್ದಿಗಾರರೊಂದಿಗೆ ಮಾತನಾಡಿ, ‘ಹಿಜಾಬ್, ಹಲಾಲ್, ಆಜಾನ್‌ನಂತಹ ವಿಷಯಗಳು ಹೊಸದಲ್ಲ. ಮೊದಲಿನಿಂದಲೂ ಅವು ನಮ್ಮ ಜತೆಯಲ್ಲೇ ಇವೆ. ದಕ್ಷಿಣ ಭಾರತದ ಬೇರೆ ಯಾವುದೇ ರಾಜ್ಯಗಳಲ್ಲಿ ಕಾಣದ ವಿವಾದಗಳು ಕರ್ನಾಟಕದಲ್ಲಿ ನಡೆದಿವೆ. ಕರ್ನಾಟಕದ ನೆಲ ಪ್ರಯೋಗಶಾಲೆಯಾಗುತ್ತಿದೆಯೇ ಎಂಬ ಅನುಮಾನ ಕಾಡುತ್ತಿದೆ. ಅವುಗಳನ್ನು ನಿಭಾಯಿಸುವಲ್ಲಿ ಬಿಜೆಪಿ ಹಾಗೂ ಕಾಂಗ್ರೆಸ್ ಎರಡೂ ವಿಫಲಗೊಂಡಿವೆ’ ಎಂದರು.

‘ದಿನೇ ದಿನೇ ಸಮಾಜದಲ್ಲಿ ಸಹಿಷ್ಣುತಾ ಭಾವನೆ ಕಡಿಮೆಯಾಗುತ್ತಿದೆ. ಪಾಕಿಸ್ತಾನ ಇಸ್ಲಾಂ ರಾಷ್ಟ್ರವಾದರೆ ಭಾರತ ಹಿಂದೂ ರಾಷ್ಟ್ರವಲ್ಲ. ಇದೊಂದು ಜಾತ್ಯತೀತ ದೇಶ. ಇಲ್ಲಿ ಒಂದು ಧರ್ಮ, ಒಂದು ಆಹಾರ ಪದ್ಧತಿ, ಒಂದು ಸಿದ್ಧಾಂತಗಳನ್ನು ಹೇರುವುದು ತಪ್ಪು. ಇಲ್ಲಿರುವ ಅತಿ ಕಡಿಮೆ ಸಂಖ್ಯೆಯ ಪಾರ್ಸಿ ಧರ್ಮದವರೂ ತಮ್ಮ ಧಾರ್ಮಿಕ ಆಚರಣೆಗಳನ್ನು ಮಾಡಲು ಸಂವಿಧಾನ ಮುಕ್ತ ಅವಕಾಶ ನೀಡಿದೆ’ ಎಂದು ಪ್ರತಿಪಾದಿಸಿದರು.

'ತಮಿಳುನಾಡಿನ ಕಂಚಿಯ ಶಂಕರಮಠದ ಪಕ್ಕದಲ್ಲೇ ಇರುವ ಮಸೀದಿಯಿಂದ ನಿತ್ಯ ಆಜಾನ್ ಕೇಳಿ ಬರುತ್ತಿದೆ. ಅಲ್ಲಿ ಯಾವುದೇ ಸಮಸ್ಯೆಯೂ ಇಲ್ಲ, ವಿವಾದವೂ ಇಲ್ಲ. ಕರ್ನಾಟಕದಲ್ಲಿ ಮಾತ್ರ ಬೇಕಿರದ ಇಂತಹ ವಿಷಯಗಳೇ ಮುನ್ನೆಲೆಗೆ ಬರುತ್ತಿವೆ. ಸಮಸ್ಯೆಗಳಿಂದ ಗಮನ ಬೇರೆಡೆ ಸೆಳೆಯಲಾಗುತ್ತಿದೆ' ಎಂದರು.

‘ಜೈ ಭೀಮ್’ ಸಿನಿಮಾ ನಿರ್ಮಾಪಕರು ಹಾಗೂ ನಟರ ವಿರುದ್ಧ ಪ್ರಕರಣ ದಾಖಲಾಗಿದೆ. ಬಹುಶಃ ಇದು ಹಣ ಕೀಳಲೆಂದೋ, ಪ್ರಸಿದ್ಧಿ ಪಡೆಯಲೆಂದೋ ಯಾವುದೋ ಸಂಘಟನೆ ದೂರು ನೀಡಿರುವಂತಿದೆ. ಪ್ರತಿ ಸಿನಿಮಾದಲ್ಲೂ ಏನಾದರೂ ಒಂದು ವಿವಾದ ಇರುತ್ತದೆ. ತನಿಖೆಯಲ್ಲಿ ಸತ್ಯಾಂಶ ಗೊತ್ತಾಗಲಿದೆ’ ಎಂದರು.

‘ಜೈ ಭೀಮ್’ ಸಿನಿಮಾ ಯಶಸ್ವಿಯಾದ ನಂತರ ಹಲವು ನಿರ್ಮಾಪಕರು ನನ್ನ ಪುಸ್ತಕಗಳನ್ನು ಸಿನಿಮಾ ಮಾಡಲು ಸಂಪರ್ಕಿಸಿದ್ದಾರೆ. ಆದರೆ, ಯಾರಿಗೂ ಅನುಮತಿ ನೀಡಿಲ್ಲ’ ಎಂದು ಪ್ರಶ್ನೆಯೊಂದಕ್ಕೆ ಪ್ರತಿಕ್ರಿಯಿಸಿದರು.

ಕವಲಂದೆ ವಿಡಿಯೊ; ಇಬ್ಬರ ಬಂಧನ

ಪ್ರಜಾವಾಣಿ ವಾರ್ತೆ

ಮೈಸೂರು: ‘ಕವಲಂದೆ ಬೋಲೆ ತೋ ಛೋಟಾ ಪಾಕಿಸ್ತಾನ್’ (ಕವಲಂದೆ ಎಂದರೆ ಪುಟ್ಟ ಪಾಕಿಸ್ತಾನ) ಎನ್ನುವ ಹಿನ್ನೆಲೆ ಧ್ವನಿ ಇರುವ ವಿಡಿಯೊ ಮಾಡಿದ ಆರೋಪಿಗಳಾದ ಫೈಸ್ ಷರೀಫ್ (22) ಹಾಗೂ ಅನಾನ್ ಅಲಿಖಾನ್ (25) ಅವರನ್ನು ಪೊಲೀಸರು ಶುಕ್ರವಾರ ಬಂಧಿಸಿದ್ದಾರೆ.

‘ಮುಸ್ಲಿಮರ ದೊಡ್ಡ ಗುಂಪು ನೋಡಿ ಖುಷಿಯಾಗಿ ಬಾಯ್ತಪ್ಪಿನಿಂದ ಈ ಪದಗಳು ಬಂದಿವೆ ಎಂದು ಆರೋಪಿಗಳು ವಿಚಾರಣೆ ವೇಳೆ ತಿಳಿಸಿದ್ದಾರೆ. ಇಬ್ಬರೂ ಗ್ಯಾರೇಜ್‌ನಲ್ಲಿ ಕೆಲಸ ಮಾಡುತ್ತಿದ್ದಾರೆ. ಯಾವುದೇ ಸಂಘಟನೆಯಲ್ಲೂ ಸದಸ್ಯರಾಗಿಲ್ಲ. ಮೇಲ್ನೋಟಕ್ಕೆ ಬಾಯ್ತಪ್ಪಿನಿಂದ, ಅಜ್ಞಾನದಿಂದ ಹೊರಟ ಮಾತುಗಳಾಗಿದ್ದು, ಯಾರ ಕುಮ್ಮಕ್ಕೂ ಇಲ್ಲ’ ಎಂದು ಪೊಲೀಸರು ತಿಳಿಸಿದ್ದಾರೆ.

ಗ್ರಾಮದ ಮುಖಂಡ ಜಾಮೀದ್ ಅಹಮ್ಮದ್ ಪ್ರತಿಕ್ರಿಯಿಸಿ, ‘ಇದು ನಮ್ಮ ಭಾರತ ದೇಶ. ಪಾಕಿಸ್ತಾನದಂತಹ ಮುಠ್ಠಾಳ ದೇಶದ ಹೆಸರು ನಮಗೆ ಬೇಡ. ಗೊತ್ತಿಲ್ಲದೇ ತಪ್ಪು ಮಾಡಿರುವ ಆರೋಪಿಗಳು ಶರಣಾಗುವಂತೆ ಮಾಡಿದ್ದೇವೆ. ಅವರಿಗೆ ಸಂವಿಧಾನ ಯಾವ ಶಿಕ್ಷೆ ಕೊಡುತ್ತದೋ ಅದನ್ನು ಕೊಡಲಿ’ ಎಂದು ಹೇಳಿದರು.

‘ಇಬ್ಬರು ಆರೋಪಿಗಳ ವಿಚಾರಣೆ ಮುಂದುವರಿದಿದೆ’ ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಆರ್.ಚೇತನ್ ತಿಳಿಸಿದರು.

ಪಿಎಸ್‌ಐಗೆ ಶಾಸಕ ಬೆದರಿಕೆ: ಆಡಿಯೊ ವೈರಲ್

ಪ್ರಜಾವಾಣಿ ವಾರ್ತೆ

ಚಿಕ್ಕಮಗಳೂರು: ಮೂಡಿಗೆರೆಯ ಬಿಜೆಪಿ ಶಾಸಕ ಎಂ.ಪಿ. ಕುಮಾರಸ್ವಾಮಿ ಅವರು ಪಿಎಸ್‌ಐಗೆ ಬೆದರಿಕೆ ಹಾಕಿರುವ ಫೋನ್ ಸಂಭಾಷಣೆಯ ಆಡಿಯೊ ಸಾಮಾಜಿಕ ಮಾಧ್ಯಮದಲ್ಲಿ ವೈರಲ್ ಆಗಿದ್ದು, ಈ ವಿಚಾರವು ಜಾತಿ ಲೇಪನ ಪಡೆದು ಫೇಸ್‌ಬುಕ್‌ನಲ್ಲಿ ಜಟಾಪಟಿಗೆ ಎಡೆಮಾಡಿದೆ.

ತಾಲ್ಲೂಕಿನ ಮಲ್ಲಂದೂರು ಠಾಣೆಗೆ ಕರ್ತವ್ಯಕ್ಕೆ ವರದಿ ಮಾಡಿಕೊಳ್ಳಲು ಬಂದ ಪಿಎಸ್‌ಐ ರವೀಶ್ ಅವರಿಗೆ ಶಾಸಕರು ಫೋನ್ ಮಾಡಿ ವಾಪಸ್ ಹೋಗಲು ಬೆದರಿಕೆ ಹಾಕಿರುವ ಸಂಭಾಷಣೆ ಆಡಿಯೊ ಕ್ಲಿಪ್‌ನಲ್ಲಿದೆ.

‘ಹಕ್ಕುಚ್ಯುತಿ ಮಂಡಿಸುವೆ: ಪಿಎಸ್‌ಐಗೆ ಬೆದರಿಕೆಹಾಕಿದ್ದು ನಿಜ ಎಂದು ಒಪ್ಪಿಕೊಂಡಿರುವ ಶಾಸಕರು, ‘ಫೋನ್ ಸಂಭಾಷಣೆ ರೆಕಾರ್ಡ್ ಮಾಡಿ ಸಾಮಾಜಿಕ ಮಾಧ್ಯಮದಲ್ಲಿ ವೈರಲ್ ಮಾಡಲಾಗಿದೆ. ಈ ಬಗ್ಗೆ ಹಕ್ಕುಚ್ಯುತಿ ಮಂಡಿಸುತ್ತೇನೆ’ ಎಂದು ಹೇಳಿದರು.ವಿವರವಾದ ಸುದ್ದಿಗೆ ಲಿಂಕ್‌ಗಳಿಗೆಸಂಪರ್ಕಿಸಿ: https://bit.ly/3LRooQ1 ಮತ್ತು https://bit.ly/3kNZp4m

ಬೆಂಗಳೂರಿನ ರಾಜರಾಜೇಶ್ವರಿ ನಗರದ ಕೈಲಾಸ ಆಶ್ರಮ ಮಹಾಸಂಸ್ಥಾನ ಮಠದಲ್ಲಿ ಜಯೇಂದ್ರ ಪುರಿ ಶ್ರೀಗಳು ಬಿಜೆಪಿ ಮುಖಂಡ ಬಿ.ಜೆ. ಪುಟ್ಟಸ್ವಾಮಿ ಅವರಿಗೆ ಸನ್ಯಾಸ ದೀಕ್ಷೆ ನೀಡಿದರು – ಪ್ರಜಾವಾಣಿ ಚಿತ್ರ

ಬಿ.ಜೆ. ಪುಟ್ಟಸ್ವಾಮಿಗೆ ಸನ್ಯಾಸ ದೀಕ್ಷೆ

ಬೆಂಗಳೂರು: ಬಿಜೆಪಿ ಮುಖಂಡ ಬಿ.ಜೆ. ಪುಟ್ಟಸ್ವಾಮಿ ಅವರು ಶುಕ್ರವಾರ ಸನ್ಯಾಸ ದೀಕ್ಷೆ ಸ್ವೀಕರಿಸಿದರು. ಗುರುವಾರ ಅವರು ಬ್ರಹ್ಮಚರ್ಯ ದೀಕ್ಷೆ ಪಡೆದಿದ್ದರು.

ಸನ್ಯಾಸ ಜೀವನ ಸ್ವೀಕರಿಸಿದ 82 ವರ್ಷದ ಪುಟ್ಟಸ್ವಾಮಿ ಅವರು, ತೈಲೇಶ್ವರ ಗಾಣಿಗರ ಮಹಾಸಂಸ್ಥಾನ ಮಠದ ಮೊದಲ ಪೀಠಾಧಿಪತಿಯಾಗಿ ಇದೇ 15ಕ್ಕೆ ಅಧಿಕಾರ ಸ್ವೀಕರಿಸಲಿದ್ದಾರೆ.

ಬೆಂಗಳೂರಿನ ರಾಜರಾಜೇಶ್ವರಿ ನಗರದ ಕೈಲಾಸ ಆಶ್ರಮ ಮಹಾಸಂಸ್ಥಾನ ಮಠದಲ್ಲಿ ಜಯೇಂದ್ರ ಪುರಿ ಶ್ರೀಗಳಿಂದ ಪುಟ್ಟಸ್ವಾಮಿ ಅವರಿಂದ ದೀಕ್ಷೆ ಪಡೆದರು. ಪುಟ್ಟಸ್ವಾಮಿ ಅವರಿಗೆ ಪೂರ್ಣಾನಂದಪುರಿ ಸ್ವಾಮೀಜಿ ಎಂದು ನಾಮಕರಣ ಮಾಡಲಾಗಿದೆ.

ನಾಲ್ಕು ದಶಕಗಳಿಂದ ಅವರು ಸಕ್ರಿಯ ರಾಜಕಾರಣದಲ್ಲಿದ್ದರು. ರಾಜ್ಯ ನೀತಿ ಮತ್ತು ಯೋಜನಾ ಆಯೋಗದ ಉಪಾಧ್ಯಕ್ಷರಾಗಿದ್ದರು. ಇತ್ತೀಚೆಗೆ ಈ ಹುದ್ದೆಗೆ ರಾಜೀನಾಮೆ ಸಲ್ಲಿಸಿದ್ದರು.

15ರಂದು ನಡೆಯುವ ಪಟ್ಟಾಭಿಷೇಕ ಕಾರ್ಯಕ್ರಮದಲ್ಲಿ ಮಠಾಧೀಶರು ಹಾಗೂ ಮುಖ್ಯಮಂತ್ರಿ ಸೇರಿದಂತೆ ಎಲ್ಲ ರಾಜಕೀಯ ಪಕ್ಷಗಳ ಮುಖಂಡರು ಪಾಲ್ಗೊಳ್ಳಲಿದ್ದಾರೆ.

ದೆಹಲಿ–ಕೇಂದ್ರದ ನಡುವಿನ ವ್ಯಾಜ್ಯ ಸಾಂವಿಧಾನಿಕ ಪೀಠಕ್ಕೆ

ಪ್ರಜಾವಾಣಿ ವಾರ್ತೆ

ನವದೆಹಲಿ: ರಾಷ್ಟ್ರ ರಾಜಧಾನಿ ದೆಹಲಿಯಲ್ಲಿ ಒದಗಿಸಲಾಗುವ ಸೇವೆಗಳು ಯಾರ ನಿಯಂತ್ರಣದಲ್ಲಿರಬೇಕು ಎಂಬುದಕ್ಕೆ ಸಂಬಂಧಿಸಿ ದೆಹಲಿ ಸರ್ಕಾರ ಹಾಗೂ ಕೇಂದ್ರದ ನಡುವಿನ ವಿವಾದವನ್ನು, ಐವರು ನ್ಯಾಯಮೂರ್ತಿಗಳಿರುವ ಸಾಂವಿಧಾನಿಕ ಪೀಠಕ್ಕೆ ನೀಡಿ ಸುಪ್ರೀಂಕೋರ್ಟ್ ಶುಕ್ರವಾರ ಆದೇಶಿಸಿದೆ.

ಮುಖ್ಯನ್ಯಾಯಮೂರ್ತಿ ಎನ್.ವಿ.ರಮಣ, ನ್ಯಾಯಮೂರ್ತಿಗಳಾದ ಸೂರ್ಯಕಾಂತ್ ಹಾಗೂ ಹಿಮಾ ಕೊಹ್ಲಿ ಅವರಿದ್ದ ನ್ಯಾಯಪೀಠ, ಈ ಕುರಿತ ಅರ್ಜಿ ವಿಚಾರಣೆ ನಡೆಸಿತು.

‘ಸೇವೆಗಳ ಮೇಲಿನ ನಿಯಂತ್ರಣ ಹೊರತುಪಡಿಸಿ ಉಳಿದ ವಿಷಯಗಳ ಬಗ್ಗೆ ಈ ಹಿಂದಿನ ಸಾಂವಿಧಾನಿಕ ಪೀಠವು 2018ರಲ್ಲಿಯೇ ವಿಸ್ತೃತ ಆದೇಶ ನೀಡಿದೆ. ಹೀಗಾಗಿ ಉಳಿದ ವಿಷಯಗಳ ಬಗ್ಗೆ ಮತ್ತೊಮ್ಮೆ ಪರಿಶೀಲನೆ ನಡೆಸುವುದಿಲ್ಲ’ ಎಂದು ನ್ಯಾಯಪೀಠ ಸ್ಪಷ್ಟಪಡಿಸಿತು. ‘ಈ ಅರ್ಜಿಯನ್ನು ಮೇ 11ರಂದು ವಿಚಾರಣೆಯ ಪಟ್ಟಿಗೆ ಸೇರಿಸಲಾಗುವುದು. ಹೀಗಾಗಿ, ವಿಚಾರಣೆಯನ್ನು ಮತ್ತೆ ಮುಂದೂಡುವಂತೆ ಕೇಳಬೇಡಿ’ ಎಂದು ನ್ಯಾಯಪೀಠವು ಕಕ್ಷಿದಾರರಿಗೆ ಸೂಚಿಸಿತು.

ತೇಲುವ ಸೇತುವೆ... ಮಲ್ಪೆ ಬೀಚ್‌ನಲ್ಲಿ ರಾಜ್ಯದ ಮೊದಲ ತೇಲುವ ಸೇತುವೆ ನಿರ್ಮಿಸಲಾಗಿದೆ.

ಪ್ರಜಾವಾಣಿ ಚಿತ್ರ: ಉಮೇಶ್ ಮಾರ್ಪಳ್ಳಿ

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಭೂಮಿಕಾ
ಅಮ್ಮಂದಿರ ದಿನದಂದು ಅಮ್ಮಂದಿರಿಗೆ, ತಾಯ್ತನ ಉಣಿಸಿದವರಿಗೆ ಉಡುಗೊರೆಗಳನ್ನು ಕೊಟ್ಟು ಕೃತಜ್ಞರಾಗಿರುವುದನ್ನು ಸೂಚಿಸುತ್ತಾರೆ. ಹಾಗಾದರೆ ಕೃತಜ್ಞರಾಗೋದು ಅಂದರೆ?

ಚರ್ಚೆ ಕಲ್ಲಿದ್ದಲು ಕೊರತೆ ನಿಭಾಯಿಸುವಲ್ಲಿ ಕೇಂದ್ರ ಸರ್ಕಾರ ಎಡವಿದೆಯೇ?
ಗೋಮಾತಾ ಸಹಕಾರ ಸಂಘ: ಸಿಎಂ ಸೂಚನೆ 7
ಶ್ರೀಲಂಕಾ: ತುರ್ತುಪರಿಸ್ಥಿತಿ ಘೋಷಣೆ 6

ಸೆನ್ಸೆಕ್ಸ್	ನಿಫ್ಟಿ	ಚಿನ್ನ (Std. 10g)	ಶುದ್ಧ ಬೆಳ್ಳಿ (kg)	₹/$
54,835	16,411	₹53,250 (ಬೆಂಗಳೂರು)	₹64,400 (ಬೆಂಗಳೂರು)	76.90

ನಮ್ಮ ಎಕ್ಸೆಲ್ ಅಕಾಡೆಮಿಕ್ಸ್® ಬೆಂಗಳೂರು
IIT-Main & Advanced | NEET | BITS | AIIMS | JIPMER | CET | COMED-K
★ ★ ★ Postal Coaching For PUC + CET / NEET / IIT-JEE / AIIMS / JIPMER Contact 9036357499 ★ ★ ★
ಆಡಳಿತಾತ್ಮಕ ಕಚೇರಿ : ಎಕ್ಸೆಲ್ ಅಕಾಡೆಮಿಕ್ಸ್, ನಂ.326, ಪೀಪಲ್ ಟ್ರೀ ಹಾಸ್ಪಿಟಲ್ ಮುಂಭಾಗ, ಶೇಷಾದ್ರಿಪುರಂ ಕಾಲೇಜ್ ರಸ್ತೆ, ಯಲಹಂಕ ನ್ಯೂ ಟೌನ್ - 560 064, ಬೆಂಗಳೂರು
ವಿಶೇಷ ಸೂಚನೆ : ಅತ್ಯುತ್ತಮ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿವೇತನ ಹಾಗೂ ಶುಲ್ಕದಲ್ಲಿ 100% ರಿಯಾಯಿತಿ ನೀಡಲಾಗುವುದು
★★ ಹುಡುಗರಿಗೆ ಮತ್ತು ಹುಡುಗಿಯರಿಗೆ ಪ್ರತ್ಯೇಕ ವಸತಿ ಸೌಲಭ್ಯವಿರುತ್ತದೆ ★★
REGISTRATIONS OPEN
K-CET / NEET / JEE CRASH COURSE II PUC/12th, +2 Studying Students
NEET IIT-JEE / CET LONG TERM COURSE (Repeaters Course) 2022-23 II PUC/12th, +2 Passed Out Students
46 Days Residential SUMMER COURSE I PUC/11th, +1 Studying Students
1 Month Residential BRIDGE COURSE 9th & 10th Studying Students (Maths & Science)
Fully Solved ON-LINE TEST SERIES NEET, CET, IIT-JEE Main & Advanced
POSTAL COACHING PUC / CET / NEET / IIT-JEE
7676-91-7777, 95136 57041, 9535656277
CELEBRATING 13 SUCCESSFUL YEARS Hardwork & Dedication
EXCEL ACADAMICS THE BEST INSTITUTE IN INDIA SUCCESSFULLY CONDUCTING "DAILY TEST" FOR NEET / IIT-JEE / CET ASPIRANTS

ಸುದರ್ಶನ್ ಜ್ಯುವೆಲರ್ಸ್
ಚಿನ್ನ ✧ ಬೆಳ್ಳಿ ✧ ಚಿನ್ನದ ಆಭರಣಗಳು
916 Hallmark Gold Rate
₹4725/-gm
ಬೆಳ್ಳಿ ₹ 59,000/- *CA
ಚಿಕ್ಕಪೇಟೆ: 41300355
Gangothri

ಬಾರಾಮುಲ್ಲಾ: ಇಬ್ಬರು ಎಲ್‌ಇಟಿ ಉಗ್ರರ ಸೆರೆ 5

ಚಿನಕುರಳಿ

ಪ್ರಕಾಶ್ ಶೆಟ್ಟಿ

ಪಿಎಸ್‌ಐ ಅಕ್ರಮ: ಒಎಂಆರ್ ತಿದ್ದಲು ಗೋಪ್ಯ ಸ್ಥಳ • ಮೊಬೈಲ್ ಸ್ವಿಚ್ಡ್ ಆಫ್ ರಹಸ್ಯ

ತೋಟದ ಮನೆ ಕಡೆ ಸಿಐಡಿ ಕಣ್ಣು

• ಸಂತೋಷ ಜಿಗಳಿಕೊಪ್ಪ

ಬೆಂಗಳೂರು: ಪಿಎಸ್‌ಐ ನೇಮಕಾತಿಯಲ್ಲಿ ಅಕ್ರಮ ಎಸಗಲು ಕೆಲ ಅಭ್ಯರ್ಥಿಗಳು, ಬೆಂಗಳೂರು ಹೊರವಲಯದ 'ಫಾರ್ಮ್‌ಹೌಸ್'ವೊಂದರಲ್ಲಿ ಒಎಂಆರ್ ಪ್ರತಿ ತಿದ್ದಿರುವ ಕುರಿತು ಸಂಶಯಪಟ್ಟಿರುವ ಸಿಐಡಿ ವಿಶೇಷ ತಂಡ 'ಫಾರ್ಮ್‌ಹೌಸ್ ರಹಸ್ಯ' ಭೇದಿಸಲು ಪುರಾವೆಗಳಿಗೆ ಶೋಧ ಆರಂಭಿಸಿದೆ.

ನೇಮಕಾತಿ ಅಕ್ರಮ ಸಂಬಂಧ ಕಲಬುರಗಿ ಹಾಗೂ ಬೆಂಗಳೂರಿನ ಹೈಗ್ರೌಂಡ್ಸ್ ಠಾಣೆಯಲ್ಲಿ ಪ್ರತ್ಯೇಕ ಎಫ್‌ಐಆರ್‌ಗಳು ದಾಖಲಾಗಿದ್ದು, ಪೊಲೀಸರು ಸೇರಿ 49 ಮಂದಿಯನ್ನು ಸಿಐಡಿ ಬಂಧಿಸಿದೆ. ಬಹುತೇಕರನ್ನು ಕಸ್ಟಡಿಗೆ ಪಡೆದು ವಿಚಾರಣೆ ನಡೆಸಿದಾಗ, ಕೆಲ ಅಭ್ಯರ್ಥಿಗಳು 'ಫಾರ್ಮ್‌ಹೌಸ್' ಬಗ್ಗೆ ಮಾಹಿತಿಯನ್ನು ಬಾಯಿ ಬಿಟ್ಟಿರುವುದಾಗಿ ಗೊತ್ತಾಗಿದೆ.

'ಬೆಂಗಳೂರಿನ 20ಕ್ಕೂ ಹೆಚ್ಚು ಕೇಂದ್ರಗಳಲ್ಲಿ ಲಿಖಿತ ಪರೀಕ್ಷೆ ಬರೆದಿದ್ದ ಅಭ್ಯರ್ಥಿಗಳು, ಅಕ್ರಮದಲ್ಲಿ ಭಾಗಿಯಾಗಿರುವುದಕ್ಕೆ ಈಗಾಗಲೇ ಪುರಾವೆಗಳು ಸಿಕ್ಕಿವೆ. ಆದರೆ, ಬೆಂಗಳೂರಿನ ಬಹುತೇಕ ಕೇಂದ್ರಗಳಲ್ಲಿ ಪರೀಕ್ಷೆ ವೇಳೆ ಭದ್ರತೆ ಹೆಚ್ಚಿರುತ್ತದೆ. ಇಂಥ ಕೇಂದ್ರದಲ್ಲಿ ಒಎಂಆರ್ ತಿದ್ದುವುದು ಸುಲಭವಲ್ಲ. ಹೀಗಾಗಿ, ಅಭ್ಯರ್ಥಿಗಳು ಬೇರೆ ಕಡೆ ಒಎಂಆರ್ ತಿದ್ದಿರುವ ಅನುಮಾನವಿದೆ' ಎಂದೂ ತಿಳಿಸಿವೆ.

'ಪ್ರಕರಣದಲ್ಲಿ ಸಿಕ್ಕಿಬಿದ್ದಿರುವ ಅಭ್ಯರ್ಥಿಗಳೆಲ್ಲರೂ, 2021ರ ಅಕ್ಟೋಬರ್ ಕೊನೆಯ ವಾರ ಹಾಗೂ ಡಿಸೆಂಬರ್ ಮೊದಲ ವಾರದಲ್ಲಿ ಮೊಬೈಲ್‌ಗಳನ್ನು ಸ್ವಿಚ್ ಆಫ್ ಮಾಡಿದ್ದು ತಾಂತ್ರಿಕ ತನಿಖೆಯಿಂದ ಗೊತ್ತಾಗಿದೆ' ಎಂದು ಮೂಲಗಳು ಹೇಳಿವೆ.

'2021ರ ಅಕ್ಟೋಬರ್ 3ರಂದು ರಾಜ್ಯದ 92 ಕೇಂದ್ರಗಳಲ್ಲಿ ಪರೀಕ್ಷೆ ನಡೆದಿತ್ತು. ಪರೀಕ್ಷೆ ಬರೆದಿದ್ದ ಕೆಲ ಅಭ್ಯರ್ಥಿಗಳ ಮೊಬೈಲ್‌ಗಳು ಕೆಲ ದಿನಗಳ ನಂತರ ಸ್ವಿಚ್ಡ್ ಆಫ್ ಆಗಿದ್ದವು' ಎಂದೂ ಮೂಲಗಳು ತಿಳಿಸಿವೆ.

5ನೇ ಪುಟ ನೋಡಿ
ಇನ್ನಷ್ಟು ಸುದ್ದಿಗಳು 5

₹ 1 ಕೋಟಿ ನೀಡಿದ್ದ ಸಹೋದರರು

ಹೈಗ್ರೌಂಡ್ಸ್ ಠಾಣೆ ಪ್ರಕರಣದಲ್ಲಿ ಆರೋಪಿಗಳಾಗಿದ್ದ ಸಿ.ಎಂ.ನಾರಾಯಣ್ ಹಾಗೂ ಸಿ.ಎಂ.ನಾಗರಾಜ್ ಸಹೋದರರನ್ನು ಸಿಐಡಿ ಪೊಲೀಸರು ಬಂಧಿಸಿದ್ದು, ಈ ಮೂಲಕ ಬಂಧಿತರ ಸಂಖ್ಯೆ 18ಕ್ಕೆ ಏರಿದೆ.

'ಕಗ್ಗಲಿಪುರದ ಚಿನ್ನಕುರ್ಚಿ ಗ್ರಾಮದ ನಾರಾಯಣ ಹಾಗೂ ನಾಗರಾಜ್, ಪ್ರಕರಣ ದಾಖಲಾಗುತ್ತಿದ್ದಂತೆ ತಲೆಮರೆಸಿಕೊಂಡಿದ್ದರು. ವಿಚಾರಣೆಗಾಗಿ ಸಿಐಡಿ ಅಧಿಕಾರಿಗಳು ನೋಟಿಸ್ ನೀಡಿದ್ದರು. ವಿಚಾರಣೆಗೆ ಬಂದಿದ್ದಾಗಲೇ ಅವರಿಬ್ಬರನ್ನು ಬಂಧಿಸಿದ್ದಾರೆ' ಎಂದು ಪೊಲೀಸ್ ಮೂಲಗಳು ಹೇಳಿವೆ.

'ಪಿಎಸ್‌ಐ ಹುದ್ದೆಗೆ ಆಯ್ಕೆಯಾಗಲು ಸಹೋದರರು, ಮಧ್ಯವರ್ತಿಯಾಗಿದ್ದ ಎಂಜಿನಿಯರ್ ಮಂಜುನಾಥ್ ಮೇಳಕುಂದಿಗೆ ₹ 1 ಕೋಟಿ ನೀಡಿದ್ದರೆಂದು ಗೊತ್ತಾಗಿದೆ. ಸಹೋದರರು ಅಕ್ರಮವಾಗಿ ಆಯ್ಕೆಯಾಗಿದ್ದು, ಒಎಂಆರ್ ಪರಿಶೀಲನೆ ವೇಳೆ ಕಂಡುಬಂದಿತ್ತು. ಹೀಗಾಗಿ, ಅವರ ವಿರುದ್ಧ ಪ್ರಕರಣ ದಾಖಲಿಸಲಾಗಿತ್ತು' ಎಂದು ಮೂಲಗಳು ತಿಳಿಸಿವೆ.

ಮಂಗಳೂರು, ತುಮಕೂರಿನಲ್ಲೂ ಅಕ್ರಮ ಶಂಕೆ

ಬೆಂಗಳೂರು, ಕಲಬುರಗಿ ಮಾತ್ರವಲ್ಲದೇ ಮಂಗಳೂರು, ತುಮಕೂರು ಸೇರಿದಂತೆ ರಾಜ್ಯದ 40ಕ್ಕೂ ಹೆಚ್ಚು ಪರೀಕ್ಷಾ ಕೇಂದ್ರಗಳಲ್ಲಿ ಅಕ್ರಮ ನಡೆದಿರುವ ಬಗ್ಗೆ ಸಿಐಡಿಗೆ ಮಾಹಿತಿ ಲಭ್ಯವಾಗಿದೆ. ಈ ಬಗ್ಗೆ ತನಿಖೆ ಚುರುಕುಗೊಳಿಸಿರುವ ಸಿಐಡಿ ತಂಡಗಳು, ಮಂಗಳೂರು ಹಾಗೂ ತುಮಕೂರಿಗೂ ಹೋಗಿ ತನಿಖೆ ಮಾಡುವ ಸಾಧ್ಯತೆ ಇದೆ.

ಪಥಸಂಚಲನದಲ್ಲಿ ಭಾಗವಹಿಸಿ ತೆರಳಿದ ಬೆನ್ನಲ್ಲೇ ಡಿವೈಎಸ್ಪಿ ವಶಕ್ಕೆ

ಕಲಬುರಗಿ: ಪಿಎಸ್‌ಐ ಅಕ್ರಮ ನೇಮಕಾತಿ ಪ್ರಕರಣಕ್ಕೆ ಸಂಬಂಧಿಸಿದಂತೆ ಸಿಐಡಿ ಅಧಿಕಾರಿಗಳು ಕರ್ನಾಟಕ ರಾಜ್ಯ ಮೀಸಲು ಪೊಲೀಸ್ (ಕೆಎಸ್‌ಆರ್‌ಪಿ) ಪಡೆಯ ಕಲಬುರಗಿ ವಿಭಾಗದ ಡಿವೈಎಸ್ಪಿ ವೈಜನಾಥ ಕಲ್ಯಾಣಿ ರೇವೂರ ಅವರನ್ನು ಶುಕ್ರವಾರ ಸಂಜೆ ವಶಕ್ಕೆ ಪಡೆದರು.

ವೈಜನಾಥ ರೇವೂರ

ವೈಜನಾಥ ಸಹ ಹಲವು ವರ್ಷಗಳಿಂದ ಅಕ್ರಮ ನೇಮಕಾತಿಯಲ್ಲಿ ತೊಡಗಿದ್ದರು ಎಂಬ ಆರೋಪ ಕೇಳಿಬಂದಿದೆ.

ಗೃಹ ಸಚಿವ ಆರಗ ಜ್ಞಾನೇಂದ್ರ ಅವರು ಕೆಎಸ್‌ಆರ್‌ಪಿಯ ಪ್ರಶಿಕ್ಷಣಾರ್ಥಿಗಳ ತಂಡದ ನಿರ್ಗಮನ ಪಥಸಂಚಲನದಲ್ಲಿ ಭಾಗವಹಿಸಿ ತೆರಳಿದ ಬೆನ್ನಲ್ಲೇ ಕೆಎಸ್‌ಆರ್‌ಪಿಯ ಹಿರಿಯ ಅಧಿಕಾರಿಯ ಬಂಧನವಾಗಿದೆ.

ವೈಜನಾಥ ಅಫಜಲಪುರ ತಾಲ್ಲೂಕಿನ ಮಾಶಾಳ ಗ್ರಾಮದವರು. ಕೆಲ ಕಾಲ ಬೆಂಗಳೂರಿನ ಕೆಎಸ್‌ಆರ್‌ಪಿ 4ನೇ ಬಟಾಲಿಯನ್‌ನಲ್ಲಿ ಕರ್ತವ್ಯ ನಿರ್ವಹಿಸಿ ಕಲಬುರಗಿಗೆ ವರ್ಗಾವಣೆಗೊಂಡಿದ್ದರು. 2008ರಲ್ಲಿ ಪಿಎಸ್‌ಐ ಹುದ್ದೆಗೆ ನೇಮಕವಾಗಿದ್ದರು.

10 ವರ್ಷ ಹಳೆಯ ಬಿಲ್ ಬಾಕಿ ಇಪಿಐ– ಬಿಬಿಎಂಪಿ ತಿಕ್ಕಾಟ

ಪ್ರಜಾವಾಣಿ ವಾರ್ತೆ

ಪ್ರಜಾವಾಣಿ ವಿಶೇಷ

ಬೆಂಗಳೂರು: ಪುಟ್ಟೇನಹಳ್ಳಿ ಜಂಕ್ಷನ್‌ನಲ್ಲಿ ಕೆಳ ಸೇತುವೆ (ಜಿ.ಆರ್.ವಿಶ್ವನಾಥ್ ಕೆಳಸೇತುವೆ) ಕಾಮಗಾರಿಯ ಬಿಲ್ ಅನ್ನು ಬಿಬಿಎಂಪಿ 10 ವರ್ಷಗಳಿಂದ ಬಾಕಿ ಉಳಿಸಿಕೊಂಡಿದೆ. ಇದು ಕಾಮಗಾರಿಯನ್ನು ನಿರ್ವಹಿಸಿರುವ ಎಂಜಿನಿಯರಿಂಗ್ ಪ್ರಾಜೆಕ್ಟ್ಸ್ (ಇಂಡಿಯಾ) ಲಿಮಿಟೆಡ್ ಸಂಸ್ಥೆ (ಇಪಿಐ) ಹಾಗೂ ಬಿಬಿಎಂಪಿ ನಡುವೆ ತಿಕ್ಕಾಟಕ್ಕೆ ಕಾರಣವಾಗಿದೆ.

ಬಿಬಿಎಂಪಿಯು ಈ ಕಾಮಗಾರಿಯನ್ನು ಕೇಂದ್ರ ಸರ್ಕಾರ ಸ್ವಾಮ್ಯದ ಮಿನಿರತ್ನ ಸಂಸ್ಥೆಯಾದ ಇಪಿಐಗೆ 2008ರಲ್ಲಿ ಗುತ್ತಿಗೆ ನೀಡಿತ್ತು. 2011ರ ಜ.18ರಂದು ಆಗಿನ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಅವರು ಕೆಳ ಸೇತುವೆಯನ್ನು ಉದ್ಘಾಟಿಸಿದ್ದರು. ಈ ಕಾಮಗಾರಿಗೆ ಸಂಬಂಧಿಸಿದ ₹7.48 ಕೋಟಿ ಬಾಕಿ ಬಿಲ್ ಅನ್ನು ಪಾವತಿಸುವಂತೆ ಒತ್ತಾಯಿಸಿ ಇಪಿಐ ಸಂಸ್ಥೆಯು ಬಿಬಿಎಂಪಿ ಮುಖ್ಯ ಆಯುಕ್ತರಿಗೆ ಮೇ 5ರಂದು ಪತ್ರ ಬರೆದಿದೆ. ಕಾಮಗಾರಿ ಮುಗಿಸಿ 10 ವರ್ಷ ಕಳೆದ ಬಳಿಕವೂ ಹಣ ಪಾವತಿ ಮಾಡದ ಬಿಬಿಎಂಪಿ ವಿರುದ್ಧ ಕಾನೂನು ಕ್ರಮ ಕೈಗೊಳ್ಳುವುದಾಗಿ ಸಂಸ್ಥೆ ಎಚ್ಚರಿಕೆಯನ್ನೂ ನೀಡಿದೆ.

4ನೇ ಪುಟ ನೋಡಿ

'ಕಾನೂನುಬದ್ಧವಲ್ಲ'

'ಈ ಕೆಳಸೇತುವೆ ಕಾಮಗಾರಿ ಪರಿಶೀಲನೆಗೆ ತಾಂತ್ರಿಕ ಸಮಿತಿ ರಚಿಸಲಾಗಿತ್ತು. ಯಾವೆಲ್ಲ ಕಾಮಗಾರಿಗಳನ್ನು ಸಂಸ್ಥೆಯು ಬಾಕಿ ಉಳಿಸಿಕೊಂಡಿದೆ ಎಂದು ಆ ಸಮಿತಿಯು ಪಟ್ಟಿ ಮಾಡಿತ್ತು. ಆ ಬಾಕಿ ಕಾಮಗಾರಿಗಳನ್ನು ಸಂಸ್ಥೆ ನಿರ್ವಹಿಸಿಲ್ಲ. ಕಾಮಗಾರಿಯನ್ನು ಗಡುವಿನ ಒಳಗೆ ಪೂರ್ಣಗೊಳಿಸದ ಕಾರಣಕ್ಕೆ ಸಂಸ್ಥೆಗೆ ದಂಡವನ್ನೂ ವಿಧಿಸಲಾಗಿತ್ತು. ಯಾವ ಕಾರಣಕ್ಕೆ ಕಾಮಗಾರಿ ವಿಳಂಬವಾಗಿದೆ ಎಂಬುದಕ್ಕೆ ಸಂಸ್ಥೆ ವಿವರಣೆಯನ್ನೂ ನೀಡಿಲ್ಲ. ಬಿಲ್ ಬಾಕಿ ಇದೆ ಎಂದು ಈಗ ಹೇಳಿಕೊಳ್ಳುವುದು ಕಾನೂನಾತ್ಮಕವಾಗಿ ಸರಿಯಲ್ಲ. ಅದನ್ನು ಈಡೇರಿಸಲೂ ಸಾಧ್ಯವಿಲ್ಲ' ಎಂದು ಬಿಬಿಎಂಪಿ ರಸ್ತೆ ಮೂಲಸೌಕರ್ಯ ವಿಭಾಗದ ಮುಖ್ಯ ಎಂಜಿನಿಯರ್ ಬಿ.ಎಸ್.ಪ್ರಹ್ಲಾದ್ ಸ್ಪಷ್ಟಪಡಿಸಿದರು. 'ಹೆಚ್ಚುವರಿ ಕಾಮಗಾರಿಗಳನ್ನು ನಡೆಸಲಾಗಿದೆ ಎಂದು ಸಂಸ್ಥೆ ಹೇಳಿದೆ. ಆದರೆ, ಅದಕ್ಕೆ ಪೂರಕ ಒಪ್ಪಂದವನ್ನು ಸಂಸ್ಥೆ ಮಾಡಿಕೊಂಡಿಲ್ಲ. ಹಾಗಾಗಿ ಹೆಚ್ಚುವರಿ ಬಿಲ್ ಅನ್ನು ಪಾವತಿಸಲು ಬರುವುದಿಲ್ಲ' ಎಂದರು.

SINGHANIA UNIVERSITY
SINGHANIA UNIVERSITY 2007 Knowledge is power
(Recognized under Section 2(f) of the UGC Act, 1956 WEBSITE: www.singhaniauniversity.ac.in)
MAIN CAMPUS : Pacheri Bari, Jhunjhunu, Rajasthan OTHER ADMISSION, EDUCATION PROMOTION & EXAMINATION CENTERS:
RAJASTHAN: Jaipur, Neemrana, Jodhpur. HARYANA: Narnaul, Manesar, Gurgaon. NEW DELHI: Green Park Extn., Vasant Vihar, Gadaipur. UTTARPRADESH: Noida, Lucknow. MP: Bhopal. WEST BENGAL: Kolkata. ASSAM: Guwahati. MAHARASHTRA: Mumbai. KARNATAKA : Bangalore. TELANGANA: Hyderabad. TAMILNADU: Chennai.
MISSION : EDUCATION FOR ALL, HEALTHCARE FOR ALL, EMPLOYMENT FOR ALL, CORRUPTION FREE, AUTONOMOUS & MULTI TASKING EDUCATION SYSTEM
INTEGRATED UNIVERSITY EDUCATION & SCHOOL EDUCATION WITH MULTI CAREER / MULTI DISCIPLINARY & STUDENT CENTRIC CHOICE BASED EDUCATION
FOR ATTENTION OF MEDICAL STUDENTS RETURNED FROM UKRAINE & OTHER FOREIGN COUNTRIES TO CONTINUE THEIR MEDICAL EDUCATION IN INDIA IN AFFORDABLE FEES.
FACULTY OF MEDICINE introduces HOLISTIC & PROBLEM BASED LEARNING in medical education as is prevalent in US & other developed countries
DEPARTMENT OF MEDICINE & SURGERY : MBBS, MD/MS (All Specializations), BDS, MDS, Diploma In (General Medicine / General Surgery / Gynaecology & Obstetrics / Opthalmic Medicine & Surgery / Orthopaedics / Cardiology / Paediatrics / Neurology / Dermatology / Health Education / Medicine (Pharmacology) / Community Medicine / Radiation Medicine / Diabetology / Clinical Pathology / Public Health / Anaesthesiology / Sports Medicine / Forensic Medicine / Physical Medicine & Rehabilitation / Emergency Medicine / Infertility & Assisted Reproductive Technique).
*As per law & legal advise, above recognised Degree/Diploma holders are eligible for registration with State Medical Councils and NMC.
DEPARTMENT OF ALLIED & HEALTHCARE PROFESSIONS : B.SC (Nursing), M.SC (Nursing), ANM, GNM, Physiotherapy (DPT, BPT, MPT), D.Pharma, B.Pharma, M.Pharma, Medical Lab Technology (DMLT, BMLT, BSC-MLT, MSC-MLT, B.VOC-MLT), Radio Imaging Techno. (DRIT/BRIT), DIPLOMA IN Nursing Care Assistant / Sonography / Dental Mechanics / Dialysis Technology / Health Inspector / X-Ray Technology / OT Technology / Occupational Therapy / MRI Technology / ECG Technology / Naturopathy Assistant / Ayurvedic Medicine Assistant & other courses.
*As per law and legal advice for Degree/Diploma holders registration is not mandatory to practice as a nurse also licence is not required to open a drug retail store & allied and healthcare professionals are also eligible to get registered under The National Commission for Allied and Healthcare Professions Act, 2021 which received the assent of the Hon'ble President on 28 March 2021.
DEPARTMENT OF HOMEOPATHY : BHMS & all other courses.
DEPARTMENT OF INDIAN SYSTEM OF MEDICINE : BAMS, BUMS, BNYS, MD (All Specialization) & all other courses.

DEPARTMENT OF MULTI CAREER / MULTI DISCIPLINARY EDUCATION	DEPARTMENT OF PROFESSIONAL EDUCATION	DEPARTMENT OF RESEARCH
BA, MA, BSC, MSC, BCOM, MCOM, BBA, MBA, BCA, MCA, BED, BPED, MED, MPED, BTECH, MTECH, CERTIFICATE/DIPLOMA/ITI in Engineering (Computer/Electrical/ Mechanical/Electronics/Civil/Textile/ Chemical/Aerospace etc.) & other courses.	DEGREE/DIPLOMA/CERTIFICATE in Architecture, Hotel Management, Fashion Designing, Financial Accounting, Beauty & Wellness, Photography, Food & Beverage Production & Management, 3D Animation & VFX, Taxation, Airline, Mass Comm. & Journalism. LLB/LLM (Hons. In General Practice/Civil Practice/Criminal Practice/Litigation Practice), CA & other courses.	PHD in all disciplines, D Litt. in all subjects, DSc and LLD.

SINGHANIA UNIVERSITY BOARD OF SECONDARY & SR. SECONDARY EDUCATION : 10th / 12th
** NOTE : THE STUDENTS CAN CHOOSE ANY COMBINATIONS OF TWO COURSES OF THEIR CHOICE FOR DUAL DEGREE
MODE OF STUDY : *ASSISTED SELF STUDY *BLENDED LEARNING *CONVENTIONAL MODE OF LEARNING
ALL UNDERGRADUATE, POST GRADUATE AND RESEARCH COURSES AVAILABLE. FOR MORE DETAILS VISIT UNIVERSITY WEBSITE
LEGAL OPINION - (IN PUBLIC INTEREST)
As per law and legal opinion, Singhania University ("SU") being established by Government of Rajasthan by an Act of State Legislature and being recognised Constitutionally and also under Section 2(f) of the UGC Act, in exercise of its fundamental right and by authority of law under Section 12A and 22 of the UGC Act, can take admission and impart education in all courses including medical i.e. MBBS and award degree, diploma, certificate to its pass out students which are sui generis valid for all intents and purposes i.e. registration with all professional councils including State Medical Councils and for Government jobs. Under Rule 2(ee)(i) of the Drugs and Cosmetics Rules, 1954, recognised medical degree holders are deemed to be registered medical practitioner in law and as such, can practice medicine in India and also get registered with State Medical Councils. The medical qualifications awarded by SU are recognised under Section 35(1) and 35(8) of the NMC Act, 2019 and are also entitled for registration with the State Medical Councils & NMC. SU being a self-regulated autonomous constitutionally recognised statutory apex body for all education can also take admission of students returning from Ukraine, China and other countries on lateral entry basis and can award degree/ diploma on completion of left out course. SU degree holder will be entitled to practice medicine throughout India and also be entitled to be registered with State Councils & NMC. For detailed opinion, visit university website. or mail at : legal@singhaniauniversity.ac.in.
APPLY FOR COLLABORATION / AFFILIATION
INVITING APPLICATIONS FOR COLLABORATION/AFFILIATION FROM INSTITUTIONS, HOSPITALS, DIAGNOSTIC CENTERS, MEDICAL RESEARCH LABS & OTHER INTERESTED ORGANIZATIONS FOR COUNSELING, ADMISSIONS, TRAINING & EXAMINATIONS. Mail At : coll@singhaniauniversity.ac.in
FOR ADMISSION : 8447836846 OR MAIL : admission@singhaniauniversity.ac.in

LOW INTEREST RATE OF 6.75%Ø | EMI STARTS AT ₹ 899 PER LAKHØ
LONGEST TENURE UP TO 10 YEARSØ
Exclusive benefits for Teachers, Farmers, Doctors, Lawyers, Architects, Finance Professionals, Pensioners, Government Employees and Select Corporates. Select models available through GeM & CSD. T&C apply.
OUR DEALERSHIPS AND SERVICE CENTRES ARE FOLLOWING ALL PRECAUTIONS AGAINST COVID-19. Routine sanitisation Temperature check Mandatory face mask Social distancing Contactless booking and delivery
Honda Auto Terrace CAR EXCHANGE | Honda ProCARE CUSTOMER SERVICE | 3 YEAR WARRANTY UNLIMITED Kilometres# | Scan now to Book or Buy Honda From Home
*Scheme on select variants/models. ØLoan at the sole discretion of financier/bank partner. Offers and features are model, fuel type and variant specific. Offers are valid for a limited period or till stock lasts. Offers include loyalty, exchange and consumer benefits. For Corporate Sales enquiries, write to corporatesales@hondacarindia.com. To exchange any existing car with a Honda car, write to autoterrace@hondacarindia.com. Images used are computer generated/enhanced for creative representation purpose and may vary from the actual product. #Warranty of unlimited kilometres in a 3-year period from the date of sale of new vehicle comes as part of standard purchase. For more details, visit www.hondacarindia.com or your nearest Honda Dealership. Terms and conditions apply.
Magnum Honda: Mekhri Circle: 99000 29164, Kanakapura Rd: 98455 24394, Tumkur: 99160 04127
Dakshin Honda: Hosur Road: 86575 88495, Lavelle Road: 86575 89201, Mysore Road: 86575 89889
Brigade Honda: Yelahanka 86575 88450
Whitefield Honda: Whitefield Road 86575 89175

ಎಎಪಿ ಮುಖಂಡ ಭಾಸ್ಕರ್ ರಾವ್ ಆರೋಪ

ಪಿಎಸ್‌ಐ ಹಗರಣ: ಬಿಜೆಪಿ ನಾಯಕರ ರಕ್ಷಣೆಗೆ ಸಿಐಡಿ ತನಿಖೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಬಿಜೆಪಿ ನಾಯಕರನ್ನು ರಕ್ಷಿಸಲೆಂದೇ ಪಿಎಸ್‌ಐ ನೇಮಕಾತಿ ಹಗರಣದ ತನಿಖೆಯನ್ನು ಸಿಐಡಿ ಮೂಲಕ ನಡೆಸಲಾಗುತ್ತಿದೆ' ಎಂದು ಆಮ್ ಆದ್ಮಿ ಪಕ್ಷದ (ಎಎಪಿ) ಮುಖಂಡರೂ ಆಗಿರುವ ನಿವೃತ್ತ ಐಪಿಎಸ್ ಅಧಿಕಾರಿ ಭಾಸ್ಕರ್ ರಾವ್ ಆರೋಪಿಸಿದರು.

ಶುಕ್ರವಾರ ಇಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 'ಬಿಜೆಪಿ ನಾಯಕರೇ ಆರೋಪಿಗಳಾಗಿರುವ ಹಗರಣವನ್ನು ಬಿಜೆಪಿ ಸರ್ಕಾರದ ಅಧೀನದಲ್ಲಿರುವ ಸಿಐಡಿಯಿಂದ ತನಿಖೆ ಮಾಡಿಸುವುದು ಹಾಸ್ಯಾಸ್ಪದ' ಎಂದು ವ್ಯಂಗ್ಯವಾಡಿದರು.

'ತನಿಖೆ ವೇಳೆ ಬಿಜೆಪಿ ನಾಯಕರ ಹೆಸರು ಕೇಳಿಬಂದರೆ, ಆ ಅಭ್ಯರ್ಥಿಯ ವಿಚಾರಣೆಯನ್ನೇ ಕೈಬಿಡಲಾಗುತ್ತಿದೆ. ಸಿಐಡಿಗೆ ತನಿಖೆ ವಹಿಸಿರುವುದರ ಹಿಂದೆ ಸತ್ಯ ಹೊರಬರುವುದನ್ನು ತಡೆಯುವ ಹುನ್ನಾರವಿದೆ. ಈ ತನಿಖೆಗೆ ಯಾವ ಬೆಲೆಯೂ ಇಲ್ಲ' ಎಂದರು.

'ಹಗರಣದಲ್ಲಿ ಸಚಿವ ಸಿ.ಎನ್.ಅಶ್ವತ್ಥನಾರಾಯಣ ಅವರ ಸಹೋದರನೇ ಭಾಗಿಯಾಗಿರುವ ಆರೋಪವಿದೆ. ಸಚಿವರ ಸಹಕಾರವಿಲ್ಲದೆ ಅಕ್ರಮ ನಡೆಯಲು ಸಾಧ್ಯವೇ? ಕಾಂಗ್ರೆಸ್ ಶಾಸಕ ಪ್ರಿಯಾಂಕ್ ಖರ್ಗೆ ವಿಚಾರಣೆಗೆ ಹಾಜರಾಗಿ ದಾಖಲೆ ಒದಗಿಸಿಲ್ಲ. ಸತ್ಯ ಹೊರಬರುವುದು ಕಾಂಗ್ರೆಸ್‌ಗೂ ಇಷ್ಟವಿಲ್ಲ. ಎಚ್.ಡಿ. ಕುಮಾರಸ್ವಾಮಿ ಅವರೂ ಸಾಕ್ಷಿ ಬಹಿರಂಗಪಡಿಸುತ್ತಿಲ್ಲ. ಮೂರೂ ಭ್ರಷ್ಟ ಪಕ್ಷಗಳು ಒಳಒಪ್ಪಂದ ಮಾಡಿಕೊಂಡು ಹಗರಣ ಮುಚ್ಚಿಹಾಕಲು ಯತ್ನಿಸುತ್ತಿವೆ' ಎಂದು ಆರೋಪಿಸಿದರು.

'ಪಿಎಸ್‌ಐ ನೇಮಕಾತಿ ಪರೀಕ್ಷೆಯಲ್ಲಿ ಮಾಜಿ ಮುಖ್ಯಮಂತ್ರಿಯೊಬ್ಬರ ಪುತ್ರ ಭಾರಿ ಅಕ್ರಮ ಮಾಡಿದ್ದಾರೆಂದು ವಕೀಲರ ನಿಯೋಗ ಸಿಐಡಿಗೆ ದೂರು ನೀಡಿದೆ. ಅದು ಯಾರೆಂದು ಬಹಿರಂಗವಾಗಬೇಕು' ಎಂದು ಒತ್ತಾಯಿಸಿದರು.

'ಸುಪ್ರೀಂಕೋರ್ಟ್ ನ್ಯಾಯಮೂರ್ತಿಗಳ ಮೇಲ್ವಿಚಾರಣೆಯಲ್ಲಿ ಈ ಹಗರಣದ ತನಿಖೆ ಆಗಬೇಕು. ಆಗ ಮಾತ್ರ ಸತ್ಯಾಂಶ ಹೊರಬಂದು ಅಕ್ರಮದಲ್ಲಿ ಭಾಗಿಯಾದ ರಾಜಕಾರಣಿಗಳ ಮುಖವಾಡ ಕಳಚುತ್ತದೆ. ಇಲ್ಲದಿದ್ದರೆ ಸಿಐಡಿ ತನಿಖೆಯ ಗಾಳಕ್ಕೆ ಕೇವಲ ಸಣ್ಣಪುಟ್ಟ ಮೀನುಗಳು ಬಲಿಯಾಗಿ, ದೊಡ್ಡ ತಿಮಿಂಗಿಲಗಳು ತಪ್ಪಿಸಿಕೊಳ್ಳುತ್ತವೆ' ಎಂದೂ ಹೇಳಿದರು.

ಬಿಬಿಎಂಪಿ ಆರೋಗ್ಯ ಕೇಂದ್ರ ಸರ್ಕಾರದ ಸುಪರ್ದಿಗೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಿಬಿಎಂಪಿ ಉಸ್ತುವಾರಿಯಲ್ಲಿ ನಡೆಯುತ್ತಿರುವ ಆಸ್ಪತ್ರೆ, ಪ್ರಾಥಮಿಕ ಮತ್ತು ಸಮುದಾಯ ಆರೋಗ್ಯ ಕೇಂದ್ರಗಳನ್ನು ಆರೋಗ್ಯ ಇಲಾಖೆ ಸುಪರ್ದಿಗೆ ವಹಿಸಲಾಗಿದೆ.

ಈ ಎಲ್ಲ ಕೇಂದ್ರಗಳ ಆಡಳಿತಾತ್ಮಕ ಮತ್ತು ಆರ್ಥಿಕ ನಿಯಂತ್ರಣ ಇನ್ನು ಮುಂದೆ ಆರೋಗ್ಯ ಇಲಾಖೆಯೇ ಹೊಂದಲಿದೆ. ಈ ಸಂಬಂಧ ಆದೇಶ ಹೊರಡಿಸಿರುವ ಇಲಾಖೆ, 51 ಸರ್ಕಾರಿ ಆಸ್ಪತ್ರೆ, ನಗರ ಆರೋಗ್ಯ ಅಭಿಯಾನದಡಿ ಪಟ್ಟಿ ಮಾಡಿರುವ 35 ಮತ್ತು ಪಟ್ಟಿ ಮಾಡದ 14 ನಗರ ಪ್ರಾಥಮಿಕ ಆರೋಗ್ಯ ಕೇಂದ್ರಗಳು, 2 ಸಮುದಾಯ ಆರೋಗ್ಯ ಕೇಂದ್ರಗಳು ಸರ್ಕಾರದ ಉಸ್ತುವಾರಿಗೆ ಒಳಪಡಲಿವೆ.

ಸಿಬ್ಬಂದಿ, ಪೀಠೋಪಕರಣ, ವೈದ್ಯಕೀಯ ಪರಿಕರಗಳೂ ಇಲಾಖೆಗೆ ಸೇರಲಿವೆ.

ಇದೇ 20ರಿಂದ ಅಲಯನ್ಸ್ ಸಾಹಿತ್ಯ ಉತ್ಸವ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಅಲಯನ್ಸ್ ವಿಶ್ವವಿದ್ಯಾಲಯವು ಮೇ 20 ಮತ್ತು 21ರಂದು ಸಾಹಿತ್ಯ ಉತ್ಸವ ಆಯೋಜಿಸಿದೆ.

ವಿ.ವಿಯ ಮಾನವಿಕ ವಿಷಯಗಳ ಅಧ್ಯಯನ ವಿಭಾಗವು ಆಯೋಜಿಸಿರುವ 'ಅಲಯನ್ಸ್ ಸಾಹಿತ್ಯ ಉತ್ಸವ'ದಲ್ಲಿ (ಎಎಲ್‌ಎಫ್) ವಿವಿಧ ಕ್ಷೇತ್ರಗಳ ಖ್ಯಾತನಾಮರು ಪಾಲ್ಗೊಳ್ಳಲಿದ್ದಾರೆ.

ವಿ.ವಿ ಆವರಣದಲ್ಲಿ ನಡೆಯಲಿರುವ ಈ ಉತ್ಸವವು ಕಲೆ, ಸಾಹಿತ್ಯ, ಇತಿಹಾಸ, ಸಂಸ್ಕೃತಿ, ರಾಜಕೀಯ, ಮಾಧ್ಯಮ, ಸಂಗೀತ ಮುಂತಾದ ಕ್ಷೇತ್ರಗಳ ಕುರಿತ ಚರ್ಚೆಗೆ ಸಾಕ್ಷಿಯಾಗಲಿದೆ.

'ಎರಡು ದಿನಗಳ ಈ ಉತ್ಸವದಲ್ಲಿ ಸಂಸದ ಶಶಿ ತರೂರು, ಪತ್ರಕರ್ತ ರಾಜದೀಪ್ ಸರದೇಸಾಯಿ, ಸಾಹಿತಿಗಳಾದ ಅನಿತಾ ನಯ್ಯರ್, ಪ್ರತಿಭಾ ನಂದಕುಮಾರ್, ಮಮತಾ ಸಾಗರ, ವಸುಧೇಂದ್ರ ಹಾಗೂ ಗಾಯಕಿ ಉಷಾ ಉತ್ತುಪ್ ಮತ್ತು ಸ್ಟ್ಯಾಂಡ್ ಅಪ್ ಕಾಮಿಡಿ ಕೆನ್ನಿ ಹಲವರು ಭಾಗಿಯಾಗಲಿದ್ದಾರೆ' ಎಂದು ವಿ.ವಿ ಸಹಕುಲಾಧಿಪತಿ ಅಭಯ್ ಜಿ. ಚೆಬ್ಬಿ ತಿಳಿಸಿದರು.

'ವಿ.ವಿ ದೇಶದ ಶ್ರೀಮಂತ ಸಂಸ್ಕೃತಿ ಮತ್ತು ಪರಂಪರೆಯನ್ನು ರಕ್ಷಿಸಲು ಕಾರ್ಯಕ್ರಮಗಳನ್ನು ಆಯೋಜಿಸುತ್ತಿದೆ. ಪ್ರತಿಭಾವಂತ ಯುವ ಸಮೂಹ ಕಾರ್ಯಕ್ರಮಗಳಲ್ಲಿ ಭಾಗವಹಿಸುತ್ತಿದೆ. ಈ ಉತ್ಸವವು ಯುವ ಸಮುದಾಯದಲ್ಲಿ ವೈವಿಧ್ಯಮಯ ಚಿಂತನೆ, ಸೃಜನಶೀಲ ಪ್ರಜ್ಞೆ ಮೂಡಿಸುವಲ್ಲಿ ಮಹತ್ವದ ಪಾತ್ರ ವಹಿಸಲಿದೆ' ಎಂದರು.

ಈ ವೇಳೆ ಕುಲಪತಿ ಅನುಭಾ ಸಿಂಗ್, ಸೇರಿದಂತೆ ಮತ್ತಿತರರು ಇದ್ದರು.

M.B. VETERINARY COLLEGE, DUNGARPUR (RAJASTHAN)
Recognized by Govt. of India, and VCI, New Delhi, Affiliated to Rajasthan University of Animal Science, Bikaner
SPOT ADMISSION ON GOVERNMENT VACANT SEAT
Applications are invited from eligible desirous candidates for admission in B.V.Sc.&A.H. Degree course (5.5 Years) against Government vacant seat.
Qualification: 10+2 (PCB, NEET Appeared)
CONTACT FOR SPOT ADMISSION
Learntech Edu Solutions Pvt Ltd
3/75, 'D' Main, East End, 9th Block Jayanagar, Bangalore - 560069. Mob: 8696902001, 9414105438, 9036020066
Date: 07th to 10th May 2022, Time: 9 a.m. to 5 p.m.
Email: cvas910@gmail.com, www.mbvet.org.in

Amul The Taste of India
ಬ್ಲ್ಯಾಕ್ ಕರೆಂಟ್
₹25* / 120 mL

*MRP (incl. of all taxes). Conditions apply.
ಅಮುಲ್ ಐಸ್‌ಕ್ರೀಮ್

ಕೆನರಾ ಬ್ಯಾಂಕ್ ಭಾರತ ಸರ್ಕಾರದ ಒಂದು ಉದ್ಯಮ Canara Bank A Government of India Undertaking
ಸಿಂಡಿಕೇಟ್ Syndicate
ಆಸ್ತಿ ಮತ್ತು ಭವನ ವಿಭಾಗ, ವೃತ್ತ ಕಛೇರಿ,
ನಂ. 86, ಎಂ.ಜಿ.ರಸ್ತೆ, ಬೆಂಗಳೂರು–560001. ದೂ.: 25310039/25310038
ಟೆಂಡರ್ ಆಹ್ವಾನ ಪ್ರಕಟಣೆ
ಕೆನರಾ ಬ್ಯಾಂಕ್, ದರ್ಜೆ ಎ ಟಿಆರ್‌ಟಿಎಲ್ ಜ್ಯುವೆಲ್ ಸೇಫ್‌ಗಳ ಸರಬರಾಜಿಗಾಗಿ ಆನ್‌ಲೈನ್ ಟೆಂಡರ್‌ಗಳನ್ನು ಆಹ್ವಾನಿಸಿದೆ.
ವಿವರಗಳಿಗೆ, ಬ್ಯಾಂಕಿನ ವೆಬ್‌ಸೈಟ್ www.canarabank.com, ಸಿಪಿಪಿ ಪೋರ್ಟಲ್ www.eprocure.gov.in ಮತ್ತು ಇ–ಪ್ರೊಕ್ಯೂರ್‌ಮೆಂಟ್ ಟೆಕ್ನಾಲಜೀಸ್ ಲಿ., ಪೋರ್ಟಲ್ https://canarabank.abcprocure.com ಗೆ ಭೇಟಿ ನೀಡಿ.
ಟೆಂಡರ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ : 26–05–2022ರಂದು ಸಂಜೆ 3.00 ಗಂಟೆಗಳವರೆಗೆ.
ಮಾರ್ಪಾಡುಗಳನ್ನು ಒಳಗೊಂಡಂತೆ ಎಲ್ಲಾ ಸೇರ್ಪಡೆಗಳು / ತಿದ್ದುಪಡಿಗಳು ಇದ್ದಲ್ಲಿ ವೆಬ್‌ಸೈಟ್‌ನಲ್ಲಿ ಮಾತ್ರವೇ ಪ್ರಕಟಿಸಲಾಗುತ್ತದೆ.
ಸಹಿ/–
ದಿನಾಂಕ : 07–05–2022 ಸಹಾಯಕ ಮಹಾ ಪ್ರಬಂಧಕರು

ಶ್ರೀ ನರೇಂದ್ರ ಮೋದಿ
ಸನ್ಮಾನ್ಯ ಪ್ರಧಾನಮಂತ್ರಿಗಳು
ಸ್ವಾತಂತ್ರ್ಯದ ಅಮೃತ ಮಹೋತ್ಸವ
ಪಶುಪಾಲನಾ ಮತ್ತು ಪಶುವೈದ್ಯಕೀಯ ಸೇವಾ ಇಲಾಖೆ

ಶ್ರೀ ಬಸವರಾಜ ಎಸ್. ಬೊಮ್ಮಾಯಿ
ಸನ್ಮಾನ್ಯ ಮುಖ್ಯಮಂತ್ರಿಗಳು
ಸಂಚಾರಿ ಪಶು ಚಿಕಿತ್ಸಾ ಘಟಕಗಳ ಲೋಕಾರ್ಪಣೆ
ಜಾನುವಾರು ಆರೋಗ್ಯ ಮತ್ತು ರೋಗ ನಿಯಂತ್ರಣ ಕಾರ್ಯಕ್ರಮ
2021-22ನೇ ಸಾಲಿನ ಕೇಂದ್ರ ಸರ್ಕಾರದ ಅನುದಾನದಲ್ಲಿ ಜಾನುವಾರು ಆರೋಗ್ಯ ಮತ್ತು ರೋಗ ನಿಯಂತ್ರಣ ಕಾರ್ಯಕ್ರಮದಡಿಯಲ್ಲಿ ಅಗತ್ಯ ತುರ್ತುಸೇವೆಯನ್ನು ಒದಗಿಸುವ ಸಲುವಾಗಿ ಕರ್ನಾಟಕ ರಾಜ್ಯಕ್ಕೆ 275 ಸಂಚಾರಿ ಪಶು ಚಿಕಿತ್ಸಾ ವಾಹನಗಳನ್ನು ಒದಗಿಸಲಾಗಿದೆ.

ಮಾನ್ಯ ಪಶುಸಂಗೋಪನಾ ಸಚಿವರಾದ ಶ್ರೀ ಪ್ರಭು ಬಿ. ಚವ್ಹಾಣ್ ರವರು ಮಾನ್ಯ ಕೇಂದ್ರ ಮೀನುಗಾರಿಕೆ, ಪಶುಸಂಗೋಪನಾ ಮತ್ತು ಹೈನುಗಾರಿಕಾ ಸಚಿವರಾದ ಶ್ರೀ ಪರ್ಷೋತ್ತಮ್ ರೂಪಾಲ ಅವರನ್ನು ದೆಹಲಿಯ ನಿವಾಸದಲ್ಲಿ ಭೇಟಿಯಾಗಿ ಚರ್ಚಿಸಿದ ಕ್ಷಣ.

ದಿನಾಂಕ: 07.05.2022 | ಸಮಯ: ಮಧ್ಯಾಹ್ನ 12.00 ಗಂಟೆಗೆ
ಸ್ಥಳ: ವಿಧಾನಸೌಧದ ಮುಖ್ಯದ್ವಾರದ ಮುಂಭಾಗ, ಬೆಂಗಳೂರು.
ವೇದಿಕೆ ಕಾರ್ಯಕ್ರಮ: ವಿಧಾನಸೌಧದ ಬ್ಯಾಂಕ್ವೆಟ್ ಹಾಲ್
ಉದ್ಘಾಟನೆ
ಶ್ರೀ ಪರ್ಷೋತ್ತಮ್ ರೂಪಾಲ
ಮೀನುಗಾರಿಕೆ, ಪಶುಸಂಗೋಪನಾ ಮತ್ತು ಹೈನುಗಾರಿಕಾ ಸಚಿವರು ಭಾರತ ಸರ್ಕಾರ
ಘನ ಉಪಸ್ಥಿತಿ
ಶ್ರೀ ಬಸವರಾಜ ಎಸ್. ಬೊಮ್ಮಾಯಿ – ಸನ್ಮಾನ್ಯ ಮುಖ್ಯಮಂತ್ರಿಗಳು ಕರ್ನಾಟಕ ಸರ್ಕಾರ
ಶ್ರೀ ಪ್ರಭು ಬಿ. ಚವ್ಹಾಣ್ – ಮಾನ್ಯ ಪಶುಸಂಗೋಪನಾ ಸಚಿವರು ಕರ್ನಾಟಕ ಸರ್ಕಾರ
ಶ್ರೀ ಪಿ.ಸಿ. ಮೋಹನ್ – ಮಾನ್ಯ ಸಂಸದರು ಬೆಂಗಳೂರು ಕೇಂದ್ರ ಕ್ಷೇತ್ರ
ಅಧ್ಯಕ್ಷತೆ
ಶ್ರೀ ರಿಜ್ವಾನ್ ಅರ್ಷದ್ – ಶಾಸಕರು ಶಿವಾಜಿನಗರ ಕ್ಷೇತ್ರ
ಮುಖ್ಯ ಅತಿಥಿಗಳು
ಶ್ರೀ ಆರ್. ಅಶೋಕ್ – ಮಾನ್ಯ ಕಂದಾಯ ಸಚಿವರು ಕರ್ನಾಟಕ ಸರ್ಕಾರ
ಶ್ರೀ ವಿ. ಸೋಮಣ್ಣ – ಮಾನ್ಯ ವಸತಿ ಸಚಿವರು ಕರ್ನಾಟಕ ಸರ್ಕಾರ
ಶ್ರೀ ಸಿ.ಎನ್. ಅಶ್ವತ್ಥ ನಾರಾಯಣ – ಮಾನ್ಯ ಉನ್ನತ ಶಿಕ್ಷಣ, ಐಟಿ ಬಿಟಿ, ವಿಜ್ಞಾನ ಮತ್ತು ತಂತ್ರಜ್ಞಾನ ಮತ್ತು ಕೌಶಲ್ಯ ಅಭಿವೃದ್ಧಿ ಸಚಿವರು ಕರ್ನಾಟಕ ಸರ್ಕಾರ
ಶ್ರೀ ಎಸ್.ಟಿ. ಸೋಮಶೇಖರ್ – ಮಾನ್ಯ ಸಹಕಾರ ಸಚಿವರು ಕರ್ನಾಟಕ ಸರ್ಕಾರ
ಶ್ರೀ ಬಿ.ಎ. ಬಸವರಾಜ್ – ಮಾನ್ಯ ನಗರಾಭಿವೃದ್ಧಿ ಸಚಿವರು ಕರ್ನಾಟಕ ಸರ್ಕಾರ
ಶ್ರೀ ಮುನಿರತ್ನ – ಮಾನ್ಯ ತೋಟಗಾರಿಕಾ, ಯೋಜನೆ ಮತ್ತು ಸಾಂಖ್ಯಿಕ ಸಚಿವರು, ಕರ್ನಾಟಕ ಸರ್ಕಾರ
ಶ್ರೀ ಕೆ. ಗೋಪಾಲಯ್ಯ – ಮಾನ್ಯ ಅಬಕಾರಿ ಸಚಿವರು ಕರ್ನಾಟಕ ಸರ್ಕಾರ
ಶ್ರೀ ಬಾಲಚಂದ್ರ ಲ. ಜಾರಕಿಹೊಳಿ – ಅಧ್ಯಕ್ಷರು ಕರ್ನಾಟಕ ಹಾಲು ಮಹಾಮಂಡಳಿ
ಶ್ರೀ ಎಸ್. ಅಂಗಾರ – ಮಾನ್ಯ ಮೀನುಗಾರಿಕಾ ಸಚಿವರು ಕರ್ನಾಟಕ ಸರ್ಕಾರ
ಸಮಾರಂಭದಲ್ಲಿ ಬೆಂಗಳೂರು ನಗರ ವ್ಯಾಪ್ತಿಯ ಎಲ್ಲಾ ಮಾನ್ಯ ಸಂಸದರು, ಮಾನ್ಯ ರಾಜ್ಯಸಭಾ ಸದಸ್ಯರು, ಮಾನ್ಯ ವಿಧಾನಸಭಾ ಸದಸ್ಯರು ಹಾಗೂ ಮಾನ್ಯ ವಿಧಾನ ಪರಿಷತ್ ಸದಸ್ಯರು ವಿಶೇಷ ಆಹ್ವಾನಿತರಾಗಿ ಭಾಗವಹಿಸುವರು
ಸರ್ವರಿಗೂ ಆದರದ ಸುಸ್ವಾಗತ
ಶ್ರೀಮತಿ ಸಲ್ಮಾ ಕೆ. ಫಾಹಿಮ್, ಭಾ.ಆ.ಸೇ – ಸರ್ಕಾರದ ಕಾರ್ಯದರ್ಶಿಗಳು ಪಶುಸಂಗೋಪನಾ ಮತ್ತು ಮೀನುಗಾರಿಕೆ ಇಲಾಖೆ ಕರ್ನಾಟಕ ಸರ್ಕಾರ
ಶ್ರೀ ಹೆಚ್. ಬಸವರಾಜೇಂದ್ರ, ಭಾ.ಆ.ಸೇ – ಆಯುಕ್ತರು ಪಶುಪಾಲನಾ ಮತ್ತು ಪಶುವೈದ್ಯಕೀಯ ಸೇವಾ ಇಲಾಖೆ ಕರ್ನಾಟಕ ಸರ್ಕಾರ
ಡಾ|| ಮಂಜುನಾಥ್ ಎಸ್. ಪಾಳೇಗಾರ, ಎಂವಿಎಸ್‌ಸಿ – ನಿರ್ದೇಶಕರು ಪಶುಪಾಲನಾ ಮತ್ತು ಪಶುವೈದ್ಯಕೀಯ ಸೇವಾ ಇಲಾಖೆ ಕರ್ನಾಟಕ ಸರ್ಕಾರ
ಪ್ರಕಟಣೆ : ಆಯುಕ್ತರು, ಪಶುಪಾಲನಾ ಮತ್ತು ಪಶುವೈದ್ಯಕೀಯ ಸೇವಾ ಇಲಾಖೆ, ಕರ್ನಾಟಕ ಸರ್ಕಾರ.
ಹೆಚ್ಚಿನ ಮಾಹಿತಿಗಾಗಿ ಹತ್ತಿರದ ಪಶುವೈದ್ಯಕೀಯ ಸಂಸ್ಥೆಯನ್ನು ಸಂಪರ್ಕಿಸಿ ಅಥವಾ 24X7 ಪ್ರಾಣಿ ಕಲ್ಯಾಣ ಸಹಾಯವಾಣಿ ಸಂಖ್ಯೆ : 8277100200 ಗೆ ಕರೆ ಮಾಡಿ.
ಸಾರ್ವಜನಿಕ ಆಸ್ತಿಪಾಸ್ತಿ ರಕ್ಷಿಸುವುದು ಮತ್ತು ಹಿಂಸೆಯನ್ನು ತ್ಯಜಿಸುವುದು ಪ್ರತಿಯೊಬ್ಬ ಭಾರತೀಯನ ಸಂವಿಧಾನಬದ್ಧ ಮೂಲಭೂತ ಕರ್ತವ್ಯ.
ಕೋವಿಡ್-19ರ ಮಾರ್ಗಸೂಚಿಗಳನ್ನು ಪಾಲಿಸೋಣ ಕೊರೋನಾ ವಿರುದ್ಧ ಜಯಗಳಿಸೋಣ
ಕಡ್ಡಾಯವಾಗಿ ಮಾಸ್ಕ್ ಧರಿಸಿ | ಕೈಗಳ ಸ್ವಚ್ಛತೆಯನ್ನು ಕಾಪಾಡಿಕೊಳ್ಳಿ | ದೈಹಿಕ ಅಂತರವನ್ನು ಪಾಲಿಸಿ

DIGITAL DHAMAKA
07 - 13 MAY 2022

FREE GIFT* FREE Fire Bolt Smart watch Worth Rs.7999 /- On Purchase worth ₹40000 /- on Electronics & Home Appliances on select products
UPTO 60% DISCOUNT on Kitchen Appliances Hurry Up! Limited time Offer
EMI CARD EASY FINANCE BAJAJ FINSERV IDFC FIRST Bank
CREDIT / DEBIT CARD EMI HDFC BANK We understand your world
UPTO 20% CASH BACK 1 EMI FREE
unilet CARE FOR YOUR ELECTRONICS & APPLIANCES
AVAIL INSTANT 20% DISCOUNT ON UNILET EXTENDED WARRANTY ON ALL PRODUCTS*
ಯುನಿಲೆಟ್® ಎಲೆಕ್ಟ್ರಾನಿಕ್ಸ್ ಅಂಡ್ ಮೋರ್...

BANASHANKARI Opp. Big Bazaar Ph: 99000 46931	BANNERGHATTA RD DLF City, Akshay Nagar Ph: 99000 46943	BASVESHWARA NAGAR Modi Hospital Road Ph: 99000 46934.	HONGASANDRA Opp SBI, Begur Road Ph: 95915 26018	BOMMANAHALLI Opp. Brand Factory Ph: 99000 46913	COX TOWN Next to Gymkhana Ph: 99000 46930	FRAZER TOWN Mosque Road Ph: 99001 11562	GANGA NAGAR Opp Vishal Medicals Ph: 99000 46949	HANUMANTH NAGAR Opp. Canara Bank Ph: 99000 46940.	HEBBAGODI Opp SKF, Next to KFC Ph: 76195 55541	HEGGANAHALLI Opp Bus Stop Ph: 76195 55506	HESARAGHATTA MN RD Opp. Karnataka Bank Ph: 76195 55543	HRBR LAYOUT Near Banaswadi Club Ph: 99000 46946	
HSR LAYOUT Opp NIFT, 27 Main Ph: 99000 18126	KOTHANUR Next to Empire Hotel Ph: 99002 37116	K R PURAM Nr. TC Palya signal Ph: 76195 55537	MARATHAHALLI Opp. Innovative Ph: 91484 50665/64	MATHIKERE Old Raghu Med. Blg Ph: 91484 50662	NAGARBHAVI Ambedkar Col. Signal Ph: 99725 97017	R.T NAGAR Next to Police Station Ph:99000 29308	SANJAY NAGAR Next to HDFC Bank Ph: 99000 46928	SUNKADAKATTE Magadi Road Ph: 76195 55509	RAMA MURTHY NAGAR Next to Honda Showroom Ph:99000 46915	RR NAGAR Opp. BBMP Office Ph: 99000 18217	SAHAKAR NAGAR Next to Swati Garden Ph: 99000 46937		
PEENYA T DASARAHALLI Next to Honda Showroom Ph: 91485 70490	VIJAYANAGAR Opp. Water Tank Ph: 99000 12420	YELAHANKA NEW TOWN Opp Yelahanka Central Mall Ph: 99000 46918	HOSAKOTE Next to Chemmanur Ph: 91081 78999	KENGERI Opp. DS Max Ph: 99000 12609	RAMANAGARA Nr. Izoor P Stn. Ph: 99000 98795	DEVANAHALLI Opp. Indian Oil Ph: 91481 40111	NELAMANGALA Opp. Shell Petrol Station Ph: 99001 15781	KOLAR Opp Honda Ph: 99001 09852	TUMKUR Opp. SIT, Batwadi Ph: 91086 71999	DODDABALLAPUR Taluk Office Road Ph: 99000 46923			

LG BEST SHOPS: BANASHANKARI, Ph: 99000 29309. HRBR LAYOUT, Ph: 95133 05557. MATHIKERE, Ph: 91484 50663. NAGARBHAVI, Ph: 99725 97043. PEENYA, Ph: 99000 12439. SAHAKAR NAGAR (KODIGEHALLI JN.), Ph: 95133 05559.
*Terms and conditions apply. On select brands and products. Limited period offers. Images are for representation only, not actual products. Finance at the sole discretion of the financier.
BENGALURU | MYSORE | TUMKUR | HOSAKOTE | RAMANAGAR | KOLAR | NELAMANGALA | MANDYA | CHITRADURGA | DODDABALLAPUR | SHIVAMOGGA | HASSAN

ಪುಲಿಕೇಶಿನಗರ: ಇಂದು ಜನಸ್ಪಂದನ

ಪ್ರಜಾವಾಣಿ ವಾರ್ತೆ

ಜನಸ್ಪಂದನ

ಶ್ರೀನಿವಾಸ ಮೂರ್ತಿ

ಬೆಂಗಳೂರು: ನೀವು ಪುಲಿಕೇಶಿನಗರ ವಿಧಾನಸಭಾ ಕ್ಷೇತ್ರದ ನಿವಾಸಿಯೇ? ನೀವು ಓಡಾಡುವ ರಸ್ತೆಯಲ್ಲಿ ಗುಂಡಿ ಬಿದ್ದಿದೆಯೇ? ಜಲಮಂಡಳಿ ಸಮರ್ಪಕವಾಗಿ ನೀರು ಪೂರೈಸುತ್ತಿಲ್ಲವೇ? ಅಥವಾ ನಿತ್ಯ ವಿಹಾರಕ್ಕೆ ಹೋಗುವ ಉದ್ಯಾನ ಪಾಳುಬಿದ್ದಿದೆಯೇ? ಹಾಗಾದರೆ, ಇದೇ 7ರಂದು ಸುಲ್ತಾನ್ ಪಾಳ್ಯದ ಗಣೇಶ ಬ್ಲಾಕ್‌ನ ಒಂದನೇ ಅಡ್ಡರಸ್ತೆಯ ಪಾನಿಪುರಿ ಮೈದಾನಕ್ಕೆ ಬನ್ನಿ.

ಪುಲಿಕೇಶಿನಗರ ವಿಧಾನಸಭಾ ಕ್ಷೇತ್ರದ ಜನರ ಅಹವಾಲು ಆಲಿಸುವ ಸಲುವಾಗಿ 'ಪ್ರಜಾವಾಣಿ– ಡೆಕ್ಕನ್ ಹೆರಾಲ್ಡ್' ಪತ್ರಿಕೆಗಳ ವತಿಯಿಂದ 'ಜನಸ್ಪಂದನ' ಕಾರ್ಯಕ್ರಮ ಏರ್ಪಡಿಸಲಾಗಿದೆ.

ಶಾಸಕ ಅಖಂಡ ಶ್ರೀನಿವಾಸಮೂರ್ತಿ ಹಾಗೂ ವಿವಿಧ ಇಲಾಖೆಗಳ ಅಧಿಕಾರಿಗಳು ಸಾರ್ವಜನಿಕರ ಅಹವಾಲು ಆಲಿಸಲಿದ್ದಾರೆ. ಆಸಕ್ತರು ಬೆಳಿಗ್ಗೆ 9ರಿಂದ ಸ್ಥಳದಲ್ಲೇ ಹೆಸರು ನೋಂದಾಯಿಸಬಹುದು.

ಬಿಬಿಎಂಪಿ ನೂತನ ಮುಖ್ಯ ಆಯುಕ್ತರಾಗಿ ತುಷಾರ್ ಗಿರಿನಾಥ್ ಅಧಿಕಾರ ಸ್ವೀಕಾರ

ಸೃಜನಾತ್ಮಕ ನಿರ್ಧಾರದಿಂದ ಸುಧಾರಣೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಬಿಬಿಎಂಪಿಯಲ್ಲಿ ಯಾವುದೇ ಕೆಲಸ ನಡೆಯುತ್ತಿಲ್ಲ ಎನ್ನುವ ನಿರಾಶೆಯ ಭಾವನೆ ಬೇಡ. ಸೃಜನಾತ್ಮಕ ನಿರ್ಧಾರಗಳಿಂದ ವ್ಯವಸ್ಥೆಯನ್ನು ಸರಿಪಡಿಸಬಹುದು' ಎಂದು ಬಿಬಿಎಂಪಿಯ ನೂತನ ಮುಖ್ಯ ಆಯುಕ್ತ ತುಷಾರ್ ಗಿರಿನಾಥ್ ಆಶಾವಾದ ವ್ಯಕ್ತಪಡಿಸಿದರು.

ಗೌರವ್ ಗುಪ್ತ ಅವರಿಂದ ಶುಕ್ರವಾರ ಅಧಿಕಾರ ಸ್ವೀಕರಿಸಿದ ಬಳಿಕ ಅವರು ಸುದ್ದಿಗಾರರ ಜೊತೆ ಮಾತನಾಡಿದರು.

'ಶಕ್ತಿ ಮೀರಿ, ಅಪೇಕ್ಷೆಗೆ ಮೀರಿ ದೊಡ್ಡ ಹುದ್ದೆ ಸಿಕ್ಕಿದೆ ಎಂದು ನಾನು ಭಾವಿಸಿಲ್ಲ. ಜನರ ಜೊತೆ ಸೇವೆ ಮಾಡುವುದಕ್ಕೆ ನಮ್ಮ ರಾಜ್ಯ ಸರ್ಕಾರ ಅವಕಾಶ ಕೊಟ್ಟಿದೆ. ಅದನ್ನು ಸಮರ್ಥವಾಗಿ, ದಕ್ಷವಾಗಿ ನಿಭಾಯಿಸುತ್ತೇನೆ' ಎಂದು ಅವರು ವಿಶ್ವಾಸ ವ್ಯಕ್ತಪಡಿಸಿದರು..

'ಪ್ರತಿಯೊಂದು ನಿರ್ಧಾರವೂ ಆಡಳಿತದ ಮೇಲೆ ಪರಿಣಾಮ ಬೀರುತ್ತದೆ. ಆದ್ದರಿಂದ ಪ್ರತಿ ಕೆಲಸದಲ್ಲೂ ಪಾರದರ್ಶಕತೆ ಕಾಯ್ದುಕೊಂಡರೆ ಯಶಸ್ವಿಯಾಗಿ ಆಡಳಿತ ನೀಡುವುದು ಕಷ್ಟವಲ್ಲ. ಇಲ್ಲಿ ನಾವು ನೇರವಾಗಿ ಜನರ ಜೊತೆ ಒಡನಾಟ ಇಟ್ಟುಕೊಳ್ಳಬೇಕಾಗುತ್ತದೆ. ಇಲ್ಲಿ ಯಶಸ್ವಿಯಾದರೂ, ವಿಫಲವಾದರೂ ಎದ್ದು ಕಾಣುತ್ತದೆ' ಎಂದು ಗಿರಿನಾಥ್ ಅವರು ಹೇಳಿದರು.

'ಮೂಲಸೌಕರ್ಯ ಅಭಿವೃದ್ಧಿ ಕಾಮಗಾರಿಗಳನ್ನು ತ್ವರಿತಗತಿಯಲ್ಲಿ ಪೂರ್ಣಗೊಳಿಸುವುದು, ರಸ್ತೆ ಗುಂಡಿ ಸಮಸ್ಯೆ ನೀಗಿಸುವುದು ಹಾಗೂ ಕಸ ವಿಲೇವಾರಿ ವ್ಯವಸ್ಥೆಯನ್ನು ಸರಿ ದಾರಿಗೆ ತರುವುದು ಹಾಗೂ ಮಳೆಗಾಲದಲ್ಲಿ ಪ್ರವಾಹದಿಂದ ಸಮಸ್ಯೆ ಉಂಟಾಗದಂತೆ ಮುನ್ನೆಚ್ಚರಿಕೆ ವಹಿಸುವುದು ಹಾಗೂ ಕೋವಿಡ್ ನಾಲ್ಕನೇ ಅಲೆ ನಿಭಾಯಿಸುವುದು ನನ್ನ ಸದ್ಯದ ಆದ್ಯತೆ' ಎಂದರು.

ಬಿಬಿಎಂಪಿಯ ನೂತನ ಮುಖ್ಯ ಆಯುಕ್ತ ತುಷಾರ್ ಗಿರಿನಾಥ್ ಅವರಿಗೆ ಗೌರವ್ ಗುಪ್ತ ಅವರು ಶುಕ್ರವಾರ ಶುಭಕೋರಿದರು — ಪ್ರಜಾವಾಣಿ ಚಿತ್ರ

> **ಬಿಬಿಎಂಪಿ ಮುಖ್ಯ ಆಯುಕ್ತರು ಏಕ ವ್ಯಕ್ತಿ ಸೇನೆ ಅಲ್ಲ. ಇಲ್ಲೊಂದು ದೊಡ್ಡ ಸೈನ್ಯವೇ ಇದೆ. ಅದನ್ನು ಸರಿಯಾಗಿ ಮುನ್ನಡೆಸಬೇಕು ಅಷ್ಟೇ. ಅಹವಾಲು ಪಡೆದರಷ್ಟೇ ಸಾಲದು. ಇತ್ಯರ್ಥಪಡಿಸುವುದಕ್ಕೂ ಆದ್ಯತೆ ನೀಡಬೇಕು**
>
> **ತುಷಾರ್ ಗಿರಿನಾಥ್,** ಮುಖ್ಯ ಆಯುಕ್ತ ಬಿಬಿಎಂಪಿ

'ಬಿಬಿಎಂಪಿ ಆಡಳಿತ ವ್ಯವಸ್ಥೆಯಲ್ಲಿ ಅದರದ್ದೇ ಆದ ಸವಾಲುಗಳಿವೆ. ಈ ಸವಾಲುಗಳನ್ನು ಎದುರಿಸಲು ಬಿಬಿಎಂಪಿ ಆಡಳಿತ ಯಂತ್ರವು ಸಮರ್ಥವಾಗಿದೆ. ಇಲ್ಲಿ ಕರ್ತವ್ಯ ನಿರ್ವಹಿಸುವುದು ಕಠಿಣ ನಿಜ, ಆದರೆ, ಅದಕ್ಕೆ ಹೆದರುವುದಿಲ್ಲ.'

'ನನ್ನ ಕಾರ್ಯಕ್ಷಮತೆ ಹಾಗೂ ಶಕ್ತಿಗೂ ಇದು ಸವಾಲು. ಬಿಬಿಎಂಪಿಯಲ್ಲಿ ಅನುಭವಿ ಅಧಿಕಾರಿಗಳಿದ್ದಾರೆ. ಅವರ ನೆರವು ಪಡೆದು ಸನ್ನಿವೇಶಗಳಿಗೆ ತಕ್ಕಂತೆ ಸಮರ್ಪಕ ನಿರ್ಧಾರ ತಳೆಯುವ ಮೂಲಕ ಈ ಬಿಬಿಎಂಪಿ ಆಯುಕ್ತ ಸ್ಥಾನದ ಹುದ್ದೆಯನ್ನು ಜನರ ನಿರೀಕ್ಷೆಗೆ ತಕ್ಕಂತೆ ನಿರ್ವಹಿಸುವ ವಿಶ್ವಾಸ ಇದೆ' ಎಂದು ತುಷಾರ್ ಹೇಳಿದರು.

'ವಿವಿಧ ಇಲಾಖೆಗಳ ಸಮನ್ವಯಕ್ಕೆ ಆದ್ಯತೆ'

'ರಸ್ತೆಯಲ್ಲಿ ಸಣ್ಣ ಗುಂಡಿ ನಿರ್ಮಾಣವಾದಾಗಲೇ ಅದನ್ನು ಮುಚ್ಚಲು ಕ್ರಮಕೈಗೊಳ್ಳಬೇಕು. ಇಲ್ಲದಿದ್ದರೆ ಗುಂಡಿಯ ಬದಲು ಹಳ್ಳವನ್ನು ಮುಚ್ಚಬೇಕಾಗುತ್ತದೆ. ಇದು ಪ್ರತಿ ವರ್ಷದ ಸಮಸ್ಯೆ. ಜನರು ಗುಂಡಿಮುಕ್ತ ರಸ್ತೆಯನ್ನು ಬಯಸುತ್ತಾರೆ. ಅವರ ಅಪೇಕ್ಷೆ ಈಡೇರಿಸಲು ಸಕಲ ಪ್ರಯತ್ನ ಮಾಡುತ್ತೇವೆ' ಎಂದು ಬಿಬಿಎಂಪಿ ನೂತನ ಆಯುಕ್ತ ತುಷಾರ್ ಗಿರಿನಾಥ್ ಹೇಳಿದರು.

'ವಿವಿಧ ಇಲಾಖೆಗಳ ನಡುವೆ ಸಮನ್ವಯ ಪ್ರಮುಖ ವಿಚಾರ. ಬೆಸ್ಕಾಂ ವ್ಯವಸ್ಥಾಪಕ ನಿರ್ದೇಶಕ ಹಾಗೂ ಜಲಮಂಡಳಿ ಅಧ್ಯಕ್ಷನಾಗಿ ಕಾರ್ಯ ನಿರ್ವಹಿಸಿದ ಅನುಭವ ನನಗಿದೆ. ಜಲಮಂಡಳಿಯವರು ಕೊಳವೆ ಅಳವಡಿಸುವಾಗ ಪಡುವ ಕಷ್ಟ ಹಾಗೂ ಅದಕ್ಕಾಗಿ ರಸ್ತೆ ಅಗೆದ ಬಳಿಕ ಬಿಬಿಎಂಪಿಯವರು ಪಡುವ ಕಷ್ಟಗಳೆರಡೂ ಗೊತ್ತಿದೆ. ಉತ್ತಮ ಸಮನ್ವಯ ಉಳಿಸಿಕೊಂಡು ಕೆಲಸ ಮಾಡುವುದು ನನ್ನ ಉದ್ದೇಶ' ಎಂದರು.

'ಜನರ ದೂರುಗಳನ್ನು ತಕ್ಷಣ ಇತ್ಯರ್ಥಪಡಿಸುವ ಮೂಲಕ ದೂರು ಕಡಿಮೆ ಆಗುವಂತೆ ನೋಡಿಕೊಳ್ಳಬೇಕು. ಸಹಾಯವಾಣಿ ಸಮರ್ಪಕವಾಗಿ ಕಾರ್ಯ ನಿರ್ವಹಿಸುವಂತೆ ನೋಡಿಕೊಳ್ಳಬೇಕು. ಜೊತೆಗೆ ಮೂಲಸೌಕರ್ಯ ಸುಧಾರಣೆಯೂ ಆಗಬೇಕಿದೆ. ಎಲ್ಲರೂ ಸೇರಿ ಕೆಲಸ ಮಾಡಿ ಸಮಸ್ಯೆ ಬಗೆಹರಿಸಿದರೆ ಎಲ್ಲರಿಗೂ ಯಶಸ್ಸು ಸಿಗುತ್ತದೆ. ಹಾಗೆಯೇ ವೈಫಲ್ಯಕ್ಕೂ ಎಲ್ಲರ ಕೊಡುಗೆ ಇದೆ. ಬಿಬಿಎಂಪಿ ಬಳಿ ಸಾಕಷ್ಟು ಮಾನವ ಸಂಪನ್ಮೂಲ ಇದೆ. ಅದನ್ನು ಸರಿಯಾಗಿ ಬಳಸಿದರೆ ಜನರ ನಿರೀಕ್ಷೆಗೆ ತಕ್ಕ ಸೇವೆ ನೀಡಬಹುದು' ಎಂದು ವಿಶ್ವಾಸ ವ್ಯಕ್ತಪಡಿಸಿದರು.

ಒಂದೂವರೆ ಗಂಟೆ ಕಾದ ತುಷಾರ್

'ಬಿಬಿಎಂಪಿಯ ಮುಖ್ಯ ಆಯುಕ್ತರ ಕಚೇರಿಯಲ್ಲಿ ಶುಕ್ರವಾರ ಬೆಳಿಗ್ಗೆ 11ಕ್ಕೆ ಅಧಿಕಾರ ಹಸ್ತಾಂತರಕ್ಕೆ ಸಮಯ ಗೊತ್ತುಪಡಿಸಲಾಗಿತ್ತು. ತುಷಾರ್ ಹಾಗೂ ವಿವಿಧ ವಿಭಾಗಗಳ ವಿಶೇಷ ಆಯುಕ್ತರು ಬೆಳಿಗ್ಗೆ 11 ಗಂಟೆಗೆ ಬಿಬಿಎಂಪಿಯ ಕೇಂದ್ರ ಕಚೇರಿಗೆ ಬಂದಿದ್ದರು. ಆದರೆ, ಗೌರವ್ ಗುಪ್ತ ಅವರು ಬಾರದ ಕಾರಣಕ್ಕೆ ಅಧಿಕಾರ ಹಸ್ತಾಂತರ ಪ್ರಕ್ರಿಯೆಯನ್ನು ಮಧ್ಯಾಹ್ನ 12.30ಕ್ಕೆ ಮುಂದೂಡಲಾಯಿತು. ತುಷಾರ್ ಹಾಗೂ ವಿಶೇಷ ಆಯುಕ್ತರು ಸುಮಾರು ಒಂದೂವರೆ ಗಂಟೆ ಕಾಲ ಕಾಯಬೇಕಾಯಿತು.

ಸುದ್ದಿ 2 ನಿಮಿಷ

ಕೋವಿಡ್ ಸಾವು, ಸರ್ಕಾರಗಳ ಸುಳ್ಳು ಬಯಲು: ರಾಮಲಿಂಗಾರೆಡ್ಡಿ

ಬೆಂಗಳೂರು: ದೇಶದಲ್ಲಿ ಕೋವಿಡ್‌ನಿಂದ ಸಂಭವಿಸಿದ ಸಾವಿನ ಸಂಖ್ಯೆ ಕುರಿತು ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಹೇಳುತ್ತಿದ್ದ ಸುಳ್ಳು ವಿಶ್ವ ಆರೋಗ್ಯ ಸಂಸ್ಥೆಯ ವರದಿಯಿಂದ ಬಯಲಾಗಿದೆ ಎಂದು ಕೆಪಿಸಿಸಿ ಕಾರ್ಯಾಧ್ಯಕ್ಷ



ರಾಮಲಿಂಗಾ ರೆಡ್ಡಿ ಹೇಳಿದರು.

ಸುದ್ದಿಗಾರರ ಜತೆ ಮಾತನಾ ಡಿದ ಅವರು, 'ಕೋವಿಡ್‌ನಿಂದ ಮೃತಪಟ್ಟವರ ಸಂಖ್ಯೆ ಕುರಿತು ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ಮಾಹಿತಿ ಮುಚ್ಚಿಡುತ್ತಿವೆ ಎಂಬುದನ್ನು ಹಿಂದೆಯೇ ನಾನು ಹೇಳಿದ್ದೆ. 2019 ಮತ್ತು 2020ರಲ್ಲಿ ದೇಶ ಹಾಗೂ ರಾಜ್ಯದಲ್ಲಿ ಸಂಭವಿಸಿದ ಮರಣಗಳ ಸಂಖ್ಯೆಯನ್ನು ಅವಲೋಕಿಸಿದಾಗ ಈ ವಿಚಾರ ಗೊತ್ತಾಗಿತ್ತು. ದೇಶದಲ್ಲಿ ಕೋವಿಡ್ ನಿಂದ 42 ಲಕ್ಷ ಜನರು ಸತ್ತಿದ್ದಾರೆ ಎಂದು ನಾನು ಹಿಂದೆ ಹೇಳಿದ್ದೆ. ವಿಶ್ವ ಆರೋಗ್ಯ ಸಂಸ್ಥೆ ಈಗ 47 ಲಕ್ಷ ಜನರು ಸತ್ತಿರುವುದಾಗಿ ಹೇಳಿದೆ' ಎಂದರು.

ಶಾಲೆಗಳ ರಜಾ ಅವಧಿ ವಿಸ್ತರಣೆ ಬೇಡ

ಬೆಂಗಳೂರು: 'ಶಾಲೆಗಳ ರಜಾ ಅವಧಿಯನ್ನು ವಿಸ್ತರಿಸಬಾರದು. ಮೇ 16ರಿಂದಲೇ 2022–23ನೇ ಶೈಕ್ಷಣಿಕ ವರ್ಷ ಆರಂಭಿಸಬೇಕು' ಎಂದು ಕರ್ನಾಟಕ ರಾಜ್ಯ ಖಾಸಗಿ ಶಾಲಾ ಕಾಲೇಜು ಪೋಷಕರ ಸಂಘಟನೆಗಳ ಸಮನ್ವಯ ವೇದಿಕೆ ಮತ್ತು ಕರ್ನಾಟಕ ಖಾಸಗಿ ಶಾಲೆಗಳ ಆಡಳಿತ ಮಂಡಳಿಗಳ ಒಕ್ಕೂಟ (ಕೆಎಎಂಎಸ್) ಆಗ್ರಹಿಸಿದೆ.

ಶಾಲೆಗಳನ್ನು ಪುನಾರಂಭಿಸುವ ದಿನಾಂಕವನ್ನು ಮುಂದೂಡಬೇಕು ಎಂದು ವಿಧಾನ ಪರಿಷತ್ ಸಭಾಪತಿ ಬಸವರಾಜ ಹೊರಟ್ಟಿ ನೀಡಿರುವ ಹೇಳಿಕೆಯನ್ನು ವೇದಿಕೆಯ ಅಧ್ಯಕ್ಷ ಬಿ.ಎನ್. ಯೋಗಾನಂದ ಮತ್ತು ಕಾರ್ಯಕಾರಿ ಸಮಿತಿ ಸದಸ್ಯರು ಖಂಡಿಸಿದ್ದಾರೆ.

ಬೇಸಿಗೆ ನೆಪ ಬೇಡ: ಶಾಲಾ ಆರಂಭಕ್ಕೆ ಸಂಬಂಧಿಸಿದಂತೆ ವೈಯಕ್ತಿಕ ಅಭಿಪ್ರಾಯ ಮತ್ತು ರಾಜಕೀಯ ಒತ್ತಡಗಳಿಗೆ ಮಣಿಯಬಾರದು. ಮಕ್ಕಳ ಹಿತದೃಷ್ಟಿಯಿಂದ ನಿರಂತರ ಕಲಿಕೆಗೆ ಅವಕಾಶ ಕಲ್ಪಿಸಬೇಕು ಎಂದು ಕರ್ನಾಟಕ ಖಾಸಗಿ ಶಾಲೆಗಳ ಆಡಳಿತ ಮಂಡಳಿಗಳ ಒಕ್ಕೂಟದ (ಕೆಎಎಂಎಸ್) ಪ್ರಧಾನ ಕಾರ್ಯದರ್ಶಿ ಡಿ. ಶಶಿಕುಮಾರ್ ಒತ್ತಾಯಿಸಿದ್ದಾರೆ.

ಪುರಸಭಾ ಸದಸ್ಯರ ಅನರ್ಹತೆ ಆದೇಶಕ್ಕೆ ಹೈಕೋರ್ಟ್ ತಡೆ

ಪ್ರಜಾವಾಣಿ ವಾರ್ತೆ

ಆನೇಕಲ್: ಚುನಾವಣಾ ವೆಚ್ಚದ ಮಾಹಿತಿ ನೀಡಿಲ್ಲ ಎಂಬ ಕಾರಣಕ್ಕಾಗಿ ಚುನಾವಣಾ ಆಯೋಗ ಆನೇಕಲ್ ಪುರಸಭೆಯ ಮೂವರು ಸದಸ್ಯರನ್ನು ಅನರ್ಹಗೊಳಿಸಿದ್ದ ಆದೇಶಕ್ಕೆ ಹೈಕೋರ್ಟ್‌ನ ವಿಶೇಷ ಪೀಠ ತಡೆಯಾಜ್ಞೆ ನೀಡಿದೆ. ಈ ಹಿನ್ನೆಲೆಯಲ್ಲಿ ಈ ಮೂರು ವಾರ್ಡ್‌ಗಳ ಉಪ ಚುನಾವಣೆಯ ಪ್ರಕ್ರಿಯೆ ಸ್ಥಗಿತಗೊಂಡಿದೆ.

ಹೈಕೋರ್ಟ್‌ನ ವಿಶೇಷ ಪೀಠದ ನ್ಯಾಯಮೂರ್ತಿಗಳಾದ ಹೇಮಂತ್ ಚಂದನ್ ಗೌಡರು ಮತ್ತು ಎಸ್. ರಾಚಯ್ಯ ತಡೆಯಾಜ್ಞೆ ನೀಡಿ ಗುರುವಾರ ಸಂಜೆ ಆದೇಶ ಹೊರಡಿಸಿದ್ದಾರೆ.

ವಾರ್ಡ್ ನಂ. 14ರ ಸದಸ್ಯೆ ಹೇಮಲತಾ ಸುರೇಶ್, ವಾರ್ಡ್ ನಂ. 16ರ ಎಸ್. ಲಲಿತಾ, ವಾರ್ಡ್ ನಂ. 17ರ ಕೆ. ಶ್ರೀನಿವಾಸ್ ಚುನಾವಣಾ ವೆಚ್ಚದ ಮಾಹಿತಿ ನೀಡಿಲ್ಲ ಎಂಬ ಆರೋಪದ ಮೇಲೆ ಚುನಾವಣಾ ಆಯೋಗ ಅನರ್ಹಗೊಳಿಸಿ ಆದೇಶ ನೀಡಿತ್ತು. ಆಯೋಗದ ಈ ತೀರ್ಮಾನವನ್ನು ಹೈಕೋರ್ಟ್‌ನ ಏಕ ಸದಸ್ಯ ಪೀಠ ಮಾನ್ಯ ಮಾಡಿತ್ತು. ಈ ತೀರ್ಪನ್ನು ಪ್ರಶ್ನಿಸಿ ಹೈಕೋರ್ಟ್‌ನ ವಿಶೇಷ ಪೀಠದ ಮುಂದೆ ಮೇಲ್ಮನವಿ ಸಲ್ಲಿಸಲಾಗಿತ್ತು.

ಮೇ 20ರಂದು ಮೂರು ವಾರ್ಡ್‌ಗಳಿಗೆ ಚುನಾವಣೆ ನಿಗದಿಯಾಗಿತ್ತು. ಹೈಕೋರ್ಟ್ ಆದೇಶದ ಹಿನ್ನೆಲೆಯಲ್ಲಿ ಚುನಾವಣಾ ಪ್ರಕ್ರಿಯೆ ಸ್ಥಗಿತಗೊಂಡಿದೆ.

10 ವರ್ಷ ಹಳೆಯ ಬಿಲ್ ಬಾಕಿ ಇಪಿಐ– ಬಿಬಿಎಂಪಿ ತಿಕ್ಕಾಟ

ಒಂದನೇ ಪುಟದಿಂದ

'ಈ ಕಾಮಗಾರಿಯ ಬಿಲ್ ಪಾವತಿಗೆ ಅಗತ್ಯವಿರುವ ಎಲ್ಲ ದಾಖಲೆಗಳು ಹಾಗೂ ಅಳತೆಯ ಮಾಹಿತಿಗಳು ಬಿಬಿಎಂಪಿ ಬಳಿಯೇ ಇವೆ. ಗುತ್ತಿಗೆ ಕರಾರಿಗೆ ಅನುಗುಣವಾಗಿಯೇ ಎಲ್ಲ ಕಾಮಗಾರಿ ಪೂರ್ಣಗೊಳಿಸಿದರೂ, ದೋಷ ಕಾಣಿಸಿಕೊಂಡರೆ ದುರಸ್ತಿಗೊಳಿಸುವುದಕ್ಕೆ ಬದ್ಧವಾದ ಅವಧಿ ಮುಗಿದರೂ ಸಂಸ್ಥೆಗೆ ಹಳೆ ಬಾಕಿ ಇನ್ನೂ ಪಾವತಿ ಆಗಿಲ್ಲ. ಈ ಬಾಕಿ ಹಣವನ್ನು ಬಿಡುಗಡೆ ಮಾಡುವಂತೆ ಸೂಚಿಸಿ ನಗರಾಭಿವೃದ್ಧಿ ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಪತ್ರ ಬರೆದ ಬಳಿಕವೂ ಹಣ ಬಿಡುಗಡೆಗೆ ಕ್ರಮ ಕೈಗೊಂಡಿಲ್ಲ' ಎಂದು ಮುಖ್ಯ ಆಯುಕ್ತರಿಗೆ ಬರೆದ ಪತ್ರದಲ್ಲಿ ಸಂಸ್ಥೆಯ ಹಿರಿಯ (ತಾಂತ್ರಿಕ) ವ್ಯವಸ್ಥಾಪಕ ಎಂ.ಥಾವಸಿರಾಜನ್ ಬೇಸರ ತೋಡಿಕೊಂಡಿದ್ದಾರೆ.

'ಈ ಕಾಮಗಾರಿಗೆ ಸಂಬಂಧಿಸಿದ ಪಾವತಿ ಸ್ವೀಕೃತಿಯ ವಿವರಗಳನ್ನು ಸರ್ಕಾರಿ ಲೆಕ್ಕಪರಿಶೋಧಕರಿಗೆ ಹಾಗೂ ಮಹಾಲೇಖಪಾಲರಿಗೆ ಸಲ್ಲಿಸಬೇಕಾಗುತ್ತದೆ. 10 ವರ್ಷಗಳಿಂದ ಪಾವತಿ ಬಾಕಿ ಇರುವುದರಿಂದ ಅದರ ವಸೂಲಿಗೆ ಕಾನೂನು ಕ್ರಮ ಕೈಗೊಳ್ಳುವಂತೆ ಲೆಕ್ಕಪರಿಶೋಧಕರು ಸಲಹೆ ನೀಡಿದ್ದಾರೆ' ಎಂದೂ ಅವರು ಗಮನಕ್ಕೆ ತಂದಿದ್ದಾರೆ.

'ಬಾಕಿ ಮೊತ್ತವನ್ನು ವಾರ್ಷಿಕ ಶೇ 18ಷ್ಟು ಬಡ್ಡಿ ಸಮೇತ ಆದಷ್ಟು ಬೇಗ ಪಾವತಿಸಬೇಕು. ಇಲ್ಲದಿದ್ದರೆ ನಾವು ಈ ವಿಚಾರದಲ್ಲಿ ಕಾನೂನಾತ್ಮಕವಾಗಿ ಮುಂದುವರಿಯದೇ ಬೇರೆ ದಾರಿ ಇಲ್ಲ' ಎಂದೂ ಅವರು ಎಚ್ಚರಿಸಿದ್ದಾರೆ.

ಈ ಪತ್ರದ ಪ್ರತಿಯನ್ನು ಮುಖ್ಯಮಂತ್ರಿ, ಸರ್ಕಾರದ ಮುಖ್ಯ ಕಾರ್ಯದರ್ಶಿ, ಬಿಬಿಎಂಪಿ ಆಡಳಿತಾಧಿಕಾರಿ, ಬಿಬಿಎಂಪಿ ವಿಶೇಷ ಆಯುಕ್ತರು (ಹಣಕಾಸು), ರಸ್ತೆ ಮೂಲಸೌಕರ್ಯ ವಿಭಾಗದ ಮುಖ್ಯ ಎಂಜಿನಿಯರ್ ಹಾಗೂ ಕಾರ್ಯಪಾಲಕ ಎಂಜಿನಿಯರ್ ಅವರಿಗೂ ಕಳುಹಿಸಿದ್ದಾರೆ.

ಕಾರು ಬಿಡುಗಡೆ

ಹೋಂಡಾ ಕಾರ್ಸ್ ಕಂಪನಿಯ ಹೊಸ 'ಹೋಂಡಾ ಸಿಟಿ ಇ:ಎಚ್‌ಇವಿ' ಕಾರನ್ನು ನಗರದ ವೈಟ್‌ಫೀಲ್ಡ್ ಹೋಂಡಾ ಮಳಿಗೆಯಲ್ಲಿ ಕಂಪನಿಯ ಬ್ಯುಸಿನೆಸ್ ಹೆಡ್ ರಾಮದಾಸ್ ಎಂ ಮತ್ತು ಡಾ. ಶ್ರೀಧರ ರೆಡ್ಡಿ ಅವರು ಬಿಡುಗಡೆ ಮಾಡಿದರು.

ಅನಂತ ಪ್ರೇರಣಾ ಕೇಂದ್ರದಲ್ಲಿರುವ ವಸ್ತುಗಳನ್ನು ಬಸವರಾಜ ಬೊಮ್ಮಾಯಿ ಹಾಗೂ ರಾಜ್ಯಪಾಲ ಥಾವರಚಂದ್ ಗೆಹಲೋತ್ ವೀಕ್ಷಿಸಿದರು. ಅದಮ್ಯ ಚೇತನ ಪ್ರತಿಷ್ಠಾನದ ಅಧ್ಯಕ್ಷೆ ತೇಜಸ್ವಿನಿ ಅನಂತಕುಮಾರ್ ಹಾಗೂ ಇತರರು ಇದ್ದಾರೆ — ಪ್ರಜಾವಾಣಿ ಚಿತ್ರ

'ಅನಂತಕುಮಾರ್ ಸ್ಮಾರಕ ನಿರ್ಮಾಣಕ್ಕೆ ಸಹಕಾರ'

ಬೆಂಗಳೂರು: 'ದಿವಂಗತ ಅನಂತ ಕುಮಾರ್ ಅವರ ಸ್ಮಾರಕ ನಿರ್ಮಾಣಕ್ಕೆ ಸರ್ಕಾರ ಎಲ್ಲ ರೀತಿಯ ಸಹಕಾರ ನೀಡುತ್ತದೆ' ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಭರವಸೆ ನೀಡಿದರು.

ಜಯನಗರದಲ್ಲಿ ಶುಕ್ರವಾರ ನಡೆದ 'ಅನಂತ ಪ್ರೇರಣಾ ಕೇಂದ್ರ'ದ ಉದ್ಘಾಟನಾ ಸಮಾರಂಭದಲ್ಲಿ ಅವರು ಮಾತನಾಡಿ, 'ಮೆಟ್ರೊ, ಅಂತರ ರಾಷ್ಟ್ರೀಯ ವಿಮಾನ ನಿಲ್ದಾಣ, ಕೃಷ್ಣಾ ಮೇಲ್ದಂಡೆ ಯೋಜನೆ, ಕಾವೇರಿ ವಿಚಾರಗಳಲ್ಲಿ ರಾಜ್ಯಕ್ಕೆ ಪರಿಹಾರ ಕೊಡಿಸುವಲ್ಲಿ ದಿವಂಗತ ಅನಂತಕುಮಾರ್ ಪ್ರಮುಖ ಪಾತ್ರ ವಹಿಸಿದ್ದರು. ಬೆಂಗಳೂರಿನ ಸಮಗ್ರ ಅಭಿವೃದ್ಧಿಗೆ ಅವರ ಕೊಡುಗೆ ಅಪಾರ' ಎಂದು ಹೇಳಿದರು.

ಚಕ್ರ ಪಂಚರ್ ಮಾಡಿ ಕಳ್ಳತನ: ಇಬ್ಬರ ಸೆರೆ

ಪ್ರಜಾವಾಣಿ ವಾರ್ತೆ

ಅಪರಾಧ ಸುದ್ದಿ

ಬೆಂಗಳೂರು: ಉಪ ನೋಂದಣಾಧಿಕಾರಿ ಕಚೇರಿ ಹಾಗೂ ಬ್ಯಾಂಕ್‌ಗಳ ಬಳಿ ಸಾರ್ವಜನಿಕರ ಗಮನ ಬೇರೆಡೆ ಸೆಳೆದು ಹಣ ಕಳ್ಳತನ ಮಾಡುತ್ತಿದ್ದ 'ಓಜಿಕುಪ್ಪಂ' ಗ್ಯಾಂಗ್‌ನ ಇಬ್ಬರನ್ನು ಬ್ಯಾಡರಹಳ್ಳಿ ಪೊಲೀಸರು ಬಂಧಿಸಿದ್ದಾರೆ.

'ಚೆನ್ನೈನ ಕಾರ್ತಿಕ್ ಹಾಗೂ ಗೋಪಿ ಬಂಧಿತರು. ಇವರಿಂದ ₹ 5.65 ಲಕ್ಷ ನಗದು ಹಾಗೂ 2 ಮೊಬೈಲ್ ಜಪ್ತಿ ಮಾಡಲಾಗಿದೆ' ಎಂದು ಪೊಲೀಸರು ಹೇಳಿದರು.

'ಆಗಾಗ ನಗರಕ್ಕೆ ಬರುತ್ತಿದ್ದ ಆರೋಪಿಗಳು, ಇಲ್ಲಿಯೇ ಬಾಡಿಗೆ ಮನೆ ಮಾಡಿಕೊಂಡು ಕೆಲದಿನ ವಾಸವಿರುತ್ತಿದ್ದರು. ಹಲವೆಡೆ ಹಣ ಕದ್ದುಕೊಂಡು, ನಂತರ ತಮ್ಮೂರಿಗೆ ಹೋಗುತ್ತಿದ್ದರು' ಎಂದೂ ತಿಳಿಸಿದರು.

ಚಕ್ರ ಪಂಕ್ಚರ್ ಮಾಡಿ ಕೃತ್ಯ: 'ರಿಯಲ್ ಎಸ್ಟೇಟ್ ವ್ಯವಹಾರ ಮಾಡುವ ಜಯರಾಮ್, ಉಪನೋಂದಣಾಧಿಕಾರಿ ಕಚೇರಿಗೆ ಹೋಗಿದ್ದರು. ಸಮೀಪದಲ್ಲೇ ಕಾರು ನಿಲ್ಲಿಸಿದ್ದರು. ಕಾರಿನ ಚಕ್ರವನ್ನು ಆರೋಪಿಗಳು ಪಂಕ್ಚರ್ ಮಾಡಿದ್ದರು' ಎಂದು ಪೊಲೀಸರು ಹೇಳಿದರು.

'ಜಾಗವೊಂದರ ವ್ಯವಹಾರ ಮುಗಿಸಿ ಹಣ ಪಡೆದುಕೊಂಡು ಕಚೇರಿಯಿಂದ ಹೊರಗೆ ಬಂದಿದ್ದ ಜಯರಾಮ್, ಕಾರಿನಲ್ಲಿ ಮನೆಯತ್ತ ಹೊರಡಲು ಸಜ್ಜಾಗಿದ್ದರು. ಸ್ಥಳಕ್ಕೆ ಬಂದಿದ್ದ ಆರೋಪಿಗಳು, ಕಾರಿನ ಚಕ್ರ ಪಂಕ್ಚರ್ ಆಗಿರುವುದಾಗಿ ಹೇಳಿದ್ದರು. ಕಾರಿನಿಂದ ಇಳಿದು ಚಕ್ರ ಗಮನಿಸಿದ್ದ ಜಯರಾಮ್, ಪಂಕ್ಚರ್ ಹಾಕಿಸಲು ಸಮೀಪದಲ್ಲೇ ಇದ್ದ ಅಂಗಡಿಗೆ ಹೋಗಿದ್ದರು. ಅದೇ ವೇಳೆ ಗಮನ ಬೇರೆಡೆ ಸೆಳೆದಿದ್ದ ಆರೋಪಿಗಳು, ಕಾರಿನಲ್ಲಿದ್ದ ಹಣ ಕದ್ದುಕೊಂಡು ಪರಾರಿಯಾಗಿದ್ದರು' ಎಂದೂ ತಿಳಿಸಿದರು.

ಸಿನಿಮೀಯ ರೀತಿಯಲ್ಲಿ ಕಾರ್ಯಾಚರಣೆ: 'ಆರೋಪಿಗಳ ವಿಳಾಸ ಪತ್ತೆ ಮಾಡಿದ್ದ ಪೊಲೀಸರು, ಅವರನ್ನು ಪುರಾವೆ ಸಮೇತ ಹಿಡಿಯಲು ಕಾರ್ಯಾಚರಣೆ ಆರಂಭಿಸಿದ್ದರು. ಆರೋಪಿಗಳ ಮನೆ ಬಳಿಯೇ ಸಾರ್ವಜನಿಕರ ಸೋಗಿನಲ್ಲಿ ಪೊಲೀಸರು ಬಾಡಿಗೆಗೆ ಇದ್ದರು. ನಿತ್ಯವೂ ಆರೋಪಿಗಳನ್ನು ಹಿಂಬಾಲಿಸಿ, ಸಿನಿಮೀಯ ರೀತಿಯಲ್ಲಿ ಬಂಧಿಸಿದ್ದಾರೆ' ಎಂದು ಪೊಲೀಸ್ ಮೂಲಗಳು ಹೇಳಿವೆ.

'7 ಕಡೆಗಳಲ್ಲಿ ಆರೋಪಿಗಳು ಕಳ್ಳತನ ಮಾಡಿರುವುದು ಗೊತ್ತಾಗಿದೆ. ಇವರಿಬ್ಬರ ಜೊತೆ ಮತ್ತಷ್ಟು ಮಂದಿ ಕೃತ್ಯದಲ್ಲಿ ಭಾಗಿಯಾಗಿರುವ ಮಾಹಿತಿ ಇದೆ' ಎಂದೂ ತಿಳಿಸಿವೆ.

ಮಹಿಳೆ ಕೊಲೆ: ಮಗಳ ಸ್ನೇಹಿತ ಬಂಧನ

ಬೆಂಗಳೂರು: ಗೋವಿಂದರಾಜನಗರ ಠಾಣೆ ವ್ಯಾಪ್ತಿಯಲ್ಲಿ ನಂಜಮ್ಮ (50) ಅವರನ್ನು ಕೊಲೆ ಮಾಡಲಾಗಿದ್ದು, ಈ ಸಂಬಂಧ ಆರೋಪಿ ರಾಘವೇಂದ್ರ ಅಲಿಯಾಸ್ ಗೆಡ್ಡೆ (34) ಎಂಬಾತನನ್ನು ಪೊಲೀಸರು ಬಂಧಿಸಿದ್ದಾರೆ.

'ಮೂಡಲಪಾಳ್ಯ ಬಳಿಯ ಎಸ್‌ವಿಜಿ ನಗರದ ನಿವಾಸಿ ನಂಜಮ್ಮ, ಮನೆ ಕೆಲಸ ಮಾಡಿಕೊಂಡು ಜೀವನ ಸಾಗಿಸುತ್ತಿದ್ದರು. ಪತಿ ತೀರಿಕೊಂಡಿದ್ದರಿಂದ ಒಂಟಿಯಾಗಿ ವಾಸವಿದ್ದರು. ಮೃತಪಟ್ಟ ಸ್ಥಿತಿಯಲ್ಲಿ ನಂಜಮ್ಮ ಮೃತದೇಹ ಶುಕ್ರವಾರ ಬೆಳಿಗ್ಗೆ ಪತ್ತೆಯಾಗಿದೆ. ಮಗಳು ನೀಡಿದ್ದ ದೂರು ಆಧರಿಸಿ ಆರೋಪಿ ರಾಘವೇಂದ್ರನನ್ನು ಬಂಧಿಸಲಾಗಿದೆ' ಎಂದು ಪಶ್ಚಿಮ ವಿಭಾಗದ ಡಿಸಿಪಿ ಸಂಜೀವ್ ಪಾಟೀಲ ಹೇಳಿದರು.

ಮಗಳ ಜೊತೆ ವಾಸವಿದ್ದ ಆರೋಪಿ: 'ನಂಜಮ್ಮ ಅವರ 29 ವರ್ಷದ ಮಗಳು, ಪತಿಗೆ ವಿಚ್ಛೇದನ ನೀಡಿ ಇಬ್ಬರು ಮಕ್ಕಳ ಜೊತೆ ಪ್ರತ್ಯೇಕವಾಗಿ ವಾಸವಿದ್ದರು. ವಾಹನ ತೊಳೆಯುವ ಕೆಲಸ ಮಾಡುತ್ತಿದ್ದ ರಾಘವೇಂದ್ರ, ನಂಜಮ್ಮರ ಮಗಳೊಡನೆ ಸ್ನೇಹ ಬೆಳೆಸಿದ್ದ. ಸಲುಗೆ ಇಟ್ಟುಕೊಂಡು ಅವರ ಮನೆಯಲ್ಲೇ ನೆಲೆಸಿದ್ದ. ಮದ್ಯವ್ಯಸನಿ ಆಗಿದ್ದ ರಾಘವೇಂದ್ರ, ನಿತ್ಯವೂ ಕುಡಿದು ಬಂದ ಮನೆಯಲ್ಲಿ ಗಲಾಟೆ ಮಾಡುತ್ತಿದ್ದ. ಆದ್ದರಿಂದ ಆತನನ್ನು ಮನೆಯಿಂದ ಹೊರಗೆ ಹಾಕಿದ್ದರು' ಎಂದು ಪೊಲೀಸರು ಹೇಳಿದರು.

ಕೊಲೆ ಮಾಡಿ ಚಿನ್ನಾಭರಣ ಕದ್ದೊಯ್ದಿದ್ದ: 'ತನ್ನನ್ನು ಮನೆಯಿಂದ ಹೊರಹಾಕುವಂತೆ ನಂಜಮ್ಮ ಅವರೇ ಮಗಳಿಗೆ ಹೇಳಿದ್ದಾರೆಂದು ಆರೋಪಿ ಭಾವಿಸಿದ್ದ' ಎಂದು ಪೊಲೀಸರು ಹೇಳಿದರು.

'ನಂಜಮ್ಮ ಮನೆಗೆ ಗುರುವಾರ ರಾತ್ರಿ ಹೋಗಿದ್ದ ಆರೋಪಿ, ಜಗಳ ತೆಗೆದು ಹಲ್ಲೆ ಮಾಡಿದ್ದ. ಕುತ್ತಿಗೆಗೆ ಪ್ಲಾಸ್ಟಿಕ್ ವೈರ್ ಬಿಗಿದು ಕೊಲೆ ಮಾಡಿ, ನಂತರ, ನಂಜಮ್ಮ ಅವರ ಚಿನ್ನದ ಸರ ಹಾಗೂ ಕಿವಿಯೋಲೆ ಕದ್ದುಕೊಂಡು ಪರಾರಿಯಾಗಿದ್ದ.

ಶುಕ್ರವಾರ ಬೆಳಿಗ್ಗೆ ಮನೆ ಬಳಿ ಮೊಮ್ಮಗ ಹೋಗಿದ್ದ. ಅಡುಗೆ ಮನೆಯ ಕಿಟಕಿ ಮೂಲಕ ನೋಡಿದಾಗ, ಮೃತದೇಹ ಕಂಡಿತ್ತು. ಸ್ಥಳೀಯರು ಠಾಣೆಗೆ ಮಾಹಿತಿ ನೀಡಿದ್ದರು' ಎಂದೂ ತಿಳಿಸಿದರು.

ಪ್ರಜಾವಾಣಿ ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

JOB OPPORTUNITIES

Multiple Vacancy

OPPORTUNITY FOR Retired Officials, Bankers, NRI, Teachers, Professionals, Homemakers, CAs.Earn salary + Incentives. CALL: 8095301555

Teachers/ Professors

SURYODAYA LAW COLLEGE Thirupalya Electronicity Bangalore-99 wanted LECTURERS for 3 years LLB and 5 years B.com. LLB LLM qualified with Experience immediately Contact: 9632081875/ 7975796544/ 8296261228 EMAIL: suryodaya.edu.trust@gmail.com

THE BANGALORE PRESS
(No.88, Mysore Road, Chamarajpet, Bangalore-18)
has opening for the below roles;

ROLE	REQUIREMENT
Marketing Officers	Matriculates. 1+ years experience in the field sales of consumer goods. Fluency in Kannada and English
Marketing Manager	4+ years experience in handling marketing and sales teams, preferably in FMCG company. Fluency in Kannada and English
Production Supervisor	2+ years experience in production unit, preferably a paper / book industry
Office Staff	Computer knowledge, including Microsoft Word, Excel, Fluency in Kannada & English

Please email details (including resume with your work experience and expected salary) to bangalorepressjobs@gmail.com

General

MSF
WANTED SECURITY PERSON FOR BANGALORE AIRPORT
Security Supervisor Rs. 20000/-.
Security Guard / Lady Guard - Rs. 19000/-
Duty 8hrs 26 Days With Weekly Off. Qualification – 10 +2 Or Degree. Attractive Salary, PF, ESI, Accommodation, Bus Service, Intime Salary And Other Benefits.
Contact Office: Modern V R Security Force India Pvt Ltd. Mylanahalli (Near Banglore Airport). Mobile: 9113932721, 9066424868, 7760095242 9449119114, 8884542811,

AVK GROUP OF INSTITUTIONS #8/9 27th Cross opp. Monontype Banasankari 2nd Stage Bangalore-70. Tel: 91-80-26719531/ 26717520 E-mail :avk.nsvk@gmail.com Requires DIRECTOR for Management College, PRINCIPAL for Degree College, ACCOUNTANTS (with Experience in Educational Institutions), LECTURERS for Accountancy, Computer Science and Management, LIBRARIAN, OFFICE BOY (with knowledge of Computers) DRIVERS (Accommodation Provided). Eligibility- as per Bangalore University. Walk-in Interview on 07.05.2022 Saturday between 10.00 am to 2.00 pm; Chairman

JOB
To Place your Classified Ads Contact:
9886213331

Deccan International School
#11, 18th Main Rd, Brindavan Layout, Padmanabhanagar, Bengaluru, Karnataka 560061
JOB OPPORTUNITY Positions open
- **Commerce & Economics Teacher** (Senior & Senior Secondary School) Trained and having 3 to 5 yrs experience in Cambridge & ISC/ICSE Curriculum.
- **French Teacher** (Senior School) Trained and having 3 to 5 yrs experience in Cambridge & ICSE Curriculum.
- **English Teacher** (Primary & High School) Trained and having 3 to 5 yrs experience in Cambridge & ICSE Curriculum.
- **Physics Teacher** (Middle School) Trained and having 3 to 5 yrs experience in Cambridge & ICSE Curriculum.
- **Geography Teacher** (Senior School) Trained and having 3 to 5 yrs experience in Cambridge & ICSE Curriculum.
- **HOD Fine Arts** (Senior School) Post Graduate in arts & having 3 to 5 yrs experience in Cambridge & ICSE Curriculum.
- **Lab Assistant** (Physics Labratory) Trained and having 3 to 5 yrs experience with Graduation in Physics.

✓ Attractive compensation package commensurate with qualification & experience.
✓ We are equal opportunity employer.
Candidates are required to forward the CV with their photograph
work@deccan.edu.in

C.B.BHANDARI JAIN HIGH SCHOOL & P U College. No. 9 Kilari Road Bengaluru -560053, Tel no. 41323028/ 22287485. Email: cbbjhs@gmail.com Wanted a Hindi TEACHER B.A B.Ed in Hindi or Shikshak training to teach Primary School and a Clerk cum librarian. Walk-in interview on 11.05.2022. timings 10.30 am- 2.30 pm.

VIJAYA JYOTHI PUBLIC SCHOOL, BAGALURU YELAHANKA (T). Invites Applications from Science, Maths & Computer Teachers. hrmvs1992@gmail.com

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
GM-Advertisement

WEEKEND CORNER ಕ್ಲಾಸಿಫೈಡ್ಸ್

ಪಿಎಚ್‌ಡಿ ಪದವಿ ಪ್ರದಾನ

ಶ್ರೀಮತಿ. ಅನಲ ಅಶ್ವಿನ್
ಶ್ರೀಮತಿ. ಅನಲ ಅಶ್ವಿನ್ ರವರು ಡಾ.ಬಿ.ಪಿ ಹರೀಶ್, ಪ್ರಾಧ್ಯಾಪಕರು, ಎಲೆಕ್ಟ್ರಾನಿಕ್ಸ್ ಅಂಡ್ ಕಮ್ಯೂನಿಕೇಶನ್ ಇಂಜಿನಿಯರಿಂಗ್, ಯುವಿಸಿಇ, ಬೆಂಗಳೂರು ವಿಶ್ವವಿದ್ಯಾಲಯ; ಇವರ ಮಾರ್ಗದರ್ಶನದಲ್ಲಿ ಮಂಡಿಸಿದ 'ಮಾಡಲಿಂಗ್ ಪ್ರೊಸೆಸ್ ವೇರಿಯಬಿಲಿಟಿ ಫಾರ್ ರೋಬಸ್ಟ್ ಸಿಎಂಒಎಸ್ ಸರ್ಕ್ಯೂಟ್ ಡಿಸೈನ್ ಇನ್ ಸಬ್‌ತ್ರೆಶೋಲ್ಡ್ ರಿಜಿಮ್' ಸಂಶೋಧನ ಪ್ರಬಂಧಕ್ಕೆ, ಯುನಿವರ್ಸಿಟಿ ವಿಶ್ವೇಶ್ವರಯ್ಯ ಕಾಲೇಜ್ ಆಫ್ ಇಂಜಿನಿಯರಿಂಗ್, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು, ಇವರಿಂದ ಡಾಕ್ಟರ್ ಆಫ್ ಫಿಲಾಸಫಿ ಪದವಿ ಪ್ರದಾನ ಮಾಡಲಾಗಿದೆ.
ಕುಟುಂಬ ವರ್ಗದವರು ಹಾಗೂ ಸ್ನೇಹಿತರಿಂದ ಶುಭಾಶಯಗಳು

SSY 100% MEMORY SUMMER CAMP
ONE MONTH RESIDENTIAL CAMP - INCLUDES YOGA, DYANA & ADVENTURE
MAKE YOUR CHILD A GENIUS
Demonstrated To The Minister Of Education, Government Of Karnataka State
FOR 8th, 9th & 10th Std. STUDENTS WITH ABOVE 70% MARKS
ANY SYLLABUS & MEDIUM
IN CAMP, ABLE TO COMPLETE MOST OF YOUR NEXT YEAR SUBJECTS

LEARN TO REMEMBER SUBJECTS FOREVER
Poor student memorizes without understanding.
Good student understands & forget.
Genius understands & remembers forever.
May 14th to June 12th
9900023241/42/56
WE ARE TRAINING WORLD LEADERS
Rishi Gurukulam
THE WORLD'S FIRST 100% MEMORY SCHOOL
A RESIDENTIAL CBSE SCHOOL
Bangalore, Vizag, Pune
ADMISSIONS OPEN
From 4th to 8th Std, 100% Memory Training for 11th & 12th Std.
9449012425
Can Move from state syllabus easily

ಪಿಎಸ್‌ಐ ಅಕ್ರಮ ನೇಮಕಾತಿ ಹಗರಣ: ಒಎಂಆರ್ ಶೀಟ್ ತಿದ್ದಿಸಿದ ಬಗ್ಗೆ ಅಧಿಕಾರಿಗೆ ಮಾಹಿತಿ ನೀಡಿದ್ದ ರುದ್ರಗೌಡ

ಮೇಳಕುಂದಿ ಹಣಿಯಲು ದಾಳವಾದರೇ ಡಿವೈಎಸ್ಪಿ?

ಪ್ರಜಾವಾಣಿ ವಾರ್ತೆ

ಕಲಬುರಗಿ: ಪಿಎಸ್‌ಐ ಅಕ್ರಮ ನೇಮಕಾತಿ ಹಗರಣದಲ್ಲಿ ಬಂಧಿತನಾಗಿರುವ ರುದ್ರಗೌಡ ಪಾಟೀಲ, ಅಭ್ಯರ್ಥಿಗಳ ನೇಮಕಾತಿ ಮಾಡಿಸುತ್ತಿದ್ದ ಮಂಜುನಾಥ ಮೇಳಕುಂದಿಯನ್ನು ಹಣಿಯಲು ಡಿವೈಎಸ್ಪಿ ಮಲ್ಲಿಕಾರ್ಜುನ ಸಾಲಿ ಅವರನ್ನು ದಾಳವಾಗಿ ಬಳಸಿಕೊಂಡಿದ್ದರು ಎಂಬ ಸಂಗತಿ ಸಿಐಡಿ ವಿಚಾರಣೆ ವೇಳೆ ಹೊರಬಿದ್ದಿದೆ.

ಡಿವೈಎಸ್ಪಿ ಮಲ್ಲಿಕಾರ್ಜುನ ಸಾಲಿ ಅವರನ್ನು ಎಂಟು ದಿನಗಳವರೆಗೆ ತಮ್ಮ ವಶಕ್ಕೆ ಪಡೆದಿರುವ ಸಿಐಡಿ ಅಧಿಕಾರಿಗಳು, ಅವರಿಂದ ಮಾಹಿತಿ ಕಲೆ ಹಾಕುತ್ತಿದ್ದಾರೆ.

ಹಲವು ಸ್ಪರ್ಧಾತ್ಮಕ ಪರೀಕ್ಷೆಗಳಲ್ಲಿ ಪಾಸ್ ಮಾಡಿಸುವ ಕೆಲಸದಲ್ಲಿ ಪಳಗಿದ್ದ ರುದ್ರಗೌಡ ಅವರಿಗೆ ಮಂಜುನಾಥ ಮೇಳಕುಂದಿ ಸಹ 'ಇದೇ ಕೃತ್ಯದಲ್ಲಿ ತೊಡಗಿರುವುದು ನುಂಗಲಾರದ ತುತ್ತಾಗಿತ್ತು. ಹೇಗಾದರೂ ಮಾಡಿ ಹಣಿಯಬೇಕು ಎಂಬ ಉದ್ದೇಶದಿಂದ ತಮಗೆ ಪರಿಚಯವಿರುವ ಜೇವರ್ಗಿ ತಾಲ್ಲೂಕಿನವರಾದ ಮಲ್ಲಿಕಾರ್ಜುನ ಸಾಲಿ ಅವರಿಗೆ ಅಕ್ರಮ ನಡೆದಿರುವ ಬಗ್ಗೆ ಮಾಹಿತಿ ನೀಡಿದ್ದರು.

ಇದನ್ನು ಅನುಸರಿಸಿ ಮಂಜುನಾಥ ಹಾಗೂ ದಿವ್ಯಾ ಹಾಗರಗಿ ಅವರಿಗೆ ಕರೆ ಮಾಡಿದ್ದ ಸಾಲಿ, 'ಪರೀಕ್ಷಾ ಕೇಂದ್ರದಲ್ಲಿ ನೀವು ಅಕ್ರಮ ಎಸಗಿರುವ ಬಗ್ಗೆ ಮಾಹಿತಿ ಬಂದಿದೆ. ನಾನು ಪರೀಕ್ಷಾ ವಿಶೇಷ ಅಧಿಕಾರಿಯಾಗಿದ್ದೇನೆ' ಎಂದು ಬೆದರಿಸಿದ್ದರು. ಇದರಿಂದ ಗಾಬರಿಯಾದ ದಂದೆಕೋರರು, ₹ 10 ಲಕ್ಷ ನೀಡುವುದಾಗಿ ಹೇಳಿದ್ದರು ಎನ್ನಲಾಗಿದೆ.

ಪ್ರಶ್ನೆಪತ್ರಿಕೆ ಸೋರಿಕೆ ಮಾಡಿದ್ದ ಮೇತ್ರೆ: ಕಲಬುರಗಿಯ ಬೆರಳಚ್ಚು ವಿಭಾಗದ ಇನ್‌ಸ್ಪೆಕ್ಟರ್ ಆಗಿದ್ದ ಬಂಧಿತ ಆರೋಪಿ ಆನಂದ ಮೇತ್ರೆ, ಜ್ಞಾನಜ್ಯೋತಿ ಇಂಗ್ಲಿಷ್ ಮಾಧ್ಯಮ ಶಾಲೆಯಲ್ಲಿ ಪ್ರಶ್ನೆಪತ್ರಿಕೆಗಳನ್ನು ಬಹಿರಂಗ ಮಾಡಿ ಅದನ್ನು ದಂದೆಕೋರರಿಗೆ ತಲುಪಿಸಿದ ಆರೋಪ ಕೇಳಿ ಬಂದಿದೆ. ನುರಿತ ತಂಡದಿಂದ ಉತ್ತರಗಳನ್ನು ಸಿದ್ಧಪಡಿಸಿ ಬಳಿಕ ವಾಪಸ್ ಪರೀಕ್ಷಾ ಕೇಂದ್ರಕ್ಕೆ ತಂದು ತಮಗೆ ಬೇಕಾದವರಿಗೆ ಕೊಡುತ್ತಿದ್ದರು ಎಂದು ಗೊತ್ತಾಗಿದೆ.

ತಾವು ಪರೀಕ್ಷಾ ಕೇಂದ್ರಕ್ಕೆ ನಿಯೋಜನೆಗೊಂಡ ಅಧಿಕಾರಿ ಎಂದು ಹೇಳಿಕೊಂಡು ಕೇಂದ್ರದೊಳಗೆ ಬರುತ್ತಿದ್ದರು.

ಅವರು ತಲುಪಿಸಿದ ಉತ್ತರಗಳನ್ನು ಪರೀಕ್ಷೆ ಮುಗಿದ ನಂತರ ಕೊಠಡಿ ಮೇಲ್ವಿಚಾರಕರಿಂದ ಒಎಂಆರ್ ಶೀಟ್‌ನಲ್ಲಿ ತುಂಬಿಸಿದ್ದರು. ಮತ್ತೊಂದೆಡೆ ಬ್ಲೂಟೂತ್ ಮೂಲಕ ಉತ್ತರ ಹೇಳಲಾಗಿತ್ತು. ರುದ್ರಗೌಡ ಪಾಟೀಲ ಹೇಳಿದಂತೆ ನಡೆದುಕೊಂಡಿದ್ದರು ಎಂಬ ಆರೋಪ ಕೇಳಿ ಬಂದಿದೆ.

ಆನಂದ ಮೇತ್ರೆ ಅವರು ಕೆಲಸ ಮಾಡಿದ ಹಾಗೂ ಸಂಬಂಧಿಕರನ್ನು ಹೊಂದಿರುವ ವಿಜಯಪುರ ಜಿಲ್ಲೆಯ ವಿವಿಧ ಕಡೆ ಸಿಐಡಿ ತಂಡ ಶುಕ್ರವಾರ ತೆರಳಿ ಮಾಹಿತಿ ಸಂಗ್ರಹಿಸಿದೆ.

ಶಾಸಕ ಪ್ರಿಯಾಂಕ್ ಖರ್ಗೆ ಅವರಿಗೆ ಸಿಐಡಿ ನೋಟಿಸ್ ನೀಡಿ ಕಿರುಕುಳ ನೀಡುತ್ತಿದೆ ಎಂದು ಆರೋಪಿಸಿ ಕಲಬುರಗಿಯಲ್ಲಿ ಶುಕ್ರವಾರ ಯುವ ಕಾಂಗ್ರೆಸ್ ಕಾರ್ಯಕರ್ತರು ಗೃಹಸಚಿವರ ಮನೆಗೆ ಮುತ್ತಿಗೆ ಹಾಕಲು ಯತ್ನಿಸಿದಾಗ ಪೊಲೀಸರು ಅವರನ್ನು ವಶಕ್ಕೆ ಪಡೆದರು —ಪ್ರಜಾವಾಣಿ ಚಿತ್ರ

'ಜೈಲಿನಿಂದಲೇ ಅಪರಾಧ ಕೃತ್ಯ'

ಕಲಬುರಗಿ: 'ಅಪರಾಧ ಎಸಗಿದವರನ್ನು ಜೈಲಿಗೆ ಹಾಕಲಾಗುತ್ತದೆ. ಆದರೆ, ಕಾರಾಗೃಹದಲ್ಲಿ ಇದ್ದುಕೊಂಡೇ ಕೈದಿಗಳು ಅಪರಾಧ ಎಸಗುತ್ತಿದ್ದು, ಇಂತಹ ಕೃತ್ಯಗಳನ್ನು ತಡೆಯಲು ಕಠಿಣ ಕಾನೂನು ಜಾರಿಗೆ ತರಲಾಗುವುದು' ಎಂದು ಗೃಹ ಸಚಿವ ಆರಗ ಜ್ಞಾನೇಂದ್ರ ಹೇಳಿದರು.

ಶುಕ್ರವಾರ ಕಲಬುರಗಿಯ ಕೇಂದ್ರ ಕಾರಾಗೃಹದಲ್ಲಿ ಅಭಿವೃದ್ಧಿ ಕಾಮಗಾರಿಗಳಿಗೆ ಶಂಕುಸ್ಥಾಪನೆ ನೆರವೇರಿಸಿ ಅವರು ಮಾತನಾಡಿದರು.

'ಕೈದಿಗಳು ಮೊಬೈಲ್ ಫೋನ್ ಮೂಲಕ ಹಫ್ತಾ ವಸೂಲಿಯಂತಹ ದಂಧೆಗಳನ್ನು ಮಾಡುತ್ತಿದ್ದಾರೆ. ಮುಂದಿನ ದಿನಗಳಲ್ಲಿ ಇದಕ್ಕೆ ಕಡಿವಾಣ ಹಾಕಲಾಗುವುದು. ಅಲ್ಲದೆ, ಕೈದಿಗಳಿಗೆ ಮೊಬೈಲ್ ಪೂರೈಸುವ ಜೈಲು ಅಧಿಕಾರಿಗಳ ಮೇಲೆ ಪ್ರಕರಣ ದಾಖಲಿಸಿ ಜೈಲಿಗೆ ಕಳಿಸಲಾಗುವುದು' ಎಂದು ಎಚ್ಚರಿಕೆ ನೀಡಿದರು.

ರುದ್ರಗೌಡ ಬ್ಯಾಂಕ್ ಖಾತೆ ಅಮಾನತು

ಪ್ರಕರಣದ ಪ್ರಮುಖ ಕಿಂಗ್‌ಪಿನ್ ಎನ್ನಲಾದ ರುದ್ರಗೌಡ ಪಾಟೀಲ ಅವರ ಎರಡು ಖಾಸಗಿ ಬ್ಯಾಂಕ್‌ಗಳ ಖಾತೆಗಳನ್ನು ಅಮಾನತಿನಲ್ಲಿರಿಸಲಾಗಿದೆ. ಅವರ ಹೆಸರಿನಲ್ಲಿದ್ದ ಮ್ಯೂಚುವಲ್ ಫಂಡ್‌ಗಳನ್ನೂ ಜಪ್ತಿ ಮಾಡಲಾಗಿದೆ ಎಂದು ಸಿಐಡಿ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ರುದ್ರಗೌಡ ಅವರ ಸಿಐಡಿ ಕಸ್ಟಡಿಯನ್ನು ಮತ್ತೆ ಎರಡು ದಿನಗಳವರೆಗೆ ವಿಸ್ತರಿಸಿ ನ್ಯಾಯಾಲಯ ಆದೇಶಿಸಿದೆ.

ತ್ವರಿತಗತಿ ನ್ಯಾಯಾಲಯಕ್ಕೆ ಚಿಂತನೆ

ಕಲಬುರಗಿ: '545 ಪಿಎಸ್‌ಐ ನೇಮಕಾತಿ ಹಗರಣದ ತ್ವರಿತ ವಿಚಾರಣೆ ನಡೆಸಿ ಪ್ರಕರಣದಲ್ಲಿ ಭಾಗಿಯಾದ ಆರೋಪಿಗಳಿಗೆ ಕಠಿಣ ಶಿಕ್ಷೆ ವಿಧಿಸಲು ಅನುವಾಗುವಂತೆ ವಿಶೇಷ ಸರ್ಕಾರಿ ಅಭಿಯೋಜಕರನ್ನು ನೇಮಕ ಮಾಡಲಾಗುವುದು ಮತ್ತು ತ್ವರಿತಗತಿ ನ್ಯಾಯಾಲಯ ಆರಂಭಿಸುವ ಚಿಂತನೆಯೂ ಇದೆ' ಎಂದು ಗೃಹ ಸಚಿವ ಆರಗ ಜ್ಞಾನೇಂದ್ರ ಹೇಳಿದರು.

ಶುಕ್ರವಾರ ಮಾತನಾಡಿದ ಅವರು, 'ಅಕ್ರಮದಲ್ಲಿ ಸಿಲುಕಿಕೊಂಡವರಿಗೆ ಕಠಿಣ ಶಿಕ್ಷೆ ವಿಧಿಸಲು ನಮ್ಮ ಸರ್ಕಾರ ಬದ್ಧ. ಅದಕ್ಕಾಗಿಯೇ ಪ್ರಕರಣದ ಮಾಹಿತಿ ಬಂದ 2 ಗಂಟೆಗಳಲ್ಲಿಯೇ ಸಿಐಡಿ ತನಿಖೆಗೆ ಆದೇಶಿಸಿದೆವು. ಆದೇಶ ಹೊರಬಿದ್ದ ದಿನವೇ ತನಿಖಾಧಿಕಾರಿ ಹಾಗೂ ಅವರ ಸಿಬ್ಬಂದಿ ಕಲಬುರಗಿಗೆ ಬಂದರು' ಎಂದರು.

ಬಹು ಮಾಧ್ಯಮ ಪ್ರಜಾವಾಣಿ LIVE
www.prajavani.net
Prajavani.net | Prajavani | Prajavani
ಫೇಸ್‌ಬುಕ್, ಯೂಟ್ಯೂಬ್, ಟ್ವಿಟರ್‌ನಲ್ಲಿ ಏಕಕಾಲಕ್ಕೆ ನೇರಪ್ರಸಾರ
ಇಂದು
ಪಂಡಿತ ರಘುನಾಥ ನಾಕೋಡ
ಹಿರಿಯ ತಬಲಾ ವಾದಕ
ನಾದ ಮೋದ
ಸೆಲೆಬ್ರಿಟಿ LIVE
ಬೆಳಿಗ್ಗೆ 11 ರಿಂದ 12
ಪಾಡ್‌ಕಾಸ್ಟ್: ಪ್ರಚಲಿತ: ಬೆಳಿಗ್ಗೆ 9
ಸಂಪಾದಕೀಯ: ಬೆಳಿಗ್ಗೆ 9.30
ಪ್ರಜಾವಾಣಿ ವಾರ್ತೆ: ಬೆಳಿಗ್ಗೆ 8, ಮಧ್ಯಾಹ್ನ 2 ಮತ್ತು ರಾತ್ರಿ 8

ಮೇ 19 ರಂದು ಉಮರ್ ಖಾಲಿದ್ ಜಾಮೀನು ಅರ್ಜಿ ವಿಚಾರಣೆ

ನವದೆಹಲಿ (ಪಿಟಿಐ): ಫೆಬ್ರುವರಿ 2020ರಲ್ಲಿ ನಡೆದ ದೆಹಲಿ ಗಲಭೆ ಆರೋಪಕ್ಕೆ ಸಂಬಂಧಿಸಿದಂತೆ ಯುಎಪಿಎ ಪ್ರಕರಣದಲ್ಲಿ ಜಾಮೀನು ಕೋರಿ ಜೆಎನ್‌ಯು ಮಾಜಿ ವಿದ್ಯಾರ್ಥಿ ಉಮರ್ ಖಾಲಿದ್ ಸಲ್ಲಿಸಿದ ಮನವಿಯನ್ನು ದೆಹಲಿ ಹೈಕೋರ್ಟ್ ಶುಕ್ರವಾರ ಮೇ 19 ರಂದು ವಿಚಾರಣೆಗೆ ಪಟ್ಟಿ ಮಾಡಿದೆ.

ನ್ಯಾಯಮೂರ್ತಿಗಳಾದ ಸಿದ್ಧಾರ್ಥ್ ಮೃದುಲ್ ಮತ್ತು ರಜನೀಶ್ ಭಟ್ನಾಗರ್ ಅವರ ಪೀಠವು ಇದೇ ಪ್ರಕರಣಕ್ಕೆ ಸಂಬಂಧಿಸಿ ಶಾರ್ಜೀಲ್ ಇಮಾಮ್ ಅವರ ಜಾಮೀನು ಅರ್ಜಿಯ ವಿಚಾರಣೆಯನ್ನು ಮೇ 24 ಕ್ಕೆ ಮುಂದೂಡಿದೆ.

ಪೌರತ್ವ ತಿದ್ದುಪಡಿ ಕಾಯ್ದೆ ಮತ್ತು ರಾಷ್ಟ್ರೀಯ ಪೌರತ್ವ ನೋಂದಣಿ ವಿರುದ್ಧ ನಡೆದ ಪ್ರತಿಭಟನೆ ವೇಳೆ ಹಿಂಸಾಚಾರ ಭುಗಿಲೆದ್ದಿತ್ತು.

ದೆಹಲಿ ಗಲಭೆಯ ಸಂಚುಕೋರರೆಂದು ಯುಎಪಿಎ ಪ್ರಕರಣದಲ್ಲಿ ಉಮರ್ ಖಾಲಿದ್, ಶಾರ್ಜೀಲ್ ಇಮಾಮ್ ಮತ್ತು ಇತರರ ವಿರುದ್ಧ ಭಯೋತ್ಪಾದನಾ-ವಿರೋಧಿ ಕಾನೂನಿನಡಿಯಲ್ಲಿ ಪ್ರಕರಣ ದಾಖಲಿಸಲಾಗಿದೆ.

ತೋಟದ ಮನೆ ಕಡೆ ಸಿಐಡಿ ಕಣ್ಣು

ಒಂದನೇ ಪುಟದಿಂದ

'ಈ ಕುರಿತ ಪ್ರಶ್ನೆಗಳಿಗೆ ಅಭ್ಯರ್ಥಿಗಳು ನಿಖರ ಮಾಹಿತಿ ನೀಡುತ್ತಿಲ್ಲ. ವೈಯಕ್ತಿಕ ಕಾರಣಕ್ಕೆ ಸ್ವಿಚ್ಡ್ ಆಫ್ ಮಾಡಿದ್ದಾಗಿ ತಿಳಿಸುತ್ತಿದ್ದಾರೆ. ಆದರೆ, ಎಲ್ಲರೂ ಒಂದೆಡೆ ಸೇರಿ ಸಾಮೂಹಿಕವಾಗಿ ಒಎಂಆರ್ ತಿದ್ದಿರುವ ಸಂಶಯ ದಟ್ಟವಾಗಿದೆ' ಎಂದು ಮೂಲಗಳು ತಿಳಿಸಿವೆ.

ಪೊಲೀಸರ ಕಾವಲು: ಪಿಎಸ್‌ಐ ಹುದ್ದೆಗೆ ಅಕ್ರಮವಾಗಿ ಆಯ್ಕೆಯಾಗಲು ಕೆಲ ಅಭ್ಯರ್ಥಿಗಳು, ಏಜೆಂಟರಿಗೆ ಹಣ ನೀಡಿದ್ದರು. ಆ ಹಣದಲ್ಲಿ 'ಹಿರಿಯ ಸರ್'ಗೆ ಪಾಲು ಹೋಗಿತ್ತು ಎನ್ನಲಾಗಿದೆ. ಹಣ ಕೊಟ್ಟವರ ಆಯ್ಕೆಗೆ ವ್ಯವಸ್ಥಿತವಾಗಿ ಯೋಜನೆ ರೂಪಿಸಲಾಗಿತ್ತೆಂಬ ಮಾಹಿತಿಯೂ ಇದೆ.

'ಕೇಂದ್ರದಲ್ಲಿ ಪರೀಕ್ಷೆಗೆ ಹಾಜರಾಗಿದ್ದ ಅಭ್ಯರ್ಥಿಗಳು, 100 ಪ್ರಶ್ನೆಗಳ ಪೈಕಿ ಮೂರ್ನಾಲ್ಕು ಪ್ರಶ್ನೆಗಳಿಗೆ ಮಾತ್ರ ಉತ್ತರಿಸಿದ್ದರು. ಉಳಿದಂತೆ ಖಾಲಿ ಒಎಂಆರ್ ಪ್ರತಿಯನ್ನು ಮೇಲ್ವಿಚಾರಕರಿಗೆ ನೀಡಿದ್ದರು. ಅದೇ ಪ್ರತಿ, ಪೊಲೀಸ್ ನೇಮಕಾತಿ ವಿಭಾಗಕ್ಕೆ ಬಂದಿತ್ತು. ಏಜೆಂಟರ ಸೂಚನೆಯಂತೆ ಕೆಲದಿನ ಬಿಟ್ಟು ಅಭ್ಯರ್ಥಿಗಳು ಫಾರ್ಮ್‌ಹೌಸ್‌ವೊಂದರಲ್ಲಿ ಸೇರಿದ್ದರು. ಆ ಸಂದರ್ಭದಲ್ಲೇ ಮೊಬೈಲ್ ಸ್ವಿಚ್ಡ್ ಆಫ್ ಮಾಡಿದ್ದರು. ಅದೇ ಸ್ಥಳಕ್ಕೆ ಒಎಂಆರ್ ಪ್ರತಿ ತರಿಸಿಕೊಟ್ಟು, ಉಳಿದ ಉತ್ತರಗಳನ್ನು ಅಭ್ಯರ್ಥಿಗಳಿಂದ ಭರ್ತಿ ಮಾಡಿಸಿದ್ದಾರೆ. ಇದಕ್ಕೆ ಕೆಲ ಪೊಲೀಸರು ಕಾವಲಾಗಿದ್ದ ಸಂಶಯವಿದೆ. ಈ ಮಾಹಿತಿಗೆ ಪೂರಕವಾಗಿ ಪುರಾವೆಗಳು ಸಿಗಬೇಕಿದೆ' ಎಂದು ಮೂಲಗಳು ಮಾಹಿತಿ ನೀಡಿವೆ.

46 ಅಭ್ಯರ್ಥಿಗಳಿಗೆ ನೋಟಿಸ್

ಅಕ್ರಮದಲ್ಲಿ ಭಾಗಿಯಾಗಿರುವ ಆರೋಪವುಳ್ಳ ಹಲವು ಅಭ್ಯರ್ಥಿಗಳು ತಲೆಮರೆಸಿಕೊಂಡಿದ್ದು, ಅವರ ಪತ್ತೆಗೆ ತನಿಖೆ ನಡೆದಿದೆ.

'545 ಅಭ್ಯರ್ಥಿಗಳಲ್ಲಿ ಕೆಲವರನ್ನು ಬಂಧಿಸಲಾಗಿದೆ. ಒಎಂಆರ್ ಪ್ರತಿಯಲ್ಲಿ ವ್ಯತ್ಯಾಸವಿರುವ ಹಾಗೂ ವಿಚಾರಣೆ ವೇಳೆ ಸೂಕ್ತ ದಾಖಲೆ ಹಾಜರುಪಡಿಸದ 46 ಅಭ್ಯರ್ಥಿಗಳಿಗೆ ನೋಟಿಸ್ ನೀಡಲಾಗಿದೆ' ಎಂದು ಸಿಐಡಿ ಮೂಲಗಳು ಹೇಳಿವೆ.

ಭವಿಷ್ಯದ ನಾಯಕರೊಬ್ಬರ ಕೈವಾಡ: ಎಚ್‌ಡಿಕೆ

ಚನ್ನರಾಯಪಟ್ಟಣ: 'ಪಿಎಸ್‌ಐ ನೇಮಕಾತಿ ಅಕ್ರಮದ ಮೂಲ ಹುಡುಕಿಕೊಂಡು ಹೋದರೆ ಸರ್ಕಾರವೇ ಉಳಿಯುವುದಿಲ್ಲ. ಏಕೆಂದರೆ ಅದರ ಹಿಂದೆ ರಾಜ್ಯದ ಭವಿಷ್ಯದ ನಾಯಕರಾಗುವ ವ್ಯಕ್ತಿಯೊಬ್ಬರಿದ್ದಾರೆ' ಎಂದು ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್‌.ಡಿ. ಕುಮಾರಸ್ವಾಮಿ ಆರೋಪಿಸಿದರು.

ಶುಕ್ರವಾರ ಮಾತನಾಡಿದ ಅವರು, 'ಸಹಾಯಕ ಪ್ರಾಧ್ಯಾಪಕರ ಹುದ್ದೆಯ ಪ್ರಶ್ನೆ ಪತ್ರಿಕೆ ಸೋರಿಕೆಗೆ ಸಂಬಂಧಿಸಿದಂತೆ ಈವರೆಗೆ ಇಬ್ಬರನ್ನು ಬಂಧಿಸಲಾಗಿದೆ. ಇದು ಪಿಎಸ್‌ಐ ಹಗರಣಕ್ಕಿಂತ ದೊಡ್ಡದು' ಎಂದರು.'ರಾಜ್ಯದ ಹಲವು ವಿ.ವಿಗಳಲ್ಲಿ ಸಿಬ್ಬಂದಿಯ ಪಿಂಚಣಿಗೆ ಮೀಸಲಿಟ್ಟಿದ್ದ ₹1,350 ಕೋಟಿಯನ್ನು ಕಟ್ಟಡ ನಿರ್ಮಾಣಕ್ಕೆ ಬಳಸಲಾಗುತ್ತಿದೆ. ಬೆಂಗಳೂರಿನ ಎರಡು ವಿ.ವಿ, ತುಮಕೂರು, ಮಂಡ್ಯ, ಕರ್ನಾಟಕ ರಾಜ್ಯ ಮುಕ್ತ ವಿ.ವಿ, ವಿಟಿಯುದಲ್ಲಿ ಕಟ್ಟಡಗಳನ್ನು ನಿರ್ಮಿಸಲಾಗುತ್ತಿದೆ. ಅದರಲ್ಲಿಯೂ ಶೇ 40ಕ್ಕಿಂತ ಹೆಚ್ಚು ಕಮಿಷನ್ ದಂಧೆ ನಡೆಯುತ್ತಿದೆ. ಶಿಕ್ಷಣ ಇಲಾಖೆಯ ಕಮಿಷನರ್ ಆಗಿರುವ ಮಹಾರಾಷ್ಟ್ರ ಮೂಲದ ಐಎಎಸ್ ಅಧಿಕಾರಿಯೊಬ್ಬರು ಬೆಂಗಳೂರಿನ ಅತಿಥಿ ಗೃಹದಲ್ಲಿ ಕುಳಿತು ಅವ್ಯವಹಾರ ನಡೆಸಿದ್ದಾರೆ' ಎಂದರು.

ಸಚಿವರಿಗೂ ನೋಟಿಸ್ ನೀಡಿದ್ದೀರಾ: ಪ್ರಿಯಾಂಕ್ ಪ್ರಶ್ನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಪಿಎಸ್‌ಐ ಅಕ್ರಮದ ವಿಚಾರದಲ್ಲಿ ಸಚಿವರು, ಬಿಜೆಪಿ ಶಾಸಕರಿಗೂ ಸಿಐಡಿ ಪೊಲೀಸರು ನೋಟಿಸ್ ನೀಡಿ ವಿಚಾರಣೆಗೆ ಕರೆದಿದ್ದಾರೆಯೇ' ಎಂದು ಕಾಂಗ್ರೆಸ್ ಶಾಸಕ ಪ್ರಿಯಾಂಕ್ ಖರ್ಗೆ ಅವರು ಗೃಹ ಸಚಿವ ಆರಗ ಜ್ಞಾನೇಂದ್ರ ಅವರನ್ನು ಪ್ರಶ್ನಿಸಿದ್ದಾರೆ.

ಈ ಸಂಬಂಧ ಸಿಐಡಿ ಪೊಲೀಸರ ಮೂರನೇ ನೋಟಿಸ್‌ಗೆ ಗುರುವಾರ ಲಿಖಿತ ಉತ್ತರ ನೀಡಿರುವ ಅವರು, ಗೃಹ ಸಚಿವರಿಗೆ ಪ್ರತ್ಯೇಕ ಪತ್ರವನ್ನೂ ಬರೆದಿದ್ದಾರೆ. ಶುಕ್ರವಾರ ಪತ್ರಿಕಾಗೋಷ್ಠಿಯಲ್ಲಿ ಈ ಎರಡೂ ಪತ್ರಗಳನ್ನು ಬಿಡುಗಡೆ ಮಾಡಿದರು.

'ನೋಟಿಸ್‌ಗೆ ವಕೀಲರ ಮೂಲಕ ಉತ್ತರ ಕಳುಹಿಸಿದ್ದೇನೆ. ತನಿಖಾಧಿಕಾರಿ ಎದುರು ಹಾಜರಾಗುವ ಪ್ರಶ್ನೆಯೇ ಇಲ್ಲ' ಎಂದರು.

'ಅಕ್ರಮ ನಡೆದಿದೆ ಎಂದು ಆರೋಪಿಸಿ ಪಶುಸಂಗೋಪನಾ ಸಚಿವ ಪ್ರಭು ಚವ್ಹಾಣ್ ಫೆ.2ರಂದು ಪತ್ರ ಬರೆದಿದ್ದರು. ಬಿಜೆಪಿ ಸದಸ್ಯ ಎಸ್‌.ವಿ. ಸಂಕನೂರ ಮಾರ್ಚ್ 3ರಂದು ವಿಧಾನ ಪರಿಷತ್‌ನಲ್ಲಿ ಪ್ರಶ್ನೆ ಕೇಳಿದ್ದರು. ಪರಿಷತ್‌ನ ಬಿಜೆಪಿ ಸದಸ್ಯ ಶಶೀಲ್ ಜಿ.ನಮೋಶಿ ಇದೇ ವಿಚಾರದಲ್ಲಿ ಸಾರಿಗೆ ಸಚಿವ ಬಿ.ಶ್ರೀರಾಮುಲು ಜತೆ ಚರ್ಚಿಸಿರುವುದಾಗಿ ಟ್ವೀಟ್ ಮಾಡಿದ್ದರು.ಈ ಎಲ್ಲರಿಗೂ ನೋಟಿಸ್ ನೀಡಲಾಗಿದೆಯೆ' ಎಂದು ಕೇಳಿದ್ದಾರೆ.

ಸಿಐಡಿ ಡಿಜಿಪಿಗೆ ಏಳು ಪುಟಗಳ ಪತ್ರ ಬರೆದಿರುವ ಪ್ರಿಯಾಂಕ್, 'ತನಿಖಾಧಿಕಾರಿಗಳು ರಾಜಕೀಯ 'ಬಾಸ್'ಗಳ ಪ್ರಭಾವಕ್ಕೊಳಗಾಗಿ ನೋಟಿಸ್ ನೀಡಿದ್ದಾರೆ. ಸರ್ಕಾರದ ವಿರುದ್ಧ ಪತ್ರಿಕಾಗೋಷ್ಠಿ ನಡೆಸದಂತೆ ತಡೆಯಲು ಹೀಗೆ ಮಾಡಿದ್ದಾರೆ' ಎಂದು ದೂರಿದ್ದಾರೆ. 'ಆಡಿಯೊ ತುಣುಕಿನ ಸತ್ಯಾಸತ್ಯತೆ ಬಗ್ಗೆ ನೋಟಿಸ್‌ನಲ್ಲಿ ಸಿಐಡಿ ಅಧಿಕಾರಿಗಳು ಪ್ರಶ್ನಿಸಿದ್ದಾರೆ. ನಾನು ಹೇಳಿದ್ದನ್ನು ನಂಬುವುದಾದರೆ ಪ್ರಕರಣದಲ್ಲಿ ಮುಖ್ಯಮಂತ್ರಿ ಮತ್ತು ಗೃಹ ಸಚಿವರನ್ನೂ ಬಂಧಿಸಬೇಕಲ್ಲವೆ' ಎಂದರು.

ಭ್ರಷ್ಟಾಚಾರ ವಿಚಾರದಲ್ಲಿ ಶೂನ್ಯ ಸಹಿಷ್ಣುತೆ: ಕಾರಜೋಳ

ಲೋಕಾಯುಕ್ತ ಬಲಪಡಿಸಲು ಚಿಂತನೆ

ಪ್ರಜಾವಾಣಿ ವಾರ್ತೆ

ಬಾಗಲಕೋಟೆ: 'ರಾಜ್ಯದಲ್ಲಿ ಲೋಕಾಯುಕ್ತ ಸಂಸ್ಥೆಗೆ ಜೀವ ನೀಡಿ ಮತ್ತೆ ಬಲ ತುಂಬಲು ಚಿಂತನೆ ನಡೆಸಿದ್ದೇವೆ. ಸರ್ಕಾರದ ಈ ಅವಧಿಯಲ್ಲಿಯೇ ಅದು ಕಾರ್ಯರೂಪಕ್ಕೆ ಬರಲಿದೆ' ಎಂದು ಜಲಸಂಪನ್ಮೂಲ ಸಚಿವ ಗೋವಿಂದ ಕಾರಜೋಳ ಹೇಳಿದರು.

ನಗರದಲ್ಲಿ ಶುಕ್ರವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಪ್ರಶ್ನೆಯೊಂದಕ್ಕೆ ಪ್ರತಿಕ್ರಿಯಿಸಿದರು.

ಜೈಲಿಗೆ ಹೋಗಿ ಬೇಲ್ ಪಡೆದು ಹೊರಗಿರುವವರು, ರಾಜಕೀಯ ಹಗರಣಗಳ ಮುಚ್ಚಿಹಾಕಲು ಲೋಕಾಯುಕ್ತವನ್ನು ನಾಶ ಮಾಡಿದವರು ಈಗ ಭ್ರಷ್ಟಾಚಾರದ ವಿಚಾರದಲ್ಲಿ ಬಿಜೆಪಿಗೆ ನೀತಿ ಪಾಠ ಹೇಳುತ್ತಿದ್ದಾರೆ ಎಂದು ಕಾಂಗ್ರೆಸ್ ನಾಯಕರ ವಿರುದ್ಧ ಕಾರಜೋಳ ಹರಿಹಾಯ್ದರು.

ಪಿಎಸ್‌ಐ ನೇಮಕಾತಿ ಪರೀಕ್ಷೆ ಅಕ್ರಮದಲ್ಲಿ ಭಾಗಿಯಾದ ಯಾರನ್ನೂ ರಕ್ಷಿಸುವ ಪ್ರಶ್ನೆಯೇ ಇಲ್ಲ. ಕಾನ್‌ಸ್ಟೆಬಲ್‌ಗಳಿಂದ ಮೊದಲುಗೊಂಡು ಡಿವೈಎಸ್ಪಿ ಮಟ್ಟದ ಅಧಿಕಾರಿಗಳನ್ನು ಸಿಐಡಿ ಬಂಧಿಸಿರುವುದೇ ಇದಕ್ಕೆ ಸಾಕ್ಷಿ.

ರಾಜ್ಯದಲ್ಲಿ ಈ ಹಿಂದೆ ಬೇರೆ ಬೇರೆ ಅಕ್ರಮಗಳು ನಡೆದಾಗ ಯಾವುದೇ ಸರ್ಕಾರಗಳು ಕೈಗೊಳ್ಳದ ಕ್ರಮವನ್ನು ಈ ವಿಚಾರದಲ್ಲಿ ನಾವು ಕೈಗೊಂಡಿದ್ದೇವೆ. ಭ್ರಷ್ಟಾಚಾರದ ವಿರುದ್ಧದ ಹೋರಾಟದಲ್ಲಿ ಇದು ಬಿಜೆಪಿಯ ಬದ್ಧತೆ ಎಂದರು.

ಅಧಿಕಾರದಲ್ಲಿದ್ದಾಗ ಮೈಸೂರು ಭಾಗದಲ್ಲಿ ಪುತ್ರನ ಮೂಲಕ ಅಕ್ರಮವಾಗಿ ಮರಳುಗಾರಿಕೆ ನಡೆಸಿ ವಿದೇಶಕ್ಕೆ ಕಳುಹಿಸಿಕೊಟ್ಟು ತಿಜೋರಿ ತುಂಬಿಸಿಕೊಂಡವರು ಈಗ ಬಿಜೆಪಿಗೆ ಬುದ್ಧಿ ಹೇಳುತ್ತಿದ್ದಾರೆ ಎಂದು ಕಾಂಗ್ರೆಸ್ ನಾಯಕರಿಗೆ ಕಾರಜೋಳ ಕುಟುಕಿದರು.

'ಮೀಸಲಾತಿಗಾಗಿ ಸಿ.ಎಂ ಮನೆ ಎದುರು ಧರಣಿ'

ವಿಜಯಪುರ: 'ಪಂಚಮಸಾಲಿಗೆ 2ಎ ಮೀಸಲಾತಿ ಕಲ್ಪಿಸಲು ನೀಡಿರುವ ಮೂರು ಗಡುವುಗಳು ಮುಗಿದಿದ್ದು, ಮುಂದಿನ ದಿನಗಳಲ್ಲಿ ರಾಜ್ಯದ ಎಲ್ಲ ಜಿಲ್ಲಾಧಿಕಾರಿ ಕಚೇರಿಗಳ ಎದುರು ಉಪವಾಸ ಸತ್ಯಾಗ್ರಹ ಹಮ್ಮಿಕೊಳ್ಳಲಾಗುವುದು' ಎಂದು ಕೂಡಲಸಂಗಮ ಪಂಚಮಸಾಲಿ ಪೀಠದ ಪ್ರಥಮ ಜಗದ್ಗುರು ಬಸವ ಜಯಮೃತ್ಯುಂಜಯ ಸ್ವಾಮೀಜಿ ಹೇಳಿದರು.

'ಸದ್ಯ ಸಚಿವ ಸಂಪುಟ ವಿಸ್ತರಣೆ ಕುರಿತಂತೆ ಚರ್ಚೆಗಳು ನಡೆದಿದ್ದು, ಅದೆಲ್ಲ ಮುಗಿದ ಮೇಲೆ ಸತ್ಯಾಗ್ರಹದ ದಿನಾಂಕ ಘೋಷಿಸಲಾಗುವುದು. ಹಾವೇರಿ ಜಿಲ್ಲೆಯಿಂದ ಹೋರಾಟ ಆರಂಭಿಸಿದರೆ, ಮುಖ್ಯಮಂತ್ರಿಗಳ ಶಿಗ್ಗಾವಿ ನಿವಾಸದ ಎದುರು ಧರಣಿ ನಡೆಸುವ ಯೋಚನೆಯಿದೆ' ಎಂದು ನಗರದಲ್ಲಿ ಶುಕ್ರವಾರ ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದರು.

'ಇದಕ್ಕೂ ಸ್ಪಂದಿಸದಿದ್ದರೆ, ಮತ್ತೆ ಬೆಂಗಳೂರಿನಲ್ಲಿ 25 ಲಕ್ಷ ಜನರನ್ನು ಸೇರಿಸಿ ಬೃಹತ್ ಹೋರಾಟ ನಡೆಸಲಾಗುವುದು ಎಂದು ಈಗಾಗಲೇ ಬಸನಗೌಡ ಪಾಟೀಲ ಯತ್ನಾಳ ಅವರು ರಾಮದುರ್ಗದಲ್ಲಿ ನಡೆದ ಪ್ರತಿಭಟನೆಯಲ್ಲಿ ಎಚ್ಚರಿಕೆ ನೀಡಿದ್ದಾರೆ. ಯಾವುದಕ್ಕೂ ಸರ್ಕಾರ ಸ್ಪಂದಿಸದಿದ್ದರೆ ವಿಧಾನಸೌಧಕ್ಕೆ ಮುತ್ತಿಗೆ ಹಾಕಲಾಗುವುದು' ಎಂದು ಎಚ್ಚರಿಸಿದರು.

ಪಶ್ಚಿಮ ಬಂಗಾಳದಲ್ಲಿ ಟಿಎಂಸಿಯಿಂದ ರಾಜಕೀಯ ಹತ್ಯೆ: ಶಾ ಆರೋಪ

ಸಾವು: ಬಿಜೆಪಿ–ಟಿಎಂಸಿ ಜಟಾಪಟಿ

ಕೋಲ್ಕತ್ತ (ಪಿಟಿಐ): ಇಲ್ಲಿನ ಕಾಶಿಪುರ ಎಂಬಲ್ಲಿಯ ಅರ್ಜುನ್ ಚೌರಾಸಿಯಾ ಎಂಬವರ ದೇಹವು ಅವರ ಮನೆಯ ಬಳಿ ಇದ್ದ ಪಾಳುಬಿದ್ದ ಕಟ್ಟಡದಲ್ಲಿ ನೇಣುಹಾಕಿದ ಸ್ಥಿತಿಯಲ್ಲಿ ಶುಕ್ರವಾರ ಪತ್ತೆಯಾಗಿದೆ. ಸ್ಥಳೀಯ ಪೊಲೀಸರು ಅಸಹಜ ಸಾವಿನ ಪ್ರಕರಣ ದಾಖಲಿಸಿ ತನಿಖೆ ಆರಂಭಿಸಿದ್ದಾರೆ. ಆದರೆ, ಇದು ತೃಣಮೂಲ ಕಾಂಗ್ರೆಸ್ (ಟಿಎಂಸಿ) ಮತ್ತು ಬಿಜೆಪಿ ನಡುವೆ ಜಟಾಪಟಿಗೆ ಕಾರಣವಾಗಿದೆ.

ಬಿಜೆಪಿ ನಾಯಕರು ಮಾಧ್ಯಮ ಗೋಷ್ಠಿ ನಡೆಸಿ, ತಮ್ಮ ಪಕ್ಷದ ಕಾರ್ಯಕರ್ತನ ಹತ್ಯೆ ನಡೆದಿದೆ ಎಂದು ಆರೋಪಿಸಿದ್ದಾರೆ. ಆದರೆ 'ಅರ್ಜುನ್ ನಮ್ಮ ಪಕ್ಷದ ಕಾರ್ಯಕರ್ತ' ಎಂದು ಟಿಎಂಸಿ ಪ್ರತಿಪಾದಿಸಿದೆ.

'ಬಿಜೆಪಿ ಯುವ ಮೋರ್ಚಾ ಕಾರ್ಯಕರ್ತ ಅರ್ಜುನ್ ಚೌರಾಸಿಯಾ ಅವರ ಹತ್ಯೆ ಆಗಿದೆ. ಟಿಎಂಸಿ ಕಾರ್ಯಕರ್ತರೇ ಈ ಹತ್ಯೆ ನಡೆಸಿದ್ದಾರೆ' ಎಂದು ಬಿಜೆಪಿ ಆರೋಪಿಸಿದೆ. ಪ್ರಕರಣದ ತನಿಖೆಯನ್ನು ಸಿಬಿಐಗೆ ಹಸ್ತಾಂತರಿಸಬೇಕು ಎಂದು ಕಲ್ಕತ್ತ ಹೈಕೋರ್ಟ್‌ಗೆ ಬಿಜೆಪಿ ಅರ್ಜಿ ಸಲ್ಲಿಸಿದೆ. 'ಸೇನಾ ಕಮಾಂಡ್ ಆಸ್ಪತ್ರೆಯಲ್ಲಿ ಶವಪರೀಕ್ಷೆ ನಡೆಯಬೇಕು' ಎಂದು ಹೈಕೋರ್ಟ್ ಆದೇಶಿಸಿದೆ.

ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರು ಪಶ್ಚಿಮ ಬಂಗಾಳದಲ್ಲಿ ಇದ್ದರು. ಅವರು ಕೋಲ್ಕತ್ತಕ್ಕೆ ಶುಕ್ರವಾರ ಭೇಟಿ ನೀಡಬೇಕಿತ್ತು. ನಂತರ ರ‍್ಯಾಲಿ ಮತ್ತು ಸಭೆಗಳನ್ನು ನಡೆಸಬೇಕಿತ್ತು. ಆದರೆ ಅವರು ಎಲ್ಲಾ ಕಾರ್ಯಕ್ರಮಗಳನ್ನು ರದ್ದುಪಡಿಸಿದ್ದಾರೆ. ಅರ್ಜುನ್ ಅವರ ಮನೆಗೆ ಭೇಟಿ ನೀಡಿ ಸಾಂತ್ವನ ಹೇಳಿದ್ದಾರೆ. ಅದಕ್ಕೂ ಮುನ್ನವೇ, ಟಿಎಂಸಿ ಶಾಸಕ ಅತಿನ್ ಘೋಷ್ ಅವರು ಅರ್ಜುನ್ ಅವರ ಮನೆಗೆ ಭೇಟಿ ನೀಡಿ, ಸಾಂತ್ವನ ಹೇಳಿದ್ದಾರೆ.

'ಕೇಂದ್ರ ಗೃಹ ಸಚಿವರನ್ನು ವಿಮಾನ ನಿಲ್ದಾಣದಲ್ಲಿ ಬರಮಾಡಿಕೊಳ್ಳಲು ಬೈಕ್ ರ‍್ಯಾಲಿ ಹಮ್ಮಿಕೊಂಡಿದ್ದೆವು. ಆ ರ‍್ಯಾಲಿಯನ್ನು ಅರ್ಜುನ್ ಚೌರಾಸಿಯಾ ಮುನ್ನಡೆಸಬೇಕಿತ್ತು. ನಮ್ಮ ಕಾರ್ಯಕರ್ತನ ಹತ್ಯೆ ನಡೆದಿರುವ ಕಾರಣ, ಎಲ್ಲಾ ಸ್ವಾಗತ ಕಾರ್ಯಕ್ರಮಗಳನ್ನು ರದ್ದುಮಾಡುವಂತೆ ಸಚಿವರು ಸೂಚಿಸಿದ್ದಾರೆ' ಎಂದು ಪಶ್ಚಿಮ ಬಂಗಾಳ ಬಿಜೆಪಿ ಹೇಳಿದೆ.

'ಸತ್ತವ ನಮ್ಮ ಪಕ್ಷದವ'– ಟಿಎಂಸಿ: ಅಸಹಜವಾಗಿ ಮೃತಪಟ್ಟಿರುವ ಅರ್ಜುನ್ ಚೌರಾಸಿಯಾ ಅವರು ನಮ್ಮ ಪಕ್ಷದ ಕಾರ್ಯಕರ್ತ. ಆದರೆ ಅವರು ತಮ್ಮ ಪಕ್ಷದವರು ಎಂದು ಬಿಜೆಪಿ ಸುಳ್ಳು ಹೇಳುತ್ತಿದೆ ಎಂದು ಟಿಎಂಸಿ ಶಾಸಕ ಅತಿನ್ ಘೋಷ್ ಹೇಳಿದ್ದಾರೆ.

'ಈಚೆಗೆ ನಡೆದಿದ್ದ ಕೋಲ್ಕತ್ತ ನಗರಸಭೆ ಚುನಾವಣೆಯಲ್ಲಿ ಚೌರಾಸಿಯ ನಮ್ಮ ಪಕ್ಷದ ಪರವಾಗಿ ಪ್ರಚಾರ ನಡೆಸಿದ್ದರು. ಇದರಿಂದ ಅವರು ಬಿಜೆಪಿ ಕಾರ್ಯಕರ್ತರ ದ್ವೇಷ ಕಟ್ಟುಕೊಂಡಿದ್ದರು' ಎಂದು ಅತಿನ್ ಹೇಳಿದ್ದಾರೆ.

ಮುಖ್ಯಾಂಶಗಳು

- ಸೇನಾ ಕಮಾಂಡ್ ಆಸ್ಪತ್ರೆಯಲ್ಲಿ ಶವಪರೀಕ್ಷೆ ನಡೆಸಲು ಹೈಕೋರ್ಟ್ ಆದೇಶ
- ಶವಪರೀಕ್ಷೆ ವೇಳೆ ಜಿಲ್ಲಾ ಮ್ಯಾಜಿಸ್ಟ್ರೇಟ್ ಇರಲು ಸೂಚನೆ
- ಏಮ್ಸ್ ವೈದ್ಯರು, ಜಿಲ್ಲಾ ಆಸ್ಪತ್ರೆ ವೈದರ ಹಾಜರಿ, ಚಿತ್ರೀಕರಣಕ್ಕೆ ಸೂಚನೆ

ಅರ್ಜುನ್ ಚೌರಾಸಿಯಾ ಅವರ ಕುಟುಂಬದವರನ್ನು ಅಮಿತ್ ಶಾ ಸಂತೈಸಿದರು —ಪಿಟಿಐ ಚಿತ್ರ

> ಇದು ರಾಜಕೀಯ ಕೊಲೆ. ಇದನ್ನು ಸಿಬಿಐ ತನಿಖೆಗೆ ಒಪ್ಪಿಸಬೇಕು. ಒಂದೇ ರಾಜ್ಯದಿಂದ ಸಿಬಿಐ ತನಿಖೆಗೆ ಇಷ್ಟೊಂದು ಪ್ರಕರಣಗಳು ಬೇರೆಲ್ಲೂ ಬಂದಿದ್ದಿಲ್ಲ
> **ಅಮಿತ್ ಶಾ,** ಕೇಂದ್ರ ಗೃಹ ಸಚಿವ

> ಪ್ರಕರಣದ ತನಿಖೆ ನಡೆದಿಲ್ಲ, ಶವಪರೀಕ್ಷೆ ನಡೆದಿಲ್ಲ. ಅದಕ್ಕೂ ಮುನ್ನವೇ ಇದು ಕೊಲೆ ಎಂದು ಕೇಂದ್ರ ಗೃಹಸಚಿವರಿಗೆ ಗೊತ್ತಾಗಿದ್ದು ಹೇಗೆ?
> **ಚಂದ್ರಮಾ ಭಟ್ಟಾಚಾರ್ಯ**
> ಪಶ್ಚಿಮ ಬಂಗಾಳ ಸಚಿವೆ

ಕನಿಷ್ಠ ವಯಸ್ಸಿಗೆ ಮೊದಲೇ ವಿವಾಹ: ಸಮೀಕ್ಷಾ ವರದಿ

ನವದೆಹಲಿ (ಪಿಟಿಐ): ಕಾನೂನಿನ ಪ್ರಕಾರ ಕನಿಷ್ಠ ವಯಸ್ಸು ತಲುಪುವ ಮೊದಲೇ ವಿವಾಹವಾಗುವ ಮಹಿಳೆಯರ ಪ್ರಮಾಣ ಶೇ 25ರಷ್ಟಿದ್ದರೆ, ಪುರುಷರ ಪ್ರಮಾಣ ಶೇ 15ರಷ್ಟಿದೆ ಎಂದು ರಾಷ್ಟ್ರೀಯ ಕುಟುಂಬ ಆರೋಗ್ಯ ಸಮೀಕ್ಷೆಯ (ಎನ್‌ಎಫ್‌ಎಚ್‌ಎಸ್) ವರದಿ ತಿಳಿಸಿದೆ.

2019–21ರ ಅವಧಿಯಲ್ಲಿ ನಡೆಸಿದ ಸಮೀಕ್ಷೆಯ ಅಂಕಿ ಅಂಶಗಳನ್ನು ಒಳಗೊಂಡ ವರದಿಯನ್ನು ಶುಕ್ರವಾರ ಬಿಡುಗಡೆ ಮಾಡಲಾಗಿದೆ.

ಆದರೆ, ಚಿಕ್ಕ ವಯಸ್ಸಿನಲ್ಲೇ ಮದುವೆ ಮಾಡುವ ಪ್ರಕರಣಗಳು ಗಣನೀಯವಾಗಿ ಇಳಿಯುತ್ತಿವೆ. ಎಂದೂ ವರದಿ ತಿಳಿಸಿದೆ. ಕಾನೂನಿನ ಪ್ರಕಾರ, ವಿವಾಹದ ಕನಿಷ್ಠ ವಯಸ್ಸು ತಲುಪುವ ಮೊದಲೇ ಮಹಿಳೆಯರು ವಿವಾಹವಾಗುವ ಪ್ರಮಾಣವು ಪಶ್ಚಿಮ ಬಂಗಾಳದಲ್ಲಿ (ಶೇ 42) ಗರಿಷ್ಠವಾಗಿದೆ. ಉಳಿದಂತೆ ಬಿಹಾರ – ಶೇ 40, ತ್ರಿಪುರಾ ಶೇ 39, ಜಾರ್ಖಂಡ್ ಶೇ 35, ಆಂಧ್ರಪ್ರದೇಶ– ಶೇ 33ರಷ್ಟಿದೆ.

ದೇಶದಲ್ಲಿ ಪ್ರಸ್ತುತ ವಿವಾಹವಾಗಲು ಮಹಿಳೆಗೆ ಕನಿಷ್ಠ 18, ಪುರುಷರಿಗೆ ಕನಿಷ್ಠ 21 ವರ್ಷವಾಗಿರಬೇಕು. ಇಬ್ಬರಿಗೂ ಏಕರೂಪವಾಗಿ 21 ವರ್ಷವನ್ನು ಕನಿಷ್ಠ ವಯೋಮಿತಿಯಾಗಿ ನಿಗದಿಪಡಿಸಲು ಕೇಂದ್ರ ಸರ್ಕಾರ ಚಿಂತನೆ ನಡೆಸಿದೆ.

'ಆಜಂ ಖಾನ್‌ಗೆ ಜಾಮೀನು ನಕಾರ: ನ್ಯಾಯದ ಅಪಹಾಸ್ಯ'

ನವದೆಹಲಿ: ಜಮೀನು ಒತ್ತುವರಿ ಪ್ರಕರಣಕ್ಕೆ ಸಂಬಂಧಿಸಿ ಉತ್ತರ ಪ್ರದೇಶದ ಮಾಜಿ ಸಚಿವ ಹಾಗೂ ಸಮಾಜವಾದಿ ಪಕ್ಷದ ನಾಯಕ ಆಜಂಖಾನ್ ಅವರ ಜಾಮೀನು ಅರ್ಜಿ ವಿಚಾರಣೆಗೆ ವಿಳಂಬ ಮಾಡುತ್ತಿರುವ ಅಲಹಾಬಾದ್ ಹೈಕೋರ್ಟ್ ಧೋರಣೆ ಬಗ್ಗೆ ಸುಪ್ರೀಂ ಕೋರ್ಟ್ ಪರೋಕ್ಷ ಅಸಮಾಧಾನ ವ್ಯಕ್ತಪಡಿಸಿದೆ.

ಈ ಸಂಬಂಧ ಶುಕ್ರವಾರ ವಿಚಾರಣೆ ನಡೆಸಿದ ಸುಪ್ರೀಂ ಕೋರ್ಟ್ ನ್ಯಾಯಮೂರ್ತಿಗಳಾದ ಎಲ್. ನಾಗೇಶ್ವರ ರಾವ್ ಹಾಗೂ ಬಿ.ಆರ್. ಗವಾಯಿ ಅವರಿದ್ದ ಪೀಠವು, 87 ಪ್ರಕರಣಗಳ ಪೈಕಿ 86 ಪ್ರಕರಣಗಳಲ್ಲಿ ಆಜಂ ಖಾನ್ ಅವರಿಗೆ ಜಾಮೀನು ಸಿಕ್ಕಿದೆ. ಜಮೀನು ಒತ್ತುವರಿ ಪ್ರಕರಣ ಹೊರತುಪಡಿಸಿ ಉಳಿದೆಲ್ಲಾ ಪ್ರಕರಣಗಳಲ್ಲಿ ಅವರು ಬಿಡುಗಡೆಯಾಗಿದ್ದಾರೆ. ಈ ಬಗ್ಗೆ ಕಳೆದ 137 ದಿನಗಳಿಂದ ಯಾವುದೇ ಆದೇಶ ಹೊರಡಿಸಲಾಗಿಲ್ಲ. ಇದು ನ್ಯಾಯದ ಅಪಹಾಸ್ಯವಾಗಿದೆ. ಇದಕ್ಕಿಂತ ಹೆಚ್ಚು ನಾವೇನೂ ಹೇಳುವುದಿಲ್ಲ ಎಂದು ಬೇಸರ ವ್ಯಕ್ತಪಡಿಸಿದೆ. ಅವರಿಗೆ(ಅಲಹಾಬಾದ್ ಹೈಕೋರ್ಟ್‌ಗೆ) ಇನ್ನೆರಡು ದಿನ ಕಾಲಾವಕಾಶ ನೀಡಲಾಗುವುದು. ಬುಧವಾರ ಮತ್ತೆ ವಿಚಾರಣೆ ನಡೆಸಲಾಗುವುದು ಎಂದು ಹೇಳಿದೆ.

ಫೆಬ್ರುವರಿ ತಿಂಗಳಲ್ಲಿ ಉತ್ತರ ಪ್ರದೇಶ ವಿಧಾನಸಭೆ ಚುನಾವಣೆ ಪ್ರಚಾರದಲ್ಲಿ ಪಾಲ್ಗೊಳ್ಳಲು ಮಧ್ಯಂತರ ಜಾಮೀನು ಕೋರಿ ಆಜಂ ಖಾನ್ ಅವರು ಸುಪ್ರೀಂ ಮೆಟ್ಟಿಲೇರಿದ್ದರು. ಆದರೆ, ಜಾಮೀನು ಅರ್ಜಿ ಇತ್ಯರ್ಥವಾಗಬೇಕಿರುವ ಅಲಹಾಬಾದ್ ಹೈಕೋರ್ಟ್‌ನಲ್ಲೇ ಅರ್ಜಿ ಸಲ್ಲಿಸುವಂತೆ ಸುಪ್ರೀಂ ಕೋರ್ಟ್ ಹೇಳಿತ್ತು. ಖಾನ್ ಅವರು ಈಗ ಸೀತಾಪುರ ಜೈಲಿನಲ್ಲಿದ್ದಾರೆ.

'ಪೂರ್ವ ಲಡಾಖ್ ಗಡಿಯಲ್ಲಿ ಪರಿಸ್ಥಿತಿ ಸಹಜ'

ನವದೆಹಲಿ: ಪೂರ್ವ ಲಡಾಖ್‌ನ ವಾಸ್ತವ ನಿಯಂತ್ರಣ ರೇಖೆಯಾದ್ಯಂತ (ಎಲ್‌ಎಸಿ) ಪರಿಸ್ಥಿತಿ ಸಹಜವಾಗಿದೆ ಎಂದು ಸೇನೆಯ ಉತ್ತರ ಕಮಾಂಡ್‌ನ ಲೆಫ್ಟಿನೆಂಟ್ ಜನರಲ್ ಉಪೇಂದ್ರ ದ್ವಿವೇದಿ ತಿಳಿಸಿದ್ದಾರೆ.

ಭಾರತ–ಚೀನಾ ಗಡಿಯುದ್ದಕ್ಕೂ ಕಟ್ಟೆಚ್ಚರ ವಹಿಸಲಾಗಿದೆ. ಕಾರ್ಯಾಚರಣೆ ಸನ್ನದ್ಧತೆ ಮತ್ತು ಸಿದ್ಧತೆಯಲ್ಲಿ ಯಾವುದೇ ರೀತಿಯ ಭದ್ರತಾ ಲೋಪವಾಗಿಲ್ಲ ಎಂದಿದ್ದಾರೆ. ಸೇನೆ ಆಯೋಜಿಸಿರುವ 'ನಾರ್ತ್ ಟೆಕ್ ಸಿಂಪೋಸಿಯಂ 2022' ಸಂದರ್ಭದಲ್ಲಿ ಅವರು ವರದಿಗಾರರ ಜೊತೆ ಮಾತನಾಡಿದರು.

ಬಾರಾಮುಲ್ಲಾ: ಇಬ್ಬರು ಎಲ್‌ಇಟಿ ಉಗ್ರರ ಸೆರೆ

ಶ್ರೀನಗರ: ಉತ್ತರ ಕಾಶ್ಮೀರದ ಬಾರಾಮುಲ್ಲಾ ಜಿಲ್ಲೆಯಲ್ಲಿ ಶುಕ್ರವಾರ ಲಷ್ಕರ್–ಎ–ತಯಬಾ (ಎಲ್‌ಇಟಿ) ಸಂಘಟನೆಯ ಹೈಬ್ರಿಡ್ ಉಗ್ರ ಹಾಗೂ ಆತನ ಸಹಚರನನ್ನು ಪೊಲೀಸರು ಬಂಧಿಸಿದ್ದು, ಬಂಧಿತರಿಂದ ಶಸ್ತ್ರಾಸ್ತ್ರ ಹಾಗೂ ಮದ್ದುಗುಂಡುಗಳನ್ನು ವಶಪಡಿಸಿಕೊಂಡಿದ್ದಾರೆ.

ಬಾರಾಮುಲ್ಲಾದ ಹೈದರ್ ಮೊಹಲ್ಲಾದ ಆಶಿಕ್ ಹೊಸೈನ್ ಲೋನ್, ಬಾರಾಮುಲ್ಲಾ ಕಾಂತ್‌ಬಾಗ್‌ನ ನಿವಾಸಿ ಉಜೈರ್ ಅಮಿನ್ ಗನ್ನೆ ಬಂಧಿತರು. 'ಉಗ್ರರ ಚಲನವಲನದ ಖಚಿತ ಮಾಹಿತಿ ಮೇರೆಗೆ ಬಾರಾಮುಲ್ಲದ ಚೆರದಾರಿ ಎಂಬ ಚೆಕ್‌ಪೋಸ್ಟ್ ಬಳಿ ತಪಾಸಣೆ ನಡೆಸಿದಾಗ ಇಬ್ಬರು ಉಗ್ರರು ಭದ್ರತಾ ಪಡೆಗಳಿಗೆ ಸಿಕ್ಕಿಬಿದ್ದಿದ್ದು, ಪರಾರಿಯಾಗಲು ಯತ್ನಿಸಿದ ಅವರನ್ನು ಭದ್ರತಾಪಡೆಗಳು ಬಂಧಿಸಿವೆ. ಬಂಧಿತರಿಂದ ಒಂದು ಪಿಸ್ತೂಲ್, ಮ್ಯಾಗಜೀನ್, ಎಂಟು ಜೀವಂತ ಗುಂಡುಗಳು, ಎರಡು ಹ್ಯಾಂಡ್ ಗ್ರೆನೇಡ್, ಎರಡು ಯುಬಿಜಿಎಲ್ ಗ್ರೆನೇಡ್ ವಶಪಡಿಸಿಕೊಳ್ಳಲಾಗಿದೆ' ಎಂದು ಪೊಲೀಸ್ ವಕ್ತಾರರು ತಿಳಿಸಿದರು. 'ಬಂಧಿತರು ಬಾರಾಮುಲ್ಲಾ ಹಾಗೂ ಅದರ ಸುತ್ತಮುತ್ತಲಿನ ಪ್ರದೇಶಗಳಲ್ಲಿ ಭಯೋತ್ಪಾದಕ ಚಟುವಟಿಕೆ ನಡೆಸುವ ಉದ್ದೇಶ ಹೊಂದಿದ್ದರು ಎಂದು ಪ್ರಾಥಮಿಕ ತನಿಖೆಯಿಂದ ತಿಳಿದು ಬಂದಿದೆ' ಎಂದು ಹೇಳಿದರು.

ಸಂಕ್ಷಿಪ್ತ ಸುದ್ದಿ

'ಕಸ್ಟಡಿ ಸಾವು: ಪೊಲೀಸರ ವಿರುದ್ಧ ಪ್ರಕರಣ ದಾಖಲು'

ಚೆನ್ನೈ: ಪೊಲೀಸ್ ವಶದಲ್ಲಿದ್ದ-ವ್ಯಕ್ತಿ ಈಚೆಗೆ ಮೃತಪಟ್ಟ ಘಟನೆಗೆ ಸಂಬಂಧಿಸಿದಂತೆ ಮೂವರು ಪೊಲೀಸರ ವಿರುದ್ಧ ಕೊಲೆ ಪ್ರಕರಣ ದಾಖಲಿಸಿಕೊಳ್ಳಲಾಗಿದೆ ಎಂದು ತಮಿಳುನಾಡು ಮುಖ್ಯಮಂತ್ರಿ ಎಂ.ಕೆ. ಸ್ಟಾಲಿನ್ ಶುಕ್ರವಾರ ವಿಧಾನಸಭೆಯಲ್ಲಿ ತಿಳಿಸಿದ್ದಾರೆ.

ವಿರೋಧ ಪಕ್ಷ ಎಐಎಡಿಎಂಕೆ ಮಂಡಿಸಿದ್ದ ಪ್ರಸ್ತಾವನೆಗೆ ಉತ್ತರಿಸಿದ ಅವರು, ಶವಪರೀಕ್ಷೆಯ ವೇಳೆ ವ್ಯಕ್ತಿಯ ದೇಹದಲ್ಲಿ 13 ಗಾಯಗಳು ಪತ್ತೆಯಾಗಿದ್ದವು. ಈ ಕಾರಣಕ್ಕೆ ಅನುಮಾನಾಸ್ಪದ ಸಾವಿನ ಪ್ರಕರಣವನ್ನು ಕೊಲೆ ಪ್ರಕರಣವಾಗಿ ಬದಲಾಯಿಸಲಾಗಿದೆ ಮತ್ತು ಕ್ರೈಂ ಬ್ರಾಂಚ್– ಸಿಐಡಿ ತನಿಖೆ ಮುಂದುವರಿಸಲಿದೆ ಎಂದಿದ್ದಾರೆ.

ಏಪ್ರಿಲ್ 18ರಂದು ವಿಘ್ನೇಶ್ ಮತ್ತು ಸುರೇಶ್ ಎಂಬ ಇಬ್ಬರು ಯುವಕರನ್ನು ಅವರು ಸಂಚರಿಸಿದ್ದ ಆಟೊದಲ್ಲಿ ಗಾಂಜಾ ಮತ್ತು ಮದ್ಯದ ಬಾಟಲಿಗಳು ಪತ್ತೆಯಾದ ಕಾರಣ ಪೊಲೀಸರು ಬಂಧಿಸಿದ್ದರು. ಅವರನ್ನು ಸೆಕ್ರೆಟರಿಯೇಟ್ ಕಾಲೊನಿ ಪೊಲೀಸ್ ಠಾಣೆಗೆ ಕರೆದೊಯ್ಯಲಾಗಿತ್ತು. 19 ರಂದು ವಿಘ್ನೇಶ್ ಅಲ್ಲಿ ಮೃತಪಟ್ಟಿದ್ದರು.

ಈ ಪ್ರಕರಣಕ್ಕೆ ಸಂಬಂಧಿಸಿ ಪೊಲೀಸ್ ಸಬ್ ಇನ್‌ಸ್ಪೆಕ್ಟರ್, ಕಾನ್‌ಸ್ಟೆಬಲ್ ಮತ್ತು ಗೃಹರಕ್ಷಕ ದಳದ ಸಿಬ್ಬಂದಿಯನ್ನು ಅಮಾನತುಗೊಳಿಸಲಾಗಿತ್ತು.

ಭೂಮಿಗೆ ಮರಳಿದ ಗಗನಯಾನಿ ರಾಜಾಚಾರಿ

ಕೇಪ್ ಕೆನವೆರಾಲ್, ಅಮೆರಿಕ (ಎಪಿ): ಭಾರತ ಮೂಲದ ಅಮೆರಿಕ ಗಗನಯಾತ್ರಿ ರಾಜಾಚಾರಿ ಸೇರಿ ನಾಲ್ವರು ಗಗನಯಾತ್ರಿಗಳು ಅಂತರರಾಷ್ಟ್ರೀಯ ಬಾಹ್ಯಾಕಾಶ ನಿಲ್ದಾಣದಲ್ಲಿ ಆರು ತಿಂಗಳು ಕಾರ್ಯನಿರ್ವಹಿಸಿ, ಎಲಾನ್ ಮಸ್ಕ್ ಅವರ ಸ್ಪೇಸ್ ಎಕ್ಸ್ ರಾಕೆಟ್ ಮೂಲಕ ಶುಕ್ರವಾರ ಸುರಕ್ಷಿತವಾಗಿ ಭೂಮಿಗೆ ಬಂದಿಳಿದಿದ್ದಾರೆ.

ರಾಜಾಚಾರಿ ಸೇರಿ ಮೂವರು ಅಮೆರಿಕದ ಗಗನಯಾತ್ರಿಗಳು ಮತ್ತು ಒಬ್ಬ ಜರ್ಮನಿಯ ಗಗನಯಾನಿ ಹೊತ್ತ ಕ್ಯಾಪ್ಸುಲ್ ಬಾಹ್ಯಾಕಾಶ ನಿಲ್ದಾಣ ತೊರೆದ 24 ತಾಸುಗಳ ನಂತರ ಫ್ಲಾರಿಡಾ ಕರಾವಳಿ ಟ್ಯಾಂಪಾ ಬಳಿ ಇಳಿದಿದೆ. ಗಗನಯಾತ್ರಿಗಳು ವೈದ್ಯಕೀಯ ಪರೀಕ್ಷೆಯ ನಂತರ ಹ್ಯೂಸ್ಟನ್‌ಗೆ ವಾಪಸಾಗುವ ನಿರೀಕ್ಷೆಯಲ್ಲಿ ನಾಸಾ ಇದೆ.

ಕ್ಷೇತ್ರ ಪುನರ್ ವಿಂಗಡಣೆ ವರದಿ: ಪಾಕ್ ಆಕ್ಷೇಪ

ಇಸ್ಲಾಮಾಬಾದ್(ಪಿಟಿಐ): ಕೇಂದ್ರಾಡಳಿತ ಪ್ರದೇಶವಾದ ಜಮ್ಮು-ಕಾಶ್ಮೀರ ವಿಧಾನಸಭೆ ಕ್ಷೇತ್ರಗಳ ಪುನರ್ ವಿಂಗಡಣೆಗೆ ಸಂಬಂಧಿಸಿದ ಆಯೋಗದ ವರದಿಯನ್ನು ಪಾಕಿಸ್ತಾನ ತಿರಸ್ಕರಿಸಿದೆ.

ಆದರೆ ಗುರುವಾರ ಭಾರತದ ರಾಯಭಾರಿ ಅಧಿಕಾರಿಯನ್ನು ಕರೆಸಿಕೊಂಡ ಪಾಕಿಸ್ತಾನದ ವಿದೇಶಾಂಗ ಕಾರ್ಯಾಲಯ, 'ಕ್ಷೇತ್ರ ಪುನರ್ ವಿಂಗಡಣೆ ಆಯೋಗವು, ಜಮ್ಮು-ಕಾಶ್ಮೀರದಲ್ಲಿನ ಮುಸ್ಲಿಂ ಸಮುದಾಯದ ಹಕ್ಕು ನಿರಾಕರಣೆ ಮತ್ತು ಬಲಹೀನಗೊಳಿಸುವ ಗುರಿಯನ್ನು ಹೊಂದಿದೆ' ಎಂದು ಆರೋಪಿಸಿದೆ.

'ಸಂಪೂರ್ಣ ಸಾಮರ್ಥ್ಯದಲ್ಲಿ ವಿದ್ಯುತ್ ಉತ್ಪಾದಿಸಿ'

ನವದೆಹಲಿ: ಆಮದು ಮಾಡಿಕೊಂಡಿರುವ ಕಲ್ಲಿದ್ದಲು ಬಳಸುವ ವಿದ್ಯುತ್ ಸ್ಥಾವರಗಳಿಗೆ ಸಂಪೂರ್ಣ ಸಾಮರ್ಥ್ಯದಲ್ಲಿ ವಿದ್ಯುತ್ ಉತ್ಪಾದಿಸಲು ಕೇಂದ್ರ ಸರ್ಕಾರವು ಹೇಳಿದೆ. ಹೆಚ್ಚುತ್ತಿರುವ ವಿದ್ಯುತ್ ಬೇಡಿಕೆ ಪೂರೈಸುವ ಸಲುವಾಗಿ ಕೇಂದ್ರ ಸರ್ಕಾರ ಈ ಕ್ರಮ ಕೈಗೊಂಡಿದೆ.

ಜೊತೆಗೆ, ಅಗತ್ಯದ ಕಲ್ಲಿದ್ದಲಿನ ಪ್ರಮಾಣದಲ್ಲಿ ಕನಿಷ್ಠ ಶೇ 10ರಷ್ಟು ಕಲ್ಲಿದ್ದಲನ್ನು ಮಿಶ್ರಣಕ್ಕಾಗಿ ಆಮದು ಮಾಡಿಕೊಳ್ಳಲು ಎಲ್ಲಾ ರಾಜ್ಯಗಳು ಮತ್ತು ಸ್ಥಳೀಯವಾಗಿ ದೊರೆಯುವ ಕಲ್ಲಿದ್ದಲು ಬಳಸುವ ವಿದ್ಯುತ್ ಸ್ಥಾವರಗಳಿಗೆ ವಿದ್ಯುತ್ ಸಚಿವಾಲಯ ಹೇಳಿದೆ. 'ವಿದ್ಯುತ್ ಬೇಡಿಕೆ ಸುಮಾರು 20ರಷ್ಟು ಹೆಚ್ಚಾಗಿದೆ. ಸ್ಥಳೀಯವಾಗಿ ದೊರೆಯುವ ಕಲ್ಲಿದ್ದಲಿನ ಪೂರೈಕೆ ಪ್ರಮಾಣ ಕೂಡ ಹೆಚ್ಚಾಗಿದೆ. ಆದರೆ ಹೆಚ್ಚಾಗಿರುವ ವಿದ್ಯುತ್ ಬೇಡಿಕೆಯನ್ನು ಸ್ಥಳೀಯ ಕಲ್ಲಿದ್ದಲು ಪೂರೈಕೆಯಿಂದ ಸರಿದೂಗಿಸಲು ಸಾಧ್ಯವಾಗುತ್ತಿಲ್ಲ. ಎಂದು ವಿದ್ಯುತ್ ಸಚಿವಾಲಯದ ಆದೇಶದಲ್ಲಿ ಹೇಳಲಾಗಿದೆ.

13 ವರ್ಷ ಕಂಬಿ ಹಿಂದೆ ಕಳೆದ ಮೇಲೆ ಸಿಕ್ಕಿತು ನ್ಯಾಯ

ಕೊಲೆ: ಎಂಬಿಬಿಎಸ್ ವಿದ್ಯಾರ್ಥಿ ದೋಷಮುಕ್ತ

ಜಬಲ್‌ಪುರ, ಮಧ್ಯಪ್ರದೇಶ (ಪಿಟಿಐ): ಸ್ನೇಹಿತೆಯ ಕೊಲೆ ಆಪಾದನೆಯ ಪ್ರಕರಣದಲ್ಲಿ 13 ವರ್ಷಗಳ ಜೈಲು ಶಿಕ್ಷೆ ಅನುಭವಿಸಿದ ಬುಡಕಟ್ಟು ಸಮುದಾಯಕ್ಕೆ ಸೇರಿದ ಎಂಬಿಬಿಎಸ್ ವಿದ್ಯಾರ್ಥಿಯನ್ನು ದೋಷಮುಕ್ತಗೊಳಿಸಿ ಮಧ್ಯಪ್ರದೇಶ ಹೈಕೋರ್ಟ್ ತೀರ್ಪು ನೀಡಿದೆ.

ನ್ಯಾಯಮೂರ್ತಿ ಅತುಲ್ ಶ್ರೀಧರನ್ ಮತ್ತು ಸುನೀತಾ ಯಾದವ್ ಅವರಿದ್ದ ವಿಭಾಗೀಯ ಪೀಠವು, 13 ವರ್ಷ ನ್ಯಾಯಕ್ಕಾಗಿ ಕಾದು ಕಂಬಿಗಳ ಹಿಂದೆ ದಿನ ಕಳೆದ ನತದೃಷ್ಟ ವಿದ್ಯಾರ್ಥಿಗೆ ಮೂರು ತಿಂಗಳೊಳಗೆ ₹42 ಲಕ್ಷ ಪರಿಹಾರ ನೀಡುವಂತೆಯೂ ಸರ್ಕಾರಕ್ಕೆ ಆದೇಶ ನೀಡಿದೆ.

ಭೋಪಾಲ್‌ನ ಗಾಂಧಿ ವೈದ್ಯಕೀಯ ಸರ್ಕಾರಿ ಕಾಲೇಜಿನಲ್ಲಿ ಎಂಬಿಬಿಎಸ್ ಅಂತಿಮ ವರ್ಷದ ವಿದ್ಯಾರ್ಥಿಯಾಗಿದ್ದ, ಗೊಂಡ ಬುಡಕಟ್ಟು ಸಮುದಾಯದ ಚಂದ್ರೇಶ್ ಮಾರ್ಸ್ಕೋಲೆ (ಈಗ ಅವರಿಗೆ 34 ವರ್ಷ) 2008ರಲ್ಲಿ ತನ್ನ ಸ್ನೇಹಿತೆಯನ್ನು ಕೊಲೆ ಮಾಡಿ, ಪಚ್ಮರ್ಹಿಯಲ್ಲಿ ಶವ ಸುಟ್ಟುಹಾಕಿದ ಆರೋಪದಲ್ಲಿ ಬಂಧಿಸಲ್ಪಟ್ಟಿದ್ದರು. 2009ರ ಜುಲೈ 31ರಂದು ವಿಚಾರಣಾ ನ್ಯಾಯಾಲಯ ಚಂದ್ರೇಶ್‌ಗೆ ಜೀವಾವಧಿ ಶಿಕ್ಷೆ ವಿಧಿಸಿತ್ತು.

ವಿಚಾರಣಾ ನ್ಯಾಯಾಲಯದ ತೀರ್ಪಿನ ವಿರುದ್ಧ ಚಂದ್ರೇಶ್ ಸಲ್ಲಿಸಿದ್ದ ಮೇಲ್ಮನವಿಯನ್ನು ಮಂಗಳವಾರ ವಿಲೇವಾರಿ ಮಾಡಿದ ಪೀಠವು, ಪ್ರಕರಣವು ಸಂಪೂರ್ಣ ಸಾಂದರ್ಭಿಕ ಸಾಕ್ಷ್ಯದ ಮೇಲೆ ಕೇಂದ್ರೀತವಾಗಿದೆ. ಮಹಿಳೆಯ ಹತ್ಯೆಗೆ ಸಾಕ್ಷಿಯಾಗಿ ಪ್ರತ್ಯಕ್ಷದರ್ಶಿಗಳಿಲ್ಲ. ಚಂದ್ರೇಶ್‌ನನ್ನು ತಕ್ಷಣವೇ ಜೈಲಿನಿಂದ ಬಿಡುಗಡೆ ಮಾಡುವಂತೆ ಆದೇಶಿಸಿದೆ.

ಪೊಲೀಸರಿಗೆ ಛೀಮಾರಿ: 'ಈ ಪ್ರಕರಣವು ದುರುದ್ದೇಶಪೂರಿತ ಕಾನೂನು ಕ್ರಮ, ಪೊಲೀಸರ ಚಾಣಾಕ್ಷತನದ ಮತ್ತು ಪೂರ್ವಗ್ರಹಪೀಡಿತ ತನಿಖೆಯ ಕ್ರೌರ್ಯವನ್ನು ಅನಾವರಣಗೊಳಿಸಿದೆ. ವಿದ್ಯಾರ್ಥಿಯ ಇಡೀ ಜೀವನವನ್ನು ಅಸ್ತವ್ಯಸ್ತಗೊಳಿಸಿದೆ' ಎಂದು ಅಭಿಪ್ರಾಯಪಟ್ಟಿರುವ ಪೀಠವು ಪೊಲೀಸರಿಗೆ ಛೀಮಾರಿ ಹಾಕಿದೆ.

'ಪ್ರಾಯಶಃ ಪ್ರಾಸಿಕ್ಯೂಷನ್ ಸಾಕ್ಷಿ (ಡಾ.ಹೇಮಂತ್ ವರ್ಮಾ) ಯನ್ನು ರಕ್ಷಿಸುವ ಮತ್ತು ಚಂದ್ರೇಶ್‌ನನ್ನು ಅಪರಾಧಿ ಮಾಡುವ ನಿಟ್ಟಿನಲ್ಲಿ ಪೊಲೀಸ್ ತನಿಖೆ ನಡೆದಿದೆ. ಇದರಲ್ಲಿ ನಿಜವಾದ ಅಪರಾಧಿಗಳು ಪ್ರಾಸಿಕ್ಯೂಷನ್ ಸಾಕ್ಷಿ ಮತ್ತು ಪೊಲೀಸರು' ಎಂದು ಪೀಠ ತೀರ್ಪಿನಲ್ಲಿ ಹೇಳಿದೆ.

'ಮೇಲ್ಮನವಿ ಅರ್ಜಿದಾರರು ಸರ್ಕಾರಿ ಉದ್ಯೋಗ ಅಥವಾ ಖಾಸಗಿ ವೃತ್ತಿಯಲ್ಲಿದ್ದರೂ ವರ್ಷಕ್ಕೆ ಕನಿಷ್ಠ ₹3 ಲಕ್ಷ ಗಳಿಸುತ್ತಿದ್ದರು. ಚಂದ್ರೇಶ್‌ಗೆ ಪರಿಹಾರ ಪಾವತಿಸುವ ದಿನಾಂಕದವರೆಗೆ ಪರಿಹಾರ ಮೊತ್ತಕ್ಕೆ ವಾರ್ಷಿಕ ಶೇ 9 ಬಡ್ಡಿ ನೀಡಬೇಕು' ಎಂದು ಪೀಠ ಹೇಳಿದೆ.

ರಹಸ್ಯ ಮಾಹಿತಿ ಸೋರಿಕೆ ಸುಳ್ಳು ಆರೋಪದಲ್ಲಿ ಇಸ್ರೊ ವಿಜ್ಞಾನಿ ನಂಬಿನಾರಾಯಣನ್ ಸಿಬಿಐ ತನಿಖೆಗೆ ಒಳಗಾಗಿ 50 ದಿನ ವಿಚಾರಣಾಧೀನ ಕೈದಿಯಾಗಿದ್ದರು. ಅವರಿಗೆ ₹50 ಲಕ್ಷ ಪರಿಹಾರ ನೀಡುವಂತೆ ಸುಪ್ರೀಂಕೋರ್ಟ್ ಆದೇಶ ನೀಡಿತ್ತು. ನಂಬಿನಾರಾಯಣನ್ ಪ್ರಕರಣಕ್ಕೆ ಹೋಲಿಸಿದರೆ ಚಂದ್ರೇಶ್ ಅವರದು ಇನ್ನೂ 'ನರಕ ಯಾತನೆ' ಎಂದು ವಿಭಾಗೀಯ ಪೀಠ ಹೇಳಿದೆ.

ಪ್ರಕರಣದ ಹಿನ್ನೆಲೆ

'ಇದು ಕ್ಯಾಂಪಸ್ ರಾಜಕೀಯದಿಂದ ಉದ್ಭವಿಸಿದ ಪ್ರಕರಣ. ಪ್ರಾಸಿಕ್ಯೂಷನ್ ಸಾಕ್ಷಿ ಡಾ. ಹೇಮಂತ್ ವರ್ಮಾ, ಚಂದ್ರೇಶ್ ಮೇಲಿನ ಹಳೆ ದ್ವೇಷದಿಂದ, ಭೋಪಾಲ್‌ನ ಆಗಿನ ಐಜಿಪಿ ಶೈಲೇಂದ್ರ ಶ್ರೀವಾಸ್ತವ ಅವರ ಮೇಲೆ ಪ್ರಭಾವ ಬೀರಿ, ಸುಳ್ಳು ಪ್ರಕರಣ ದಾಖಲಿಸಿದ್ದರು' ಎಂದು ಮೇಲ್ಮನವಿದಾರರ ಪರ ವಕೀಲರು ವಾದಿಸಿದ್ದರು.

'2008ರ ಆಗಸ್ಟ್ 20ರಂದು ಚಂದ್ರೇಶ್ ತನ್ನ ಕಾರು ತೆಗೆದುಗೊಂಡು ಹೋಗಿದ್ದರು. ಮೂರು ದಿನಗಳ ನಂತರ ಚಂದ್ರೇಶ್ ಅವರ ಗೆಳತಿಯ ಶವ ಪಚ್ಮರ್ಹಿಯಲ್ಲಿ ಪತ್ತೆಯಾಗಿತ್ತು. ಅವರೇ ಏನೋ ಮಾಡಿರುವ ಅನುಮಾನವಿದೆ' ಎಂದು ಡಾ. ಹೇಮಂತ್ ವರ್ಮಾ ಪೊಲೀಸರಿಗೆ ಮಾಹಿತಿ ನೀಡಿದ್ದರು.

ರೋಹಿತ್ ಚಕ್ರತೀರ್ಥ ಪೂರ್ವಗ್ರಹ ಪೀಡಿತ: ಇತಿಹಾಸಕಾರರ ಆಕ್ರೋಶ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಅಕಾಡೆಮಿಕ್ ನೆಲೆಯಲ್ಲಿ ಅಧ್ಯಯನ ನಡೆಸದ ಮತ್ತು ಇತಿಹಾಸದ ವೈಜ್ಞಾನಿಕತೆಯ ಅರಿವು ಇರದ ಪಠ್ಯಪುಸ್ತಕ ಪರಿಷ್ಕರಣ ಸಮಿತಿಯ ಅಧ್ಯಕ್ಷ ರೋಹಿತ್ ಚಕ್ರತೀರ್ಥ ಅವರು ಪೂರ್ವಗ್ರಹ ಪೀಡಿತರು. ಅಪ್ರಬುದ್ಧ ಹೇಳಿಕೆಗಳ ಮೂಲಕ ಸಾರ್ವಜನಿಕರ ದಿಕ್ಕು ತಪ್ಪಿಸುತ್ತಿದ್ದಾರೆ' ಎಂದು ಇತಿಹಾಸಕಾರರು, ಶಿಕ್ಷಣ ತಜ್ಞರು ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಈ ಕುರಿತು ತುಮಕೂರು ವಿಶ್ವವಿದ್ಯಾಲಯದ ನಿವೃತ್ತ ಕುಲಪತಿ ಪ್ರೊ. ಓ. ಅನಂತರಾಮಯ್ಯ, ಕಲಬುರಗಿಯ ಕರ್ನಾಟಕ ಕೇಂದ್ರೀಯ ವಿಶ್ವವಿದ್ಯಾಲಯದ ನಿವೃತ್ತ ಸಹ ಕುಲಾಧಿಪತಿ ಪ್ರೊ.ಎಸ್.ಚಂದ್ರಶೇಖರ್, ಬೆಂಗಳೂರು ವಿಶ್ವವಿದ್ಯಾಲಯದ ನಿವೃತ್ತ ಪ್ರಾಧ್ಯಾಪಕ ಪ್ರೊ.ಅಶ್ವತ್ಥ ನಾರಾಯಣ, 'ಇತಿಹಾಸ ದರ್ಪಣ' ಸಂಪಾದಕ ಡಾ.ಹಂ.ಗು.ರಾಜೇಶ್ ಹಾಗೂ ಇತಿಹಾಸಕಾರ ಡಾ.ಎಚ್.ಎಸ್. ಗೋಪಾಲರಾವ್ ಮತ್ತು ಇತಿಹಾಸ ಸಂಶೋಧಕ ಡಾ.ಕೆ.ಪ್ರಕಾಶ್ ಅವರು ಜಂಟಿ ಹೇಳಿಕೆ ಬಿಡುಗಡೆ ಮಾಡಿದ್ದಾರೆ.

'ಮರುಪರಿಷ್ಕರಣೆ ಕುರಿತು ಸರ್ಕಾರಕ್ಕೆ ವರದಿ ಸಲ್ಲಿಸಿದ ನಂತರ ರೋಹಿತ್ ಚಕ್ರತೀರ್ಥ ನೀಡಿರುವ ಹೇಳಿಕೆಗಳನ್ನು ಗಮನಿಸಿದಾಗ ಇತಿಹಾಸ ಪಠ್ಯ ಪುಸ್ತಕಗಳಲ್ಲಿನ ವಿಷಯವನ್ನು ತಿರುಚುವ ಹುನ್ನಾರ ನಡೆಸಿರುವಂತೆ ತೋರುತ್ತದೆ' ಎಂದು ಅವರು ಹೇಳಿದ್ದಾರೆ.

'ಪಠ್ಯ ಮರುಪರಿಷ್ಕರಣಾ ವರದಿಯನ್ನು ಸರ್ಕಾರಕ್ಕೆ ಸಲ್ಲಿಸಿದ ಮೇಲೆ ಅಧ್ಯಕ್ಷರ ಜವಾಬ್ದಾರಿ ಮುಗಿಯುತ್ತದೆ. ಒಪ್ಪುವುದು ಬಿಡುವುದು ಸರ್ಕಾರದ ವಿವೇಚನೆ. ಆದರೆ, ಶಿಕ್ಷಣ ತಜ್ಞರ ಮತ್ತು ಹಿಂದಿನ ಅಧ್ಯಕ್ಷರನ್ನು ದೂಷಿಸುವುದು ಮತ್ತು ಅಕಾಡೆಮಿಕ್ ವಲಯದಲ್ಲಿ ನಡೆಯಬೇಕಾದ ಚರ್ಚೆಯನ್ನು ಸಂತೆಯಲ್ಲಿ ನಿಂತು ಮಾತನಾಡುವುದು ಸರ್ಕಾರದ ನಿಯಮಗಳಿಗೂ ವಿರುದ್ಧವಾದುದು. ಆದ್ದರಿಂದ ರೋಹಿತ್ ಚಕ್ರತೀರ್ಥ ಅವರ ವರ್ತನೆಯನ್ನು ಸರ್ಕಾರ ನಿಯಂತ್ರಿಸಬೇಕು' ಎಂದು ಒತ್ತಾಯಿಸಿದ್ದಾರೆ.

'2017ರಲ್ಲಿ ಜಾರಿಯಾದ ಪರಿಷ್ಕೃತ ಪಠ್ಯಪುಸ್ತಕಗಳು ಬರಗೂರು ರಾಮಚಂದ್ರಪ್ಪ ಅವರ ಸರ್ವಾಧ್ಯಕ್ಷತೆಯಲ್ಲಿ ವಿವಿಧ ವಿಷಯಗಳ 27 ತಜ್ಞರ ಸಮಿತಿಗಳಿಂದ ರೂಪುಗೊಂಡಿದ್ದವು. ಐದು ವರ್ಷದ ನಂತರ ಪರಿಷ್ಕರಣೆಗೆ ಆಕ್ಷೇಪ ವ್ಯಕ್ತಪಡಿಸಲಾಯಿತು. ಆಗ ರೋಹಿತ್ ಚಕ್ರತೀರ್ಥ ಅಧ್ಯಕ್ಷತೆಯ ಸಮಿತಿ ಮರುಪರಿಷ್ಕರಣೆ ನಡೆಸಿರುವುದು ಸಂಶಯಗಳಿಗೆ ಎಡೆಮಾಡಿಕೊಟ್ಟಿದೆ' ಎಂದು ದೂರಿದ್ದಾರೆ.

'ಚಕ್ರತೀರ್ಥ ಅವರು ವಿಡಿಯೊವೊಂದರಲ್ಲಿ 'ತಪ್ಪು ಇಲ್ಲದ ಜನ ಒಪ್ಪಬೇಕಿಲ್ಲ; ಹಸಿವಿನಿಂದ ಮಕ್ಕಳು ಸಾಯಬೇಕಾಯಿತು' ಎಂದು ಪಠ್ಯ ಪುಸ್ತಕದಲ್ಲಿದೆ ಎಂದು ಹಸಿ ಸುಳ್ಳು ಹೇಳಿದ್ದಾರೆ. ಯಾವ ತರಗತಿಯ ಇತಿಹಾಸ ಪಠ್ಯದಲ್ಲಿ ಹೀಗೆ ಬರೆದಿದೆ ಎಂದು ಅವರೇ ತೋರಿಸಬೇಕು' ಎಂದು ಹೇಳಿದ್ದಾರೆ.

ನಗರದಲ್ಲಿ ಶುಕ್ರವಾರ ಸಂಜೆ ಮಳೆ ಸುರಿಯುತ್ತಿದ್ದ ವೇಳೆ ಸಾರ್ವಜನಿಕರು ಕೊಡೆ ಹಿಡಿದು ದ್ವಿಚಕ್ರ ವಾಹನದಲ್ಲಿ ಸಂಚರಿಸಿದರು (ಎಡಚಿತ್ರ). ನಗರದ ಪಿಇಎಸ್ ಕಾಲೇಜು ಬಳಿ ಮಳೆಯಿಂದಾಗಿ ಬಿಎಂಟಿಸಿ ಬಸ್ ಮೇಲೆ ಮರ ಉರುಳಿರುವುದು — ಪ್ರಜಾವಾಣಿ ಚಿತ್ರಗಳು

ನಗರದ ಬಹುತೇಕ ಕಡೆ ಮಳೆ; ಹಲವೆಡೆ ವಾಹನಗಳ ಸಂಚಾರಕ್ಕೆ ತೊಂದರೆ

ಜೋರು ಮಳೆ: ಉರುಳಿಬಿದ್ದ ಮರಗಳು

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದಲ್ಲಿ ಶುಕ್ರವಾರವೂ ಹಲವೆಡೆ ಜೋರು ಮಳೆ ಆಯಿತು. ನಗರದ 6 ಕಡೆಗಳಲ್ಲಿ ಮರಗಳು ಉರುಳಿಬಿದ್ದಿದ್ದವು.

ಕೆಲದಿನಗಳಿಂದ ನಗರದಲ್ಲಿ ಮೋಡ ಕವಿದ ವಾತಾವರಣ ಸಾಮಾನ್ಯವಾಗಿದೆ. ಆಗಾಗ ಬಿಸಿಲು ಕಾಣಿಸಿಕೊಳ್ಳುತ್ತಿದೆ. ಸಂಜೆ ಹಾಗೂ ರಾತ್ರಿ ಸಮಯದಲ್ಲಿ ಗುಡುಗು–ಸಿಡಿಲು ಹಾಗೂ ಜೋರು ಗಾಳಿ ಸಮೇತ ಮಳೆ ಆಗುತ್ತಿದೆ.

ರಾಜರಾಜೇಶ್ವರಿನಗರ, ಕೆಂಗೇರಿ, ನಾಯಂಡನಹಳ್ಳಿ, ದೀಪಾಂಜಲಿನಗರ, ವಿಜಯನಗರ, ಚಂದ್ರಾಲೇಔಟ್, ನಾಗರಬಾವಿ, ರಾಜಾಜಿನಗರ, ಬಸವೇಶ್ವರನಗರ, ಕಾಮಾಕ್ಷಿಪಾಳ್ಯ, ಯಶವಂತಪುರ, ಮಹಾಲಕ್ಷ್ಮಿ ಲೇಔಟ್, ಪೀಣ್ಯ, ಗೊರಗುಂಟೆಪಾಳ್ಯ, ಜಾಲಹಳ್ಳಿ, ಮಲ್ಲೇಶ್ವರ, ಶೇಷಾದ್ರಿಪುರ, ಗಾಂಧಿನಗರ, ಮೆಜೆಸ್ಟಿಕ್ ಹಾಗೂ ಸುತ್ತಮುತ್ತ ಸ್ಥಳಗಳಲ್ಲಿ ಜೋರು ಮಳೆ ಇತ್ತು.

ಹೆಬ್ಬಾಳ, ಆರ್‌.ಟಿ.ನಗರ, ಸಂಜಯ ನಗರ, ಅಮೃತಹಳ್ಳಿ, ಸದಾಶಿವನಗರ, ವಸಂತನಗರ, ಪುಲಿಕೇಶಿನಗರ, ಭಾರತಿನಗರ, ಶಿವಾಜಿನಗರ, ಎಂ.ಜಿ. ರಸ್ತೆ, ಅಶೋಕನಗರ, ವಿವೇಕನಗರ, ಕೋರಮಂಗಲ, ಮಡಿವಾಳ, ಎಚ್‌ಎಸ್‌ಆರ್ ಲೇಔಟ್ ಹಾಗೂ ಸುತ್ತಮುತ್ತ ಪ್ರದೇಶಗಳಲ್ಲೂ ಮಳೆ ಆಯಿತು.

ಇಂದಿರಾನಗರದ 13ನೇ ಅಡ್ಡರಸ್ತೆಯಲ್ಲಿ ತೆಂಗಿನ ಮರವೊಂದು ಉರುಳಿ ರಸ್ತೆ ಮೇಲೆ ಬಿದ್ದಿತ್ತು. ಮಾರತ್ತಹಳ್ಳಿ, ಬೆಮೆಲ್ ಬಡಾವಣೆ, ಚನ್ನಸಂದ್ರ, ಉತ್ತರಹಳ್ಳಿ ಬಸ್ ತಂಗುದಾಣ ಬಳಿ, ಕೋರಮಂಗಲ ಬಳಿ ಮರಗಳು ಉರುಳಿಬಿದ್ದಿದ್ದವು. 12 ಕಡೆ ಮರದ ದೊಡ್ಡ ಗಾತ್ರದ ಕೊಂಬೆಗಳು ಬಿದ್ದಿದ್ದವು.

ರಸ್ತೆ ಮೇಲೆಯೇ ಮರಗಳು ಹಾಗೂ ಕೊಂಬೆಗಳು ಬಿದ್ದಿದ್ದರಿಂದ ವಾಹನಗಳ ಸಂಚಾರಕ್ಕೆ ತೊಂದರೆ ಉಂಟಾಯಿತು. ಬಿಬಿಎಂಪಿ ಸಿಬ್ಬಂದಿ ಹಾಗೂ ಸ್ಥಳೀಯರು ಮರಗಳನ್ನು ತೆರವು ಮಾಡಿ, ಸಂಚಾರಕ್ಕೆ ಅನುಕೂಲ ಮಾಡಿಕೊಟ್ಟರು.

ಹೊರವರ್ತುಲ ರಸ್ತೆಯ ಪಿಇಎಸ್ ಕಾಲೇಜು ಬಳಿ ಬಿಎಂಟಿಸಿ ಬಸ್ ಮೇಲೆ ಮರವೊಂದು ಬಿದ್ದಿತ್ತು. ಬಸ್ಸಿನ ಚಾವಣಿ ಮಾತ್ರ ಜಖಂಗೊಂಡಿತು. ಪ್ರಯಾಣಿಕರಿಗೆ ಯಾವುದೇ ತೊಂದರೆ ಆಗಿಲ್ಲ.

'ನಾಯಂಡನಹಳ್ಳಿಯಿಂದ ಹೊಸಕೆರೆಹಳ್ಳಿ ಕಡೆಗೆ ಬಸ್ ಹೊರಟಿದ್ದಾಗ ಈ ಅವಘಡ ಸಂಭವಿಸಿತ್ತು' ಎಂದು ಬಿಬಿಎಂಪಿ ಸಹಾಯವಾಣಿ ಸಿಬ್ಬಂದಿ ಹೇಳಿದರು.

'ನಗರದ ಬಹುತೇಕ ಕಡೆ ಮಳೆಯಾಗಿದ್ದು, ಮರಗಳು ಹಾಗೂ ಅದರ ಕೊಂಬೆಗಳು ಉರುಳಿಬಿದ್ದಿದ್ದ ಬಗ್ಗೆ ದೂರುಗಳು ಬಂದಿವೆ. ಮನೆಗಳಿಗೆ ನೀರು ನುಗ್ಗಿದ್ದ ಬಗ್ಗೆ ಯಾವುದೇ ದೂರುಗಳು ಬಂದಿಲ್ಲ. ಆಯಾ ವಲಯಗಳಿಗೂ ದೂರುಗಳು ಬರುತ್ತಿದ್ದು, ಸಿಬ್ಬಂದಿ ತ್ವರಿತವಾಗಿ ಸ್ಪಂದಿಸುತ್ತಿದ್ದಾರೆ' ಎಂದೂ ತಿಳಿಸಿದರು.

ಮುಂಗಾರು ಮಳೆ: ಸವಾಲು ಎದುರಿಸಲು ಸಜ್ಜಾಗಿ

ಬೆಂಗಳೂರು: 'ಮುಂಗಾರು ಮಳೆಯ ಸಂದರ್ಭದಲ್ಲಿ ಯಾವುದೇ ಸಮಸ್ಯೆ ಆಗದಂತೆ ಮುಂಜಾಗ್ರತಾ ಕ್ರಮಗಳನ್ನು ಕೈಗೊಳ್ಳಬೇಕು. ಬಿಬಿಎಂಪಿ, ಬೆಸ್ಕಾಂ, ಜಲಮಂಡಳಿ ಸಮನ್ವಯದಿಂದ ಕೆಲಸ ಮಾಡಿ ನಾಗರಿಕರ ಅಹವಾಲುಗಳಿಗೆ ತ್ವರಿತವಾಗಿ ಸ್ಪಂದಿಸಬೇಕು' ಎಂದು ಮುಖ್ಯ ಆಯುಕ್ತ ತುಷಾರ್ ಗಿರಿನಾಥ್ ಅವರು ಅಧಿಕಾರಿಗಳಿಗೆ ಸೂಚಿಸಿದರು.

ಅಧಿಕಾರ ವಹಿಸಿಕೊಂಡ ಬಳಿಕ ಅವರು ಬಿಬಿಎಂಪಿಯ ಹಿರಿಯ ಅಧಿಕಾರಿಗಳ ಜೊತೆ ಶುಕ್ರವಾರ ಸಭೆ ನಡೆಸಿದರು.

'ಎಲ್ಲ ವಲಯಗಳ ಹಾಗೂ ಕೇಂದ್ರ ಕಚೇರಿಯ ನಿಯಂತ್ರಣ ಕೊಠಡಿಗಳು ಸಕ್ರಿಯವಾಗಿ ಕಾರ್ಯನಿರ್ವಹಿಸಬೇಕು. 63 ತಾತ್ಕಾಲಿಕ ನಿಯಂತ್ರಣ ಕೊಠಡಿಗಳನ್ನು ತ್ವರಿತವಾಗಿ ಪ್ರಾರಂಭಿಸಿ ಅಗತ್ಯ ಸಿಬ್ಬಂದಿಯನ್ನು ನಿಯೋಜಿಸಬೇಕು. ಯಂತ್ರೋಪಕರಣಗಳನ್ನು ಸಜ್ಜಾಗಿಟ್ಟುಕೊಳ್ಳಬೇಕು. ಜನರಿಂದ ದೂರು ಬಂದ ತಕ್ಷಣವೇ ಸ್ಥಳಕ್ಕೆ ಭೇಟಿ ನೀಡಿ ಸಮಸ್ಯೆಯನ್ನು ಇತ್ಯರ್ಥ ಪಡಿಸಬೇಕು. ಸ್ಥಳೀಯರಿಗೆ ಅಧಿಕಾರಿಗಳು ಸಿಗಬೇಕು' ಎಂದು ಕಟ್ಟುನಿಟ್ಟಾಗಿ ತಿಳಿಸಿದರು.

'ಮಳೆಯಿಂದಾಗಿ ತೊಂದರೆ ಉಂಟಾಗುವ ಅತಿ ಸೂಕ್ಷ್ಮ ಪ್ರದೇಶಗಳನ್ನು ಗುರುತಿಸಬೇಕು. ಹೂಳನ್ನು ತೆರವುಗೊಳಿಸಿ ರಾಜಕಾಲುವೆಯಲ್ಲಿ ನೀರು ಸರಾಗವಾಗಿ ಹರಿದು ಹೋಗುವಂತೆ ವ್ಯವಸ್ಥೆ ಮಾಡಬೇಕು' ಎಂದು ನಿರ್ದೇಶನ ನೀಡಿದರು.

'ಕೋವಿಡ್ ಹೆಚ್ಚುತ್ತಿರುವ ಕಡೆ ನಿಗಾವಹಿಸಿ': 'ನಗರದಲ್ಲಿ ಕೋವಿಡ್ ಪ್ರಕರಣಗಳು ಜಾಸ್ತಿಯಾಗುತ್ತಿರುವ ಕಡೆ ಹೆಚ್ಚಿನ ನಿಗಾವಹಿಸಬೇಕು. ಕೋವಿಡ್ ಪ್ರಕರಣಗಳು ಹೆಚ್ಚಾಗದಂತೆ ಕ್ರಮ ಕೈಗೊಳ್ಳಬೇಕು. ಅಗತ್ಯಬಿದ್ದರೆ ಕೋವಿಡ್ ಪರೀಕ್ಷೆಯನ್ನೂ ಹೆಚ್ಚಿಸಬೇಕು' ಎಂದು ತುಷಾರ್ ಗಿರಿನಾಥ್ ಸೂಚಿಸಿದರು.

ವಿಶೇಷ ಆಯುಕ್ತ ಡಾ.ಕೆ.ವಿ.ತ್ರಿಲೋಕ್‌ಚಂದ್ರ ಅವರು, 'ನಗರದಲ್ಲಿ ಕೋವಿಡ್ ಸೋಂಕು ಪತ್ತೆ ದರ ಶೇ. 1.6 ರಷ್ಟಿದೆ. ಪಕ್ಕದ ರಾಜ್ಯಗಳಲ್ಲಿ ಕೋವಿಡ್ ಪ್ರಕರಣಗಳು ಹೆಚ್ಚುತ್ತಿರುವುದರಿಂದ ಕೋವಿಡ್ ಪರೀಕ್ಷೆಯನ್ನು ಹೆಚ್ಚಿಸಿದ್ದೇವೆ' ಎಂದು ಮಾಹಿತಿ ನೀಡಿದರು.

ಶ್ರೀಲಂಕಾ: ತುರ್ತುಪರಿಸ್ಥಿತಿ ಘೋಷಣೆ

ಕೊಲಂಬೊ (ಎಎಫ್‌ಪಿ): ಶ್ರೀಲಂಕಾದಲ್ಲಿ ಶುಕ್ರವಾರ ಮಧ್ಯರಾತ್ರಿಯಿಂದಲೇ ಜಾರಿಗೆ ಬರುವಂತೆ ತುರ್ತುಪರಿಸ್ಥಿತಿ ಘೋಷಿಸಲಾಗಿದೆ. ಅಧ್ಯಕ್ಷ ಗೋಟಬಯ ರಾಜಪಕ್ಸ ಈ ಮೂಲಕ ದೇಶದಲ್ಲಿ ಪ್ರತಿಭಟನೆ ಹತ್ತಿಕ್ಕಲು ಪೊಲೀಸರು, ಭದ್ರತಾ ಪಡೆಗಳಿಗೆ ಹೆಚ್ಚಿನ ಅಧಿಕಾರ ನೀಡಿದ್ದಾರೆ.

ಈ ಕುರಿತು ಅಧ್ಯಕ್ಷರ ವಕ್ತಾರರು, 'ಕಾನೂನು ಸುವ್ಯವಸ್ಥೆಯನ್ನು ಸುಸ್ಥಿತಿಗೆ ತರಲು ಕಠಿಣ ಕಾಯ್ದೆ ಜಾರಿಗೊಳಿಸಲಾಗಿದೆ' ಎಂದಿದ್ದಾರೆ. ತುರ್ತುಸ್ಥಿತಿ ಅವಧಿಯಲ್ಲಿ ಪ್ರತಿಭಟನಕಾರರು, ಶಂಕಿತರನ್ನು ಬಂಧಿಸಲು ಪೊಲೀಸರು ಮತ್ತು ಭದ್ರತಾ ಪಡೆಗಳಿಗೆ ಮುಕ್ತ ಅಧಿಕಾರವನ್ನು ನೀಡಲಾಗುತ್ತದೆ.

ಅಧ್ಯಕ್ಷ ಗೋಟಬಯ ರಾಜಪಕ್ಸ ಮತ್ತು ಪ್ರಧಾನಿ ಮಹಿಂದಾ ರಾಜಪಕ್ಸ ಅವರ ರಾಜೀನಾಮೆಗೆ ಆಗ್ರಹಪಡಿಸಿ, ಶುಕ್ರವಾರವೂ ಪ್ರತಿಭಟನೆ ನಡೆದಿತ್ತು. ವಿದ್ಯಾರ್ಥಿಗಳ ಸಮೂಹವನ್ನು ಚದುರಿಸಲು ಪೊಲೀಸರು ಅಶ್ರುವಾಯು ಮತ್ತು ಜಲಫಿರಂಗಿ ಪ್ರಯೋಗಿಸಿದ್ದರು.

ಐದು ವಾರಗಳ ಅವಧಿಯಲ್ಲಿ ಈ ಮೂಲಕ ದ್ವೀಪರಾಷ್ಟ್ರದಲ್ಲಿ ಎರಡನೇ ಬಾರಿಗೆ ತುರ್ತುಪರಿಸ್ಥಿತಿ ಘೋಷಿಸಿದಂತಾಗಿದೆ. ಆರ್ಥಿಕ ಬಿಕ್ಕಟ್ಟಿನ ಹಿಂದೆಯೇ ಶ್ರೀಲಂಕಾದಲ್ಲಿ ಅಗತ್ಯ ವಸ್ತುಗಳ ಬೆಲೆ ಏರಿದ್ದು, ಈ ಸಂಬಂಧ ದೇಶದಾದ್ಯಂತ ಸರ್ಕಾರದ ವಿರುದ್ಧ ಜನಾಕ್ರೋಶ ವ್ಯಕ್ತವಾಗಿದೆ.

ಶುಕ್ರವಾರ ಕೊಲಂಬೊದಲ್ಲಿ ಸಂಸತ್ತಿನ ಎದುರು ಪ್ರತಿಭಟಿಸಿದ ವಿದ್ಯಾರ್ಥಿಗಳನ್ನು ಚದುರಿಸಲು ಪೊಲೀಸರು ಅಶ್ರುವಾಯು ಪ್ರಯೋಗಿಸಿದರು –ಎಎಫ್‌ಪಿ ಚಿತ್ರ

LIC ಭಾರತೀಯ ಜೀವ ವಿಮಾ ನಿಗಮ / भारतीय जीवन बीमा निगम / LIFE INSURANCE CORPORATION OF INDIA

ವಿಭಾಗೀಯ ಕಛೇರಿ–2, ಅಂಚೆ ಪೆಟ್ಟಿಗೆ ಸಂಖ್ಯೆ. 3829, "ಜೀವನ ಜ್ಯೋತಿ" ಇಂದಿರಾನಗರ 2ನೇ ಹಂತ, ಬೆಂಗಳೂರು – 560038. ದೂರವಾಣಿ: 080–22966894, 25205044.

ಭಾರತೀಯ ಜೀವ ವಿಮಾ ನಿಗಮವು, ಬೆಂಗಳೂರಿನ ಜೀವನ್‌ಬೀಮಾ ನಗರದಲ್ಲಿ ಖಾಲಿ ಇರುವ ವಾಣಿಜ್ಯ ಆವರಣವನ್ನು ಬಾಡಿಗೆಗೆ ನೀಡಲು ಉದ್ದೇಶಿಸಿದೆ. ವಿವರವಾದ ಮಾಹಿತಿಗಾಗಿ ಮತ್ತು ಲಭ್ಯವಿರುವ ಖಾಲಿ ಆವರಣದ ವಿವರಗಳಿಗಾಗಿ, **www.licindia.in**>Tender> 'Advertisement for Letting out Vacant premises in Jeevan Bima Nagara, Bangalore' ಗೆ ಲಾಗ್ ಆನ್ ಮಾಡಿ. ಆಸಕ್ತಿಯುಳ್ಳ ವ್ಯಕ್ತಿಗಳು ತಮ್ಮ ಅರ್ಜಿಯನ್ನು ಅನೆಕ್ಸರ್ 'ಎ' ನಲ್ಲಿ ಮೇಲೆ ತಿಳಿಸಿದ ವಿಳಾಸಕ್ಕೆ ದಿನಾಂಕ : **22–06–2022ರಂದು ಸಂಜೆ 3.00 ಗಂಟೆಯ** ಒಳಗೆ ಸಲ್ಲಿಸಬೇಕು.

ಸ್ಥಳ : ಬೆಂಗಳೂರು
ದಿನಾಂಕ : 07–05–2022

ಸಹಿ/–
ಹಿರಿಯ ವಿಭಾಗೀಯ ವ್ಯವಸ್ಥಾಪಕರು

ನೈಋತ್ಯ ರೈಲ್ವೆ

ಟೆಂಡರ್ ಪ್ರಕಟಣೆ ಸಂ. 03/2022 ದಿನಾಂಕ : 02–05–2022

ಭಾರತದ ರಾಷ್ಟ್ರಪತಿಗಳ ಪರವಾಗಿ, ಕೆಳಸಹಿದಾರರು, ಕೆಳಗಿನ ಐಟಂಗಳ ಸರಬರಾಜಿಗಾಗಿ ಐಆರ್‌ಇಪಿಎಸ್ ಮೂಲಕ ಮಾತ್ರ ಇ–ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ. ಟೆಂಡರ್ ಮುಕ್ತಾಯದ ಸಮಯ : 14.00 ಗಂಟೆಗಳು

ಕ್ರ	ಟೆಂಡರ್ ಸಂಖ್ಯೆ	ಸಂಕ್ಷಿಪ್ತ ವಿವರಣೆ	ಪ್ರಮಾಣ	ಟೆಂಡರ್ ಮುಕ್ತಾಯದ ದಿನಾಂಕ
1	56221094	ರೈಲ್ವೆ ಸಿಗ್ನಲಿಂಗ್ ಮತ್ತು ಟೆಲಿಕಾಂ ಕೇಬಲ್	200 ಕಿ.ಮೀ.	20–05–2022
2	56221093	ಪಿವಿಸಿ ಇನ್ಸುಲೇಟೆಡ್ ಆರ್ಮರ್ಡ್ ಅನ್‌ಸ್ಕ್ರೀನ್ಡ್	200 ಕಿ.ಮೀ.	19–05–2022
3	81211021	ಇಂಡಸ್ಟ್ರಿಯಲ್ ಕಂಪ್ರೆಸ್ಡ್ ಆಕ್ಸಿಜನ್ ಗ್ಯಾಸ್	86182 ಸಿಯುಎಂ	11–05–2022
4	81225001	ಶೀಲ್ಡಿಂಗ್ ಗ್ಯಾಸ್	17000 ಸಿಯುಎಂ	13–05–2022
5	56221091	ಪಿವಿಸಿ ಇನ್ಸುಲೇಟೆಡ್ ಆರ್ಮರ್ಡ್, ಅನ್‌ಸ್ಕ್ರೀನ್ಡ್, ಅಂಡರ್‌ಗ್ರೌಂಡ್	300 ಕಿ.ಮೀ.	02–06–2022
6	45221289	ಸ್ಟಾರ್ಟರ್ ಲೆಡ್ ಆಸಿಡ್ ಬ್ಯಾಟರಿ	119 ಸಂಖ್ಯೆಗಳು	25–05–2022
7	47225003	25ಕೆವಿ ಎಸಿ ಮೆಮು ಟ್ರಾನ್ಸ್‌ಫಾರ್ಮರ್ 1050 ಕೆವಿಎ ಜೊತೆಗೆ ಹೆಚ್‌ವಿ	1 ಸಂಖ್ಯೆ	23–05–2022
8	29221046	ರೇಡಿಯೇಟರ್ ಯೂನಿಟ್ (ಆಯಿಲ್ ಕೂಲರ್ ಫಾರ್ ಟ್ರಾನ್ಸ್‌ಫಾರ್ಮರ್ / ಕನ್ವರ್ಟರ್)	08 ಸೆಟ್‌ಗಳು	27–05–2022
9	30221100	ಆಕ್ಸೆಲ್ ಬಾಕ್ಸ್ ಹೌಸಿಂಗ್ ಫಿನಿಶ್ಡ್ ಟು ಐಸಿಎಫ್ ಡ್ರಾಯಿಂಗ್ ನಂ. ಟಿ–0–2–602	300 ಸಂಖ್ಯೆಗಳು	23–05–2022

ಹೆಚ್ಚಿನ ವಿವರಗಳಿಗೆ **www.ireps.gov.in** ಗೆ ಲಾಗ್‌ಆನ್ ಮಾಡಿ.

ಪಿಯುಬಿ/75/ಎಎಸ್/ಪಿಆರ್‌ಬಿ/ಎಸ್‌ಡಬ್ಲ್ಯುಆರ್/2022–23 ಪ್ರಧಾನ ಮುಖ್ಯ ಸಾಮಗ್ರಿಗಳ ವ್ಯವಸ್ಥಾಪಕರು, ಹುಬ್ಬಳ್ಳಿ

S.W.Railways | sw_rly | SWRRLY | southwesternrailway | SWRRLY

'ಮಂಡ್ಯದಲ್ಲಿ ಬಿಜೆಪಿ ಸಮಾವೇಶಕ್ಕೆ ಚಿಂತನೆ'

ಬೆಂಗಳೂರು: ಮಂಡ್ಯದಲ್ಲಿ ಬಿಜೆಪಿ ಸಮಾವೇಶ ನಡೆಸುವ ಚಿಂತನೆ ಇದ್ದು, ಪಕ್ಷದ ನಾಯಕರ ಜತೆ ಚರ್ಚಿಸಿ ತೀರ್ಮಾನಕ್ಕೆ ಬರಲಾಗುವುದು ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹೇಳಿದರು.

ಬಿಜೆಪಿ ನಾಯಕ ಎಸ್‌.ಎಂ. ಕೃಷ್ಣ ನಿವಾಸಕ್ಕೆ ಶುಕ್ರವಾರ ಭೇಟಿ ನೀಡಿ ಚರ್ಚಿಸಿದ ಬಳಿಕ ಸುದ್ದಿಗಾರರ ಜತೆ ಮಾತನಾಡಿದ ಬೊಮ್ಮಾಯಿ ಅವರು, 'ರಾಜ್ಯದ ಎಲ್ಲ ಭಾಗಗಳಲ್ಲೂ ಇತರ ಪಕ್ಷಗಳ ಮುಖಂಡರು ಬಿಜೆಪಿ ಸೇರಲು ಉತ್ಸುಕರಾಗಿದ್ದಾರೆ. ಕೋಲಾರ ಮತ್ತು ಮಂಡ್ಯ ಜಿಲ್ಲೆಗಳಲ್ಲಿ ಹೆಚ್ಚಿನ ಸಂಖ್ಯೆಯ ಮುಖಂಡರು ಬಿಜೆಪಿ ಸೇರಲಿದ್ದಾರೆ. ಅವರೆಲ್ಲರನ್ನೂ ಬರಮಾಡಿಕೊಳ್ಳುವುದಕ್ಕೆ ಸಮಾವೇಶ ಆಯೋಜಿಸುವ ಯೋಚನೆ ಇದೆ' ಎಂದರು.

ರಾಗಿ ಖರೀದಿ: ಶುರುವಾಗದ ನೋಂದಣಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರೈತರಿಂದ ಮೂರನೇ ಹಂತದಲ್ಲಿ ಬೆಂಬಲ ಬೆಲೆ ಯೋಜನೆಯಡಿ ರಾಗಿ ಖರೀದಿಗೆ ನೋಂದಣಿ ಆರಂಭಿಸುವುದಾಗಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಘೋಷಿಸಿದ್ದರೂ, ಈ ಬಗ್ಗೆ ಇನ್ನೂ ರಾಜ್ಯ ಸರ್ಕಾರದಿಂದ ಅಧಿಕೃತ ಆದೇಶ ಹೊರಬಿದ್ದಿಲ್ಲ. ಹಾಗಾಗಿ, ಶುಕ್ರವಾರ ನೋಂದಣಿ ಪ್ರಕ್ರಿಯೆ ಆರಂಭವಾಗಿಲ್ಲ.

ರೈತರು ಬೆಳಿಗ್ಗೆಯೇ ತುಮಕೂರು, ಚಿಕ್ಕಬಳ್ಳಾಪುರ, ಕೋಲಾರ, ರಾಮನಗರ ಮತ್ತು ಬೆಂಗಳೂರು ಗ್ರಾಮಾಂತರ ಜಿಲ್ಲೆಯಲ್ಲಿ ತೆರೆದಿರುವ ಖರೀದಿ ಕೇಂದ್ರಗಳಿಗೆ ಹೆಸರು ನೋಂದಣಿಗೆ ಆಗಮಿಸಿದ್ದರು. ಸರ್ಕಾರದ ಆದೇಶ ಇನ್ನೂ ಕೈಸೇರದಿರುವ ಬಗ್ಗೆ ಅಧಿಕಾರಿಗಳು ರೈತರಿಗೆ ಮನವರಿಕೆ ಮಾಡಿಕೊಟ್ಟರು.

'ಸರ್ಕಾರದಿಂದ ಆದೇಶ ಬಂದ ತಕ್ಷಣ ನೋಂದಣಿ ಮಾಡಿಕೊಂಡು ಖರೀದಿ ಪ್ರಕ್ರಿಯೆ ಆರಂಭಿಸಲಾಗುವುದು' ಎಂದು ತುಮಕೂರು ಜಿಲ್ಲಾ ಆಹಾರ ಹಾಗೂ ನಾಗರಿಕ ಸರಬರಾಜು ನಿಗಮದ ವ್ಯವಸ್ಥಾಪಕ ಸಿದ್ದಲಿಂಗಸ್ವಾಮಿ 'ಪ್ರಜಾವಾಣಿ'ಗೆ ತಿಳಿಸಿದರು.

ವಿಜಯನಗರ ಜಿಲ್ಲೆ ಹರಪನಹಳ್ಳಿ, ಚಿಕ್ಕಮಗಳೂರು ಜಿಲ್ಲೆಯ ಕಡೂರು, ತರೀಕೆರೆ, ಮೈಸೂರು, ಕೊಡಗು, ಹಾಸನ, ಚಾಮರಾಜನಗರ, ಮಂಡ್ಯ, ದಾವಣಗೆರೆ, ಚಿತ್ರದುರ್ಗ ಹಾಗೂ ಹಾವೇರಿ ಜಿಲ್ಲೆಗಳಲ್ಲಿ ಕೂಡ ರೈತರ ನೋಂದಣಿ ಸಾಧ್ಯವಾಗಲಿಲ್ಲ.

'ಪೋರ್ಟಲ್‌ನಲ್ಲಿ ನೋಂದಣಿ ಮಾಡಲು ಸಾಧ್ಯವಾಗದೇ ಇರುವುದರಿಂದ ರೈತರ ಮಾಹಿತಿಯನ್ನು ಲಿಖಿತವಾಗಿ ದಾಖಲಿಸಿಕೊಳ್ಳಲಾಯಿತು' ಎಂದು ಅಧಿಕಾರಿಗಳು ದಾವಣಗೆರೆಯಲ್ಲಿ ಹೇಳಿದ್ದಾರೆ.

ಎರಡನೇ ಹಂತದ ಖರೀದಿಯು ಏ. 28ಕ್ಕೆ ಕೊನೆಗೊಂಡಿದೆ.

9ರಂದು ನೀರು ಪೂರೈಕೆ ವ್ಯತ್ಯಯ

ಬೆಂಗಳೂರು: ಜಲಮಂಡಳಿಯು ವಿವಿಧ ಕಾಮಗಾರಿಗಳನ್ನು ಕೈಗೆತ್ತಿಕೊಂಡಿರುವುದರಿಂದ ಮೇ 5ರಂದು ಮುಂಜಾನೆ 3 ಗಂಟೆಯಿಂದ ರಾತ್ರಿ 9 ಗಂಟೆಯವರೆಗೆ ನಗರದ ವಿವಿಧೆಡೆ ನೀರು ಪೂರೈಕೆಯಲ್ಲಿ ವ್ಯತ್ಯಯ ಆಗಲಿದೆ ಎಂದು ಪ್ರಕಟಣೆ ತಿಳಿಸಿದೆ.

ವ್ಯತ್ಯಯವಾಗುವ ಸ್ಥಳಗಳು: ಗಾಂಧಿನಗರ, ಕುಮಾರ ಪಾರ್ಕ್ ಪೂರ್ವ, ವಸಂತನಗರ, ಹೈಗ್ರೌಂಡ್ಸ್, ಸಂಪಂಗಿರಾಮ ನಗರ, ಟೌನ್ ಹಾಲ್, ಲಾಲ್‌ಬಾಗ್ ರಸ್ತೆ, ಧರ್ಮರಾಯ ಸ್ವಾಮಿ ದೇವಸ್ಥಾನದ ವಾರ್ಡ್, ಕಬ್ಬನ್‌ಪೇಟೆ, ಕುಂಬಾರ ಪೇಟೆ, ಕಾಟನ್ ಪೇಟೆ, ಚಿಕ್ಕಪೇಟೆ, ನಗರ್ತಪೇಟೆ, ಸೇಂಟ್ ಜಾನ್ಸ್ ರಸ್ತೆ, ಕಾಮರಾಜ್ ರಸ್ತೆ, ಇನ್‌ಫೆಂಟ್ರಿ ರಸ್ತೆ, ಶಿವಾಜಿನಗರ, ಲ್ಯಾವೆಲ್ಲೆ ರಸ್ತೆ, ಫ್ರೇಜರ್ ಟೌನ್, ಬ್ಯಾಡರಹಳ್ಳಿ, ಕಾಕ್ಸ್ ಟೌನ್, ಹಡ್ಸನ್ ರಸ್ತೆ, ಡಿ.ಜೆ. ಹಳ್ಳಿ, ಕೆ.ಜಿ.ಹಳ್ಳಿ, ನಾಗವಾರ, ಲಿಂಗರಾಜಪುರ, ಚಾಮರಾಜಪೇಟೆ, ಗವಿಪುರ, ಹನುಮಂತ ನಗರ, ಗಿರಿನಗರ, ಬ್ಯಾಟರಾಯನಪುರ, ಆವಲಹಳ್ಳಿ, ಮಲ್ಲೇಶ್ವರ, ಕುಮಾರಪಾರ್ಕ್, ಜಯಮಹಲ್, ಶೇಷಾದ್ರಿಪುರ, ಜೆ.ಸಿ.ನಗರ, ಸದಾಶಿವನಗರ, ಪ್ಯಾಲೇಸ್ ಗುಟ್ಟಹಳ್ಳಿ, ಸಂಜಯ ನಗರ, ಡಾಲರ್ಸ್ ಕಾಲೊನಿ, ಭೂಪಸಂದ್ರ, ಕಾವಲ್ ಬೈರಸಂದ್ರ, ಗಂಗಾನಗರ, ಆರ್‌.ಟಿ.ನಗರ, ಅಶೋಕ ನಗರ, ಎಂ.ಜಿ.ರಸ್ತೆ, ಬ್ರಿಗೇಡ್ ರಸ್ತೆ, ಹಲಸೂರು ಹಾಗೂ ಸುತ್ತಮುತ್ತಲಿನ ಪ್ರದೇಶಗಳು.

ಎಸಿಬಿ ದಾಳಿ; ₹ 3,000 ಲಂಚ ಪಡೆಯುತ್ತಿದ್ದ ಎಸಿ ಬಂಧನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಎಲೆಕ್ಟ್ರಿಕಲ್ ಮತ್ತು ಹಾರ್ಡ್‌ವೇರ್ ಉದ್ಯಮಿಯೊಬ್ಬರಿಗೆ ಸರಕು ಹಾಗೂ ಸೇವಾ ತೆರಿಗೆ (ಜಿಎಸ್‌ಟಿ) ನೋಂದಣಿ ಪ್ರಮಾಣಪತ್ರ ನೀಡಲು ₹ 3,000 ಲಂಚ ಪಡೆಯುತ್ತಿದ್ದ ವಾಣಿಜ್ಯ ತೆರಿಗೆ ಇಲಾಖೆ ಇಂದಿರಾನಗರ ಕಚೇರಿಯ ಸಹಾಯಕ ಆಯುಕ್ತೆ ಪ್ರಿಯಾಂಕಾ ಜಿ.ಸಿ. ಅವರನ್ನು ಭ್ರಷ್ಟಾಚಾರ ನಿಗ್ರಹ ದಳ (ಎಸಿಬಿ) ಶುಕ್ರವಾರ ಬಂಧಿಸಿದೆ.

ಮಂಜುನಾಥನಗರದ ಕಲ್ಕೆರೆ ನಿವಾಸಿಯೊಬ್ಬರು ಜಿಎಸ್‌ಟಿ ಪ್ರಮಾಣಪತ್ರ ಕೋರಿ ಅರ್ಜಿ ಸಲ್ಲಿಸಿದ್ದರು. ದಾಖಲೆಯಲ್ಲಿ ಅಂಚೆ ಪೆಟ್ಟಿಗೆ ಸಂಖ್ಯೆಯನ್ನು ಅರ್ಜಿಯಲ್ಲಿ ತಪ್ಪಾಗಿ ನಮೂದಿಸಿದ್ದರು. ಇದರಿಂದಾಗಿ ಪ್ರಮಾಣಪತ್ರ ವಿತರಿಸಿರಲಿಲ್ಲ. ಅರ್ಜಿಯಲ್ಲಿನ ತಪ್ಪು ಸರಿಪಡಿಸಿ, ಪ್ರಮಾಣಪತ್ರ ನೀಡಲು ₹ 10,000 ಲಂಚ ನೀಡುವಂತೆ ಆರೋಪಿ ಬೇಡಿಕೆ ಇಟ್ಟಿದ್ದರು.

ಚೌಕಾಸಿ ಮಾಡಿದಾಗ ₹ 3,000 ನೀಡಿದರೆ ಪ್ರಮಾಣಪತ್ರ ಕೊಡುವುದಾಗಿ ತಿಳಿಸಿದ್ದರು.

ಈ ಕುರಿತು ಅರ್ಜಿದಾರರು ಎಸಿಬಿ ಬೆಂಗಳೂರು ನಗರ ಘಟಕಕ್ಕೆ ದೂರು ಸಲ್ಲಿಸಿದ್ದರು. ಶುಕ್ರವಾರ ಅರ್ಜಿದಾರರಿಂದ ಲಂಚ ಪಡೆಯುತ್ತಿದ್ದಾಗ ದಾಳಿಮಾಡಿದ ಎಸಿಬಿ ಅಧಿಕಾರಿಗಳು, ಪ್ರಿಯಾಂಕಾ ಅವರನ್ನು ಬಂಧಿಸಿದ್ದಾರೆ.

ಪ್ರಿಯಾಂಕಾ ಜಿ.ಸಿ.

'ಕನ್ನಡ ಶಾಲೆಗಳ ಸ್ಥಿತಿ ಶೋಚನೀಯ'

ಬೆಂಗಳೂರು: 'ನಾಡಿನಲ್ಲಿ ಕನ್ನಡ ಶಾಲೆಗಳ ಸ್ಥಿತಿ ಶೋಚನೀಯವಾಗಿದೆ. ಸರ್ಕಾರ ಈ ವಿಷಯವನ್ನು ಗಂಭೀರವಾಗಿ ಪರಿಗಣಿಸಿಲ್ಲ' ಎಂದು ಕವಿ ಪ್ರೊ. ದೊಡ್ಡರಂಗೇಗೌಡ ಅವರು ಕಳವಳ ವ್ಯಕ್ತಪಡಿಸಿದರು.

ಶುಕ್ರವಾರ ನಡೆದ ಕನ್ನಡ ಸಾಹಿತ್ಯ ಪರಿಷತ್ತಿನ 108ನೇ ಸಂಸ್ಥಾಪನಾ ದಿನಾಚರಣೆ ಹಾಗೂ ಶತಮಾನೋತ್ಸವ ದತ್ತಿ ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ಮಾತನಾಡಿದರು.

'ಕನ್ನಡ– ಕನ್ನಡಿಗ –ಕರ್ನಾಟಕ' ಎನ್ನುವ ಮೂರು ಸೂತ್ರಗಳ ಮೂಲಕ ಕನ್ನಡ ಸಾಹಿತ್ಯ ಪರಿಷತ್ ಅನ್ನು ಜನಸಾಮಾನ್ಯರ ಸಂಸ್ಥೆಯನ್ನಾಗಿ ರೂಪಿಸಲಾಗುವುದು ಎಂದು ಕಸಾಪ ಅಧ್ಯಕ್ಷ ಮಹೇಶ್ ಜೋಶಿ ತಿಳಿಸಿದರು.

ಡಾ. ಆರ್. ನಲ್ಲೂರು ಪ್ರಸಾದ್ ಅವರಿಗೆ ಶತಮಾನೋತ್ಸವ ದತ್ತಿ ಪ್ರಶಸ್ತಿ ಪ್ರದಾನ ಮಾಡಿದ ಹರಿಕೃಷ್ಣ ಪುನರೂರು ಅವರು, 'ಕೇರಳದ ಕನ್ನಡ ಶಾಲೆಗಳಲ್ಲಿ ಮಲಯಾಳಿ ಶಿಕ್ಷಕರನ್ನು ನೇಮಿಸಲಾಗಿದೆ. ಇದೇ ರೀತಿಯ ಪರಿಸ್ಥಿತಿ ಎಲ್ಲ ಗಡಿಭಾಗಗಳಲ್ಲಿದೆ' ಎಂದು ಕಳವಳ ವ್ಯಕ್ತಪಡಿಸಿದರು.

ವಿ. ಗೌರಮ್ಮ ಗಂಗಾಧರಯ್ಯ ಸಿಬ್ಬಂದಿ ಸೇವಾ ದತ್ತಿ ಪ್ರಶಸ್ತಿಯನ್ನು ಪರಿಷತ್ತಿನ ನಿವೃತ್ತ ವ್ಯವಸ್ಥಾಪಕ ಜಗನ್ನಾಥ ಹೇಮಾದ್ರಿ, ನಿವೃತ್ತ ಕಾವಲುಗಾರ ಮಂಜಯ್ಯ ಮತ್ತು ಬಿ.ಎಂ. ಶ್ರೀ ಅಚ್ಚುಕೂಟದ ಮುದ್ರಣ ಸಹಾಯಕ ರಾಜು ಅವರಿಗೆ ಪ್ರದಾನ ಮಾಡಲಾಯಿತು. ಕನ್ನಡ ಪರಿಚಾರಕ ಪ್ರಶಸ್ತಿಯನ್ನು ಮಂ. ಅ. ವೆಂಕಟೇಶ್ ಹಾಗೂ ಶೋಭಾ ಸುನೀಲ ಗುಂಡಮಿ ಅವರಿಗೆ ಪ್ರದಾನ ಮಾಡಲಾಯಿತು.

ನಗರದಲ್ಲಿ ಶುಕ್ರವಾರ ನಡೆದ ಕನ್ನಡ ಸಾಹಿತ್ಯ ಪರಿಷತ್ತಿನ ಸಂಸ್ಥಾಪನಾ ದಿನಾಚರಣೆ ಕಾರ್ಯಕ್ರಮದಲ್ಲಿ ಗೌರವ ಕಾರ್ಯದರ್ಶಿ ನೇ.ಭ. ರಾಮಲಿಂಗ ಶೆಟ್ಟಿ, ಕವಿ ದೊಡ್ಡರಂಗೇಗೌಡ, ಮಾಜಿ ಅಧ್ಯಕ್ಷರಾದ ಡಾ.ಆರ್. ನಲ್ಲೂರು ಪ್ರಸಾದ್ ಮತ್ತು ಹರಿಕೃಷ್ಣ ಪುನರೂರು ಹಾಗೂ ಕಸಾಪ ಅಧ್ಯಕ್ಷ ಮಹೇಶ್ ಜೋಷಿ ಅವರು ಸಂಸ್ಥಾಪಕರ ಭಾವಚಿತ್ರಗಳಿಗೆ ಪುಷ್ಪ ನಮನ ಸಲ್ಲಿಸಿದರು

ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ, ದೊಡ್ಡಬಳ್ಳಾಪುರ
ಟಿ.ಬಿ. ಸರ್ಕಲ್ ಹತ್ತಿರ, ತುಮಕೂರು ರಸ್ತೆ, ದೊಡ್ಡಬಳ್ಳಾಪುರ – 561 203.

ಸಂಖ್ಯೆ : ಕೃಉಮಾಸ/ದೊ/41/ಭದ್ರತಾ ಸಿಬ್ಬಂದಿ/2022–23 ದಿನಾಂಕ : 05–05–2022

ಇ-ಪ್ರೊಕ್ಯೂರ್‌ಮೆಂಟ್ ಟೆಂಡರ್ ಪ್ರಕಟಣೆ

2022–23 ನೇ ಸಾಲಿಗೆ ದೊಡ್ಡಬಳ್ಳಾಪುರ ಕೃಷಿ ಉತ್ಪನ್ನ ಮಾರುಕಟ್ಟೆ ಪ್ರಾಂಗಣದಲ್ಲಿರುವ ಚರಾಸ್ತಿ ಮತ್ತು ಸ್ಥಿರಾಸ್ತಿಗಳ ಸಂರಕ್ಷಣೆ, ಸಂಚಾರ, ನಿಯಂತ್ರಣ ಹಾಗೂ ಇನ್ನಿತರೆ ಸಮಿತಿಯ ಕಾರ್ಯಗಳಿಗೆ 04 ಜನ ಅರ್ಹ ಹಾಗೂ ಅನುಭವ ಹೊಂದಿದ ಮತ್ತು ಕಾರ್ಮಿಕ ಇಲಾಖೆಯಲ್ಲಿ ನೋಂದಾಯಿಸಲ್ಪಟ್ಟ ಏಜೆನ್ಸಿಯಿಂದ ಕನಿಷ್ಟ ವೇತನ ಕಾಯ್ದೆ ಅನ್ವಯ ಈ ಕೆಳಕಂಡಂತೆ ನಮೂದಿಸಿದ ಸೇವೆಗಾಗಿ ಇ–ಪ್ರೊಕ್ಯೂರ್‌ಮೆಂಟ್ ಮುಖಾಂತರ ಅರ್ಹ ಸಂಸ್ಥೆ / ಏಜೆನ್ಸಿಯವರು ವೆಬ್‌ಸೈಟ್ http://eproc.karnatak.gov.in ನಲ್ಲಿ ಪ್ರಕಟಿಸುವಂತೆ ಹಾಗೂ ಇನ್ನುಳಿದ ವಿವರಗಳನನ್ನು ಖಚಿತಪಡಿಸಿಕೊಂಡು ಭಾಗವಹಿಸಬಹುದಾಗಿದೆ.

ಭದ್ರತಾ ಸಿಬ್ಬಂದಿಗಳ ವಿವರ : (1) ಕಂಪ್ಯೂಟರ್ ಆಪರೇಟರ್ – 01, (2) ಭದ್ರತಾ ವಾಹನ ಚಾಲಕರು – 01, (3) ಭದ್ರತಾ ಗಾರ್ಡ್‌ಗಳು – 02, ಇ.ಎಂ.ಡಿ. ಮೊತ್ತ (ರೂ. ಗಳಲ್ಲಿ) : 50,000/–.

1) ಇ–ಟೆಂಡರ್ ಫಾರಂನ್ನು ವೆಬ್‌ಸೈಟ್‌ನಲ್ಲಿಯೇ ತುಂಬಿ ಸಲ್ಲಿಸಲು ಕೊನೆಯ ದಿನಾಂಕ : 06–06–2022 ರ ಸಾಯಂಕಾಲ 5.00 ಗಂಟೆಯವರೆಗೆ. 2) ತಾಂತ್ರಿಕ ಹಾಗೂ ಆರ್ಥಿಕ ಬಿಡ್ ತೆರೆಯುವ ದಿನಾಂಕ : 08–06–2022 ರ ಬೆಳಿಗ್ಗೆ 11.00 ಗಂಟೆಗೆ. 3) ಷರತ್ತು ಮತ್ತು ನಿಬಂಧನೆಗಳನ್ನು ಕಛೇರಿ ವೇಳೆಯಲ್ಲಿ ಪಡೆಯಬಹುದು ಹಾಗೂ http://eproc.karnatak.gov.in ನಲ್ಲಿ ಪಡೆಯಬಹುದು.

ಸಹಿ/– ಕಾರ್ಯದರ್ಶಿ, ಕೃಉಮಾಸ, ದೊಡ್ಡಬಳ್ಳಾಪುರ.
ಸಹಿ/– ಆಡಳಿತಾಧಿಕಾರಿಗಳು. ಕೃಉಮಾಸ, ದೊಡ್ಡಬಳ್ಳಾಪುರ.

ವಾಸಾಸಂಇ/ಉನಿಕ/ಬೆಂಗ್ರಾಜಿ/ಮಣಿಪಾಲ್/395/2022–23

ಕೋವಿಡ್-19. ಆತಂಕ ಬೇಡ; ಮುನ್ನೆಚ್ಚರಿಕೆ ಇರಲಿ.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ನಗರದಲ್ಲಿ ಇಂದು

ನಾ.ಸು.ಹರ್ಡೀಕರ್ ಜನ್ಮದಿನ: ಆಯೋಜನೆ ಮತ್ತು ಸ್ಥಳ–ಭಾರತ ಸೇವಾದಳ, ಕುಮಾರಕೃಪ ರಸ್ತೆ, ಬೆಳಿಗ್ಗೆ 9

'ಕನ್ನಡದಲ್ಲಿ ವಿಜ್ಞಾನ–ತಂತ್ರಜ್ಞಾನ ಶಿಕ್ಷಣ' ವಿಚಾರ ಸಂಕಿರಣ: ಆಯೋಜನೆ–ಇಜ್ಞಾನ ಟ್ರಸ್ಟ್, ಸ್ಥಳ–ಸುರಾನ ಕಾಲೇಜು, ಸೌತ್‌ಎಂಡ್ ವೃತ್ತ, ಬೆಳಿಗ್ಗೆ 10

ಅಪ್ಪು ಅಮರ ಪುಸ್ತಕ ಬಿಡುಗಡೆ: ರಾಮಕೃಷ್ಣ, ಅಧ್ಯಕ್ಷತೆ–ಎಸ್‌.ಎ.ಗೋವಿಂದರಾಜ್, ಆಯೋಜನೆ–ಕಾವ್ಯಸ್ಪಂದನ ಪ್ರಕಾಶನ, ಸ್ಥಳ–ನಯನ ಸಭಾಂಗಣ, ಬೆಳಿಗ್ಗೆ 10

ಬಸವ ಜಯಂತಿ ಹಾಗೂ 'ಬಸವಶ್ರೀ', 'ವಚನ ಸಾಹಿತ್ಯಶ್ರೀ' ಪ್ರಶಸ್ತಿ ಪ್ರದಾನ: ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹಾಗೂ ಕೇಂದ್ರ ಸಚಿವ ಪ್ರಲ್ಹಾದ ಜೋಶಿ, ಆಯೋಜನೆ–ಬಸವ ವೇದಿಕೆ, ಸ್ಥಳ–ರವೀಂದ್ರ ಕಲಾಕ್ಷೇತ್ರ, ಬೆಳಿಗ್ಗೆ 10.30

ಭಾರತೀಯ ಉತ್ಪಾದನಾ ಪ್ರದರ್ಶನದ ಕರ್ಟನ್ ರೈಸರ್: ಅತಿಥಿಗಳು–ನಾರಾಯಣ್ ರಾಣೆ, ಮುರುಗೇಶ್ ನಿರಾಣಿ, ಎಂಟಿಬಿ ನಾಗರಾಜ್, ಸ್ಥಳ–ತಾಜ್ ಯಶವಂತಪುರ, ಬೆಳಿಗ್ಗೆ 10.30

ವಿಶ್ವ ನೃತ್ಯ ದಿನ: ಆಯೋಜನೆ–ಬೆಂಗಳೂರು ವಿಶ್ವವಿದ್ಯಾಲಯದ ಪ್ರದರ್ಶನ ಕಲಾ ವಿಭಾಗ, ಸ್ಥಳ–ವೆಂಕಟಗಿರಿಗೌಡ ಸಭಾಂಗಣ, ವಿಶ್ವವಿದ್ಯಾಲಯದ ಆವರಣ, ಜ್ಞಾನಭಾರತಿ, ಬೆಳಿಗ್ಗೆ 10.30

'ಅನಿರ್ಬನ್ ಬೋರಾ ಜಗತ್ತು' ವ್ಯಂಗ್ಯಚಿತ್ರ ಪ್ರದರ್ಶನ: ಆಯೋಜನೆ–ಭಾರತೀಯ ವ್ಯಂಗ್ಯಚಿತ್ರಕಾರರ ಸಂಸ್ಥೆ, ಸ್ಥಳ–ಭಾರತೀಯ ವ್ಯಂಗ್ಯಚಿತ್ರ ಗ್ಯಾಲರಿ, ಟ್ರಿನಿಟಿ ವೃತ್ತ, ಬೆಳಿಗ್ಗೆ 11 (ಮೇ 28ರವರೆಗೆ ಪ್ರದರ್ಶನ ಇರಲಿದೆ)

ವಚನ ನಮನ: ಗಾಯನ–ಮೃತ್ಯುಂಜಯ ದೊಡ್ಡವಾಡ, ಶ್ವೇತಪ್ರಭು, ಭೂಮಿಕ ಮಧುಸೂದನ್, ಆಯೋಜನೆ ಮತ್ತು ಸ್ಥಳ–ಭಾರತೀಯ ವಿದ್ಯಾಭವನ, ರೇಸ್‌ಕೋರ್ಸ್ ರಸ್ತೆ, ಬೆಳಿಗ್ಗೆ 11

ಸು.ರುದ್ರಮೂರ್ತಿ ಶಾಸ್ತ್ರಿ ಅವರ 'ವಚನ ಕುಮಾರವ್ಯಾಸ' ಪುಸ್ತಕ ಬಿಡುಗಡೆ: ಹಂ.ಪ.ನಾಗರಾಜಯ್ಯ, ಆಯೋಜನೆ–ತನು ಮನ ಪ್ರಕಾಶನ, ಕರ್ನಾಟಕ ಕನ್ನಡ ಬರಹಗಾರರ ಮತ್ತು ಪ್ರಕಾಶಕರ ಸಂಘ, ಸ್ಥಳ–ಬಿಎಂಶ್ರೀ ಪ್ರತಿಷ್ಠಾನ, ಎನ್‌.ಆರ್. ಕಾಲೊನಿ, ಬೆಳಿಗ್ಗೆ 11

ಮಕ್ಕಳ ಕವಿಗೋಷ್ಠಿ: ಆಯೋಜನೆ–ರಂಗೋತ್ರಿ, ಸ್ಥಳ–ನ್ಯೂ ಹಾರ್ಡ್‌ವಿಕ್ ಇಂಡಿಯನ್ ಸ್ಕೂಲ್, ಮಾಗಡಿ ರಸ್ತೆ, ಬೆಳಿಗ್ಗೆ 11

ಸಂಚಾರಿ ಪಶು ಚಿಕಿತ್ಸಾ ಘಟಕಗಳ ಲೋಕಾರ್ಪಣೆ: ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ಆಯೋಜನೆ–ಪಶುಪಾಲನಾ ಮತ್ತು ಪಶುವೈದ್ಯಕೀಯ ಸೇವಾ ಇಲಾಖೆ, ಸ್ಥಳ–ವಿಧಾನಸೌಧದ ಮುಖ್ಯದ್ವಾರ, ಮಧ್ಯಾಹ್ನ 12.15

ಪಶು ಇಲಾಖೆಯ ಕಿರುಚಿತ್ರ ಪ್ರದರ್ಶನ ಮತ್ತು ಫಲಾನುಭವಿಗಳಿಗೆ ಸವಲತ್ತು ವಿತರಣೆ: ಸ್ಥಳ–ಬ್ಯಾಂಕ್ವೆಟ್ ಹಾಲ್, ವಿಧಾನಸೌಧ, ಮಧ್ಯಾಹ್ನ 12.30

'ಬರ್ಗಂಡಿ ವಿಂಟರ್ಸ್–ಇನ್ ಯುರೋಪ್' ಪುಸ್ತಕ ಬಿಡುಗಡೆ: ಅತಿಥಿಗಳು–ರಾಜ್‌ದೀಪ್ ಸರ್‌ದೇಸಾಯಿ, ಪ್ರಣಯ್ ಪಾಟೀಲ, ಪೂಜಾ ಬೇಡಿ, ಸ್ಥಳ–ಹಿಗ್ಗಿನ್‌ಬೋತಮ್ಸ್, ಎಂ.ಜಿ.ರಸ್ತೆ, ಸಂಜೆ 4.30

ಡಿಪ್ಲೊಮಾ ವಿದ್ಯಾರ್ಥಿಗಳಿಗೆ ಪದವಿ ಪ್ರದಾನ: ತೇಜಸ್ವಿನಿ ಅನಂತಕುಮಾರ್, ಆಯೋಜನೆ–ಉದಯಭಾನು ಕಲಾಸಂಘ, ಸ್ಥಳ–ಉದಯಭಾನು ಸಾಂಸ್ಕೃತಿಕ ಭವನ, ಕೆಂಪೇಗೌಡ ನಗರ, ಸಂಜೆ 4.30

ಬೇಸಿಗೆ ಶಿಬಿರದ ಸಮಾರೋಪ: ಆಯೋಜನೆ–ರಂಗಾಭರಣ ಕಲಾ ಕೇಂದ್ರ, ಸ್ಥಳ–ಚಂದ್ರಪ್ರಿಯ ರಂಗಮಂದಿರ, ಸಂಜಯನಗರ, ಸಂಜೆ 5

ಎಚ್‌.ಸಿ.ಕೃಷ್ಣ ಅವರಿಗೆ ಅಭಿನಂದನೆ: ಆಯೋಜನೆ–ಗೆಳೆಯರ ಕೂಟ, ಸ್ಥಳ–ಕನ್ನಡ ಸಾಹಿತ್ಯ ಪರಿಷತ್ತು, ಚಾಮರಾಜಪೇಟೆ, ಸಂಜೆ 5.30

ಏಕಲ್ ಸತ್ಕಾರ್ ಮತ್ತು ಏಕಲ್ ಶ್ರೀಹರಿ ರಥ ಉದ್ಘಾಟನೆ: ಆಯೋಜನೆ–ಫ್ರೆಂಡ್ಸ್ ಆಫ್ ಟ್ರೈಬಲ್ಸ್ ಸೊಸೈಟಿ, ಸ್ಥಳ–ನಿಮ್ಹಾನ್ಸ್ ಸಮಾವೇಶ ಕೇಂದ್ರ, ಹೊಸೂರು ಮುಖ್ಯರಸ್ತೆ, ಸಂಜೆ 6ರಿಂದ

'ವಿದ್ಯಾರ್ಥಿ ಭವನ' ನಾಟಕ ಪ್ರದರ್ಶನ: ರಚನೆ–ರಾಜೇಂದ್ರ ಕಾರಂತ್, ನಿರ್ದೇಶನ–ಅರ್ಜುನ್ ಕಬ್ಬಿಣ, ಆಯೋಜನೆ–ಬೆಂಗಳೂರು ಥಿಯೇಟರ್ ಫೌಂಡೇಷನ್, ಸ್ಥಳ–ಚೌಡಯ್ಯ ಸ್ಮಾರಕ ಭವನ, ಮಲ್ಲೇಶ್ವರ, ಸಂಜೆ 6

ಬಸವ ಜಯಂತಿ: ಅತಿಥಿಗಳು–ಸಿದ್ದರಾಮಯ್ಯ, ಎಂ.ಬಿ.ಪಾಟೀಲ, ಶಿವಾನಂದ ಜಾಮದಾರ್, ಗುರುರಾಜ ಹೊಸಕೋಟೆ, ರಹಮತ್ ತರೀಕೆರೆ, ಎಸ್‌.ಜಿ.ಸಿದ್ಧರಾಮಯ್ಯ, ಆಯೋಜನೆ–ಜಾಗತಿಕ ಲಿಂಗಾಯತ ಮಹಾಸಭಾ–ಸಾಗರೋತ್ತರ ಘಟಕ, ಸಂಜೆ 7 (ಆನ್‌ಲೈನ್ ಕಾರ್ಯಕ್ರಮ)

ವೈಮಾನಿಕ ಅಭಿವೃದ್ಧಿ ಸಂಸ್ಥೆ ರಕ್ಷಣಾ ಸಂಶೋಧನೆ ಅಭಿವೃದ್ಧಿ ಸಂಸ್ಥೆ
ರಕ್ಷಣಾ ಸಚಿವಾಲಯ, ಭಾರತ ಸರ್ಕಾರ
ನ್ಯೂ ತಿಪ್ಪಸಂದ್ರ ಅಂಚೆ, ಬೆಂಗಳೂರು 560 075
ದೂರವಾಣಿ ಸಂ. 080–25057036/7095

ಎಡಿಇ, ಬೆಂಗಳೂರು ಇಲ್ಲಿಗೆ ಜೂನಿಯರ್ ರಿಸರ್ಚ್ ಫೆಲೊ ಎಂಬುದಾಗಿ ರಿಸರ್ಚ್ ಫೆಲೊಗಳ ಆಯ್ಕೆ

ಎಡಿಇ, ಬೆಂಗಳೂರು ಇಲ್ಲಿನ ಕೆಳಕಂಡ ಖಾಲಿ ಹುದ್ದೆಗಳಿಗಾಗಿ, ಕೆಳಕಂಡ ದಿನಾಂಕಗಳಂದು ಜೂನಿಯರ್ ರಿಸರ್ಚ್ ಫೆಲೊ (ಜೆಆರ್‌ಎಫ್) ಎಂಬುದಾಗಿ ರಿಸರ್ಚ್ ಫೆಲೊ ಪ್ರದಾನ ಮಾಡಲು ಆಯ್ಕೆ ಪ್ರಕ್ರಿಯೆ ಹಮ್ಮಿಕೊಳ್ಳಲಾಗಿದೆ.

ಕ್ರ. ಸಂ.	ಫೆಲೋಶಿಪ್ ಹೆಸರು	ನಿಕಾಯ	ಅಗತ್ಯ ವಿದ್ಯಾರ್ಹತೆ	ಖಾಲಿ ಹುದ್ದೆಗಳ ಸಂಖ್ಯೆ	ಲಿಖಿತ ಪರೀಕ್ಷೆ ಮತ್ತು ಸಂದರ್ಶನ ದಿನಾಂಕ
1	ಜೂನಿಯರ್ ರಿಸರ್ಚ್ ಫೆಲೊ	ಇಲೆಕ್ಟ್ರಾನಿಕ್ಸ್ & ಕಮ್ಯುನಿಕೇಶನ್ ಇಂಜಿನಿಯರಿಂಗ್	ಬಿ.ಇ/ಬಿ.ಟೆಕ್ ಪ್ರಥಮ ದರ್ಜೆಯಲ್ಲಿ ಉತ್ತೀರ್ಣ ಮತ್ತು ಅಧಿಕೃತ ಗೇಟ್ ಸ್ಕೋರ್ (ಅಥವಾ) ಬಿ.ಇ/ಬಿ.ಟೆಕ್ ಮತ್ತು ಎಂ.ಇ/ಎಂ.ಟೆಕ್, ಎರಡೂ ಹಂತಗಳಲ್ಲಿ ಪ್ರಥಮ ದರ್ಜೆಯಲ್ಲಿ ಉತ್ತೀರ್ಣ	04 (ನಾಲ್ಕು)	14 ಜೂನ್ 2022* (ಮಂಗಳವಾರ)
2		ಏರೋನಾಟಿಕಲ್ ಇಂಜಿನಿಯರಿಂಗ್		02 (ಎರಡು)	
3		ಮೆಕ್ಯಾನಿಕಲ್ ಇಂಜಿನಿಯರಿಂಗ್		02 (ಎರಡು)	

ಸೂಚನೆ:*ಸಂದರ್ಶನಕ್ಕೆ ಆಯ್ಕೆಗೊಳ್ಳುವ ಅಭ್ಯರ್ಥಿಗಳ ಸಂಖ್ಯೆ ಅಧಿಕವಾದಲ್ಲಿ, ಮಾರನೇಯ ದಿನವೂ ಸಂದರ್ಶನ (15 ಜೂನ್ 2022, ಬುಧವಾರ) ಮುಂದುವರಿಯುತ್ತದೆ.

ಫೆಲೋಶಿಪ್ ಸಂಭಾವನೆ:
ಜೆಆರ್‌ಎಫ್: ಮಾಸಿಕ ರೂ.31,000/– ಜೊತೆಗೆ ಅನ್ವಯಿಕ ಹೆಚ್‌ಆರ್‌ಎ.
ಹೆಚ್ಚಿನ ವಿವರಗಳಿಗಾಗಿ ದಯವಿಟ್ಟು ನಮ್ಮ ವೆಬ್‌ಸೈಟ್‌ಗೆ ಭೇಟಿ ಕೊಡಿ https://www.rac.gov.in

davp 10301/11/0019/2223 ನಿರ್ದೇಶಕರು

ಗೋಮಾತಾ ಸಹಕಾರ ಸಂಘ: ಸಿಎಂ ಸೂಚನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಗೋ ಉತ್ಪನ್ನಗಳಿಗೆ ಮಾರುಕಟ್ಟೆ ಒದಗಿಸುವುದಕ್ಕಾಗಿ ರಾಜ್ಯ ಮಟ್ಟದಲ್ಲಿ ಪ್ರಾಯೋಗಿಕವಾಗಿ ಗೋಮಾತಾ ಸಹಕಾರ ಸಂಘ ಸ್ಥಾಪಿಸಲು ಪ್ರಸ್ತಾವ ಸಿದ್ಧಪಡಿಸುವಂತೆ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಪಶುಸಂಗೋಪನಾ ಇಲಾಖೆ ಅಧಿಕಾರಿಗಳಿಗೆ ಸೂಚಿಸಿದರು.

ಬಜೆಟ್ ಅನುಷ್ಠಾನ ಕುರಿತು ಶುಕ್ರವಾರ ವಿವಿಧ ಇಲಾಖೆಯ ಅಧಿಕಾರಿಗಳ ಜತೆ ಸರಣಿ ಸಭೆ ನಡೆಸಿದ ಅವರು, ಪಶುಸಂಗೋಪನಾ ಇಲಾಖೆಗೆ ಸಂಬಂಧಿಸಿದ ಸಭೆಯಲ್ಲಿ ಈ ಸೂಚನೆ ನೀಡಿದರು. 50 ಪಶು ಚಿಕಿತ್ಸಾಲಯಗಳನ್ನು ಬಾಡಿಗೆ ಆಧಾರದಲ್ಲಿ ಸ್ಥಾಪಿಸುವುದೂ ಸೇರಿದಂತೆ ಬಜೆಟ್‌ನ ಘೋಷಣೆಗಳನ್ನು ತ್ವರಿತವಾಗಿ ಅನುಷ್ಠಾನಕ್ಕೆ ತರುವಂತೆಯೂ ಅಧಿಕಾರಿಗಳಿಗೆ ನಿರ್ದೇಶನ ನೀಡಿದರು.

ಅಮೃತ ವಸತಿ ಯೋಜನೆಯೂ ಸೇರಿದಂತೆ ವಿವಿಧ ವಸತಿ ಯೋಜನೆಗಳ ಅಡಿಯಲ್ಲಿ 6 ಲಕ್ಷ ಮನೆಗಳ ನಿರ್ಮಾಣವನ್ನು ಡಿಸೆಂಬರ್ ಅಂತ್ಯದೊಳಗೆ ಪೂರ್ಣಗೊಳಿಸಬೇಕು. ಎಲ್ಲ ವಸತಿ ಯೋಜನೆಗಳ ಫಲಾನುಭವಿಗಳ ಆಯ್ಕೆಯನ್ನು ಮೂರು ತಿಂಗಳೊಳಗೆ ಪೂರ್ಣಗೊಳಿಸಬೇಕು ಎಂಬ ನಿರ್ದೇಶನವನ್ನು ವಸತಿ ಇಲಾಖೆ ಅಧಿಕಾರಿಗಳಿಗೆ ನೀಡಿದರು.

ರಾಜ್ಯದಲ್ಲಿ ಅರಣ್ಯ ನಾಶದಿಂದ ಉಂಟಾಗುತ್ತಿರುವ ಪರಿಣಾಮಗಳ ಕುರಿತು ಭಾರತೀಯ ವಿಜ್ಞಾನ ಸಂಸ್ಥೆ ತಜ್ಞರ ಮೂಲಕ ಅಧ್ಯಯನ ನಡೆಸಬೇಕು. ಪ್ಲಾಸ್ಟಿಕ್ ಬಳಕೆ ನಿಯಂತ್ರಣಕ್ಕೆ ವಿಶ್ವ ಬ್ಯಾಂಕ್ ರೂಪಿಸಿರುವ ಯೋಜನೆಗೆ ಪೂರಕವಾಗಿ ರಾಜ್ಯದಲ್ಲೂ ಕಾರ್ಯಕ್ರಮ ರೂಪಿಸಬೇಕು ಎಂದು ಅರಣ್ಯ ಇಲಾಖೆ ಅಧಿಕಾರಿಗಳಿಗೆ ಸೂಚನೆ ನೀಡಿದರು.

ಕಂದಾಯ ಇಲಾಖೆ ಅಧಿಕಾರಿಗಳ ಸಭೆ ನಡೆಸಿ, 'ಪ್ರತಿ ಕಂದಾಯ ವಿಭಾಗದಲ್ಲೂ ತಲಾ 100 ಗ್ರಾಮಗಳಲ್ಲಿ ಹೊಸ ಪಹಣಿಗಳನ್ನು ಆಗಸ್ಟ್ ಅಂತ್ಯದೊಳಗೆ ವಿತರಿಸಬೇಕು. ಡ್ರೋನ್ ಮೂಲಕ ಭೂಮಾಪನ ನಡೆಸಿ ಕಂದಾಯ ದಾಖಲೆಗಳ ಡಿಜಿಟಲೀಕರಣ ಮಾಡಬೇಕು' ಎಂದು ಸೂಚಿಸಿದರು.

ಅರಣ್ಯ, ವಸತಿ, ಕಂದಾಯ, ಪಶುಸಂಗೋಪನೆ, ತೋಟಗಾರಿಕೆ, ಯೋಜನೆ ಮತ್ತು ಸಾಂಖ್ಯಿಕ ಇಲಾಖೆಗಳಲ್ಲಿ ಬಜೆಟ್ ಘೋಷಣೆಗಳ ಅನುಷ್ಠಾನಕ್ಕೆ ನಡೆದಿರುವ ಸಿದ್ಧತೆಯನ್ನು ಮುಖ್ಯಮಂತ್ರಿ ಪರಿಶೀಲಿಸಿದರು. ಇಲಾಖೆ ಸಚಿವರು, ಅಧಿಕಾರಿಗಳು ಹಾಜರಿದ್ದರು.

ಮೆಣಸಿನ ಕಾಯಿಯಿಂದ ಔಷಧಿ: ಅಧ್ಯಯನ

ಮೆಣಸಿನಕಾಯಿಯಿಂದ ಔಷಧಿ ಹಾಗೂ ಸೌಂದರ್ಯವರ್ಧಕಗಳ ತಯಾರಿಕೆಗೆ ಬಳಸುವ ತೈಲ ಉತ್ಪಾದನೆಗೆ ಇರುವ ಅವಕಾಶಗಳ ಕುರಿತು ಅಧ್ಯಯನ ನಡೆಸಿ, ವರದಿ ಸಲ್ಲಿಸಲು ತೋಟಗಾರಿಕಾ ಇಲಾಖೆ ಅಧಿಕಾರಿಗಳಿಗೆ ಬೊಮ್ಮಾಯಿ ಸೂಚಿಸಿದರು.

ಮೆಣಸು ಮತ್ತು ಇತರ ಸಾಂಬಾರು ಪದಾರ್ಥಗಳ ಗುಣಮಟ್ಟವನ್ನು ಹೆಚ್ಚಿಸಲು ಬ್ಯಾಡಗಿಯಲ್ಲಿ ಸಂಶೋಧನಾ ಕೇಂದ್ರ ಸ್ಥಾಪಿಸುವ ಬಗ್ಗೆ ವ್ಯಾಪಾರಸ್ಥರ ಸಲಹೆ ಪಡೆದು ಯೋಜನೆ ರೂಪಿಸುವಂತೆ ನಿರ್ದೇಶನ ನೀಡಿದರು.

ಸಿಡಿಲು ಬಡಿದು ಕಾರ್ಮಿಕ ಸಾವು

ಮಾಲೂರು: ನಿರ್ಮಾಣ ಹಂತದ ಮನೆಯೊಂದರ ಮೂರನೇ ಅಂತಸ್ತಿನಲ್ಲಿ ಕಂಬಿ ಕಟ್ಟುವ ಕೆಲಸದಲ್ಲಿ ನಿರತನಾಗಿದ್ದ ವೇಳೆ ಸಿಡಿಲು ಬಡಿದು ಕಟ್ಟಡ ಕಾರ್ಮಿಕ ಸ್ಥಳದಲ್ಲೇ ಮೃತಪಟ್ಟಿರುವ ಘಟನೆ ಪಟ್ಟಣದ ಮಾಲೀಕ್ ಬಡಾವಣೆಯಲ್ಲಿ ಶುಕ್ರವಾರ ನಡೆದಿದೆ.

ತಾಲ್ಲೂಕಿನ ಕಾಟೇರಿ ಗ್ರಾಮದ ವೆಂಕಟಸ್ವಾಮಿ (38) ಮೃತಪಟ್ಟವರು. ಗಿರೀಶ್ ಎಂಬುವರು ನಿರ್ಮಿಸುತ್ತಿರುವ ಮನೆಯ ಮೂರನೇ ಅಂತಸ್ತಿನಲ್ಲಿ ಕಂಬಿ ಕೆಲಸ ಮಾಡುತ್ತಿದ್ದಾಗ ಈ ಅವಘಡ ಸಂಭವಿಸಿದೆ. ಪಟ್ಟಣ ಠಾಣೆ ಪೊಲೀಸರು ಸ್ಥಳಕ್ಕೆ ಭೇಟಿ ನೀಡಿ ಪರಿಶೀಲಿಸಿ, ಪ್ರಕರಣ ದಾಖಲಿಸಿ ಕೊಂಡಿದ್ದಾರೆ.

ವಿದ್ಯುತ್ ಸ್ಪರ್ಶ; ತಾಯಿ, ಇಬ್ಬರು ಮಕ್ಕಳ ಸಾವು

ಕನಕಗಿರಿ (ಕೊಪ್ಪಳ ಜಿಲ್ಲೆ): ಸಮೀಪದ ಹುಲಿಹೈದರ ಗ್ರಾಮದಲ್ಲಿ ಶುಕ್ರವಾರ ಮನೆಯಲ್ಲಿ ಆಕಸ್ಮಿಕವಾಗಿ ವಿದ್ಯುತ್ ತಗುಲಿ ತಾಯಿ ಹಾಗೂ ಇಬ್ಬರು ಮಕ್ಕಳು ಸಾವನ್ನಪ್ಪಿದ್ದಾರೆ. ಶೈಲಾ (26), ಸಾನ್ವಿ (6) ಮತ್ತು ಪವನ (4) ಮೃತರು.

ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ
ಕೆಂಪೇಗೌಡ ಬಸ್ ನಿಲ್ದಾಣ ವಿಭಾಗ, ಬೆಂಗಳೂರು

ಸಂ. ಕರಾಸಾ/ಕೆಂಬನಿ/ಕಾಮ–1/114/2022–23 ದಿನಾಂಕ: 30/04/2022

ಜಾಹೀರಾತು ಇ–ಟೆಂಡರು ಪ್ರಕಟಣೆ ಸಂಖ್ಯೆ: 01/2022–23

ಕೆಂಪೇಗೌಡ ಬಸ್ ನಿಲ್ದಾಣ ವಿಭಾಗ ವ್ಯಾಪ್ತಿಯಲ್ಲಿ ಬರುವ ಟ್ರಾನ್ಸಿಟ್ ಬಸ್ ನಿಲ್ದಾಣ, ದೇವನಹಳ್ಳಿ ಇಲ್ಲಿ ಗುರುತಿಸಿರುವ ಸ್ಥಳದಲ್ಲಿ ಜಾಹೀರಾತು ಫಲಕಗಳನ್ನು ಪ್ರದರ್ಶಿಸಲು ಪರವಾನಗಿದಾರರನ್ನು ಆಯ್ಕೆ ಮಾಡಲು ಇ–ಪ್ರೊಕ್ಯೂರ್‌ಮೆಂಟ್ ಅಂತರ್ಜಾಲದ ಮೂಲಕ ಅರ್ಹರಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ. ಹೆಚ್ಚಿನ ಮಾಹಿತಿ/ವಿವರಗಳಿಗಾಗಿ https://www.eproc.karnataka.gov.in ನಿಂದ ಹಾಗೂ ನಿಗಮದ ವೆಬ್‌ಸೈಟ್ www.ksrtc.karnataka.gov.in ನಲ್ಲಿ ಡೌನ್‌ಲೋಡ್ ಮಾಡಿಕೊಳ್ಳಬಹುದು ಹಾಗೂ ವಿಭಾಗೀಯ ಕಛೇರಿ, ಕ.ರಾ.ರ.ಸಾ. ನಿಗಮ, ಕೆಂಪೇಗೌಡ ಬಸ್ ನಿಲ್ದಾಣ ವಿಭಾಗ, ಬೆಂಗಳೂರು–560009 ಇಲ್ಲಿ ಕಛೇರಿ ಅವಧಿಯಲ್ಲಿ ಸಂಪರ್ಕಿಸಬಹುದು. ಸಂಪರ್ಕಿಸಬೇಕಾದ ದೂರವಾಣಿ ಸಂಖ್ಯೆ 7760990557, 7760960554 ಮತ್ತು ಸಹಾಯವಾಣಿ ಸಂಖ್ಯೆ 8046010000/8068948777.

ಸಹಿ/–
ವಿಭಾಗೀಯ ನಿಯಂತ್ರಣಾಧಿಕಾರಿ, ಕೆಂಬನಿ ವಿಭಾಗ, ಬೆಂಗಳೂರು

ಕೋವಿಡ್-19. ಆತಂಕ ಬೇಡ; ಮುನ್ನೆಚ್ಚರಿಕೆ ಇರಲಿ.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಕರ್ನಾಟಕ ಕೊಳಗೇರಿ ಅಭಿವೃದ್ಧಿ ಮಂಡಳಿ
ತಾಂತ್ರಿಕ ನಿರ್ದೇಶಕರ ಕಚೇರಿ, ಜಾವಾ ಫ್ಯಾಕ್ಟರಿ ರಸ್ತೆ, ಹೈವೇ ಸರ್ಕಲ್ ಹತ್ತಿರ, ಬನ್ನಿಮಂಟಪ, ಮೈಸೂರು–570001.
ದೂರವಾಣಿ: 0821–2491424, ಇಮೇಲ್: ksdbtd1@gmail.com
ವೆಬ್‌ಸೈಟ್: www.karnataka.gov.in/ksdb

ಸಂ: ಕಕೊಅಮ/ತಾನಿ-ಮೈವೃತ್ತ/ಪಿಎಂಎವೈ-ಹೆಚ್‌ಎಫ್‌ಎ/ಐಎಫ್‌ಟಿ-05/2022-23/76 ದಿನಾಂಕ: 05.05.2022

ಟೆಂಡರ್ ಆಹ್ವಾನ (ಐಎಫ್‌ಟಿ)
ದ್ವಿಲಕೋಟೆ ಪದ್ಧತಿ (ಇ–ಪ್ರೊಕ್ಯೂರ್‌ಮೆಂಟ್ ಮೂಲಕ)

ಅಲ್ಪಾವಧಿ ಟೆಂಡರ್ ಪ್ರಕಟಣೆ – 4ನೇ ಕರೆ

ತಾಂತ್ರಿಕ ನಿರ್ದೇಶಕರು, ಮೈಸೂರು ವೃತ್ತ, ಮೈಸೂರು ಇವರು ಆಯುಕ್ತರು, ಕಕೊಅಮ, ಬೆಂಗಳೂರು ರವರ ಪರವಾಗಿ ಪಿಎಂಎವೈ–ಹೆಚ್‌ಎಫ್‌ಎ (ನಗರ) ಯೋಜನೆಯಡಿ ಮಂಡ್ಯ ನಗರದ ಸರ್ವೆ ನಂ. 17/1ರಲ್ಲಿ ಮೂಲಭೂತ ಸೌಲಭ್ಯ ಒಳಗೊಂಡಂತೆ ಫ್ಲ್ಯಾಟ್ 'ಇನ್‌ಸಿಟು' ಟೆಕ್ನಾಲಜಿ ಬಳಕೆಯೊಂದಿಗೆ 500 (ಜಿ+3) ಮನೆಗಳ ನಿರ್ಮಾಣದ ಕಾಮಗಾರಿಗೆ ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಲಂಪ್ ಸಮ್ ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ. ((KSDB/2021-22/BD/ WORK_INDENT 3162/CALL-4). ಕಾಮಗಾರಿಯ ಅಂದಾಜು ಮೊತ್ತ **ರೂ. 2806.14 ಲಕ್ಷಗಳು.** ಇಎಂಡಿ: **ರೂ. 28.06 ಲಕ್ಷಗಳು.** ಕಾಮಗಾರಿ ಪೂರ್ಣಗೊಳಿಸುವ ಅವಧಿ (ಮಳೆಗಾಲ ಸೇರಿದಂತೆ): **18 ತಿಂಗಳು.** ಟೆಂಡರ್ ಪ್ರಪತ್ರ, ವೇಳಾಪಟ್ಟಿ ಹಾಗೂ ಇತರೆ ವಿವರಗಳು ವೆಬ್‌ಸೈಟ್: **https://www.eproc.karnataka.gov.in** ನಲ್ಲಿ ಲಭ್ಯವಿರುತ್ತದೆ.

1	ಪೂರ್ವ ಬಿಡ್ ಸಭೆಯ ದಿನಾಂಕ	09.05.2022ರ ಬೆಳಿಗ್ಗೆ 11.00 ಗಂಟೆಗೆ
2	ಇ–ಪೋರ್ಟಲ್‌ನಲ್ಲಿ ಟೆಂಡರ್‌ಗಳನ್ನು ಸ್ವೀಕರಿಸಲು ಕೊನೆಯ ದಿನಾಂಕ ಮತ್ತು ಸಮಯ	13.05.2022ರ ಸಂಜೆ 5.30 ಗಂಟೆಯವರೆಗೆ.
3	ತಾಂತ್ರಿಕ ಬಿಡ್‌ಗಳನ್ನು ತೆರೆಯುವ ದಿನಾಂಕ ಮತ್ತು ಸಮಯ	16.05.2022ರ ಬೆಳಿಗ್ಗೆ 11.00 ಗಂಟೆಗೆ
4	ಆರ್ಥಿಕ ಬಿಡ್‌ಗಳನ್ನು ತೆರೆಯುವ ದಿನಾಂಕ	ಅರ್ಹ ಬಿಡ್‌ದಾರರಿಗೆ ದಿನಾಂಕ ಮತ್ತು ಸಮಯವನ್ನು ತಿಳಿಸಲಾಗುವುದು
5	ಟೆಂಡರ್‌ಗಳನ್ನು ಸ್ವೀಕರಿಸುವ ಮತ್ತು ತೆರೆಯುವ ವಿಳಾಸ	ತಾಂತ್ರಿಕ ನಿರ್ದೇಶಕರ ಕಚೇರಿ, ಕಕೊಅಮ ಮೈಸೂರು ವೃತ್ತ, ಹೈವೇ ಸರ್ಕಲ್ ಹತ್ತಿರ, ಜಾವಾ ಫ್ಯಾಕ್ಟರಿ ರಸ್ತೆ, ಬನ್ನಿಮಂಟಪ, ಮೈಸೂರು–570001.

ಸಹಿ/– ತಾಂತ್ರಿಕ ನಿರ್ದೇಶಕರು
ಕಕೊಅಮ, ಮೈಸೂರು.

DIPR/CP/408/Yakshi/2022-23

ಕೋವಿಡ್-19 - ಗಾಳಿಸುದ್ದಿ ಹರಡಬೇಡಿ, ಜವಾಬ್ದಾರಿಯಿಂದ ವರ್ತಿಸಿ, ಸೋಂಕನ್ನು ದೂರವಿಡಿ-ಸೋಂಕಿತರನ್ನಲ್ಲ.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಸಂಕ್ಷಿಪ್ತ ಸುದ್ದಿ

ಪ್ರಾರ್ಥನಾ ಮಂದಿರಕ್ಕೆ ನುಗ್ಗಿ ಹಾನಿ: ದೂರು

ಮಂಗಳೂರು: ಕಡಬ ಪೊಲೀಸ್ ಠಾಣಾ ವ್ಯಾಪ್ತಿಯ ರೆಂಜಿಲಾಡಿ ಗ್ರಾಮದ ಪೇರಡ್ಕದಲ್ಲಿ ಚರ್ಚ್ ಕಟ್ಟಡವೊಂದಕ್ಕೆ ನುಗ್ಗಿದ ಅಪರಿಚಿತ ದುಷ್ಕರ್ಮಿಗಳು, ಶಿಲುಬೆಗೆ ಹಾನಿ ಮಾಡಿ, ಹನುಮಂತನ ಫೋಟೋ ಇಟ್ಟಿರುವ ಘಟನೆ ನಡೆದಿದೆ. ಪ್ರಾರ್ಥನಾ ಮಂದಿರದ ಧರ್ಮಗುರು ಫಾ. ಜೋಸ್ ವರ್ಗೀಸ್ ನೀಡಿದ ದೂರಿನ ಮೇರೆಗೆ ಕಡಬ ಪೊಲೀಸರು ಪ್ರಕರಣ ದಾಖಲಿಸಿಕೊಂಡಿದ್ದು, ತನಿಖೆ ಆರಂಭಿಸಿದ್ದಾರೆ.

ಮೇ 1ರ ಮಧ್ಯರಾತ್ರಿ ಇಮ್ಮಾನುವೆಲ್ ಅಸೆಂಬ್ಲಿ ಆಫ್ ಗಾಡ್ ಹೆಸರಿನ ಕ್ರೈಸ್ತ ಪ್ರಾರ್ಥನಾ ಮಂದಿರಕ್ಕೆ ನುಗ್ಗಿದ ದುಷ್ಕರ್ಮಿಗಳು ಶಿಲುಬೆಯನ್ನು ನಾಶ ಮಾಡಿ, ಕೇಸರಿ ಧ್ವಜ ಹಾರಿಸಿದ್ದಾರೆ. ಕಟ್ಟಡದ ಒಳಭಾಗದ ಪ್ರಾರ್ಥನಾ ಮಂದಿರದಲ್ಲಿ ಹನುಮಂತನ ಭಾವಚಿತ್ರ ಇಟ್ಟಿದ್ದಾರೆ. ವಿದ್ಯುತ್ ಮೀಟರ್, ನೀರಿನ ಪಂಪ್, ಪೈಪ್‌ಗಳನ್ನು ನಾಶಪಡಿಸಿದ್ದು, ಪ್ರಾರ್ಥನಾ ಕೇಂದ್ರಕ್ಕೆ ಸಂಬಂಧಿಸಿದ ದಾಖಲೆಗಳೊಂದಿಗೆ ಪರಾರಿಯಾಗಿದ್ದಾರೆ ಎಂದು ದೂರಿನಲ್ಲಿ ತಿಳಿಸಿದ್ದಾರೆ.

ಈ ಕಟ್ಟಡಕ್ಕೆ 30 ವರ್ಷಗಳ ಹಿಂದಿನಿಂದಲೂ ತೆರಿಗೆ ಪಾವತಿಸಲಾಗುತ್ತಿದೆ. ಕಟ್ಟಡದ ನಂಬರ್ 1/107 ಇಮ್ಮಾನುವೆಲ್ ಅಸೆಂಬ್ಲಿ ಆಫ್ ಗಾಡ್ ಕ್ರೈಸ್ತ ಪ್ರಾರ್ಥನಾ ಮಂದಿರವಾಗಿದೆ ಎಂದು ಜೋಸ್ ವರ್ಗೀಸ್ ತಿಳಿಸಿದ್ದಾರೆ.

ದುಷ್ಕರ್ಮಿಗಳ ವಿರುದ್ಧ ಕಡಬ ಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದು, ತನಿಖೆ ನಡೆಯುತ್ತಿದೆ ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಋಷಿಕೇಶ್ ಭಗವಾನ್ ಸೋನಾವಣೆ ತಿಳಿಸಿದ್ದಾರೆ.

ಕುರಿ ಮಂದೆ ಮೇಲೆ ಹರಿದ ಕ್ಯಾಂಟರ್

ತುಮಕೂರು: ಕುರಿ ಮಂದೆ ಮೇಲೆ ಕ್ಯಾಂಟರ್ ಹರಿದು 70ಕ್ಕೂ ಹೆಚ್ಚು ಕುರಿಗಳು ಮೃತಪಟ್ಟಿದ್ದು, ಕುರಿಗಾಹಿಯೊಬ್ಬರು ತೀವ್ರವಾಗಿ ಗಾಯಗೊಂಡ ಘಟನೆ ಕುಣಿಗಲ್ ತಾಲ್ಲೂಕಿನ ಗವಿಮಠದ ಬಳಿ ಶುಕ್ರವಾರ ಬೆಳಗಿನ ಜಾವ ನಡೆದಿದೆ.

ಆಂಧ್ರಪ್ರದೇಶದ ಮಡಕಶಿರಾ ತಾಲ್ಲೂಕಿನ ರಾಮಯ್ಯನಹಟ್ಟಿ ಗ್ರಾಮದ ಕುರಿಗಾಹಿ ಚಂದ್ರಪ್ಪ ಎಂಬುವರು ಗಾಯಗೊಂಡಿದ್ದಾರೆ.

ರಾಮಯ್ಯನಹಟ್ಟಿಯ ಚಂದ್ರಪ್ಪ, ಸಿದ್ದಪ್ಪ, ಈರಣ್ಣ, ಕೊಂಡಯ್ಯ, ಚಿತ್ತಲಿಂಗಯ್ಯಗೆ ಈ ಕುರಿಗಳು ಸೇರಿವೆ. ಮದ್ದೂರು ತಾಲ್ಲೂಕಿನಲ್ಲಿ ಮೇಯಿಸಿಕೊಂಡು ಸ್ವಗ್ರಾಮಕ್ಕೆ ಹಿಂತಿರುಗುತ್ತಿದ್ದಾಗ ಮದ್ದೂರು ಕಡೆಯಿಂದ ಬಂದ ಕ್ಯಾಂಟರ್ ಗುದ್ದಿ ಪರಾರಿಯಾಗಿದೆ.

ಗುದ್ದಿದ್ದ ರಭಸಕ್ಕೆ 70ಕ್ಕೂ ಹೆಚ್ಚು ಕುರಿಗಳು ಮೃತಪಟ್ಟಿವೆ. 30ಕ್ಕೂ ಹೆಚ್ಚು ಕುರಿಗಳು ಗಾಯಗೊಂಡಿವೆ. ಈ ಪೈಕಿ ಸಾಕಷ್ಟು ಕುರಿಗಳ ಕಾಲುಗಳು ಮುರಿದಿವೆ.

ಈ ಸಂಬಂಧ ಕುಣಿಗಲ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಕಾವೇರಿ ನೀರಾವರಿ ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಉದ್ಯಮ)
ಕಾರ್ಯಪಾಲಕ ಇಂಜಿನಿಯರ್ ರವರ ಕಛೇರಿ
ವಿಶ್ವೇಶ್ವರಯ್ಯ ನಾಲಾ ವಿಭಾಗ, ಮಂಡ್ಯ. ದೂರವಾಣಿ ಸಂಖ್ಯೆ:08232–225046
ಇ–ಮೇಲ್:vcdnmndya@gmail.com

ಅಲ್ಪಾವಧಿ ಟೆಂಡರ್ ಪ್ರಕಟಣೆ ಸಂಖ್ಯೆ:02/ 2022–23 ದಿನಾಂಕ: 05.05.2022 – ದ್ವಿ – ಲಕೋಟೆ ಪದ್ದತಿ

ವ್ಯವಸ್ಥಾಪಕ ನಿರ್ದೇಶಕರು, ಕಾವೇರಿ ನೀರಾವರಿ ನಿಗಮ ನಿಯಮಿತ, ಮೈಸೂರು/ಬೆಂಗಳೂರು ಇವರ ಪರವಾಗಿ ನೊಂದಾಯಿಸಲ್ಪಟ್ಟ 1 'ಎ'ನೇ ದರ್ಜೆ ದರ್ಜೆಯಲ್ಲಿ ಗುತ್ತಿಗೆದಾರರಿಂದ ಕಾಮಗಾರಿಗೆ Turnkey & Item rate ದರದ ಟೆಂಡರ್‌ನ್ನು ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಆಹ್ವಾನಿಸಲಾಗಿದೆ. ಕಾಮಗಾರಿಯ ಸಂಖ್ಯೆ 1 ಟೆಂಡರ್‌ಗಿಟ್ಟ ಕನಿಷ್ಠ ಮೊತ್ತ **ರೂ. 1650.35 ಲಕ್ಷಗಳು.** ಕೆಲಸ ಪೂರ್ಣಗೊಳಿಸಲು ನಿಗಧಿ ಪಡಿಸಿರುವ ಅವಧಿ 12 ತಿಂಗಳುಗಳು ಮಳೆಗಾಲ ಸೇರಿ. ಇ.ಎಂ.ಡಿ ಹಣವನ್ನು ಟೆಂಡರಿಗಿಟ್ಟ ಮೊತ್ತಕ್ಕೆ **ಶೇ 1.0% ರಷ್ಟು** ಕ್ರಮವಾಗಿ **ರೂ. 1650000.00 ಗಳು** ಶುಲ್ಕವನ್ನು ಇ–ಪೇಮೆಂಟ್ ಮೂಲಕ ಸಂದಾಯ ಮಾಡುವುದು, Date of access in e-portal, Date of pre-bid conference ವರೆಗೆ. ಆನ್ ಲೈನ್ ಮೂಲಕ ಭರ್ತಿ ಮಾಡಿದ ಟೆಂಡರ್‌ಗಳನ್ನು ಇ.ಎಂ.ಡಿ ಯೊಂದಿಗೆ ಸಲ್ಲಿಸುವ Date of access in e-portal, ತಾಂತ್ರಿಕ ಬಿಡ್‌ನ್ನು ತೆರೆಯುವ Date of access in e-portal. ಹೆಚ್ಚಿನ ವಿವರಗಳಿಗೆ **http://eproc.karnataka.gov** ನಲ್ಲಿ ಹಾಗೂ ಈ ಕಛೇರಿಯ ದೂರವಾಣಿ ಸಂಖ್ಯೆ 08232–225046 ನಲ್ಲಿ ಸಂಪರ್ಕಿಸಬಹುದಾಗಿದೆ.

ಸಹಿ/–ಕಾರ್ಯಪಾಲಕ ಇಂಜಿನಿಯರ್, ಕಾವೇರಿ ನೀರಾವರಿ ನಿಗಮ (ನಿ), ವಿ.ಸಿ ವಿಭಾಗ, ಮಂಡ್ಯ
ವಾಸಾಸಂಇ/ಸನಿ–ಮಂಡ್ಯ/ಎಂಸಿ&ಎ/055/2022–23

ಕಿದ್ವಾಯಿ ಸ್ಮಾರಕ ಗಂಥಿ ಸಂಸ್ಥೆ
(ಕರ್ನಾಟಕ ಸರ್ಕಾರದ ಸ್ವಯತ್ತತಾ ಸಂಸ್ಥೆ)
ಡಾ. ಎಂ.ಹೆಚ್. ಮರಿಗೌಡ ರಸ್ತೆ, ಬೆಂಗಳೂರು–560 029.
ದೂರವಾಣಿ: 91-80-26560722 / 26560723 / 66697999 E-mail: kidwai@nic.in

No.KMIO/SME(1)/Tender/Laundry Out Source/2022-23 Date: 06.05.2022

e-PROCUREMENT TENDER NOTIFICATION

ಈ ಕೆಳಗಿನ ಪೂರೈಕೆಗಾಗಿ ದ್ವಿ–ಲಕೋಟೆ ಪದ್ಧತಿಯಲ್ಲಿ ಆನ್‌ಲೈನ್ ಮುಖಾಂತರ ಟೆಂಡರುಗಳನ್ನು ಆಹ್ವಾನಿಸಲಾಗಿದೆ.

Sl. No	Tender No. & Date	Name of the Equipment / Works
1.	No. KMIO/SME(1)/Tender/Laundry Out Source/307/2021-22 dated: 06.05.2022 (Call-2)	Providing Laundry Services including Operation & Maintenance of Laundry Equipment's. Providing Man Power. Transporting Hospital Linen from Ward/O.T. before & after washing
2.	No. KMIO/SME(1)/Tender/DMB Chemicals./312/2022-23 dated 06.052022	Procurement of Biomerieux Instrument Consumables (Vitek-2 Compact & Automated Blood Culture Systems) to Dept. of Microbiology
3.	No. KMIO/SME(1)/Tender/DPT Chemicals/313/2022-23 dated: 06.05.2022	Procurement of Ventana Reagents, Histopathology Accessories & PT & APTT Reagents to Dept. of Pathology
4.	No. KMIO/SME(1)/Tender/ETP/314/2022-23 dated: 06.05.2022	Repair & Maintenance of ETP
5.	No. KMIO/SME(1)/Tender/Linen/315/2022-23 dated: 06.05.2022	Procurement of Linen Items to KMIO.,
6.	No. KMIO/SME(1)/Tender/IAW/316/2022-23 dated: 06.05.2022	Carry Out Internal Audit Work of KMIO. for the year 2022-2023 for 2 years
7.	No. KMIO/SME(1)/Tender/AM/317/2022-23 dated: 06.05.2022	Accounts Maintenance of KMIO on Regular Basis with 2 People Full Time for the years 2022-23 & 2023-24 for 2 years
8.	No. KMIO/SME(1)/Tender/SAA/318/2022-23 dated: 06.05.2022	Statutory Audit of Accounts of KMIO and its offices for the year 2022-23 & 2023-24 for 2 years
9.	No. KMIO/SME(1)/Tender/Oxygen Supply/319/2022-23, dated: 06.05.2022	Procurement of Oxygen and Nitrogen and Maintenance of Oxygen Lines.
10.	No. KMIO/SME(1)/Tender/Wifi/320/2022-23, Dated: 06.05.2022	WIFI to entire hospital.
11.	No. KMIO/SME(1)/Tender/CT Chairs/321/2022-23 dated: 06.05.2022	Procurement of Chemotherapy Chairs on Buy Back Old CT Chairs

ಆನ್‌ಲೈನ್‌ನಲ್ಲಿ ಬಿಡ್ ದಾಖಲೆಗಳ ಲಭ್ಯತೆ ದಿನಾಂಕ: **10.05.2022** ರಿಂದ **25.05.2022** ರವರೆಗೆ ಕ್ರ.ಸಂ. **1** ರಿಂದ **5, 9** ಮತ್ತು **10** ಹಾಗೂ ಕ್ರ.ಸಂ. **6** ರಿಂದ **8** ರವರೆಗೆ ಬಿಡ್ಡರ್‌ಗಳು ಒಂದು ಟೆಂಡರ್‌ಗೆ ಮಾತ್ರ ಭಾಗವಹಿಸಬಹುದು. ಹೆಸರಾಂತ ಸಂಸ್ಥೆಯಿಂದ 2022-24 ರವರೆಗೆ ಲೆಕ್ಕಪರಿಶೋಧನೆಗೆ ನೋಂದಾಯಿತರಾಗಿರಬೇಕು. ಬಿಡ್ಡರ್‌ಗಳು ಬಿಡ್ ದಾಖಲೆಗಳನ್ನು ವೆಬ್‌ಸೈಟ್: **https://eproc.karnataka. gov.in**ನಲ್ಲಿ ನೋಡಿ ಡೌನ್‌ಲೋಡ್ ಮಾಡಿಕೊಳ್ಳಬಹುದಾಗಿದೆ. ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಶುಲ್ಕ **ರೂ.500**/–ನ್ನು ಪಾವತಿಸಿ, ಬಿಡ್‌ನ್ನು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಸಲ್ಲಿಸಬಹುದಾಗಿದೆ. ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಬಿಡ್ ಸ್ವೀಕರಿಸುವ ಕೊನೆಯ ದಿನಾಂಕ ಮತ್ತು ಸಮಯ **25.05.2022** ರಂದು **ಮಧ್ಯಾಹ್ನ 3:00 pm. ಗಂಟೆಗೆ.** ಟೆಂಡರ್ ಸ್ವೀಕರಿಸುವ ಪ್ರಾಧಿಕಾರವು ಯಾವುದೇ ಕಾರಣ ನೀಡದೆ ಟೆಂಡರನ್ನು ಸ್ವೀಕರಿಸುವ/ತಿರಸ್ಕರಿಸುವ/ರದ್ದುಪಡಿಸುವ ಹಕ್ಕನ್ನು ಕಾಯ್ದಿರಿಸಿಕೊಂಡಿರುತ್ತದೆ.

ಸಹಿ/–
ನಿರ್ದೇಶಕರು

DIPR/CP/RO.402/AAPL/2022-23

STAY PROTECTED FROM COVID-19, NO CARELESSNESS UNTIL THERE IS A CURE.
Wear Mask | 6 Feet Follow Physical Distancing | Maintain Hand Hygiene

ಸಹಾಯಕ ನಿರ್ದೇಶಕರು (ಗ್ರೇಡ್–1)ರವರ ಕಛೇರಿ
ಸಮಾಜ ಕಲ್ಯಾಣ ಇಲಾಖೆ, ಪಾವಗಡ ತಾಲ್ಲೂಕು, ತುಮಕೂರು ಜಿಲ್ಲೆ
ದೂರವಾಣಿ ಸಂ:295569 E-mail ID-tswopvg@gmail.com
ಸಂಖ್ಯೆ:ಸನಿ–ಗ್ರೇಡ್–1/ಸಕಇ/ಪಾ/ಸಿಆರ್/2022–23 ದಿನಾಂಕ: 04.05.2022

ಅಲ್ಪಾವಧಿ ಟೆಂಡರ್ ಪ್ರಕಟಣೆ

2022–23ನೇ ಸಾಲಿಗೆ ಸಹಾಯಕ ನಿರ್ದೇಶಕರು ಗ್ರೇಡ್–1 ಸಮಾಜ ಕಲ್ಯಾಣ ಇಲಾಖೆ, ಪಾವಗಡ ರವರಿಗೆ ಸಮಾಜ ಕಲ್ಯಾಣ ಇಲಾಖೆಯ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಲು ಹಾಗೂ ಆಡಳಿತಾತ್ಮಕ ಹಿತದೃಷ್ಟಿಯಿಂದ ವಾಹನ ಸೌಲಭ್ಯ ಅವಶ್ಯಕರವಾಗಿರುವುದರಿಂದ ಮಾಸಿಕ ಬಾಡಿಗೆ ರೂ.25000/–ಮಿತಿಯ ಆಧಾರದ ಮೇಲೆ ಸ್ವಿಫ್ಟ್ ಡಿಜೈರ್, ಇಂಡಿಗೋ ಇಸಿಎಸ್ ವಾಹನವನ್ನು ಒದಗಿಸುವ ಸಲುವಾಗಿ ಅಧಿಕೃತ ಅರ್ಹ ಟ್ರಾವೆಲ್ ಏಜನ್ಸಿ/ಮಾಲೀಕರುಗಳಿಂದ ಅಲ್ಪಾವಧಿ ಟೆಂಡರ್ ಪ್ರಕಟಿಸಲಾಗಿದ್ದು, ಆಸಕ್ತರು ಟೆಂಡರ್ ಷರತ್ತಿಗೊಳಪಟ್ಟು ದಿನಾಂಕ: **16.05.2022** ರಂದು ಮಧ್ಯಾಹ್ನ 3.00ಗಂಟೆಗೆ ಒಳಗಾಗಿ ಅಲ್ಪಾವಧಿ ಟೆಂಡರ್ ಸಲ್ಲಿಸಬಹುದಾಗಿರುತ್ತದೆ. ಹೆಚ್ಚಿನ ಮಾಹಿತಿಗಾಗಿ ಈ ಕಛೇರಿಗೆ ಕಛೇರಿ ವೇಳೆಯಲ್ಲಿ ಸಂಪರ್ಕಿಸಬಹುದಾಗಿರುತ್ತದೆ.

ಸಹಿ/– ಸಹಾಯಕ ನಿರ್ದೇಶಕರು (ಗ್ರೇಡ್–1),
ಸಮಾಜ ಕಲ್ಯಾಣ ಇಲಾಖೆ, ಪಾವಗಡ.

DIPR/TUM/77/MCA/2022-23

ಕರ್ನಾಟಕ ಸರ್ಕಾರ
ಉಪನಿರ್ದೇಶಕರ ಕಛೇರಿ, ಗಣಿ ಮತ್ತು ಭೂವಿಜ್ಞಾನ ಇಲಾಖೆ,
ಉತ್ತರ ಕನ್ನಡ ಜಿಲ್ಲೆ, ಕಾರವಾರ–581301. ದೂರವಾಣಿ: 08382–227395
ಸಂಖ್ಯೆ: ಗಭೂಇ/ಉಕಜಿ/ಕಬ್ಬಿಣ ಅದಿರು ಹರಾಜು/2022–23 ದಿನಾಂಕ: 06–05–2022

ಇ–ಹರಾಜು ಪ್ರಕಟಣೆ

ಉತ್ತರ ಕನ್ನಡ ಜಿಲ್ಲೆಯ, ಕಾರವಾರ ಬಂದರು ಪ್ರದೇಶದಲ್ಲಿ ದಾಸ್ತಾನಿರುವ ಕಬ್ಬಿಣದ ಅದಿರನ್ನು ಇ–ಹರಾಜು ಮಾಡಲು ಅರ್ಹ ವ್ಯಕ್ತಿ/ಕಂಪನಿ/ ಸಂಸ್ಥೆಗಳಿಂದ ಅರ್ಜಿಗಳನ್ನು ಆಹ್ವಾನಿಸಲಾಗಿರುತ್ತದೆ. ಇ–ಹರಾಜು ಸಂಖ್ಯೆ: MSTC/BLR/Office of the Deputy Director Department of Mines and Geology/1/Karwar/22-23/4783 [330376] ಇ–ಹರಾಜು ದಾಸ್ತಾವೇಜುಗಳನ್ನು ಮತ್ತು ಅನುಬಂಧಗಳನ್ನು ಇ–ಹರಾಜು ವೆಬ್‌ಸೈಟ್ **https://www.mstcecommerce.com** ಮೂಲಕ ಡೌನಲೋಡ್ ಮಾಡಿಕೊಳ್ಳಬಹುದು. ಅನುಬಂಧಗಳನ್ನು ಡೌನ್‌ಲೋಡ್ ಮಾಡಿಕೊಂಡು ಅರ್ಜಿಯನ್ನು ಸಲ್ಲಿಸಲು ಕೊನೆಯ ದಿನಾಂಕ: **20–05–2022** ಆಗಿರುತ್ತದೆ. ಇ–ಹರಾಜು ಬಿಡ್ಡಿಂಗ್ ದಿನಾಂಕ: **21–05–2022** ರಂದು ಪ್ರಾರಂಭಿಸಲಾಗುವುದು. ಇ–ಹರಾಜು ಅರ್ಜಿಗಳನ್ನು ಇ–ಪ್ರೊಕ್ಯೂರಮೆಂಟ್ ಪ್ಲಾಟ್ ಫಾರಂ ಮೂಲಕವೇ ಸಲ್ಲಿಸುವುದು. **ಸರ್ಕಾರದ ಅನುಮೋದನೆ ಷರತ್ತಿಗೆ ಒಳಪಟ್ಟು ಮೂಲ ಬೆಲೆ (Floor Price) ನಲ್ಲಿ IBM ಪ್ರಚಲಿತ ದರದ 10% ರಷ್ಟು ಕಡಿತಗೊಳಿಸಲಾಗುವುದು.** ಸದರಿ ಇ–ಹರಾಜು ಕುರಿತು ಹೆಚ್ಚಿನ ಮಾಹಿತಿಗೆ **MSTC** ಕಛೇರಿಯ **ದೂರವಾಣಿ ಸಂಖ್ಯೆ: 080–22260054/22266417 / 22379145** ಮೂಲಕ ಹಾಗೂ ಇ–ಮೇಲ್ **Email: tejasv@mstcindia.co.in / jdamodaran@mstcindia.co.in** ಸಂಪರ್ಕಿಸಬಹುದು.

ಸಹಿ/– ಉಪ ನಿರ್ದೇಶಕರು/ಇ–ಹರಾಜು, ಆಹ್ವಾನ ಪ್ರಾಧಿಕಾರಿ,
ಗಣಿ ಮತ್ತು ಭೂವಿಜ್ಞಾನ ಇಲಾಖೆ, ಕಾರವಾರ.

ಕರ್ನಾಟಕ ಸರ್ಕಾರ
ಅರಣ್ಯ ಇಲಾಖೆ
ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ (ಮುಖ್ಯಸ್ಥರು, ಅರಣ್ಯ ಪಡೆ) ಇವರ ಕಚೇರಿ,
ಅರಣ್ಯ ಭವನ, 18ನೇ ಅಡ್ಡರಸ್ತೆ, ಮಲ್ಲೇಶ್ವರಂ, ಬೆಂಗಳೂರು – 560003
ಅಧಿಸೂಚನೆ ಸಂಖ್ಯೆ: ಬಿ9–ನೇಮಕಾತಿ–ವಿವ–1/2022–23 ದಿನಾಂಕ: 26–04–2022

ಪ್ರಕಟಣೆ

ಅರಣ್ಯ ವ್ಯವಸ್ಥಾಪನಾಧಿಕಾರಿ (FOREST SETTLEMENT OFFICER) ಹುದ್ದೆಗಳಿಗೆ ತಾತ್ಕಾಲಿಕವಾಗಿ ಗುತ್ತಿಗೆ ಆಧಾರದ ಮೇಲೆ ಗರಿಷ್ಠ ಎರಡು ವರ್ಷಗಳ ಅವಧಿಗೆ ನೇಮಕಾತಿ

ಸರ್ಕಾರದ ಆದೇಶ ಸಂಖ್ಯೆ: ಅಪಜೀ 171 ಅಪಸೆ 2018, ಬೆಂಗಳೂರು ದಿನಾಂಕ: 31.07.2019 ರಂತೆ ಅರಣ್ಯ ಇಲಾಖೆಯಲ್ಲಿ ಪ್ರಸ್ತುತ ಖಾಲಿ ಇರುವ 4 ಅರಣ್ಯ ವ್ಯವಸ್ಥಾಪನಾಧಿಕಾರಿ (Forest Settlement Officer) ಹುದ್ದೆಗಳಿಗೆ ನಿವೃತ್ತ ಕೆ.ಎ.ಎಸ್. ಅಧಿಕಾರಿಗಳ ಸೇವೆಯನ್ನು (ನಿವೃತ್ತ ಸಹಾಯಕ ಆಯುಕ್ತರು (ಕಂದಾಯ)) ತಾತ್ಕಲಿಕವಾಗಿ ಗುತ್ತಿಗೆ ಆಧಾರದ ಮೇಲೆ ಗರಿಷ್ಠ ಎರಡು ವರ್ಷಗಳ ಅವಧಿಗೆ ನೇಮಕ ಮಾಡಲು ಅರ್ಜಿಗಳನ್ನು ಆಹ್ವಾನಿಸಲಾಗಿದೆ.

ಅರ್ಜಿಯನ್ನು ನೋಂದಾಯಿತ ಅಂಚೆ ಮುಖಾಂತರ ಹಾಗೂ ಮುದ್ದಾಂ ಆಗಿ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಗಳು (ಮುಖ್ಯಸ್ಥರು ಅರಣ್ಯ ಪಡೆ), ಅರಣ್ಯ ಭವನ, ಮಲ್ಲೇಶ್ವರಂ, ಬೆಂಗಳೂರು–560003 ರವರ ಕಚೇರಿಗೆ ದಿನಾಂಕ: **02.05.2022 ರಿಂದ 31.05.2022ರ ಸಂಜೆ 5.30 ಗಂಟೆಯೊಳಗಾಗಿ** ಸಲ್ಲಿಸಬಹುದಾಗಿರುತ್ತದೆ. ಈ ಕುರಿತು ಕರ್ನಾಟಕ ಅರಣ್ಯ ಇಲಾಖೆಯ ವೆಬ್‌ಸೈಟ್: **www.aranya.gov.in** ನಲ್ಲಿ ಪ್ರಕಟಣೆಯನ್ನು ಪ್ರಕಟಿಸಲಾಗಿದೆ.

ಬೆಂಗಳೂರು
ದಿನಾಂಕ: 26.04.2022
ಸಹಿ/– ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ
(ಮುಖ್ಯಸ್ಥರು, ಅರಣ್ಯ ಪಡೆ)

DIPR/CP/394/Yakshi/2022-23

ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ
ನಂ.49, "ಪರಿಸರ ಭವನ", 1 ರಿಂದ 5ನೇ ಅಂತಸ್ತು, ಚರ್ಚ್ ಸ್ಟ್ರೀಟ್,
ಬೆಂಗಳೂರು–560 001, ಕರ್ನಾಟಕ, ಭಾರತ
ಫೋನ್: 25581383, 25589112, 25586520, ಫ್ಯಾಕ್ಸ್: 080–25586321
ಈ-ಮೇಲ್: ho@kspcb.gov.in ವೆಬ್‌ಸೈಟ್ : https://kspcb.karnataka.gov.in.
ಮಾನಿಮಂ/116/ಹಿಪಅ/ಗಣಿ/ಪಸಾಸ/2022–23/756 ದಿನಾಂಕ:06–05–2022

ಪರಿಸರ ಸಾರ್ವಜನಿಕ ಸಭೆಗಾಗಿ ಸೂಚನೆ

ಶ್ರೀ. ಮಗನಲಾಲ್ ಭಿಮಾಜಿ ಪಟೇಲ್, ರವರು ಕಟ್ಟಡ ಕಲ್ಲು ಗಣಿಗಾರಿಕೆ ಮಾಡಲು ಪಟ್ಟಾ ಜಮೀನಿನಲ್ಲಿ **ಸರ್ವೆ ನಂ. 59/3, 13, 14 & 20,** ಅಂಬೇವಾಡಿ **ಗ್ರಾಮ, ಬೆಳಗಾವಿ ತಾಲ್ಲೂಕು & ಬೆಳಗಾವಿ ಜಿಲ್ಲೆಯಲ್ಲಿ 7–10–08 ಎಕರೆ ಪ್ರದೇಶದಲ್ಲಿ ವರ್ಷಕ್ಕೆ ಗರಿಷ್ಠ 1,51,620 ಟನ್‌ಗಳಷ್ಟು ಕಟ್ಟಡ ಕಲ್ಲು ಗಣಿಗಾರಿಕೆಯನ್ನು ಮಾಡಲು ಉದ್ದೇಶಿಸಿರುತ್ತಾರೆ.** ಸದರಿ ಯೋಜನೆಯು ಪರಿಸರ ಆಘಾತ ಅಧ್ಯಯನದ ಅಧಿಸೂಚನೆ ದಿನಾಂಕ 14.09.2006ರ(ತಿದ್ದುಪಡಿ ದಿನಾಂಕ: 01.12.2009) ಪ್ರಕಾರ, ಪರಿಸರ ಸಾರ್ವಜನಿಕ ಆಲಿಕೆಯನ್ನು ನಡೆಸಬೇಕಿದೆ. ರಾಜ್ಯ ಮಟ್ಟದ ಪರಿಸರ ಅಘಾತ ಅಧ್ಯಯನ ಪ್ರಾಧಿಕಾರ, ಕರ್ನಾಟಕ ಸರ್ಕಾರ, ಇವರ Terms of Reference ಪತ್ರ ಸಂಖ್ಯೆ : SEIAA 297 MIN 2021 ದಿನಾಂಕ: 13.10.2021 ಮತ್ತು ಉದ್ದಿಮೆಯವರು ನೀಡಿದ ನಿವೇದನೆಯ ಪತ್ರದ ಸ್ವೀಕೃತಿ ದಿನಾಂಕ 29.01.2022 ರ ಪ್ರಕಾರ ಪರಿಸರ ಸಾರ್ವಜನಿಕ ಆಲಿಕೆಯನ್ನು ಮಂಡಳಿವತಿಯಿಂದ ನಡೆಸಲಾಗುತ್ತಿದೆ. **ಯೋಜನೆಯ ವಿವರಗಳು ಕೆಳಕಂಡಂತಿವೆ.**

1. **ಕಂಪನಿಯ ಹೆಸರು ಮತ್ತು ವಿಳಾಸ: ಶ್ರೀ. ಮಗನಲಾಲ್ ಭಿಮಾಜಿ ಪಟೇಲ್ ಶಾಂತೇರಿ, ಶಿವತೀರ್ಥ ಮಹಂತೇಶ ನಗರ, ಬೆಳಗಾವಿ ತಾಲ್ಲೂಕು & ಜಿಲ್ಲೆ**
2. **ಉದ್ದೇಶಿತ ಯೋಜನೆಯ ಸ್ಥಳ: ಸರ್ವೆ ನಂ. 59/3, 13, 14 & 20, ಅಂಬೇವಾಡಿ ಗ್ರಾಮ, ಬೆಳಗಾವಿ ತಾಲ್ಲುಕು & ಬೆಳಗಾವಿ ಜಿಲ್ಲೆ, ಕರ್ನಾಟಕ.**
3. **ಉದ್ದೇಶಿತ ಯೋಜನೆಯ ಕಾರ್ಯ ಚಟುವಟಿಕೆ: 1,51,620TPA ಸಾಮರ್ಥ್ಯದ ಕಟ್ಟಡ ಕಲ್ಲು ಗಣಿಗಾರಿಕೆ**
4. **ಮಾಲಿನ್ಯ ನಿಯಂತ್ರಣ ಕ್ರಮಗಳು:** ನೈರ್ಮಲ್ಯ ಸೌಲಭ್ಯಗಳು ಪೂರೈಕೆದಾರರೊಂದಿಗೆ ಸುಸಜ್ಜಿತವಾಗಿರಬೇಕು. ಮಳೆಯ ಸಮಯದಲ್ಲಿ ಹರಿಯುವ ನೀರಿನಿಂದ ಕೆಲಸ ಮಾಡುವ ಹೊಂಡಗಳ ಮುಳುಗುವಿಕೆಯನ್ನು ತಡೆದು ಹಾಕಲು ಸರಿಯಾದ ಒಳಚರಂಡಿಯನ್ನು ನಿರ್ವಹಿಸಲಾಗುತ್ತದೆ. ಯಾವುದೇ ಸಂದರ್ಭದಲ್ಲಿ ಅಸ್ತಿತ್ವದಲ್ಲಿರುವ ಸಸ್ಯ ಮತ್ತು ಪ್ರಾಣಿಗಳ ನೈಸರ್ಗಿಕ ಆವಾಸಸ್ಥಾನಗಳಿಗೆ ತೊಂದರೆಯಾಗುವುದಿಲ್ಲ. ಕನಿಷ್ಠ ಮಣ್ಣಿನ ಸವಕಳಿ ಆಗುವಂತೆ ಹಸಿರು ಪಟ್ಟಿಯನ್ನು ಅಭಿವೃದ್ಧಿ ಪಡಿಸಲಾಗುವುದು.
5. **ಪರಿಸರ ಸಾರ್ವಜನಿಕ ಸಭೆಯ ಸ್ಥಳ, ದಿನಾಂಕ ಮತ್ತು ಸಮಯ: ದಿನಾಂಕ: 08.06.2022 (ಮಂಗಳವಾರ) ರಂದು ಬೆಳಗ್ಗೆ 11:30 ಗಂಟೆ, ಸರ್ವೆ ನಂ. 59/3, 13, 14 & 20, ಅಂಬೇವಾಡಿ ಗ್ರಾಮ, ಬೆಳಗಾವಿ ತಾಲ್ಲೂಕು & ಬೆಳಗಾವಿ ಜಿಲ್ಲೆ**

6. ಯೋಜನೆಯ ಕಾರ್ಯಕಾರಿ ಸಾರಾಂಶ ಸಾರ್ವಜನಿಕ ಪರಾಮರ್ಶೆಗೆ ಇಡುವ ಸ್ಥಳ: ಅ. ಜಿಲ್ಲಾಧಿಕಾರಿಗಳ ಕಛೇರಿ, ಬೆಳಗಾವಿ ಜಿಲ್ಲೆ, ಬೆಳಗಾವಿ ಆ. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳ ಕಛೇರಿ, ಜಿಲ್ಲಾ ಪಂಚಾಯತ್, ಬೆಳಗಾವಿ ಇ. ಜಿಲ್ಲಾ ಕೈಗಾರಿಕಾ ಕೇಂದ್ರ, ಬೆಳಗಾವಿ ಈ. ತಾಲ್ಲೂಕು ಪಂಚಾಯಿತಿ, ಬೆಳಗಾವಿ ಉ. ಗ್ರಾಮ ಪಂಚಾಯಿತಿ ಕಾರ್ಯಾಲಯ, ಅಂಬೇವಾಡಿ ಊ. ಪ್ರಾದೇಶಿಕ ಅಧಿಕಾರಿಗಳ ಕಛೇರಿ, ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ, ಬೆಳಗಾವಿ ಋ. ರಾಜ್ಯ ಮಟ್ಟದ ಪರಿಸರ ಅಘಾತ ಅಧ್ಯಯನ ಪ್ರಾಧಿಕಾರ, ಅರಣ್ಯ, ಜೀವಪರಿಸ್ಥಿತಿ ಮತ್ತು ಪರಿಸರ ಇಲಾಖೆ, ಕರ್ನಾಟಕ ಸರ್ಕಾರ, ಕೊಠಡಿ ಸಂಖ್ಯೆ. 706, 7ನೇ ಮಹಡಿ 4ನೇ ಗೇಟ್, ಬಹುಮಹಡಿಗಳ ಕಟ್ಟಡ, ಬೆಂಗಳೂರು–560001 ಎ. ಸಹಾಯ ಕೇಂದ್ರ, ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ, ನೆಲ ಅಂತಸ್ತು, ನಂ.49, ಪರಿಸರ ಭವನ, ಚರ್ಚ್ ಸ್ಟ್ರೀಟ್, ಬೆಂಗಳೂರು–560 001

ಸೂಚನೆ: ಯೋಜನಾ ಸ್ಥಳದಲ್ಲಿ ವಾಸವಾಗಿರುವ ಆಸಕ್ತ ನಿವಾಸಿಗಳು, ಪರಿಸರಾಸಕ್ತ ಗುಂಪುಗಳು ಮತ್ತು ಈ ಯೋಜನೆಯಿಂದ ತೊಂದರೆಗೊಳಗಾಗಬಹುದಾದ ಸಾರ್ವಜನಿಕರು ತಮ್ಮ ಸಲಹೆಗಳು, ಅನಿಸಿಕೆಗಳು, ಟೀಕೆಟಿಪ್ಪಣಿಗಳು ಹಾಗೂ ಅಹವಾಲುಗಳನ್ನು ಮೌಖಿಕ/ಲಿಖಿತ/ಇ–ಮೇಲ್ ಮೂಲಕ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ/ಅಧ್ಯಕ್ಷರು, ಪರಿಸರ ಸಾರ್ವಜನಿಕ ಸಮಿತಿ (ಜಿಲ್ಲಾಧಿಕಾರಿಗಳು, ಬೆಳಗಾವಿ ಜಿಲ್ಲೆ, ಬೆಳಗಾವಿ) ಇವರಿಗೆ ಈ ಅಧಿಸೂಚನೆ ಪ್ರಕಟವಾದ 30 ದಿನಗಳ ಒಳಗೆ ಸಲ್ಲಿಸತಕ್ಕದ್ದು, ಇಚ್ಛೆಯುಳ್ಳ ಸಾರ್ವಜನಿಕರು ಮೇಲೆ ತಿಳಿಸಿರುವ ದಿನದಂದು ಪರಿಸರ ಸಾರ್ವಜನಿಕ ಸಭೆಯಲ್ಲಿ ಪಾಲ್ಗೊಳ್ಳಬಹುದಾಗಿದೆ. ಹೆಚ್ಚಿನ ವಿವರಗಳನ್ನು ಮಂಡಳಿಯ ವೆಬ್‌ಸೈಟ್: **kspcb.karnataka.gov.in** ನಲ್ಲಿ ಪಡೆಯಬಹುದು.

ಸಹಿ/–
ಸದಸ್ಯ ಕಾರ್ಯದರ್ಶಿ

"ಪ್ಲಾಸ್ಟಿಕ್ ಬಳಕೆ ನಿಲ್ಲಿಸಿ, ಪರಿಸರ ಹಾನಿ ತಪ್ಪಿಸಿ"

ಕರ್ನಾಟಕ ಸರ್ಕಾರ ಜಿಲ್ಲಾ ಪಂಚಾಯತ್, ಚಿತ್ರದುರ್ಗ
ಜಿಲ್ಲಾ ಆರೋಗ್ಯ & ಕುಟುಂಬ ಕಲ್ಯಾಣ ಸೊಸೈಟಿ (ರಿ), ಚಿತ್ರದುರ್ಗ.
ಜಿಲ್ಲಾ ಯೋಜನಾ ನಿರ್ವಹಣಾ ಘಟಕ (ಎನ್‌ಹೆಚ್‌ಎಂ)
ಸಂಖ್ಯೆ: ಡಿ.ಪಿ.ಎಂ.ಯು/ಎನ್.ಹೆಚ್.ಎಂ/ನೇಮಕಾತಿ/ಸಿಟಿಎ/01/2022–23
ದಿನಾಂಕ: 29.04.2022

ಪ್ರಕಟಣೆ

ರಾಷ್ಟ್ರೀಯ ನಗರ ಆರೋಗ್ಯ ಅಭಿಯಾನದ ಯೋಜನೆಡಿಯಲ್ಲಿ ಗುತ್ತಿಗೆ ಆಧಾರದ ಮೇಲೆ ಎಂ.ಬಿ.ಬಿ.ಎಸ್./ಆಯುಷ್ ವೈದ್ಯರನ್ನು ನೇಮಕಾತಿ ಮಾಡಲು ಆದೇಶವಿರುತ್ತದೆ. ಆದ್ದರಿಂದ ಈ ಕೆಳಕಂಡಂತೆ ನೇಮಕಾತಿ ಮಾಡಿಕೊಳ್ಳಲು ಅರ್ಜಿಯನ್ನು ಆಹ್ವಾನಿಸಿದೆ.
ಮೀಸಲಾತಿ: (1) ಸಾಮಾನ್ಯ–ಸಾಮಾನ್ಯ ಅಭ್ಯರ್ಥಿ–01 ಹುದ್ದೆ. (2) ಪರಿಶಿಷ್ಟ ಜಾತಿ–ಸಾಮಾನ್ಯ ಅಭ್ಯರ್ಥಿ–01 ಹುದ್ದೆ. (3) ಪರಿಶಿಷ್ಟ ಪಂಗಡ–ಸಾಮಾನ್ಯ ಅಭ್ಯರ್ಥಿ–01 ಹುದ್ದೆ. **ಒಟ್ಟು 03 ಹುದ್ದೆಗಳು.**
ವಿದ್ಯಾರ್ಹತೆ: 1) MBBS/BAMS/BHMS/BNYS/BUMS/Siddha. 2) Must have completed housemanship. 3) Should have Professional Registration Certificate from government recognised registration Authority. **ಮಾಸಿಕ ಸಂಚಿತ ವೇತನ:** ಎಂ.ಬಿ.ಬಿ.ಎಸ್. ವೈದ್ಯರಿಗೆ ರೂ. 35,000/– ಹಾಗೂ ಆಯುಷ್ ವೈದ್ಯರಿಗೆ ರೂ. 26,000/–.
ಸೂಚನೆ: ಎಂ.ಬಿ.ಬಿ.ಎಸ್ ವೈದ್ಯರು ಬಾರದೇ ಇದ್ದಲ್ಲಿ ಆಯುಷ್ ವೈದ್ಯರನ್ನು ಪರಿಗಣಿಸಲಾಗುವುದು. ಆಸಕ್ತಿಯುಳ್ಳ ಅಭ್ಯರ್ಥಿಗಳು ದಿನಾಂಕ: 20,04,2022 ರಿಂದ 12.05.2022 ರ ಸಂಜೆ 05:00 ರೊಳಗೆ ಜಿಲ್ಲಾ ಯೋಜನಾ ನಿರ್ವಹಣಾ ಘಟಕ, ಎನ್. ಎಚ್.ಎಂ., ಜಿಲ್ಲಾ ಪ್ರಯೋಗಶಾಲಾ ಆವರಣ ಜಿಲ್ಲಾ ಆಸ್ಪತ್ರೆ ಹಿಂಭಾಗ, ಚಿತ್ರದುರ್ಗ ಇಲ್ಲಿಗೆ ಅರ್ಜಿ ಸಲ್ಲಿಸಬಹುದು. (ಸದರಿ ನೇಮಕಾತಿಗಳು ಎನ್.ಹೆಚ್.ಎಂ. ನಿಯಮಾವಳಿಯ ಷರತ್ತು ಮತ್ತು ನಿಬಂಧನೆಗೆ ಒಳಪಟ್ಟಿರುತ್ತದೆ)

ಸಹಿ/– ಉಪಾಧ್ಯಕ್ಷರು, ಜಿಲ್ಲಾ ಆರೋಗ್ಯ ಮತ್ತು
ಕು.ಕ. ಸಂಘ (ರಿ) ಹಾಗೂ ಜಿಲ್ಲಾ ಆರೋಗ್ಯ
ಮತ್ತು ಕು.ಕ. ಅಧಿಕಾರಿಗಳು, ಚಿತ್ರದುರ್ಗ

RO No. 104: DIPR/CTA/MCA/2022-23

ಟ್ರಾಮಾಕೇರ್ ಕೇಂದ್ರ
ಬೆಂಗಳೂರು ವೈದ್ಯಕೀಯ ಮಹಾವಿದ್ಯಾಲಯ ಮತ್ತು ಸಂಶೋಧನಾ ಸಂಸ್ಥೆ
(ಕರ್ನಾಟಕ ಸರ್ಕಾರದ ಒಂದು ಸ್ವಾಯುತ್ತ ಸಂಸ್ಥೆ)
ವಿಶೇಷಾಧಿಕಾರಿಗಳ ಕಛೇರಿ, ವಿಕ್ಟೋರಿಯಾ ಆಸ್ಪತ್ರೆ ಆವರಣ, ಕೋಟೆ, ಕೆ.ಆರ್. ರಸ್ತೆ, ಬೆಂಗಳೂರು–560002.
ದೂರವಾಣಿ: 080–26802725/26802727, ಇ–ಮೇಲ್: sploffrtcc@gmail.com
ವೆಬ್‌ಸೈಟ್: www.teccbmcri.karnataka.gov.in

ಸಂಖ್ಯೆ: ಟಿಸಿಸಿ/ಟೆಂಡರ್/01/2022-23 ದಿನಾಂಕ: 07.05.2022

ಇ–ಟೆಂಡರ್ ಅಧಿಸೂಚನೆ

ಟ್ರಾಮಾಕೇರ್ ಕೇಂದ್ರ, ಬೆಂವೈವಿಸಂಸಂ., ಬೆಂಗಳೂರು ಇಲ್ಲಿಗೆ **ಔಷಧಗಳು, ರಾಸಾಯನಿಕಗಳು ಹಾಗೂ ಆಸ್ಪತ್ರೆಯ ಅವಶ್ಯಕ ವಸ್ತುಗಳನ್ನು ಪೂರೈಸುವ ಸಲುವಾಗಿ** ಇ–ಟೆಂಡರ್ ಆಹ್ವಾನಿಸಲಾಗಿದೆ. ಟೆಂಡರ್ ಅರ್ಜಿ, ಅಗತ್ಯವಿರುವ ಮಾಹಿತಿಗಳ ವಿವರ, ಇ.ಎಂ.ಡಿ ಮತ್ತು ಷರತ್ತು ಮುಂತಾದ ವಿವರಗಳನ್ನು **https://www.eproc.karnataka.gov.in** ಹಾಗೂ ನಮ್ಮ ಸಂಸ್ಥೆಯ **https://www.teccbmcri.karnataka.gov.in** ವೆಬ್‌ಸೈಟ್‌ನಲ್ಲಿ ವೀಕ್ಷಿಸಿ. ಆಸಕ್ತಿಯುಳ್ಳ ಟೆಂಡರ್‌ದಾರರು **https://www.eproc.karnataka.gov.in** e-procurement portalನಲ್ಲಿ ನೋಂದಾಯಿಸತಕ್ಕದ್ದು. ನೋಂದಾವಣಿಗೆ ಅಗತ್ಯವಾದ ವಿವರಗಳನ್ನು ವೆಬ್‌ಸೈಟ್‌ನಲ್ಲಿ ನೋಡಬಹುದು.

ಟೆಂಡರ್‌ಗಳನ್ನು ಅಪ್‌ಲೋಡ್ ಮಾಡಲು ಪ್ರಾರಂಭ ದಿನಾಂಕ: 09/05/2022 ಅಪರಾಹ್ನ 04:00 ರಿಂದ. ಟೆಂಡರ್‌ಗಳನ್ನು ಅಪ್‌ಲೋಡ್ ಮಾಡಲು ಅಂತಿಮ ದಿನಾಂಕ: 08/06/2022 ಅಪರಾಹ್ನ 04:00ರ ಒಳಗಾಗಿ. ಟೆಂಡರ್‌ಗಳನ್ನು ತೆರೆಯುವ ದಿನಾಂಕ: 10/06/2022 ಪೂರ್ವಾಹ್ನ 12:00ರ ಒಳಗಾಗಿ. ಹೆಚ್ಚಿನ ವಿವರಗಳಿಗಾಗಿ ವಿಶೇಷಾಧಿಕಾರಿಗಳು, ಟ್ರಾಮಾಕೇರ್ ಕೇಂದ್ರ, ವಿಕ್ಟೋರಿಯಾ ಆಸ್ಪತ್ರೆ ಆವರಣ, ಬೆಂಗಳೂರು ಇವರನ್ನು ಸಂಪರ್ಕಿಸಬಹುದು.

ಸಹಿ/–
ವಿಶೇಷಾಧಿಕಾರಿಗಳು

DIPR/CP/RO.392/AAPL/2022-23

ಕೋವಿಡ್-19. ಆತಂಕ ಬೇಡ; ಮುನ್ನೆಚ್ಚರಿಕೆ ಇರಲಿ.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಕರ್ನಾಟಕ ಸರ್ಕಾರ
ಜಿಲ್ಲಾ ಪಂಚಾಯತ್, ಬಳ್ಳಾರಿ
ಕಾರ್ಯನಿರ್ವಾಹಕ ಅಭಿಯಂತರರವರ ಕಚೇರಿ, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ, ಬಳ್ಳಾರಿ
ಸಂ: ಕಾನಿಅ/ಗ್ರಾಕು.ನೀ&ನೈ/ವಿಬ/ಜೆಇ–01/JJM/MVS/Nidu/2022-23/244 ದಿನಾಂಕ: 05–05–2022

ಇ–ಟೆಂಡರ್ ಪ್ರಕಟಣೆ

(ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅದ್ಯಾದೇಶ–2000 ರಂತೆ)

ಕರ್ನಾಟಕ ರಾಜ್ಯ ಪಾಲರ ಪರವಾಗಿ ಕಾರ್ಯನಿರ್ವಾಹಕ ಇಂಜಿನಿಯರ್, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ ಬಳ್ಳಾರಿ, ಬಳ್ಳಾರಿ ಜಿಲ್ಲೆಯ 2021–22 ಸಾಲಿನ ಜಲ್ ಜೀವನ್ ಮೀಷನ್ ಯೋಜನೆಯಡಿಯಲ್ಲಿ ಅನುಮೋದನೆಗೊಂಡಿರುವ ಸಂಡೂರು ತಾಲ್ಲೂಕಿನ ನಿಡುಗುರ್ತಿ ಮತ್ತು ಇತರೆ 60 ಜನವಸತಿಗಳಿಗೆ ಬಹುಗ್ರಾಮ ಕುಡಿಯುವ ನೀರು ಸರಬರಾಜು ಯೋಜನೆ ಕಾಮಗಾರಿಯನ್ನು ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಇ–ಟೆಂಡರ್ ಕರೆಯಲಾಗಿದ್ದು, ಸದರಿ ಟೆಂಡರ್‌ನ ಬಗ್ಗೆ ಹೆಚ್ಚಿನ ಮಾಹಿತಿಗಾಗಿ (www.eproc.karnataka.gov.in) ವೆಬ್‌ಸೈಟ್‌ನ್ನು ಸಂಪರ್ಕಿಸಲು ಕೋರಿದೆ ಹಾಗೂ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ **ದಿನಾಂಕ: 05–05–2022** ರಿಂದ Download ಮಾಡಿಕೊಳ್ಳಬಹುದು.

ಟೆಂಡರ್‌ಗಳನ್ನು ಸಲ್ಲಿಸುವ ಕೊನೆಯ **ದಿನಾಂಕ: 06–06–2022 ರಂದು ಸಂಜೆ 17:30** ರವರೆಗೆ. ಸಲ್ಲಿಸಬಹುದಾಗಿರುತ್ತದೆ. ತಾಂತ್ರಿಕ ಬಿಡ್ ತೆರೆಯುವ **ದಿನಾಂಕ: 08–06–2022 ಸಮಯ ಬೆಳಿಗ್ಗೆ 11:00 ಗಂಟೆ** ನಂತರ, ಆರ್ಥಿಕ ಬಿಡ್ ತೆರೆಯುವ ದಿನಾಂಕ ವೇಳೆಯನ್ನು ತಾಂತ್ರಿಕ ಬಿಡ್‌ಲ್ಲಿ ಅರ್ಹತೆ ಹೊಂದಿದವರಿಗೆ ತಿಳಿಸಲಾಗುವುದು ಹಾಗೂ **ದಿನಾಂಕ: 12–05–2022** ರಂದು ಪೂರ್ವಭಾವಿ ಸಭೆಯನ್ನು ಮುಖ್ಯ ಇಂಜಿನಿಯರ್ ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಕಚೇರಿ, ಬೆಂಗಳೂರು ಒಂದನೇ ಮಹಡಿ, ಕೆ.ಹೆಚ್.ಬಿ. ಕಟ್ಟಡ ಕೆ.ಜೆ. ರಸ್ತೆ ಬೆಂಗಳೂರು–560009 ಕಚೇರಿಯಲ್ಲಿ ಕರೆಯಲಾಗಿದೆ.

ಕಾಮಗಾರಿಗಾಗಿ ಟೆಂಡರ್ ಸಲ್ಲಿಸಲು ನಿಗಧಿ ಪಡಿಸಿದ ಅರ್ಹತೆ, ಷರತ್ತುಗಳು, ಕಾಮಗಾರಿ ವಿವರ ಇತ್ಯಾದಿಗಳನ್ನು **ದಿನಾಂಕ: 11–05–2022 ರ 17:30 ಗಂಟೆಯವರೆಗೆ** ವಿಭಾಗ ಕಚೇರಿಯಲ್ಲಿ ಅಥವಾ ಇ–ಪ್ರೊಕ್ಯೂರ್‌ಮೆಂಟ್ ಹೆಲ್ಪ್ ಡೆಸ್ಕನಿಂದ ಪಡೆಯಬಹುದು. ಇನ್ನೂ ಹೆಚ್ಚಿನ ಮಾಹಿತಿಗಾಗಿ ಈ ವಿಭಾಗ ಕಚೇರಿ ಸಮಯದಲ್ಲಿ ಭೇಟಿ ನೀಡಿ ಮಾಹಿತಿಯನ್ನು ಪಡೆಯಬಹುದು.

ಸಹಿ/– ಕಾರ್ಯನಿರ್ವಾಹಕ ಅಭಿಯಂತರರು,
ಗ್ರಾ.ಕು.ನೀ&ನೈ, ವಿಭಾಗ, ಬಳ್ಳಾರಿ

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಕಾರ್ಯಪಾಲಕ ಅಭಿಯಂತರರ ಕಚೇರಿ–6, ಘನ ತ್ಯಾಜ್ಯ ನಿರ್ವಹಣೆ,
3ನೇ ಮಹಡಿ. ಅನೆಕ್ಸ್–2 ಕಟ್ಟಡ, ನರಸಿಂಹರಾಜ ಚೌಕ, ಬೆಂಗಳೂರು–560 002.
ಸಂಖ್ಯೆ: ಬೃಬೆಂಮಪಾ/ಕಾಪಾಅ–6/ಘತ್ಯಾನಿ/ಟೆಂಡರ್/04/2022–23 ದಿನಾಂಕ: 06.05.2022

ಟೆಂಡರ್‌ಗಾಗಿ ಆಹ್ವಾನ (ಐಎಫ್‌ಟಿ)
(ಕರ್ನಾಟಕ ಸರ್ಕಾರದ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಮಾತ್ರ)

ಕಾರ್ಯಪಾಲಕ ಅಭಿಯಂತರರು–6, ಘನ ತ್ಯಾಜ್ಯ ನಿರ್ವಹಣೆ, ಬೃ.ಬೆಂ.ಮ.ಪಾಲಿಕೆ, ಬೆಂಗಳೂರು, ಇವರ ಪರವಾಗಿ ಅರ್ಹ ಗುತ್ತಿಗೆದಾರರಿಂದ ಈ ಕೆಳಕಂಡ ಕಾಮಗಾರಿಗಳಿಗಾಗಿ ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ.

ಕಾಮಗಾರಿಯ ಹೆಸರು	ಟೆಂಡಗಾರಿಗಿಟ್ಟ ಅಂದಾಜು ಮೊತ್ತ (₹. ಲಕ್ಷಗಳಲ್ಲಿ)	ಇಎಂಡಿ (₹. ಲಕ್ಷಗಳಲ್ಲಿ)
ಟೆಂಡರ್ ದಾಖಲೆಯಲ್ಲಿನ ಸ್ಕೋಪ್ ಆಫ್ ವರ್ಕ್ಸ್‌ನಂತೆ ಬೃ.ಬೆಂ.ಮ.ಪಾಲಿಕೆ ವ್ಯಾಪ್ತಿಯಲ್ಲಿ ಘ.ತ್ಯಾ.ನಿ ನಿಯಮಗಳು–2016 ರೀತಿಯ ಘನ ತ್ಯಾಜ್ಯ ನಿರ್ವಹಣೆ ಬಗ್ಗೆ ಅರಿವು/ಜಾಗೃತಿ ಮೂಡಿಸಲು ಐಇಸಿ ಚಟುವಟಿಕೆಗಳನ್ನು ಏರ್ಪಾಡು ಮಾಡುವುದು.	1000.00	15.00 (1 ಲಕ್ಷ ಇ–ಪ್ರೊಕ್ಯೂರ್‌ಮೆಂಟ್ ಮುಖಾಂತರ ಮತ್ತು ಉಳಿಕೆ ಮೊತ್ತ ಬಿಜಿ ಮುಖಾಂತರ)

ಟೆಂಡರ್ ವೇಳಾಪಟ್ಟಿ: (1) ಆರ್‌ಎಫ್‌ಪಿ ಪ್ರಸ್ತಾವನೆ ದಾಖಲೆಗಳ ಲಭ್ಯತೆ **13.05.2022** ರಿಂದ. (2) ಆಕ್ಷೇಪಣೆಗಳಿಗೆ ದಿನಾಂಕ: **27.05.2022.** (3) ಬಿಡ್ ಪೂರ್ವಭಾವಿ ಸಭೆಯನ್ನು ಮುಖ್ಯ ಅಭಿಯಂತರರ ಕಚೇರಿ, (ಘ.ತ್ಯಾ.ನಿ) 4ನೇ ಮಹಡಿ ಅನೆಕ್ಸ್–3, ಬೃ.ಬೆಂ.ಮ.ಪಾ, ಕೇಂದ್ರ ಕಚೇರಿ, ಬೆಂಗಳೂರು ಇಲ್ಲಿ ದಿನಾಂಕ **31.05.2022**ರ ಸಂಜೆ **4:00** ಗಂಟೆಗೆ ನಡೆಸಲಾಗುವುದು. (4) ಭರ್ತಿ ಮಾಡಿದ ಪ್ರಸ್ತಾವನೆಗಳನ್ನು ಸಲ್ಲಿಸಲು ಕೊನೆಯ ದಿನಾಂಕ ಮತ್ತು ಸಮಯ: **14.06.2022**ರ ಸಂಜೆ **4:30** ಗಂಟೆಗೆ. (5) ತಾಂತ್ರಿಕ ಪ್ರಸ್ತಾವನೆಗಳನ್ನು ತೆರೆಯುವ ದಿನಾಂಕ ಮತ್ತು ಸಮಯ: **16.06.2022**ರ ಸಂಜೆ **4:00** ಗಂಟೆಗೆ. (6) ಆರ್ಥಿಕ ಪ್ರಸ್ತಾವನೆಗಳನ್ನು ತಾಂತ್ರಿಕ ಪ್ರಸ್ತಾವನೆಗಳಿಗೆ ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಅನುಮೋದನೆ ದೊರೆತ ನಂತರ ತೆರೆಯಲಾಗುವುದು. ಹೆಚ್ಚಿನ ವಿವರಗಳನ್ನು ಮೇಲ್ಕಂಡ ಕಚೇರಿಯಿಂದ ಕೆಲಸದ ವೇಳೆಯಲ್ಲಿ ಅಥವಾ ವೆಬ್‌ಸೈಟ್ **https://eproc.karnataka.gov.in** ನಲ್ಲಿ ಪಡೆದುಕೊಳ್ಳಬಹುದಾಗಿದೆ.

ಸಹಿ/– ಕಾರ್ಯಪಾಲಕ ಅಭಿಯಂತರರು,
ಘನ ತ್ಯಾಜ್ಯ ನಿರ್ವಹಣೆ

ಕೋವಿಡ್-19 - ಗಾಳಿಸುದ್ದಿ ಹರಡಬೇಡಿ, ಜವಾಬ್ದಾರಿಯಿಂದ ವರ್ತಿಸಿ, ಸೋಂಕನ್ನು ದೂರವಿಡಿ-ಸೋಂಕಿತರನ್ನಲ್ಲ.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಅಭಿಮತ ಪುಟದ ವಿಳಾಸ
ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75, ಎಂ.ಜಿ.ರಸ್ತೆ, ಬೆಂಗಳೂರು-01
ಇ-ಮೇಲ್ : editpage@prajavani.co.in

ಅಭಿಮತ



ಸುಭಾಷಿತ

ಜೀವನವೇ ಒಂದು ಪ್ರಯೋಗ. ಪ್ರಯೋಗಗಳು ಹೆಚ್ಚೆಚ್ಚು ನಡೆದಷ್ಟೂ ಒಳ್ಳೆಯದು.

-ರಾಲ್ಫ್ ವಾಲ್ಡೊ ಎಮರ್ಸನ್

ಬಿ-ಖಾತಾ ಸಮಸ್ಯೆಗಳಿಗೆ ಮುಕ್ತಿ ಎಚ್ಚರಿಕೆಯ ನಡೆ ಅಗತ್ಯ

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ (ಬಿಬಿಎಂಪಿ) ವ್ಯಾಪ್ತಿಯಲ್ಲಿ ಭೂಪರಿವರ್ತನೆ ಮಾಡದೆಯೇ ನಿರ್ಮಿಸಿದ ಕಂದಾಯ ಬಡಾವಣೆಗಳು ಸಾವಿರಾರು ಸಂಖ್ಯೆಯಲ್ಲಿವೆ. ಇಂತಹ ಬಡಾವಣೆಗಳಲ್ಲಿ ನಿವೇಶನ ಹೊಂದಿರುವವರು ಮನೆ ನಿರ್ಮಿಸಲು ಮುಂದಾದರೆ, ಬಿಬಿಎಂಪಿಯಿಂದ ಕಟ್ಟಡ ಯೋಜನೆಗೆ ಮಂಜೂರಾತಿ ನೀಡಲು ಈಗಿನ ನಿಯಮಗಳಲ್ಲಿ ಅವಕಾಶ ಇಲ್ಲ. ರಾಷ್ಟ್ರೀಕೃತ ಬ್ಯಾಂಕ್‌ಗಳಲ್ಲಿ ಅವರಿಗೆ ಸಾಲವೂ ಸಿಗದು. ವಸ್ತುಸ್ಥಿತಿ ಹೀಗಿದ್ದರೂ ಇಂತಹ ಬಡಾವಣೆಗಳಲ್ಲಿ ಕಟ್ಟಡಗಳ ನಿರ್ಮಾಣ ದಶಕಗಳಿಂದ ಅವ್ಯಾಹತವಾಗಿ ನಡೆದುಕೊಂಡು ಬಂದಿದೆ. ಇಂತಹ ಸ್ವತ್ತುಗಳ ಮಾಲೀಕರು ನಾಗರಿಕ ಸೌಕರ್ಯಗಳನ್ನು ಬಳಸುತ್ತಿರುವುದರಿಂದ ಅವರಿಂದಲೂ ಆಸ್ತಿ ತೆರಿಗೆ ಸಂಗ್ರಹ ಮಾಡಬೇಕು ಎಂಬ ಉದ್ದೇಶದಿಂದ ಬಿಬಿಎಂಪಿಯು ಬೆಂಗಳೂರು ನಗರಕ್ಕೆ ಸೀಮಿತವಾಗಿ 'ಬಿ' ವಹಿಯನ್ನು ನಿರ್ವಹಿಸುವ ಪದ್ಧತಿಯನ್ನು ಪಾಲಿಸುತ್ತಿದೆ. 2009ರ ಬಿಬಿಎಂಪಿ ಆಸ್ತಿ ತೆರಿಗೆ ನಿಯಮಗಳ ಪ್ರಕಾರ ಸ್ವತ್ತಿನ ಮೌಲ್ಯಮಾಪನ ನಡೆಸಿ, ಅದರ ಮಾಲೀಕರಿಂದ ಸಂಗ್ರಹಿಸುವ ತೆರಿಗೆ ವಿವರಗಳನ್ನು ನಮೂನೆ 'ಎ'ನಲ್ಲಿ ಹಾಗೂ ತೆರಿಗೆ ಮೌಲ್ಯಮಾಪನ ನಡೆಸಲು ಸಾಧ್ಯವಿಲ್ಲದ ಸ್ವತ್ತಿನ ತೆರಿಗೆ ವಿವರಗಳನ್ನು ನಮೂನೆ 'ಬಿ'ನಲ್ಲಿ ನಮೂದಿಸಬೇಕು. 'ಬಿ' ವಹಿಯಲ್ಲಿ ದಾಖಲಾಗುವ ಸ್ವತ್ತುಗಳ ದಾಖಲೆಯನ್ನು ಬಿ-ಖಾತಾ ಎಂದು ಕರೆಯಲಾಗುತ್ತಿದೆ. 2020ರ ಬಿಬಿಎಂಪಿ ಕಾಯ್ದೆಯ ಸೆಕ್ಷನ್ 144 (6)ರ ಅಡಿ ಕಟ್ಟಡಗಳಿಂದ ಹಾಗೂ ಖಾಲಿ ನಿವೇಶನಗಳಿಂದ ಆಸ್ತಿ ತೆರಿಗೆ ಸಂಗ್ರಹ ಮಾಡಲು ಅವಕಾಶ ಕಲ್ಪಿಸಲಾಗಿದೆ. ಅವು ಅಧಿಕೃತ ಇರಬಹುದು ಅಥವಾ ಅನಧಿಕೃತವೇ ಇರಬಹುದು. ಅನಧಿಕೃತ ಸ್ವತ್ತುಗಳಿಂದ ತೆರಿಗೆ ಪಡೆದ ಮಾತ್ರಕ್ಕೆ ಅವು ಅಧಿಕೃತ ಆಗುವುದಿಲ್ಲ ಎಂದು ಸ್ಪಷ್ಟಪಡಿಸಲಾಗಿದೆ.

ಬಿ-ಖಾತಾ ಸ್ವತ್ತಿನ ಮಾಲೀಕರು ಅನುಭವಿಸುತ್ತಿರುವ ತಲ್ಲಣಗಳಿಗೆ ಇತಿಶ್ರೀ ಹಾಡಲು ಸರ್ಕಾರ ಮುಂದಾಗಿರುವುದು ಸ್ವಾಗತಾರ್ಹ. ಆದರೆ, ಈ ವಿಚಾರದಲ್ಲಿ ತೊಡಕುಗಳು ಎದುರಾಗಬಹುದು ಎಂಬ ಮುನ್ನೆಚ್ಚರಿಕೆಯೂ ಇರಬೇಕಾದುದು ಅಗತ್ಯ

ಬಿ- ಖಾತಾ ಹೊಂದಿರುವ ಸ್ವತ್ತುಗಳ ಮಾಲೀಕರು ಆಸ್ತಿ ತೆರಿಗೆ ಪಾವತಿಸುತ್ತಿದ್ದರೂ ಹಲವು ಸಮಸ್ಯೆಗಳನ್ನು ಎದುರಿಸುತ್ತಿದ್ದಾರೆ. ಇಂತಹ ನಿವೇಶನಗಳಲ್ಲಿ ಕಟ್ಟಡ ಯೋಜನೆಗೆ ಮಂಜೂರಾತಿ ಪಡೆಯದೇ ನಿರ್ಮಿಸಿರುವ ಕಟ್ಟಡಗಳಿಗೆ ಸ್ವಾಧೀನಾನುಭವ ಪ್ರಮಾಣಪತ್ರವೂ ಸಿಗುವುದಿಲ್ಲ. ಇವುಗಳಿಗೆ ಸ್ವತ್ತಿನ ಸಂಖ್ಯೆಯನ್ನೂ ಬಿಬಿಎಂಪಿ ನೀಡುತ್ತಿಲ್ಲ. ಇಂತಹ ಕಟ್ಟಡಗಳನ್ನು ಅಡಮಾನ ಇಟ್ಟು ಸಾಲ ಪಡೆಯುವುದಕ್ಕೂ ಸಾಧ್ಯವಾಗುವುದಿಲ್ಲ. ನಗರದಲ್ಲಿ ಈ ರೀತಿ ತ್ರಿಶಂಕು ಸ್ಥಿತಿಯಲ್ಲಿರುವ 6 ಲಕ್ಷಕ್ಕೂ ಅಧಿಕ ಸ್ವತ್ತುಗಳಿವೆ ಎಂದು ಬಿಬಿಎಂಪಿ ಅಂದಾಜಿಸಿದೆ. ಬಿ-ಖಾತಾ ಹೊಂದಿರುವ ಸ್ವತ್ತುಗಳಿಗೆ ದಂಡ ವಿಧಿಸಿ ಅವುಗಳನ್ನು ಕ್ರಮಬದ್ಧಗೊಳಿಸಬೇಕು ಎಂಬುದು ದಶಕಗಳ ಬೇಡಿಕೆ. ಇದಕ್ಕೆ ಸ್ಪಂದಿಸಿರುವ ಸರ್ಕಾರ, ಭೂಪರಿವರ್ತನೆ ಆಗದ ಬಡಾವಣೆಗಳಲ್ಲಿ 2007ಕ್ಕೂ ಹಿಂದೆ ರಚನೆಗೊಂಡಿರುವ ನಿವೇಶನಗಳಿಗೆ, ಸುಧಾರಣಾ ವೆಚ್ಚವನ್ನು ಪಾವತಿಸಿಕೊಂಡು ಖಾತಾ ಅಥವಾ ಸ್ವತ್ತಿನ ಗುರುತು ಸಂಖ್ಯೆ ನೀಡಲು ಮುಂದಾಗಿದೆ. ಸರ್ಕಾರದ ಮುಖ್ಯ ಕಾರ್ಯದರ್ಶಿ ಪಿ.ರವಿಕುಮಾರ್ ನೇತೃತ್ವದಲ್ಲಿ ಇತ್ತೀಚೆಗೆ ನಡೆದ ಉನ್ನತ ಮಟ್ಟದ ಸಭೆಯಲ್ಲಿ ಈ ಕುರಿತು ನಿರ್ಣಯ ಕೈಗೊಳ್ಳಲಾಗಿದೆ. ಸರ್ಕಾರವು ಅಧಿಕೃತವಾಗಿ ಅಧಿಸೂಚನೆ ಪ್ರಕಟಿಸಿದ ಬಳಿಕವಷ್ಟೇ ಈ ನಿರ್ಧಾರ ಜಾರಿಗೆ ಬರಲಿದೆ. ಬಿ-ಖಾತಾ ಸ್ವತ್ತಿನ ಮಾಲೀಕರು ಅನುಭವಿಸುತ್ತಿರುವ ತಲ್ಲಣಗಳಿಗೆ ಇತಿಶ್ರೀ ಹಾಡಲು ಸರ್ಕಾರ ಮುಂದಾಗಿರುವುದು ಸ್ವಾಗತಾರ್ಹ. ಆದರೆ, ಈ ವಿಚಾರದಲ್ಲಿ ಕೆಲವು ಕಾನೂನು ತೊಡಕುಗಳೂ ಇವೆ ಎಂಬುದು ಗಮನಾರ್ಹ.

ಸ್ಥಳೀಯ ಯೋಜನಾ ಪ್ರದೇಶದಲ್ಲಿ ಕೆಲ ಬಗೆಯ ಅನಧಿಕೃತ ನಿರ್ಮಾಣವನ್ನು ಸಕ್ರಮಗೊಳಿಸಲು ಮತ್ತು ಭೂಬಳಕೆ ಬದಲಾವಣೆಗೆ ಅವಕಾಶ ಕಲ್ಪಿಸಲು ಕರ್ನಾಟಕ ಪಟ್ಟಣ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆಯ ಸೆಕ್ಷನ್ 76 ಎಫ್‌ಎಫ್ ಅಡಿ ಅನುವು ಮಾಡಿಕೊಡಲಾಯಿತು. ಇದನ್ನು ಪ್ರಶ್ನಿಸಿ ಸರ್ಕಾರೇತರ ಸಂಸ್ಥೆಯೊಂದು ಸುಪ್ರೀಂ ಕೋರ್ಟ್‌ನಲ್ಲಿ ದಾವೆ ಹೂಡಿತ್ತು. 2017ರ ಜುಲೈನಲ್ಲಿ ಮಧ್ಯಂತರ ಆದೇಶ ನೀಡಿರುವ ಸುಪ್ರೀಂ ಕೋರ್ಟ್, ಕಾಯ್ದೆಯ ಈ ಅಂಶವನ್ನು ಜಾರಿಗೊಳಿಸುವುದಕ್ಕೆ ತಡೆಯಾಜ್ಞೆ ನೀಡಿತ್ತು. ಸುಪ್ರೀಂ ಕೋರ್ಟ್‌ನಿಂದ ಈ ಕುರಿತು ಅಂತಿಮ ಆದೇಶ ಬರುವವರೆಗೂ ಅನಧಿಕೃತ ನಿರ್ಮಾಣವನ್ನು ಸಕ್ರಮಗೊಳಿಸುವುದು ಸಾಧ್ಯವಿಲ್ಲ. ಬಿ-ಖಾತಾ ಇರುವ ಆಸ್ತಿಗಳಿಗೆ ಎ- ಖಾತಾ ನೀಡುವ ವಿಚಾರದಲ್ಲೂ ಇಂತಹದ್ದೇ ಪರಿಸ್ಥಿತಿ ಎದುರಾಗದಂತೆ ಎಚ್ಚರಿಕೆಯ ನಡೆಯನ್ನು ಸರ್ಕಾರ ಇಡಬೇಕು. ಬಿಬಿಎಂಪಿ ಕಾಯ್ದೆಯ ಸೆಕ್ಷನ್ 144 (20) ಪ್ರಕಾರ ಆಸ್ತಿ ತೆರಿಗೆ ಪಾವತಿ ಮಾಡುವ ಪ್ರತೀ ವ್ಯಕ್ತಿಗೂ ಸ್ವೀಕೃತಿ ಅಥವಾ ಖಾತಾ ನೀಡಬೇಕು. ಅದು ಕಾನೂನುಬದ್ಧ ಹಾಗೂ ಕಾನೂನುಬದ್ಧವಲ್ಲದ ಕಟ್ಟಡಗಳಿಗೆ ಬೇರೆ ಬೇರೆ ಆಗಿರಬೇಕು ಎಂದು ಸ್ಪಷ್ಟಪಡಿಸಲಾಗಿದೆ. ಹಾಗಾಗಿ ಪ್ರಸ್ತುತ ಬಿ- ಖಾತಾ ಹೊಂದಿರುವ ಸ್ವತ್ತುಗಳಿಗೆ ಎ- ಖಾತಾ ನೀಡುವ ಪ್ರಕ್ರಿಯೆಯು ಗೊಂದಲಗಳಿಂದ ಮುಕ್ತವಾಗಿರುವಂತೆ ನೋಡಿಕೊಳ್ಳಬೇಕಾದರೆ ಈ ನಿರ್ಧಾರವು ಇನ್ನಷ್ಟು ಕಾನೂನಿನ ಪರಾಮರ್ಶೆಗೆ ಒಳಪಡಬೇಕಾಗುತ್ತದೆ. ಬಿ-ಖಾತಾ ಹೊಂದಿದವರಿಗೆ ಎ- ಖಾತಾ ನೀಡುವಾಗ ಸಂಗ್ರಹಿಸುವ ಸುಧಾರಣಾ ವೆಚ್ಚದಿಂದ ಪ್ರಸಕ್ತ ಆರ್ಥಿಕ ವರ್ಷದಲ್ಲಿ ₹ 1 ಸಾವಿರ ಕೋಟಿ ಸಂಗ್ರಹಿಸುವ ಉದ್ದೇಶ ಬಿಬಿಎಂಪಿಯದು. ಬಿ- ಖಾತಾ ಹೊಂದಿರುವ ಸ್ವತ್ತಿನ ಮಾಲೀಕರ ಬವಣೆಗಳಿಗೆ ಶಾಶ್ವತ ಪರಿಹಾರ ಒದಗಿಸುವ ಕಳಕಳಿ ಪ್ರಧಾನವಾಗಬೇಕೇ ಹೊರತು ಸಂಪನ್ಮೂಲ ಸಂಗ್ರಹಿಸುವ ಉದ್ದೇಶವಲ್ಲ ಎಂಬುದನ್ನು ಸರ್ಕಾರ ಅರ್ಥಮಾಡಿಕೊಳ್ಳಬೇಕು. ನಿಯಮಗಳಲ್ಲಿ ಇದುವರೆಗೆ ಅವಕಾಶ ಇಲ್ಲದೇ ಹೋದರೂ, ಅನಧಿಕೃತ ಸ್ವತ್ತುಗಳ ಮಾಲೀಕರು ಬಿಬಿಎಂಪಿ ಕಂದಾಯ ವಿಭಾಗದ ಅಧಿಕಾರಿಗಳ ಕೈಚಳಕದಿಂದ ಎ- ಖಾತಾ ಮಾಡಿಸಿಕೊಂಡಿರುವ ಸಾವಿರಾರು ಉದಾಹರಣೆಗಳು ಇವೆ. ಈ ರೀತಿ ಅಕ್ರಮವಾಗಿ ಎ-ಖಾತಾ ಮಾಡಿಸಿಕೊಂಡ ಪ್ರಕರಣಗಳಿಗೆ ಸಂಬಂಧಿಸಿದಂತೆ ಏನು ಕ್ರಮ ಕೈಗೊಳ್ಳಬೇಕು ಎಂಬ ಬಗ್ಗೆಯೂ ಸರ್ಕಾರ ಸ್ಪಷ್ಟಪಡಿಸಬೇಕು. ಇಲ್ಲದಿದ್ದರೆ ಸ್ವತ್ತುಗಳಿಗೆ ಅನಧಿಕೃತವಾಗಿ ಎ-ಖಾತಾ ಮಾಡಿಸಿಕೊಂಡ ಮಾಲೀಕರಿಂದ ಸುಧಾರಣಾ ವೆಚ್ಚ ಹಾಗೂ ದಂಡ ಸಂಗ್ರಹಿಸುವ ಅವಕಾಶವನ್ನೇ ಬಿಬಿಎಂಪಿ ಕಳೆದುಕೊಳ್ಳಲಿದೆ.

ದಿನದ ಟ್ವೀಟ್

ಗಟ್ಟಿಯಾಗಿ ನಿಲ್ಲಬೇಕು

ಷೇರು ಮಾರುಕಟ್ಟೆಗಳು ವರ್ಷದ ಶೇಕಡ 70ರಷ್ಟು ಸಮಯ ಮೇಲ್ಮುಖವಾಗಿ ಚಲಿಸುತ್ತಿರುತ್ತವೆ. ಇನ್ನುಳಿದ ಶೇಕಡ 30ರಷ್ಟು ಸಮಯ ಕೆಳಮುಖ ಚಲನೆ ಕಾಣುತ್ತಿರುತ್ತವೆ. ನಾವು ಶೇ 70ರಷ್ಟು ಸಮಯದಲ್ಲಿ ಖುಷಿಯಾಗಿ ಇರಬೇಕಾದರೆ ಶೇ 30ರಷ್ಟು ಸಮಯದಲ್ಲಿ ಗಟ್ಟಿಯಾಗಿ ನಿಂತುಕೊಳ್ಳಬೇಕು.

ಡಿ. ಮುತ್ತುಕೃಷ್ಣನ್, ಹೂಡಿಕೆದಾರ

ಕಿಡಿನುಡಿ



ಪಿಎಸ್‌ಐ ನೇಮಕಾತಿ ಹಗರಣದ ಕಿಂಗ್‌ಪಿನ್ ಹೆಸರು ಹೇಳಿದರೆ ಸರ್ಕಾರ ಬಿದ್ದು ಹೋಗುತ್ತದೆ ಎಂದು ಎಚ್.ಡಿ. ಕುಮಾರಸ್ವಾಮಿ ಅವರು ಹೇಳಿದ್ದಾರೆ. ಆ ಕಿಂಗ್‌ಪಿನ್ ಹೆಸರು ಹೇಳಲಿ. ಸರ್ಕಾರ ಬಿದ್ದು ಹೋದರೂ ಪರವಾಗಿಲ್ಲ, ನಾವು ಆ ವ್ಯಕ್ತಿಯನ್ನು ಬಂಧಿಸುತ್ತೇವೆ.

ಆರಗ ಜ್ಞಾನೇಂದ್ರ, ಗೃಹ ಸಚಿವ

25 ವರ್ಷಗಳ ಹಿಂದೆ

ಬುಧವಾರ, 7-5-1997

• **ಬಂಗಾಲಿ ಚಿತ್ರಕ್ಕೆ ಸ್ವರ್ಣಕಮಲ; 'ಅಮೆರಿಕ ಅಮೆರಿಕ'ಕ್ಕೆ ಪ್ರಶಸ್ತಿ**

ನವದೆಹಲಿ, ಮೇ 6 (ಪಿಟಿಐ)- ಬಂಗಾಲಿ ಚಲನಚಿತ್ರ 'ಲಾಲ್ ದರ್ಜಾ'ಗೆ 1997ರ ಸಾಲಿನ ಸ್ವರ್ಣಕಮಲ ಪ್ರಶಸ್ತಿ ದೊರಕಿದೆ. 'ಇಂಡಿಯನ್'ನಲ್ಲಿನ (ತಮಿಳು) ಉತ್ತಮ ಅಭಿನಯಕ್ಕಾಗಿ ಕಮಲ ಹಾಸನ್ ಅವರಿಗೆ ಶ್ರೇಷ್ಠ ನಟ ಹಾಗೂ 'ಮಾಚಿಸ್'ನಲ್ಲಿನ (ಹಿಂದಿ) ಮರೆಯಲಾಗದ ಅಭಿನಯಕ್ಕಾಗಿ ಟಬು ಅವರಿಗೆ ಶ್ರೇಷ್ಠ ನಟಿ ಪ್ರಶಸ್ತಿ ಈ ಬಾರಿ ಪ್ರಾಪ್ತವಾಗಿದೆ.

ಪ್ರಾದೇಶಿಕ ಭಾಷೆಗಳಲ್ಲಿನ ಶ್ರೇಷ್ಠ ಚಿತ್ರಗಳಿಗೆ ನೀಡುವ ಪ್ರಶಸ್ತಿಗೆ (ಕನ್ನಡದಲ್ಲಿ) ಈ ಬಾರಿ ನಾಗತಿಹಳ್ಳಿ ಚಂದ್ರಶೇಖರ್ ನಿರ್ದೇಶನದ 'ಅಮೆರಿಕ ಅಮೆರಿಕ' ಆಯ್ಕೆಯಾಗಿದೆ.

50 ವರ್ಷಗಳ ಹಿಂದೆ

ಭಾನುವಾರ, 7-5-1972

• **ಸರ್ಕಾರದ ನಿರ್ಧಾರಕ್ಕೆ ಕುವೆಂಪು ಹರ್ಷ**

ಮೈಸೂರು, ಮೇ 6- ಇಷ್ಟು ವರ್ಷ 'ಕರ್ಣಾಟಕ, ಕರ್ಣಾಟಕ' ಎಂದು ಕೂಗಿದ್ದಕ್ಕೆ ಈಗ ಖಾತರಿಯಾಯಿತು, ರಾಜ್ಯದ ಹೆಸರು ಬದಲಾಗುವುದು ಎಂದು- ಇದು ರಾಷ್ಟ್ರಕವಿ ಕುವೆಂಪು ಅವರ ಸಂತೋಷದ ನುಡಿ.

'ಕರ್ಣಾಟಕ, ಕರ್ನಾಟಕ'- ಎರಡೂ ಒಂದೇ. ಯಾರು ಹೇಗೆ ಬೇಕಾದರೂ ಕರೆಯಲಿ ಎಂದ ಅವರು, ರಾಜ್ಯದ ಹೆಸರು ಬದಲಾಯಿಸಲು ತೀರ್ಮಾನ ಕೈಗೊಂಡ ಸಚಿವ ಸಂಪುಟವನ್ನು ಅಭಿನಂದಿಸಿದರು.

'ಕರ್ಣಾಟಕ' ಹೆಸರಿಗೆ ಸರ್ವರೂ ಬೆಂಬಲ ನೀಡಿ, 'ಕರ್ಣಾಟಕ ಜಯಹೇ' ಸಾರ್ಥಕಗೊಳಿಸಲಿ ಎಂದು ಅವರು ಆಶಿಸಿದರು.

• **ತಿತ್ವಾಲ್ ವಿಭಾಗದ ಕೈಯಾನ್ ಪ್ರದೇಶದಲ್ಲಿ ಕದನ ವಿರಾಮಕ್ಕೆ ಆಜ್ಞೆ**

ನವದೆಹಲಿ, ಮೇ 6- ಕಾಶ್ಮೀರದ ತಿತ್ವಾಲ್ ವಿಭಾಗದ ಕೈಯಾನ್ ಪ್ರದೇಶದಲ್ಲಿ ಕದನ ವಿರಾಮಕ್ಕೆ ಆಜ್ಞೆ ಮಾಡಲಾಗಿದೆ. ಈ ದಿನ ಬೆಳಿಗ್ಗೆಯೂ ಈ ಪ್ರದೇಶದಲ್ಲಿ ಹೋರಾಟ ಮುಂದುವರಿದಿತ್ತು. ತತ್‌ಕ್ಷಣದಿಂದ ಹೋರಾಟವನ್ನು ನಿಲ್ಲಿಸಬೇಕೆಂದು ಭಾರತ ಮತ್ತು ಪಾಕ್ ಸೇನಾ ಪ್ರಧಾನ ಕಚೇರಿಗಳು ಇಂದು ರಾತ್ರಿ ಆಜ್ಞೆ ಮಾಡಿದವು.

ರಾಜಕೀಯದಲ್ಲಿ 'ನಡವಳಿಕೆ, ಸಾಮರ್ಥ್ಯಕ್ಕೆ' ಪ್ರಾಧಾನ್ಯ ಸಿಗಬೇಕೆಂದಾದರೆ ಕಾನೂನಿನಲ್ಲಿ ಬದಲಾವಣೆ ಅಗತ್ಯ

ಪಕ್ಷಾಂತರ ನಿಷೇಧ ಕಾನೂನಿಗೆ ಬೇಕು ಬಲ

ವಿಶ್ಲೇಷಣೆ

ಅರುಣ್ ಸಿನ್ಹಾ

ಜನಪ್ರತಿನಿಧಿಗಳು ಸಾಮೂಹಿಕವಾಗಿ ಪಕ್ಷಾಂತರ ಮಾಡುವುದನ್ನು ತಡೆಯುವಲ್ಲಿ ಪಕ್ಷಾಂತರ ನಿಷೇಧ ಕಾನೂನು ಸೋತಿದೆ ಎಂದು ಉಪರಾಷ್ಟ್ರಪತಿ ವೆಂಕಯ್ಯ ನಾಯ್ಡು ಅವರು ಈಚೆಗೆ ಹೇಳಿದ್ದಾರೆ. ಈ ರೀತಿಯ ಪಕ್ಷಾಂತರ ತಡೆಯಲು ಕಾನೂನು ತಿದ್ದುಪಡಿ ಸೂಚಿಸಿದ್ದಾರೆ. ಈಚಿನ ವರ್ಷಗಳಲ್ಲಿ ಹಲವು ಪಕ್ಷಾಂತರಗಳನ್ನು ಬಿಜೆಪಿ ಮುಖಂಡರೇ ಮಾಡಿಸಿರುವ ಕಾರಣ, ಹಿಂದೆ ಬಿಜೆಪಿ ಅಧ್ಯಕ್ಷರಾಗಿದ್ದ ನಾಯ್ಡು ಅವರು ಈ ಮಾತುಗಳನ್ನು ಹೇಳಿರುವುದು ದಿಟ್ಟ ನಡೆ. ಆದರೆ, ಈ ಮಾತುಗಳನ್ನು ನಾಯ್ಡು ಅವರು ಬಿಜೆಪಿಯ ನಾಯಕನಾಗಿ ಅಲ್ಲ, ಉಪರಾಷ್ಟ್ರಪತಿಯಾಗಿ ಆಡಿದ್ದಾರೆ. ಹೀಗಾಗಿ, ಅವರ ಮಾತುಗಳು ಯಾವುದೇ ಒಂದು ಪಕ್ಷಕ್ಕೆ ಸೀಮಿತವಾಗುವುದಿಲ್ಲ. ಅಷ್ಟಕ್ಕೂ, ಈ ವಿಚಾರದಲ್ಲಿ ಬಿಜೆಪಿಯೊಂದನ್ನೇ ಏಕೆ ದೂಷಿಸಬೇಕು? ಎಲ್ಲ ಪಕ್ಷಗಳೂ ಈ ಕಾನೂನನ್ನು ಮೆಟ್ಟಿ ನಡೆದಿವೆ.

ತೀರ್ಮಾನವನ್ನು ಕೈಗೊಳ್ಳುವ ಸಂಪೂರ್ಣ ಅಧಿಕಾರವನ್ನು ವಿಧಾನಸಭೆ/ಲೋಕಸಭೆಯ ಸ್ಪೀಕರ್‌ಗೆ ನೀಡಿರುವುದು ಈ ಕಾನೂನಿನ ಮುಖ್ಯ ಲೋಪ. ಕಾನೂನಿನ ಆಶಯವನ್ನು ವಿಫಲಗೊಳಿಸಲು ಎಲ್ಲ ಪಕ್ಷಗಳೂ ಸ್ಪೀಕರ್ ಅವರನ್ನು ಅಸ್ತ್ರವಾಗಿ ಬಳಸಿವೆ. ತಾತ್ವಿಕವಾಗಿ, ಜನಪ್ರತಿನಿಧಿಯೊಬ್ಬ ಸ್ಪೀಕರ್ ಆದ ನಂತರದಲ್ಲಿ ಪಕ್ಷಪಾತಿಯಾಗಿ ಇರುವುದಿಲ್ಲ. ಆದರೆ ವಾಸ್ತವದಲ್ಲಿ, ಆತ ಪಕ್ಷಪಾತಿಯಾಗಿಯೇ ಇರುತ್ತಾನೆ. ಅವರು ತಮ್ಮ ಪಕ್ಷದ ನಾಯಕತ್ವ ಹೇಳಿದಂತೆಯೇ ಮಾಡುತ್ತಾರೆ.

ಸದನದ ಅವಧಿ ಪೂರ್ಣಗೊಳ್ಳುವವರೆಗೆ ಅನರ್ಹತೆಗೆ ಸಂಬಂಧಿಸಿದ ಅರ್ಜಿಯ ಬಗ್ಗೆ ಸ್ಪೀಕರ್ ತೀರ್ಮಾನ ಕೈಗೊಳ್ಳದಿರಲಿ ಎಂದು ಪಕ್ಷದ ನಾಯಕತ್ವವು ಬಯಸುತ್ತದೆ. ಆಗ ಅರ್ಜಿಯನ್ನು ನಿಷ್ಪ್ರಯೋಜಕವಾಗಿಸಲು ನಾಯಕತ್ವಕ್ಕೆ ಸಾಧ್ಯವಾಗುತ್ತದೆ. ನಾಯಕರು ಹೇಳಿದ್ದನ್ನು ಜಾಣತನದಿಂದ ಅನುಸರಿಸುವ ಸ್ಪೀಕರ್, ಅರ್ಜಿಯ ವಿಚಾರಣೆಗೆ ದೀರ್ಘ ಅವಧಿ ತೆಗೆದುಕೊಳ್ಳುತ್ತಾರೆ.

ಸ್ಪೀಕರ್ ಅವರನ್ನು ಯಾರೂ ಪ್ರಶ್ನಿಸಲಾಗದು. ಸ್ಪೀಕರ್ ತೋರುವ ಪಕ್ಷಪಾತಿ ಧೋರಣೆಯನ್ನು ಅರ್ಜಿದಾರರು ಸಹಿಸಿಕೊಳ್ಳಬೇಕು. ಅರ್ಜಿ ವಿಚಾರವಾಗಿ ಸ್ಪೀಕರ್ ತೀರ್ಮಾನ ಕೊಡುವವರೆಗೆ ನ್ಯಾಯಾಂಗ ಕೂಡ ಅವರನ್ನು ಪ್ರಶ್ನಿಸಲಾಗದು. ಇದರಿಂದಾಗಿ ಪಕ್ಷಾಂತರಿಗಳಿಗೆ ತಕ್ಷಣವೇ ಅಧಿಕಾರ ನೀಡಲು ಪಕ್ಷಗಳಿಗೆ ಸಾಧ್ಯವಾಗುತ್ತದೆ.

ಸಂವಿಧಾನದ 52ನೇ ತಿದ್ದುಪಡಿ ಕಾಯ್ದೆ- 1985ರ ಮೂಲಕ ಪಕ್ಷಾಂತರ ನಿಷೇಧ ಕಾನೂನನ್ನು ಸಂವಿಧಾನಕ್ಕೆ ಸೇರಿಸಲಾಯಿತು. ಅದಾದ 35 ವರ್ಷಗಳವರೆಗೆ ಸ್ಪೀಕರ್‌ಗಳು ತಮ್ಮ ಪಕ್ಷದ ನಾಯಕರ ಜೊತೆ ಶಾಮೀಲಾಗಿ ವಿಚಾರಣೆಗಳನ್ನು ದೀರ್ಘವಾಗಿಸುತ್ತಿದ್ದರು. ಆದರೆ, 2020ರ ಆರಂಭದಲ್ಲಿ ಥೌನಾಓಜಂ ಶ್ಯಾಮ್‌ಕುಮಾರ್ ಸಿಂಗ್ ಪ್ರಕರಣದ ನಂತರ ಪರಿಸ್ಥಿತಿ ಬದಲಾಯಿತು.

ಸಿಂಗ್ ಅವರು 2017ರಲ್ಲಿ ಮಣಿಪುರದಲ್ಲಿ ಕಾಂಗ್ರೆಸ್ಸಿನಿಂದ ಟಿಕೆಟ್ ಪಡೆದು ಶಾಸಕರಾಗಿ ಚುನಾಯಿತರಾಗಿದ್ದರು. ಚುನಾಯಿತರಾದ ನಂತರದಲ್ಲಿ ಅವರು ಬಿಜೆಪಿಗೆ ಪಕ್ಷಾಂತರ ಮಾಡಿದರು. ಅವರಿಗೆ ಹಲವು ಖಾತೆಗಳನ್ನು, ಸಂಪುಟ ದರ್ಜೆ ಸ್ಥಾನವನ್ನು ನೀಡಲಾಯಿತು. ಸಿಂಗ್ ಅವರ ಅನರ್ಹತೆಗೆ ಸಂಬಂಧಿಸಿದ ಅರ್ಜಿಯನ್ನು ಸ್ಪೀಕರ್ ವೈ. ಖೇಮ್‌ಚಂದ್ ಅವರು 'ನ್ಯಾಯಸಮ್ಮತ ಅವಧಿಯೊಳಗೆ ಪೂರ್ಣಗೊಳಿಸಬೇಕು' ಎಂಬ ಸೂಚನೆ ನೀಡಿ ಎಂದು ಕೋರಿ ಕಾಂಗ್ರೆಸ್ ಪಕ್ಷವು ಮಣಿಪುರ ಹೈಕೋರ್ಟ್‌ಗೆ ಅರ್ಜಿ ಸಲ್ಲಿಸಿತು. ಆದರೆ, ಸ್ಪೀಕರ್‌ಗೆ ಹೀಗೆ ನಿರ್ದೇಶನವನ್ನು ಹೈಕೋರ್ಟ್ ನೀಡಬಹುದೇ ಎಂಬ ಪ್ರಶ್ನೆಯು ಸುಪ್ರೀಂ ಕೋರ್ಟ್ ಎದುರು ವಿಚಾರಣೆಯ ಹಂತದಲ್ಲಿರುವ ಕಾರಣ ತಾನು ಯಾವುದೇ ಆದೇಶ ನೀಡುವುದಿಲ್ಲ ಎಂದು ಹೈಕೋರ್ಟ್ ಆ ಅರ್ಜಿಯನ್ನು ತಿರಸ್ಕರಿಸಿತು. ಪಕ್ಷವು 2018ರ ಜನವರಿಯಲ್ಲಿ ಮತ್ತೆ ಹೈಕೋರ್ಟ್‌ಗೆ ಅರ್ಜಿ ಸಲ್ಲಿಸಿತು. ಸ್ಪೀಕರ್ ಕೂಡ ಅರೆನ್ಯಾಯಿಕ ಅಧಿಕಾರಿ, ಅವರು ನ್ಯಾಯಸಮ್ಮತ ಅವಧಿಯೊಳಗೆ ತೀರ್ಮಾನ ಕೈಗೊಳ್ಳಬೇಕು – ಅಂದರೆ, ಶಾಸನಸಭೆಯ ಅವಧಿಯಾದ ಐದು ವರ್ಷಕ್ಕೂ ಮುನ್ನ – ಎಂದು ಹೈಕೋರ್ಟ್ ಹೇಳಿತಾದರೂ, ಆದೇಶ ನೀಡಲಿಲ್ಲ.

ಇದು ಸುಪ್ರೀಂ ಕೋರ್ಟ್ ಮೆಟ್ಟಿಲೇರಿತು. ನ್ಯಾಯಮೂರ್ತಿ ಆರ್.ಎಫ್. ನರಿಮನ್ ನೇತೃತ್ವದ ತ್ರಿಸದಸ್ಯ ಪೀಠವು, ಅನರ್ಹತೆಗೆ ಸಂಬಂಧಿಸಿದ ಅರ್ಜಿಯನ್ನು ನಾಲ್ಕು ವಾರಗಳಲ್ಲಿ ಇತ್ಯರ್ಥಪಡಿಸುವಂತೆ ಸ್ಪೀಕರ್ ಖೇಮ್‌ಚಂದ್ ಅವರಿಗೆ ಸೂಚಿಸಿತು. ಸ್ಪೀಕರ್‌ಗೆ ತೀರ್ಮಾನ ಕೈಗೊಳ್ಳಲು ಕೋರ್ಟ್ ಕಾಲಮಿತಿ ವಿಧಿಸಿದ್ದು ಅದೇ ಮೊದಲು. ಆದರೆ ಖೇಮ್‌ಚಂದ್ ಅವರು ನಾಲ್ಕು ವಾರಗಳಲ್ಲಿ ಆದೇಶ ಹೊರಡಿಸಲಿಲ್ಲ. ಬದಲಿಗೆ, ಹೆಚ್ಚುವರಿಯಾಗಿ ಹತ್ತು ದಿನಗಳ ಅವಕಾಶ ಕೋರಿದರು. ಹತ್ತು ದಿನಗಳು ಪೂರ್ಣಗೊಂಡ ನಂತರ, ಇನ್ನೂ ಹದಿನೈದು ದಿನಗಳು ಬೇಕು ಎಂದರು. ಆಗ ಸುಪ್ರೀಂ ಕೋರ್ಟ್, ಸಿಂಗ್ ಅವರನ್ನು ಸಂಪುಟದಿಂದ ತೆಗೆದುಹಾಕಿತು, ಅವರು ಮುಂದಿನ ಆದೇಶದವರೆಗೆ ವಿಧಾನಸಭೆ ಪ್ರವೇಶಿಸುವಂತಿಲ್ಲ ಎಂದು ಹೇಳಿತು.

ಸಂವಿಧಾನದ 212ನೇ ವಿಧಿಯ ಪ್ರಕಾರ, ಶಾಸನಸಭೆಯ ನಡಾವಳಿಗಳಲ್ಲಿ ಮಧ್ಯಪ್ರವೇಶಿಸಲು ನ್ಯಾಯಾಂಗಕ್ಕೆ ಅಧಿಕಾರವಿಲ್ಲ. ಸ್ಪೀಕರ್ ಸ್ಥಾನದಲ್ಲಿರುವವರು ಈ ವಿಧಿಯ ಅಡಿಯಲ್ಲಿ ರಕ್ಷಣೆ ಪಡೆದು, ತಮ್ಮ ನಾಯಕರು ಹೇಳಿದ ಆಟ ಆಡುತ್ತಿದ್ದರು. ಆದರೆ, ಸಿಂಗ್ ಪ್ರಕರಣದಲ್ಲಿ ಸ್ಪೀಕರ್ ಅವರು ಉದ್ದೇಶಪೂರ್ವಕವಾಗಿ ಯಾವುದೇ ತೀರ್ಮಾನ ಕೈಗೊಳ್ಳದ ಕಾರಣದಿಂದಾಗಿ, ಸುಪ್ರೀಂ ಕೋರ್ಟ್ ಮಧ್ಯಪ್ರವೇಶಿಸಿತು. ಸಂವಿಧಾನದ 142ನೇ ವಿಧಿಯ ಅಡಿಯಲ್ಲಿ ಆದೇಶ ನೀಡಿತು. ಈ ವಿಧಿಯು ಯಾವುದೇ ವಿಷಯದಲ್ಲಿ ಸಂಪೂರ್ಣ ನ್ಯಾಯ ಒದಗಿಸಲು ಯಾವುದೇ ತೀರ್ಪು ನೀಡುವ ಅಧಿಕಾರವನ್ನು ಸುಪ್ರೀಂ ಕೋರ್ಟ್‌ಗೆ ನೀಡಿದೆ.

ಇದಾದ ಸರಿಸುಮಾರು ಒಂದು ವರ್ಷದ ನಂತರ, ಗೋವಾದ ಪ್ರಕರಣದಲ್ಲಿ ಮಧ್ಯಪ್ರವೇಶಿಸಿದ ಸುಪ್ರೀಂ ಕೋರ್ಟ್, ತೀರ್ಮಾನ ಕೈಗೊಳ್ಳಲು ಸ್ಪೀಕರ್‌ಗೆ ಕಾಲಮಿತಿ ನಿಗದಿ ಮಾಡಿತು. 2019ರ ಜುಲೈನಲ್ಲಿ ಕಾಂಗ್ರೆಸ್ಸಿನ ಹತ್ತು ಶಾಸಕರು, ಎಂಜಿಪಿಯ ಇಬ್ಬರು ಶಾಸಕರು ಬಿಜೆಪಿಗೆ ಪಕ್ಷಾಂತರ ಮಾಡಿದರು. ಅವರ ಅನರ್ಹತೆಗೆ ಸಂಬಂಧಿಸಿದ ಅರ್ಜಿಯ ವಿಚಾರವಾಗಿ ಸ್ಪೀಕರ್ ಒಂದೂವರೆ ವರ್ಷ ತೀರ್ಮಾನ ಕೈಗೊಳ್ಳಲಿಲ್ಲ. ಕಾಂಗ್ರೆಸ್ ಸುಪ್ರೀಂ ಕೋರ್ಟ್ ಮೊರೆ ಹೋಯಿತು. 2021ರ ಏಪ್ರಿಲ್ 20ರೊಳಗೆ ತೀರ್ಮಾನ ಕೈಗೊಳ್ಳುವಂತೆ ಸುಪ್ರೀಂ ಕೋರ್ಟ್ ಸೂಚಿಸಿತು. ಮುಕುಲ್ ರಾಯ್ ಅವರ ಅನರ್ಹತೆಗೆ ಸಂಬಂಧಿಸಿದ ಅರ್ಜಿಯ ವಿಚಾರವಾಗಿ ಕಾಲಮಿತಿಯಲ್ಲಿ ತೀರ್ಮಾನಿಸುವಂತೆ ಪಶ್ಚಿಮ ಬಂಗಾಳ ಸ್ಪೀಕರ್‌ಗೆ ಅದೇ ವರ್ಷದಲ್ಲಿ ಕಲ್ಕತ್ತಾ ಹೈಕೋರ್ಟ್ ತಾಕೀತು ಮಾಡಿತು.

ಇವುಗಳ ಸಾರಾಂಶ ಸ್ಪಷ್ಟವಾಗಿದೆ. ಪಕ್ಷಾಂತರ ನಿಷೇಧ ಕಾನೂನು ಪರಿಣಾಮಕಾರಿಯಾಗಬೇಕು ಎಂದಾದರೆ, ಅನರ್ಹತೆಗೆ ಸಂಬಂಧಿಸಿದ ಅರ್ಜಿಗಳ ವಿಚಾರದಲ್ಲಿ ತೀರ್ಮಾನ ಕೈಗೊಳ್ಳುವ ಅಧಿಕಾರವನ್ನು ಸ್ಪೀಕರ್ ಅವರಿಂದ ಹಿಂದಕ್ಕೆ ಪಡೆಯುವ ರೀತಿಯಲ್ಲಿ ಕಾನೂನು ತಿದ್ದುಪಡಿ ಆಗಬೇಕು. ಆ ಅಧಿಕಾರವನ್ನು ಸ್ವತಂತ್ರ ಪ್ರಾಧಿಕಾರವೊಂದರ ಕೈಯಲ್ಲಿ ಇರಿಸಬೇಕು. 'ಸುಪ್ರೀಂ ಕೋರ್ಟ್‌ನ ನಿವೃತ್ತ ನ್ಯಾಯಮೂರ್ತಿ ಅಥವಾ ಹೈಕೋರ್ಟ್‌ನ ನಿವೃತ್ತ ಮುಖ್ಯ ನ್ಯಾಯಮೂರ್ತಿ ನೇತೃತ್ವದ ನ್ಯಾಯ ಮಂಡಳಿಯ ಕೈಗೆ ಅಥವಾ ಬೇರೆ ಯಾವುದಾದರೂ ಹೊರಗಿನ ಸ್ವತಂತ್ರ ವ್ಯವಸ್ಥೆಗೆ ಈ ಅಧಿಕಾರವನ್ನು ನೀಡುವ ರೀತಿಯಲ್ಲಿ ಸಂವಿಧಾನಕ್ಕೆ ತಿದ್ದಪಡಿ ತರುವ ಬಗ್ಗೆ ಸಂಸತ್ತು ಗಂಭೀರವಾಗಿ ಪರಿಶೀಲಿಸಬಹುದು' ಎಂದು ಸಿಂಗ್ ಪ್ರಕರಣದಲ್ಲಿ ಸುಪ್ರೀಂ ಕೋರ್ಟ್ ಹೇಳಿದೆ.

ಅನರ್ಹತೆಗೆ ಸಂಬಂಧಿಸಿದ ಅರ್ಜಿಗಳನ್ನು ನ್ಯಾಯಸಮ್ಮತವಾದ ಕಾಲಮಿತಿಯಲ್ಲಿ ತೀರ್ಮಾನಿಸುವ ಸ್ವತಂತ್ರ ಪ್ರಾಧಿಕಾರ ಮಾತ್ರವೇ ರಾಜಕೀಯ ಪಕ್ಷಗಳು ಹಾಗೂ ಚುನಾಯಿತ ಪ್ರತಿನಿಧಿಗಳು ಅವಕಾಶವಾದಿ ಒಪ್ಪಂದಕ್ಕೆ ಬರುವುದನ್ನು ತಡೆಯಬಹುದು, ಜನರ ಆದೇಶವು ವಿರೂಪಗೊಳ್ಳದಂತೆ ನೋಡಿಕೊಳ್ಳಬಹುದು. ಮೂರು ತಿಂಗಳಲ್ಲಿ ಅರ್ಜಿಗಳು ಇತ್ಯರ್ಥವಾಗುವಂತೆ ಇರಬೇಕು. ಸಕಾರಣ ಇದ್ದರೆ ಮಾತ್ರ ಹೆಚ್ಚುವರಿಯಾಗಿ ಮೂರು ತಿಂಗಳ ಕಾಲಾವಕಾಶ ನೀಡಬಹುದು.

ಪಕ್ಷಾಂತರ ಮಾಡಿದವರು ಶಾಸನಸಭೆಯ ಅದೇ ಅವಧಿಯಲ್ಲಿ ಅಧಿಕಾರ ಹಿಡಿಯುವುದಕ್ಕೆ ಅವಕಾಶ ಇರಬಾರದು. ಪಕ್ಷಾಂತರ ಮಾಡಿದ ನಂತರದಲ್ಲಿ ಯಾವುದೇ ಅಧಿಕಾರ ಸಿಗುವುದಿಲ್ಲ ಎಂದಾದರೆ ಅವರು ಪಕ್ಷಾಂತರ ಏಕೆ ಮಾಡುತ್ತಾರೆ? ರಾಜಕೀಯದಲ್ಲಿ 'ಶೀಲ, ನಡವಳಿಕೆ ಮತ್ತು ಸಾಮರ್ಥ್ಯಕ್ಕೆ' ಪ್ರಾಧಾನ್ಯ ಸಿಗಬೇಕು ಎಂದಾದರೆ ಕಾನೂನಿನಲ್ಲಿ ಈ ಬದಲಾವಣೆಗಳನ್ನು ತರಲು ಮುಂದಾಗುವಂತೆ ಸರ್ಕಾರಕ್ಕೆ ಸಲಹೆ ನೀಡಬೇಕು.

ಚುರುಮುರಿ

ಪ್ಯಾನ್ ಇಂಡಿಯಾ ಫೈಟ್

• ಮಣ್ಣೆರಾಜು

'ರೀ, ಕೆಜಿಎಫ್ ಸಿನಿಮಾದ ಕಲೆಕ್ಷನ್ ಎಷ್ಟಾಯ್ತಂತೆ?' ಸುಮಿ ಕೇಳಿದಳು.

'ಗೊತ್ತಿಲ್ಲ, ಆದರೆ ಬಾಲಿವುಡ್ ದೊರೆಗಳು ಬೆಚ್ಚಿಬೀಳುವಷ್ಟು ಆಗಿದೆಯಂತೆ' ಅಂದ ಶಂಕ್ರಿ.

'ಗಣಿಯಲ್ಲಿ ಚಿನ್ನ ತೆಗೆಯುವುದಕ್ಕಿಂತ ಕೆಜಿಎಫ್‌ನಂತಹ ಸಿನಿಮಾ ತೆಗೆಯುವುದು ಲಾಭದಾಯಕ ವ್ಯವಹಾರ ಕಣ್ರೀ...'

'ಹೌದು. ಕೆಜಿಎಫ್ ಸಿನಿಮಾ ಪ್ಯಾನ್ ಇಂಡಿಯಾ ಮಟ್ಟದಲ್ಲಿ ದೂಳೆಬ್ಬಿಸಿದೆಯಂತೆ'.

'ಗಣಿ ದೂಳಿಗಿಂತ ಸಿನಿಮಾ ದೂಳು ಆರೋಗ್ಯಕರ ಅಂತ ಗಣಿಧಣಿಗಳೂ ಸಿನಿಮಾ ನಿರ್ಮಾಣಕ್ಕೆ ಕೈ ಹಾಕಬಹುದು'.

'ನೆಲ ಅಗೆದಷ್ಟು ಸುಲಭವಲ್ಲ ಕಲೆ ತೆಗೆಯುವುದು. ಗಣಿಗಾರಿಕೆಗೂ ಕಲೆಗಾರಿಕೆಗೂ ವ್ಯತ್ಯಾಸವಿದೆ. ಗಣಿಯಲ್ಲಿ ಅಗೆದಷ್ಟೂ ಲಾಭ, ಸಿನಿಮಾದಲ್ಲಿ ಕಷ್ಟ'.

'ಗಣಿಯಲ್ಲಿ ಚಿನ್ನ ಖಾಲಿಯಾಗಬಹುದು. ಆದರೆ, ಚಾಪ್ಟರ್ ಲೆಕ್ಕದಲ್ಲಿ ತಯಾರಿಸತೊಡಗಿದರೆ ಸಿನಿಮಾವೂ ನಿರಂತರ ಲಾಭ ನೀಡುವ ದುಡ್ಡಿನ ಗಣಿಯಾಗಬಹುದು'.

'ಹೇಗೋ, ಕನ್ನಡ ಸಿನಿಮಾ ಪ್ಯಾನ್ ಇಂಡಿಯಾ ಮಟ್ಟದಲ್ಲಿ ಪೈಪೋಟಿ ನೀಡಿದೆ'.

'ಹೌದು. ಇದೂವರೆಗೆ ಬಾಲಿವುಡ್ ಸಿನಿಮಾಗಳ ಸಾಮಂತರಂತಿದ್ದ ಸೌತ್ ಇಂಡಿಯಾ ಸಿನಿಮಾಗಳು ಸಾಮ್ರಾಜ್ಯ ವಿಸ್ತರಿಸಿಕೊಂಡು ಸಾಮರ್ಥ್ಯ ಬೆಳೆಸಿಕೊಳ್ಳುತ್ತಿವೆ'.

'ನಮ್ಮ ಭಾಷೆ, ಸಿನಿಮಾಗಳು ಪ್ರಾದೇಶಿಕತೆಯ ಗಡಿ ದಾಟಿವೆ. ಉತ್ತರದ ನದಿಗಳು ದಕ್ಷಿಣಕ್ಕೆ ಹರಿಯುವಂತೆ ದಕ್ಷಿಣ ಭಾಷೆಗಳ ಸಿನಿಮಾಗಳು ಉತ್ತರಕ್ಕೆ ಹರಡುತ್ತಿವೆ. ನದಿಗಳಿಗೆ ಅಣೆಕಟ್ಟು, ಭಾಷೆಗೆ ಹಣೆಪಟ್ಟಿ ಕಟ್ಟಿ ಕಂಟ್ರೋಲ್ ಮಾಡಲಾಗುವುದಿಲ್ಲ' ಎಂದ ಶಂಕ್ರಿ.

'ಹೌದು. ಕನ್ನಡಿಗರು ಈಗ ಕರ್ನಾಟಕದಲ್ಲಿ ಕಾಂಪೌಂಡ್ ಹಾಕಿಕೊಂಡು ಉಳಿದಿಲ್ಲ, ಗಡಿ ದಾಟಿ ಹೋಗಿ ಹೊರ ರಾಜ್ಯ, ಹೊರ ದೇಶಗಳಲ್ಲೂ ವಿಸ್ತರಿಸಿಕೊಂಡಿದ್ದಾರೆ. ಕನ್ನಡ ಭಾಷೆ, ಕನ್ನಡ ಸಿನಿಮಾಗಳು ಭಾಷಾಂತರ, ದೇಶಾಂತರಗೊಳ್ಳುತ್ತಿವೆ'.

'ಪ್ರಾದೇಶಿಕತೆಯ ಚೌಕಟ್ಟು ಮೀರಿ ಬೆಳೆಯುತ್ತಿರುವ ಕನ್ನಡವೂ ದೇಶದೆಲ್ಲೆಡೆ ತಲುಪುತ್ತಿದೆ ಅಂತನಾ?'

'ಹಾಗಲ್ಲಾ, ಕನ್ನಡಕ್ಕೆ ಚೌಕಟ್ಟು ಹಾಕಿ ಹಿಂದಿ ಹೇರುವ ಪ್ರಯತ್ನವನ್ನು ಇನ್ನಾದರೂ ಕೈಬಿಡಬೇಕು...' ಎಂದು ಸುಮಿ ಒತ್ತಾಯಿಸಿದಳು.

ಸಂಗತ

ಆನ್‌ಲೈನ್ ಮೋಸದ ಜಾಲದ ಕರಾಮತ್ತು

ನಮ್ಮನ್ನು, ನಮ್ಮ ಹಿರಿಯರನ್ನು, ಮಕ್ಕಳನ್ನು ಆನ್‌ಲೈನ್ ಮೋಸದ ಜಾಲದಿಂದ ಕಾಪಾಡಿಕೊಳ್ಳುವ ಅಗತ್ಯ ಹಿಂದೆಂದಿಗಿಂತಲೂ ಈಗ ಹೆಚ್ಚಿದೆ

• ದೀಪಾ ಹಿರೇಗುತ್ತಿ

ಈ ಶತಮಾನದ ಸಮಸ್ಯೆಗಳಲ್ಲಿ ಮುಖ್ಯವಾದದ್ದು ಆನ್‌ಲೈನ್ ವಂಚನೆ. ಒಂದೆಡೆ ಜಗತ್ತು ಡಿಜಿಟಲೀಕರಣಗೊಳ್ಳುತ್ತಿದ್ದಂತೆ, ಕ್ಯಾಶ್‌ಲೆಸ್ ಆರ್ಥಿಕತೆಯ ಘೋಷಣೆಗಳು ಕೇಳಿಬರುತ್ತಿದ್ದಂತೆ, ಸ್ಮಾರ್ಟ್‌ಫೋನ್‌ಗಳ ಸಂಖ್ಯೆ ಹೆಚ್ಚುತ್ತಿದ್ದಂತೆ ಸೈಬರ್ ಮೋಸದ ಪ್ರಕರಣಗಳು ವಿಪರೀತವಾಗಿ ಹೆಚ್ಚುತ್ತಿವೆ. ತೊಂಬತ್ತರ ದಶಕದ ಮಧ್ಯಭಾಗದಲ್ಲಿ ಪ್ರಾರಂಭವಾದ ಈ ಸಮಸ್ಯೆ ಈಗ ಗಂಭೀರ ಸ್ವರೂಪ ಪಡೆದುಕೊಂಡಿದೆ.

ಮೊದಲೆಲ್ಲ ಯಾರೋ ಕೆಲವರು ವೈಯಕ್ತಿಕವಾಗಿ ಈ ರೀತಿಯ ವಂಚನೆ ಎಸಗುತ್ತಿದ್ದರು. ಆದರೀಗ ಅದಕ್ಕೆಂದೇ ವ್ಯವಸ್ಥಿತ ಮೋಸದ ಜಾಲಗಳಿವೆ. ಯಾವುದು ಅಸಲಿ, ಯಾವುದು ನಕಲಿ ಎಂದು ಗೊತ್ತೇ ಆಗದಂತೆ ವೆಬ್‌ಸೈಟ್‌ಗಳನ್ನು ರೂಪಿಸಿ ಅವುಗಳ ಮೂಲಕ ಜನರ ಖಾತೆಗಳ ರಹಸ್ಯ ಮಾಹಿತಿಗಳನ್ನು ಪಡೆದು ಹಣ ಕದಿಯಲಾಗುತ್ತಿದೆ. ಬೆರಳ ತುದಿಯಲ್ಲಿ ಜಗತ್ತಿನ ಕೀಲಿಕೈ ಇದೆ ಎಂದು ಹೆಮ್ಮೆ ಪಡುತ್ತಿರುವ ಹೊತ್ತಲ್ಲೇ, ಅದೇ ಬೆರಳ ತುದಿಯಿಂದ ಮಾಡುವ ಒಂದು ಕ್ಲಿಕ್ ನಮ್ಮ ಬದುಕನ್ನೇ ಅಲ್ಲೋಲ ಕಲ್ಲೋಲ ಮಾಡಿಬಿಡಬಹುದು ಎನ್ನುವುದು ವಿಚಿತ್ರವಾದರೂ ಸತ್ಯ!

ನಿಮ್ಮ ಅಕೌಂಟ್ ಬ್ಲಾಕ್ ಆಗಲಿದೆ ಅಥವಾ ಖಾತೆಯಿಂದ ಹಣ ಕಟಾವಣೆಯಾಗಿದೆ, ಅದನ್ನು ಸರಿಪಡಿಸಿಕೊಳ್ಳಲು ಈ ಲಿಂಕ್ ಒತ್ತಿ ಎಂದು ಬ್ಯಾಂಕಿನ ಗ್ರಾಹಕರ ಮೊಬೈಲಿಗೆ ಸಂದೇಶ ಬರುತ್ತದೆ. ಬ್ಯಾಂಕಿನವರೇ ಕಳಿಸಿದ್ದೇನೋ ಅನ್ನಿಸುವಂತಿರುತ್ತದೆ ಆ ಸಂದೇಶ. ಆ ಲಿಂಕ್ ಮೇಲೆ ಕ್ಲಿಕ್ ಮಾಡಿದ ಮೇಲೆ ಒಂದು ವೆಬ್‌ಸೈಟ್ ತೆರೆದುಕೊಳ್ಳುತ್ತದೆ. ಅಲ್ಲಿ ಕೆಲವು ಮಾಹಿತಿಗಳನ್ನು ತುಂಬಲು ಹೇಳಲಾಗುತ್ತದೆ. ಗ್ರಾಹಕರು ಮಾಹಿತಿ ತುಂಬಿದ ಕೂಡಲೇ ಖಾತೆಯಿಂದ ಹಣ ಮಂಗಮಾಯವಾಗುತ್ತದೆ! ವಿಶ್ವಾಸಾರ್ಹ ಸಂಸ್ಥೆಗಳ ಹೆಸರು ಬಳಸಿಕೊಂಡು ಸುಳ್ಳು ಸಂದೇಶ, ಇ- ಮೇಲ್‌ಗಳ ಮೂಲಕ ಲಿಂಕ್ ಕಳಿಸಿ, ಆ ಮೂಲಕ ನಡೆಸುವ ಮೋಸದ ವ್ಯವಹಾರವನ್ನು 'ಫಿಶಿಂಗ್' (Phishing) ಎನ್ನುತ್ತಾರೆ. ನಿಮ್ಮ ಖಾತೆ ನವೀಕರಿಸಬೇಕು, ಡೆಬಿಟ್ ಕಾರ್ಡ್ ಲಾಕ್ ಆಗಿದೆ, ಲಾಟರಿ ಹೊಡೆದಿದೆ ಹೀಗೆ ಹಲವು ಸಂದೇಶಗಳ ಮೂಲಕ ಗ್ರಾಹಕರನ್ನು ವಂಚಿಸುವ ಪ್ರಯತ್ನ ನಡೆಯುತ್ತಲೇ ಇರುತ್ತದೆ.

ನಾವು ಓದಿದವರು, ಜಾಣರು ನಮಗೆಲ್ಲ ಆನ್‌ಲೈನ್ ವಂಚನೆ ಆಗಲು ಸಾಧ್ಯವಿಲ್ಲ ಎಂದೇ ನಾವೆಲ್ಲಾ ಅಂದುಕೊಳ್ಳುತ್ತೇವೆ. ಆದರೆ ಆನ್‌ಲೈನ್ ವಂಚನೆಯ ಕರಾಳ ಬಾಹುಗಳು ಎಷ್ಟು ಚುರುಕೆಂದರೆ ಅದರ ಹಿಡಿತದಿಂದ ತಪ್ಪಿಸಿಕೊಳ್ಳಲು ಯಾರಿಂದಲೂ ಸಾಧ್ಯವಿಲ್ಲ. ಒಮ್ಮೆ ವಂಚನೆಗೆ ಒಳಗಾದರೆ ನಮ್ಮ ಹಣ ಕೈಜಾರಿದಂತೆಯೆ! ಹುಲ್ಲಿನರಾಶಿಯಲ್ಲಿ ಕಳೆದ ಸೂಜಿಯನ್ನು ಹುಡುಕಿದಂತೆ ಇದು! ಹಾಗಾಗಿ ಕಾಯಿಲೆಯ ಇಲಾಜಿಗಿಂತ ಮುನ್ನೆಚ್ಚರಿಕೆಯೇ ಕ್ಷೇಮ! ಯಾವುದೇ ಬ್ಯಾಂಕಿನ ಅಧಿಕೃತ ವೆಬ್‌ಸೈಟ್‌ಗೆ ಹೋಗಿ ಅಲ್ಲಿಂದಲೇ ಕಸ್ಟಮರ್ ಕೇರ್ ನಂಬರ್ ತೆಗೆದುಕೊಂಡು ಕರೆ ಮಾಡಬೇಕೇ ವಿನಾ ಗೂಗಲ್‌ನಲ್ಲಿ ಸಿಗುವ ಕಂಡ ಕಂಡ ನಂಬರುಗಳಿಗಲ್ಲ! ಉದ್ದೇಶಪೂರ್ವಕವಾಗಿ ಯಾವುದೋ ಬ್ಯಾಂಕಿನ ಹೆಸರು ಹಾಕಿ ಮೋಸಗಾರರು ತಮ್ಮ ನಂಬರ್ ಕೊಟ್ಟಿರುತ್ತಾರೆ. ಅರೆಕ್ಷಣದಲ್ಲಿ ನಿಮ್ಮ ಕ್ರೆಡಿಟ್, ಡೆಬಿಟ್ ಕಾರ್ಡ್ ಮೊತ್ತ ಸೊನ್ನೆಯಾಗಿರುತ್ತದೆ!

ಈ ವರ್ಚುವಲ್ ಜಗತ್ತಿನಲ್ಲಿ ಎಷ್ಟೇ ಎಚ್ಚರವಾಗಿದ್ದರೂ ನಮ್ಮನ್ನು ವಂಚಿಸುವ ಹೊಸ ಹೊಸ ವಿಧಾನಗಳನ್ನು ಮೋಸಗಾರರು ಕಂಡುಹಿಡಿಯುತ್ತಲೇ ಇದ್ದಾರೆ. ಹಾಗಾಗಿ ನಾವು ನಮ್ಮ ಖಾತೆಯ, ಕಾರ್ಡ್‌ಗಳ ಪಿನ್ ನಂಬರ್, ಮೂರಂಕಿಯ ಸಿವಿವಿ ನಂಬರ್ ವಿವರವನ್ನು ಯಾರಿಗೂ ಹೇಳದೇ ಇದ್ದರೆ ಯಾರಿಗೂ ನಮ್ಮನ್ನು ಮೋಸಗೊಳಿಸಲು ಆಗುವುದಿಲ್ಲ. ಹಾಗಾಗಿ ಫೋನ್ ಕರೆ, ಸಂದೇಶಗಳ ಮೂಲಕ ಯಾರೇ ಈ ನಂಬರುಗಳನ್ನು ಕೇಳಿದರೆ ಕೊಡುವುದು ಬೇಡ. ಸ್ವಲ್ಪ ಕಷ್ಟವಾದರೂ ನಮ್ಮ ಬ್ಯಾಂಕ್ ಶಾಖೆಗೇ ಹೋಗಿ ವಿಚಾರಿಸುವುದು ಒಳ್ಳೆಯದು. ಇಂತಹ ಸಂದೇಶಗಳಲ್ಲಿ ಬರುವ ನಕಲಿ ಲಿಂಕ್‌ಗಳ ಮೇಲೆ ಯಾವ ಕಾರಣಕ್ಕೂ ಕ್ಲಿಕ್ ಮಾಡಬಾರದು. ನಕಲಿ ಲಿಂಕ್‌ಗಳನ್ನು ಸೂಕ್ಷ್ಮವಾಗಿ ಗಮನಿಸಿದಾಗ ಅದರಲ್ಲಿ ಏನಾದರೂ ಒಂದು ಸ್ಪೆಲ್ಲಿಂಗಿನದ್ದೋ, ವ್ಯಾಕರಣದ್ದೋ ತಪ್ಪು ಇದ್ದೇ ಇರುತ್ತದೆ.

ಅಷ್ಟೇ ಅಲ್ಲ, ಕಡಿಮೆ ಬೆಲೆಗೆ ಐಫೋನ್ ಸಿಗುತ್ತದೆ ಅಥವಾ ಡಿಸ್ಕೌಂಟ್ ಸಿಗುತ್ತದೆ ಎಂದೆಲ್ಲ ಬರುವ ಲಿಂಕ್‌ಗಳ ಮೇಲೆಯೂ ಕ್ಲಿಕ್ ಮಾಡಬಾರದು. ನಮ್ಮ ವೈಯಕ್ತಿಕ ಮಾಹಿತಿಯನ್ನು ಉಪಯೋಗಿಸಿ ನಮ್ಮ ಹೆಸರಲ್ಲಿ ಮೋಸ ಮಾಡುವವರೂ ಇರುತ್ತಾರೆ. ಫೇಸ್‌ಬುಕ್ ನಕಲಿ ಖಾತೆಗಳ ಹಾವಳಿ ಇತ್ತೀಚೆಗೆ ಹೆಚ್ಚುತ್ತಿರುವುದನ್ನು ನಾವೆಲ್ಲ ಗಮನಿಸಿಯೇ ಇದ್ದೇವೆ. ಅಪರಿಚಿತರು ಕಳಿಸುವ ಕ್ಯೂಆರ್ ಕೋಡ್‌ಗಳ ಮೇಲೆ ಕೂಡ ಕ್ಲಿಕ್ ಮಾಡಬಾರದು. ಹಣ ಬರುವ ಬದಲು ಕಳೆದುಕೊಂಡವರ ಸಂಖ್ಯೆ ಬಹಳ ಇದೆ. ಇನ್ನು ಒಂದೇ ಅಕೌಂಟಿನಲ್ಲಿ ಬಹಳ ಮೊತ್ತವಿಟ್ಟು ಅದನ್ನೇ ಎಲ್ಲ ಕಡೆ ಸ್ಕ್ಯಾನ್ ಮಾಡುವುದೂ ಅಪಾಯಕಾರಿ. ನಮ್ಮನ್ನು, ನಮ್ಮ ಹಿರಿಯರನ್ನು, ಮಕ್ಕಳನ್ನು ಈ ಆನ್‌ಲೈನ್ ಮೋಸದ ಜಾಲದಿಂದ ಕಾಪಾಡಿಕೊಳ್ಳುವ ಅಗತ್ಯ ಹಿಂದೆಂದಿಗಿಂತಲೂ ಈಗ ಹೆಚ್ಚಿದೆ.

ವಾಚಕರ ವಾಣಿ

ನೇಮಕಾತಿ: ಬಹಿರಂಗ ಹರಾಜು ಮೇಲಲ್ಲವೇ?

ಪಿಎಸ್‌ಐ ನೇಮಕಾತಿ ಅಕ್ರಮದಲ್ಲಿ ₹ 300 ಕೋಟಿಗೂ ಹೆಚ್ಚು ಭ್ರಷ್ಟಾಚಾರ ನಡೆದಿದೆ ಎಂದು ವಿಧಾನಸಭೆಯ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಆರೋಪಿಸಿದ್ದಾರೆ (ಪ್ರ.ವಾ., ಮೇ 5). ಈ ಹಗರಣ ಪಡೆಯುತ್ತಿರುವ ತಿರುವುಗಳನ್ನು ಗಮನಿಸಿದರೆ, ನೇಮಕಾತಿ ಪ್ರಕ್ರಿಯೆಯೇ ವ್ಯರ್ಥ ಎಂಬ ಭಾವನೆ ಬಾರದಿರದು. ನೇಮಕಾತಿ ಎಂಬ ಪ್ರಹಸನ ನಡೆಸುವ ಬದಲು, ಬಹಿರಂಗ ಹರಾಜಿನ ಮೂಲಕ ಹುದ್ದೆ ಭರ್ತಿ ಮಾಡಿ, ಸರ್ಕಾರದ ಬೊಕ್ಕಸಕ್ಕೆ ಒಂದಷ್ಟು ವರಮಾನ ತಂದುಕೊಳ್ಳುವುದು ಒಳ್ಳೆಯದು ಅಂತ ಅನ್ನಿಸುತ್ತದೆ. ಮಧ್ಯವರ್ತಿಗಳಿಗೆ ಹಣ ನೀಡಿ ನೇಮಕವಾದರೆ ಆ ಹಣ ಕೆಲವೇ ದಂಧೆಕೋರರ ಕೈ ಸೇರುತ್ತದೆ. ಇಂತಹ ಕೈಗಳನ್ನು ಬಲಪಡಿಸುವುದರ ಬದಲು ಸರ್ಕಾರದ ಬೊಕ್ಕಸ ತುಂಬಿಸುವುದು ಒಳ್ಳೆಯದಲ್ಲವೇ?

ವಿ.ಜಿ. ಇನಾಮದಾರ, ಸಾರವಾಡ, ವಿಜಯಪುರ ಜಿಲ್ಲೆ

ಜಿಲ್ಲೆ ವಿಭಜನೆ: ಲಾಭ-ನಷ್ಟ ಕುರಿತು ಚರ್ಚೆಯಾಗಲಿ

ಉತ್ತರ ಕನ್ನಡ ಜಿಲ್ಲೆಯ ವಿಭಜನೆಯ ಮಾತು ಇಂದು ನಿನ್ನೆಯದಲ್ಲ. ಶಿರಸಿ- ಸಿದ್ದಾಪುರದವರು ಮತ್ತೊಂದು ಜಿಲ್ಲೆಗೆ ಬೇಡಿಕೆ ಇಡುವುದು ಹಾಗೂ ಕರಾವಳಿ ಭಾಗದವರು ವಿಭಜನೆ ಬೇಡವೆಂದು ಹೇಳುವುದು ಹಲವಾರು ವರ್ಷಗಳಿಂದ ಕೇಳಿಬರುತ್ತಿದೆ. ಆದರೆ ಅದು ಕಾರ್ಯರೂಪಕ್ಕೆ ಬಂದಿಲ್ಲ. ಮೊನ್ನೆ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಮಹೇಶ್ ಜೋಶಿಯವರು ಉತ್ತರ ಕನ್ನಡ ಜಿಲ್ಲೆ ವಿಭಜನೆ ಆಗಲಿ ಅಂತ ಅಂಕೋಲಾದಲ್ಲಿ ಹೇಳಿ ಹೋಗಿದ್ದಾರೆ. ಇದಕ್ಕೆ ಟೀಕೆಗಳು ಕೂಡ ಬಂದಿವೆ.

ಪರ- ವಿರೋಧದ ಮಾತುಗಳು ಒತ್ತಟ್ಟಿಗಿರಲಿ. ಅಭಿಪ್ರಾಯ ವ್ಯಕ್ತಪಡಿಸಲು ಪ್ರತಿಯೊಬ್ಬರೂ ಸ್ವತಂತ್ರರು. ಆದರೆ, ಈ ಜಿಲ್ಲೆಯ ವಿಭಜನೆಯಿಂದ ಆಗುವ ಲಾಭ- ನಷ್ಟದ ಕುರಿತು ವೈಜ್ಞಾನಿಕ ನೆಲೆಯಲ್ಲಿ ಚರ್ಚಿಸುವುದು ಅಗತ್ಯ ಅಂತ ಈಗ ಅನಿಸುತ್ತದೆ.

ಚಂದ್ರಕಾಂತ ನಾಮಧಾರಿ, ಅಂಕೋಲಾ

ಮರುಪರೀಕ್ಷೆ ನಿರ್ಧಾರ ಸರಿಯಾದುದು

ಪಿಎಸ್‌ಐ ಪರೀಕ್ಷೆಯನ್ನು ನ್ಯಾಯಯುತವಾಗಿ ಮತ್ತು ಸ್ವಸಾಮರ್ಥ್ಯದಿಂದ ಬರೆದಿರುವ ಅಭ್ಯರ್ಥಿಗಳು ಮರು ಪರೀಕ್ಷೆಗೆ ಹೆದರಿಕೊಳ್ಳುವ ಅಗತ್ಯವಿಲ್ಲ. ಎಷ್ಟು ಬಾರಿ ಪರೀಕ್ಷೆ ಮಾಡಿದರೂ ಭಯಪಡಬೇಕಾಗಿಲ್ಲ. ಪರೀಕ್ಷೆಯಲ್ಲಿ ಅಕ್ರಮಗಳು ನಡೆದಿರುವುದು ಮೇಲ್ನೋಟಕ್ಕೆ ಮನದಟ್ಟಾಗಿರುವುದರಿಂದ ಮರುಪರೀಕ್ಷೆ ನಡೆಸುವ ನಿರ್ಧಾರದಲ್ಲಿ ಯಾವ ತಪ್ಪೂ ಇಲ್ಲ.

ಸರ್ಕಾರ ತನ್ನ ಈ ನಿರ್ಧಾರದಿಂದ ಹಿಂದೆ ಸರಿಯಬಾರದು. ಅವರಿವರ ಮಾತು ಕೇಳಿ ಮರುಪರೀಕ್ಷೆ ಮಾಡುವುದರಿಂದ ಹಿಂದೆ ಸರಿದರೆ ಆಡಳಿತವು ತುಘಲಕ್‌ನ ಆಡಳಿತದಂತಾಗುತ್ತದೆ. ಮರುಪರೀಕ್ಷೆ ನಡೆಸುವ ನಿರ್ಧಾರವನ್ನು ಯಾವ ಕಾರಣಕ್ಕೂ ಬದಲಿಸಬಾರದು.

ಚನ್ನಬಸಪ್ಪ, ಸುದರ್ಶನ, ಅಕ್ಮಲ್ ಪಾಷಾ, ಶ್ರೀದೇವಿ, ತಿಪಟೂರು

ಸಾಲದ ಬಡ್ಡಿ ದರ ಏರಿಕೆ: ಗೃಹ ನಿರ್ಮಾಣಕ್ಕೆ ಬರೆ

ಗೃಹ ನಿರ್ಮಾಣ ವಸ್ತುಗಳ ಬೆಲೆ ಏರಿಕೆಯಿಂದ ಬಸವಳಿದಿದ್ದ ಗ್ರಾಹಕರು ಆರ್‌ಬಿಐನ ರೆಪೊ ದರ ಏರಿಕೆಯ ನಿರ್ಧಾರದಿಂದ ಮತ್ತಷ್ಟು ಸಂಕಷ್ಟಕ್ಕೆ ಸಿಲುಕಿ ಹೆಚ್ಚಿನ ಸಾಲ ಬಾಧೆಯಿಂದ ಬಳಲುವಂತಾಗಿದೆ. ಈಗಾಗಲೇ ಸಾಲ ತೆಗೆದುಕೊಂಡು ಕಟ್ಟಡ ನಿರ್ಮಾಣ ಶುರು ಮಾಡಿರುವವರಿಗೆ ಹೇಗಾದರೂ ಅದು ಪೂರ್ಣಗೊಳ್ಳಲಿ ಎಂಬ ಚಿಂತೆ. ತಲೆ ಮೇಲೊಂದು ಸೂರು ಹೊಂದುವ ಕನಸು ಸಾಕಾರಗೊಳ್ಳಲಿ ಎಂಬ ಧಾವಂತ.

ಸಾಲ ಪಡೆದು ನಿರ್ಮಾಣ ಶುರು ಮಾಡಬೇಕೆನ್ನುವವರಿಗೆ ಇಷ್ಟಕ್ಕೇ ಮುಗಿಯುವುದೋ ಇಲ್ಲ ಬೆಲೆಗಳು, ಸಾಲದ ಬಡ್ಡಿ ದರ ಇನ್ನೂ ಹೆಚ್ಚುವವೋ ಎಂಬ ಆತಂಕ ಮತ್ತು ಮನೆ ಪೂರ್ತಿ ಆಗಲಿಲ್ಲ ಅಂದರೆ ಹೇಗೆ ಎಂಬ ಚಿಂತೆ. ಭರವಸೆ ಕಳೆದುಕೊಂಡು ಮುಂದೂಡುವವರೇ ಜಾಸ್ತಿ. ಹಾಗಾದರೆ ಗೃಹ ನಿರ್ಮಾಣೋದ್ಯಮ ಚೇತರಿಸಿಕೊಳ್ಳದೆ ಮತ್ತೆ ನೆಲ ಕಚ್ಚಬಹುದು.

ಬಿ.ಎಸ್.ಎಸ್. ಪಾಟೀಲ್, ಬೆಂಗಳೂರು

ನಾಲ್ಕನೇ ಪಕ್ಷ ಸ್ವಾಗತಾರ್ಹ

ಒಂದು ರಾಜ್ಯದಲ್ಲಿ ದ್ವಿಪಕ್ಷ ಸ್ಪರ್ಧೆ ಅತ್ಯಂತ ಸ್ವಾಗತಾರ್ಹ. ಮೂರು ಪಕ್ಷಗಳೆಂದರೆ ಆಡಳಿತ ಮತ್ತು ಸರ್ಕಾರದ ಸ್ಥಿರತೆ ಮೂರಾಬಟ್ಟೆ. ಕರ್ನಾಟಕದ ಸ್ಥಿತಿ ಇದಕ್ಕೊಂದು ನಿದರ್ಶನ. ಒಂದು ರಾಷ್ಟ್ರೀಯ ಪಕ್ಷ ಬಹುಮತ ಪಡೆಯದಿದ್ದರೆ, ಒಂದು ಸಣ್ಣ ಪಕ್ಷವೂ ದೊಡ್ಡ ಪಕ್ಷದ ಮೇಲೆ ಹೇಗೆ ಸವಾರಿ ಮಾಡುತ್ತದೆ ಎನ್ನುವುದಕ್ಕೆ ನಮ್ಮಲ್ಲೇ ಉದಾಹರಣೆ ಸಿಗುತ್ತದೆ. ತನ್ನ ಅಲ್ಪ ಬಲವನ್ನೂ ಸ್ವಾರ್ಥಕ್ಕಾಗಿ ಉಪಯೋಗಿಸಿ ರಾಜಿ ಮಾಡಿಕೊಳ್ಳುವ ಅನೈತಿಕ ಹೊಂದಾಣಿಕೆಯನ್ನು ನೋಡಿದ್ದಾಗಿದೆ.

ಇಂತಹ ಪರ್ವಕಾಲದಲ್ಲಿ ರಾಷ್ಟ್ರ ಮಟ್ಟದಲ್ಲಿ ಗಮನ ಸೆಳೆಯುತ್ತಿರುವ ಮತ್ತೊಂದು ಪಕ್ಷ ಇಲ್ಲಿ ನಾಲ್ಕನೇ ಪಕ್ಷವಾಗಿ ಜನಿಸುತ್ತಿರುವುದು ಆಶಾದಾಯಕ ಬೆಳವಣಿಗೆ. ಆದರೆ ಅದು ಬಲ ವೃದ್ಧಿಸಿಕೊಳ್ಳಲು ಈಗಾಗಲೇ ಇರುವ ಪಕ್ಷಗಳಲ್ಲಿ ಸ್ಥಾನಮಾನ ಸಿಗದ ರಾಜಕಾರಣಿಗಳನ್ನು ಯಾವ ಕಾರಣಕ್ಕೂ ಹತ್ತಿರ ಸುಳಿಯಬಿಡಬಾರದು. ಅವರೆಲ್ಲ ನರಭಕ್ಷಕ ಹುಲಿಯಂತೆ. ಈ ಎಚ್ಚರಿಕೆ ವಹಿಸಿ ಹೆಜ್ಜೆ ಇಟ್ಟರೆ ಮಾತ್ರ ನಾಲ್ಕನೇ ಪಕ್ಷ ಇಲ್ಲಿಯೂ ಮುಂದಿನ ದಿನಗಳಲ್ಲಿ ಜನರ ವಿಶ್ವಾಸ ಗಳಿಸಿ ಇಂದಲ್ಲ ನಾಳೆ ಅಧಿಕಾರಕ್ಕೂ ಬರಬಹುದು. ಈಗ ದೊಡ್ಡ ನಾಯಕರು ಎನ್ನುವಂತೆ ಮೆರೆಯುತ್ತಿರುವ ಕೆಲವು ಸಂಘಟನೆಗಳ ಮುಖಂಡರು ಈ ಪಕ್ಷದತ್ತ ಗಮನ ಹರಿಸುವುದು ಮತ್ತು ಅದು ಇವರ ಬೆಂಬಲ ಪಡೆಯುವ ಆತುರದಲ್ಲಿರುವುದು ಶುಭಾರಂಭವಲ್ಲ.

ಸತ್ಯಬೋಧ, ಬೆಂಗಳೂರು

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor: Sudesha Doddapalya (Responsible for selection of news under the PRB Act). Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080 - 45557333, Editorial: 080 - 45557251, Circ: 1800-425-8009, Advt: 1800-425-8008. Also printed at Hubballi-Dharwad, Mangaluru, Kalaburagi, Davanagere, Mysuru and Hosapete.

© All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ಕಲ್ಲಿದ್ದಲು ಕೊರತೆ ನಿಭಾಯಿಸುವಲ್ಲಿ ಕೇಂದ್ರ ಸರ್ಕಾರ ಎಡವಿದೆಯೇ?

ಕಲ್ಲಿದ್ದಲು ಉತ್ಪಾದನೆ ಪೂರೈಕೆಯಲ್ಲಿ ದಾಖಲೆ

ಕೋವಿಡ್-19ರ ನಂತರದಲ್ಲಿ, ಜಗತ್ತೇ ಬೆರಗಾಗುತ್ತಿರುವ ರೀತಿಯಲ್ಲಿ ನಮ್ಮ ಆರ್ಥಿಕ ಪ್ರಗತಿಯು ನಾಗಾಲೋಟದಲ್ಲಿರುವುದು ಆರ್ಥಿಕ ತಜ್ಞರ ವಿಶ್ಲೇಷಣೆಗೂ ನಿಲುಕದ ರೀತಿಯಲ್ಲಿದೆ. ಹೀಗಾಗಿ ವಿದ್ಯುತ್ ಶಕ್ತಿಗೆ ಅಭೂತಪೂರ್ವ ಬೇಡಿಕೆ ಉಂಟಾಗಿದೆ. ಪರಿಣಾಮವಾಗಿ ಕಲ್ಲಿದ್ದಲಿಗೆ ಎಲ್ಲಿಲ್ಲದ ಹಾಗೂ ಎಂದಿಲ್ಲದ ಬೇಡಿಕೆ ಬಂದಿರುವುದು ಸಹಜವಾಗಿದೆ. ಹೀಗೆ ಬೇಡಿಕೆ ಹೆಚ್ಚಿರುವುದರಿಂದಲೇ ಸರ್ಕಾರವು ಪ್ರತಿ ದಿನದ ಆಧಾರದಲ್ಲಿಯೇ ಕಲ್ಲಿದ್ದಲಿನ ಉತ್ಪಾದನೆಯನ್ನು ಹೆಚ್ಚಿಸುತ್ತಿದೆ

ಪ್ರಜಾವಾಣಿ ಚರ್ಚೆ

• ಪ್ರಲ್ಹಾದ ಜೋಶಿ

ಕಲ್ಲಿದ್ದಲು ದೇಶದ ಆರ್ಥಿಕ ಬೆಳವಣಿಗೆಯ ಜೀವಾಳವೆಂಬುದು ಸರ್ವವೇದ್ಯ. ಸ್ವಾತಂತ್ರ್ಯಾ ನಂತರವಂತೂ ದೇಶದ ವಿದ್ಯುಚ್ಛಕ್ತಿ ಉತ್ಪಾದನೆಯ ಬೆನ್ನೆಲುಬು ಕೂಡಾ ಹೌದು. ಅಲ್ಲದೇ ಇತರೆ ಔದ್ಯಮಿಕ ಬೆಳವಣಿಗೆಯ ಪೂರಕ ಅಂಶವೂ ಆಗಿದ್ದು ದೇಶದ ಕಲ್ಲಿದ್ದಲು ಉತ್ಪಾದನೆ ಪ್ರದೇಶದ ಲಕ್ಷಾಂತರ ಜನರಿಗೆ ಉದ್ಯೋಗದ ಮೂಲವಾಗಿದೆ. ದೇಶದ ಒಟ್ಟು ವಿದ್ಯುತ್ ಉತ್ಪಾದನೆಯ ಶೇ 70ರಷ್ಟು ಕಲ್ಲಿದ್ದಲು ಆಧಾರಿತ ಉಷ್ಣ ವಿದ್ಯುತ್ ಸ್ಥಾವರಗಳಿಂದ ಆಗುವುದರಿಂದ ಕಲ್ಲಿದ್ದಲಿಗೆ ಎಷ್ಟು ಬೇಡಿಕೆ ಇದೆ ಎಂಬುದನ್ನು ಅಂದಾಜಿಸಬಹುದಾಗಿದೆ.

ದೇಶದ ಆರ್ಥಿಕ ಪ್ರಗತಿ ಇಂದು ಎಂದಿಗಿಂತಲೂ ಹೆಚ್ಚು ವೇಗ ಪಡೆದುಕೊಂಡಿದೆ. ಕೋವಿಡ್-19ರ ನಂತರದಲ್ಲಿ, ಜಗತ್ತೇ ಬೆರಗಾಗುತ್ತಿರುವ ರೀತಿಯಲ್ಲಿ ನಮ್ಮ ಆರ್ಥಿಕ ಪ್ರಗತಿಯು ನಾಗಾಲೋಟದಲ್ಲಿರುವುದು ಆರ್ಥಿಕ ತಜ್ಞರ ವಿಶ್ಲೇಷಣೆಗೂ ನಿಲುಕದ ರೀತಿಯಲ್ಲಿದೆ. ಹೀಗಾಗಿ ವಿದ್ಯುತ್ ಶಕ್ತಿಗೆ ಅಭೂತಪೂರ್ವ ಬೇಡಿಕೆ ಉಂಟಾಗಿದೆ. ಪರಿಣಾಮವಾಗಿ ಕಲ್ಲಿದ್ದಲಿಗೆ ಎಲ್ಲಿಲ್ಲದ ಹಾಗೂ ಎಂದಿಲ್ಲದ ಬೇಡಿಕೆ ಬಂದಿರುವುದು ಸಹಜವಾಗಿದೆ. ಹೀಗೆ ಬೇಡಿಕೆ ಹೆಚ್ಚಿರುವುದರಿಂದಲೇ ಸರ್ಕಾರವು ಪ್ರತಿ ದಿನದ ಆಧಾರದಲ್ಲಿಯೇ ಕಲ್ಲಿದ್ದಲಿನ ಉತ್ಪಾದನೆಯನ್ನು ಹೆಚ್ಚಿಸುತ್ತಿದೆ. ಕರ್ನಾಟಕವೂ ಸೇರಿದಂತೆ ದೇಶದ ವಿವಿಧ ಉಷ್ಣ ವಿದ್ಯುತ್ ಸ್ಥಾವರಗಳಿಗೆ ಸಕಾಲದಲ್ಲಿ ಕಲ್ಲಿದ್ದಲು ತಲುಪಿಸುವ ಪ್ರಯತ್ನದಲ್ಲಿ ನಿರತವಾಗಿದೆ. ಕಲ್ಲಿದ್ದಲಿನ ಕೊರತೆಯಿಂದ ಯಾವುದೇ ಉಷ್ಣ ವಿದ್ಯುತ್ ಸ್ಥಾವರ ಸ್ಥಗಿತವಾಗದಂತೆ ನೋಡಿಕೊಳ್ಳುತ್ತಿದೆ. 2021-22ರಲ್ಲಿ 77.7 ಕೋಟಿ ಟನ್ ದಾಖಲೆ ಉತ್ಪಾದನೆ ಹಾಗೂ 81.8 ಕೋಟಿ ಟನ್ ಪೂರೈಕೆಯನ್ನೂ ಮಾಡಿದ್ದೇವೆ. ಯುಪಿಎ ಸರ್ಕಾರದ ಆಳ್ವಿಕೆಯ 2013-14ರಲ್ಲಿನ 56.6 ಕೋಟಿ ಟನ್ ಉತ್ಪಾದನೆಗೆ ಹೋಲಿಸಿದಲ್ಲಿ ಇದೊಂದು ದಾಖಲೆ. ಅದೇ ರೀತಿ ಇದೇ ಅವಧಿಯಲ್ಲಿ ಕ್ಯಾಪ್ಟಿವ್ ಗಣಿಗಾರಿಕೆಯಿಂದ ಕಲ್ಲಿದ್ದಲಿನ ಉತ್ಪಾದನೆ 6.6 ಕೋಟಿ ಟನ್‌ನಿಂದ 8.6 ಕೋಟಿ ಟನ್‌ಗೆ ಏರಿಕೆ ಆಗಿದೆ. ಉತ್ಪಾದನೆಯಲ್ಲಿ ಆಗಿರುವ ಶೇ 30ರಷ್ಟು ಏರಿಕೆಯೂ ದಾಖಲೆಯೇ ಆಗಿದೆ.

ನರೇಂದ್ರ ಮೋದಿ ನೇತೃತ್ವದ ಸರ್ಕಾರ 2014ರಲ್ಲಿ ಅಧಿಕಾರಕ್ಕೆ ಬಂದ ಬಳಿಕ ಅವರ ಸಮರ್ಥ ನಾಯಕತ್ವದಲ್ಲಿ ದೂರದೃಷ್ಟಿಯ ಕಲ್ಲಿದ್ದಲು ನೀತಿ ರೂಪಿಸಲಾಗಿದೆ. ಹಾಗಾಗಿ, ಕೋಲ್ ಇಂಡಿಯಾ ಮತ್ತು ಸರ್ಕಾರಿ ಸ್ವಾಮ್ಯದ ವಿವಿಧ ಕಂಪನಿಗಳಲ್ಲಿ 7.3 ಕೋಟಿ ಟನ್ ಕಲ್ಲಿದ್ದಲು ಈಗ ಲಭ್ಯವಿದೆ. ಇದು ದೇಶದ ವಿದ್ಯುತ್ ಸ್ಥಾವರಗಳ 30 ದಿನಗಳ ಬೇಡಿಕೆ ಪೂರೈಸಲು ಸಾಕಾಗುತ್ತದೆ.

ದೇಶೀಯ ಕಲ್ಲಿದ್ದಲಿನ ಉಪಯೋಗ 69.1 ಕೋಟಿ ಟನ್‌ನಿಂದ 2020-21ನೇ ವರ್ಷದಲ್ಲಿ 81.8 ಕೋಟಿ ಟನ್‌ಗೆ ಏರಿಕೆಯಾಗಿದೆ. ಏರಿಕೆ ಪ್ರಮಾಣವು ಶೇ 18.4ರಷ್ಟು. ಅಲ್ಲದೆ, ದೇಶೀಯ ಕಲ್ಲಿದ್ದಲು ಬಳಸಿ ಉತ್ಪಾದಿಸುವ ವಿದ್ಯುತ್‌ನ ಪ್ರಮಾಣವು ಫೆಬ್ರುವರಿ ಹೊತ್ತಿಗೆ ಶೇ 16ರಷ್ಟು ಏರಿಕೆಯಾಗಿದೆ. ಇದರಿಂದಾಗಿ, ಕಲ್ಲಿದ್ದಲು ಆಮದು ಪ್ರಮಾಣ ಇಳಿಕೆಯಾಗಿದೆ. ಆಮದು ಪ್ರಮಾಣ ತಗ್ಗಿರುವುದರಿಂದ ವಿದೇಶಿ ವಿನಿಮಯದ ಮೇಲಿನ ಒತ್ತಡ ಕಡಿಮೆ ಆಗಿರುವುದು ಸಕಾರಾತ್ಮಕ ಬೆಳವಣಿಗೆ. 2020 ಹಾಗೂ 2021ರಲ್ಲಿ ಕ್ರಮವಾಗಿ 19.64 ಕೋಟಿ ಟನ್ ಹಾಗೂ 18.66 ಕೋಟಿ ಟನ್ ಕಲ್ಲಿದ್ದಲು ಆಮದು ಕಡಿಮೆಯಾಗಿದೆ.

ವಿದ್ಯುತ್ ಉತ್ಪಾದನೆಯ ಉದ್ದೇಶಕ್ಕೆ ಆಮದು ಮಾಡುತ್ತಿದ್ದ ಕಲ್ಲಿದ್ದಲಿನ ಪ್ರಮಾಣ ಶೇ 43ರಷ್ಟು ಇಳಿಕೆಯಾಗಿದೆ. ಇದು ವಿದೇಶಿ ವಿನಿಮಯ ಕ್ಷೇತ್ರಕ್ಕೆ ನೀಡಿದ ಕೊಡುಗೆ. 2022ರ ಮೇ 3ರಂದು ದೇಶದಲ್ಲಿ ಉತ್ಪಾದನೆಯಾದ 471 ಕೋಟಿ ಯೂನಿಟ್ ವಿದ್ಯುತ್‌ನಲ್ಲಿ ಕಲ್ಲಿದ್ದಲು ಬಳಸಿ ತಯಾರಿಸಿದ ವಿದ್ಯುತ್‌ನ ಪಾಲು ಶೇ 74ರಷ್ಟು ಇದೆ. ಕಲ್ಲಿದ್ದಲಿನ ಅವಲಂಬನೆ ಎಷ್ಟಿದೆ ಎಂಬುದನ್ನು ಇದು ತೋರಿಸುತ್ತದೆ. ದೇಶದ ಉಷ್ಣ ವಿದ್ಯುತ್ ಸ್ಥಾವರಗಳಿಗೆ ಕೋಲ್ ಇಂಡಿಯಾ ಲಿ. ಏಪ್ರಿಲ್‌ನಲ್ಲಿ ಒಟ್ಟು ಬಳಕೆಯ ಶೇ 14ರಷ್ಟನ್ನು ಪೂರೈಸಿದೆ. ಇಂಧನ ಕ್ಷೇತ್ರವನ್ನು ಸುಭದ್ರಗೊಳಿಸಲು ಮುಂದಿನ 40-50 ವರ್ಷಗಳವರೆಗೆ ಕಲ್ಲಿದ್ದಲಿನ ಮೇಲಿನ ಅವಲಂಬನೆ ಅನಿವಾರ್ಯ.

ಈ ಬೇಸಿಗೆಯ ಧಗೆಯು 122 ವರ್ಷಗಳಲ್ಲಿಯೇ ಅತಿ ಹೆಚ್ಚು. ಹಾಗಾಗಿ, ವಿದ್ಯುತ್‌ನ ಬೇಡಿಕೆ ಹೆಚ್ಚುತ್ತಲೇ ಇದೆ. ಕಳೆದ ಏಪ್ರಿಲ್‌ಗೆ ಹೋಲಿಸಿದರೆ ಈ ವರ್ಷ ವಿದ್ಯುತ್ ಬೇಡಿಕೆ ಶೇ 10ರಷ್ಟು ಏರಿಕೆ ಕಂಡಿದೆ. ಕಲ್ಲಿದ್ದಲು ಬಳಸಿ ತಯಾರಿಸುವ ವಿದ್ಯುತ್‌ನ ಬೇಡಿಕೆ ಶೇ 8ರಷ್ಟು ಹೆಚ್ಚಳವಾಗಿದೆ. ಆರ್ಥಿಕತೆಯು ವೇಗವಾಗಿ ಬೆಳೆಯುತ್ತಿದೆ; ಹವಾಮಾನ ವೈಪರೀತ್ಯದ ಪರಿಣಾಮವಾಗಿ ಉಷ್ಣಾಂಶ ಹೆಚ್ಚುತ್ತಿದೆ. ಈ ಎರಡೂ ಕಾರಣಗಳಿಂದಾಗಿ ಇಂಧನದ ಬೇಡಿಕೆ ಹೆಚ್ಚುತ್ತಲೇ ಹೋಗುತ್ತದೆ. ಹೀಗಾಗಿ, ಪರಿಸರ ಸಂರಕ್ಷಣೆಯನ್ನು ಗಮನದಲ್ಲಿ ಇರಿಸಿಕೊಂಡು ಕಲ್ಲಿದ್ದಲು ಅನಿಲೀಕರಣದಂತಹ (ಗ್ಯಾಸಿಫಿಕೇಷನ್) ತಂತ್ರಜ್ಞಾನ ಅಳವಡಿಸಿಕೊಳ್ಳುವುದಕ್ಕೆ ಆದ್ಯತೆ ನೀಡಲಾಗುತ್ತಿದೆ. 2030ರ ಹೊತ್ತಿಗೆ 100 ಟನ್ ಕಲ್ಲಿದ್ದಲು ಅನಿಲೀಕರಣದ ಗುರಿ ಸಾಧಿಸಲು ಕಲ್ಲಿದ್ದಲನ್ನು ಹೆಚ್ಚು ಉತ್ಪಾದಿಸಿ, ಅದರ ಲಭ್ಯತೆಯನ್ನು ಖಚಿತಪಡಿಸಿಕೊಳ್ಳಬೇಕಿದೆ.

ವಾಣಿಜ್ಯ ಉದ್ದೇಶಕ್ಕಾಗಿ ಕಲ್ಲಿದ್ದಲು ಗಣಿಗಳ ಹರಾಜಿನಿಂದಾಗಿ ಕಲ್ಲಿದ್ದಲು ಉತ್ಪಾದನೆ ಒಟ್ಟಾರೆ ಹೆಚ್ಚಳವಾಗಿದೆ. ಆಮದಿನ ಮೇಲಿನ ಅವಲಂಬನೆ ಕಡಿಮೆಯಾದ ಕಾರಣ, ವಿದೇಶಿ ವಿನಿಮಯದಲ್ಲಿ ₹30 ಸಾವಿರ ಕೋಟಿಯವರೆಗೆ ಉಳಿತಾಯವಾಗಿದೆ.

2040ರ ಹೊತ್ತಿಗೆ ಕಲ್ಲಿದ್ದಲಿನ ಬೇಡಿಕೆ ದ್ವಿಗುಣಗೊಳ್ಳಲಿದೆ. ಇದಕ್ಕೆ ಕಾರಣಗಳು ಹಲವು. ಅನಿಲ ಆಧಾರಿತ ವಿದ್ಯುತ್ ಸ್ಥಾವರಗಳು ಸ್ಥಗಿತಗೊಳ್ಳುತ್ತಿವೆ ಮತ್ತು ಆಮದು ಕಲ್ಲಿದ್ದಲು ಬಳಸುವ ಉಷ್ಣ ವಿದ್ಯುತ್ ಸ್ಥಾವರಗಳು ನಿಷ್ಕ್ರಿಯವಾಗುತ್ತಿವೆ. ಕೋವಿಡೋತ್ತರ ಅವಧಿಯಲ್ಲಿ ಆರ್ಥಿಕತೆ ಪುನಶ್ಚೇತನಗೊಂಡಿದೆ. ಹೀಗಾಗಿ ವಿದ್ಯುತ್‌ನ ಬೇಡಿಕೆ ಹೆಚ್ಚಳವಾಗಿದೆ. ಕಲ್ಲಿದ್ದಲು ಗಣಿಗಾರಿಕೆ ಮತ್ತು ಉತ್ಪಾದನೆ ಕ್ಷೇತ್ರದಲ್ಲಿ ಹಲವು ಸುಧಾರಣೆಗಳನ್ನು ತರಲಾಗಿದೆ. ಕ್ಯಾಪ್ಟಿವ್ ಗಣಿಗಳ ನಿಯಂತ್ರಣಕ್ಕೆ ಕ್ರಮ ಕೈಗೊಳ್ಳಲಾಗಿದೆ. ಕಲ್ಲಿದ್ದಲಿನ ವಾಣಿಜ್ಯ ಬಳಕೆಗೆ ಮುಕ್ತ ಅವಕಾಶ ನೀಡಲಾಗಿದೆ. ಹೀಗೆ, ಕಲ್ಲಿದ್ದಲಿನ ಹೆಚ್ಚಿನ ಬೇಡಿಕೆಯನ್ನು ನಿಭಾಯಿಸಲು ಅಗತ್ಯ ಕ್ರಮಗಳನ್ನು ನರೇಂದ್ರ ಮೋದಿ ನೇತೃತ್ವದ ಸರ್ಕಾರವು ಕೈಗೊಂಡಿದೆ.

ಕಲ್ಲಿದ್ದಲಿನ ಒಂದು ಗಣಿಯನ್ನು ಹಂಚಿಕೆ ಮಾಡಿದ ಬಳಿಕ ಅದು ಕಾರ್ಯಾರಂಭಿಸಲು ಕನಿಷ್ಠ ಎಂಟು ವರ್ಷ ಬೇಕಾಗುತ್ತದೆ. ಪರಿಸರ ಸಚಿವಾಲಯದ ಅನುಮತಿ ಇತ್ಯಾದಿ ಪಡೆದುಕೊಳ್ಳಬೇಕಾಗುತ್ತದೆ. ಕಲ್ಲಿದ್ದಲು ಉತ್ಪಾದನೆ ಹಾಗೂ ಅದರ ಬಳಕೆಗೆ ಬಹಳ ಮಹತ್ವ ಇದೆ. ಆದರೆ, ಸ್ವಾತಂತ್ರ್ಯದ ನಂತರ 50 ವರ್ಷ ಆಳ್ವಿಕೆ ನಡೆಸಿದ್ದ ಕಾಂಗ್ರೆಸ್ ಪಕ್ಷವು ಈ ಮಹತ್ವವನ್ನು ಅರ್ಥ ಮಾಡಿಕೊಳ್ಳಲಿಲ್ಲ. ಕಲ್ಲಿದ್ದಲು ರಾಷ್ಟ್ರೀಯ ಸಂಪತ್ತು. ದೇಶದ ಭವಿಷ್ಯದ ಆರ್ಥಿಕ ಬೆಳವಣಿಗೆಗೆ ಈ ಸಂಪತ್ತನ್ನು ಉತ್ಪಾದಿಸಿ ಬಳಸಬೇಕು ಎಂಬ ಚಿಂತನೆಯನ್ನು ಕಾಂಗ್ರೆಸ್ ನಡೆಸಲಿಲ್ಲ. ಇಷ್ಟೊಂದು ಮಹತ್ವದ ಸಂಪತ್ತನ್ನು ಕೆಲವೇ ಜನರ ಸಂಪತ್ತು ಎಂದು ಆಗಿನ ಸರ್ಕಾರಗಳು ಪರಿಗಣಿಸಿದ್ದವು. ಈ ಎಲ್ಲವನ್ನೂ ಈಗಿನ ಸರ್ಕಾರವು ಸರಿಪಡಿಸಿ, ಮುಂದಕ್ಕೆ ಅಡಿ ಇರಿಸಿದೆ.

ಯುಪಿಎ ನೇತೃತ್ವದ ಸರ್ಕಾರದ ಅವಧಿಯಲ್ಲಿ ಕಲ್ಲಿದ್ದಲು ಕ್ಷೇತ್ರವು ತಮ್ಮ ಕೃಪಾಪೋಷಿತ ಜಾಗೀರು ಎಂದೇ ಪರಿಗಣಿಸಲಾಗಿತ್ತು. ಈ ಕ್ಷೇತ್ರವನ್ನು ಭ್ರಷ್ಟರ ಕೈಗೆ ಕೊಟ್ಟು ಕಲ್ಲಿದ್ದಲು ಹಗರಣಕ್ಕೆ ಕಾರಣವಾಯಿತು. ಆಗ ಸರ್ಕಾರಕ್ಕೆ ಆದ ನಷ್ಟ ₹1.86 ಲಕ್ಷ ಕೋಟಿ. ಆದರೆ, ಈಗ ಕಲ್ಲಿದ್ದಲು ಬಿಕ್ಕಟ್ಟು ಉಂಟಾಗಿದೆ ಎಂದು ಕಾಂಗ್ರೆಸ್ ಪಕ್ಷವು ಅಪಪ್ರಚಾರ ಮಾಡುತ್ತಿದೆ. ಕಾಂಗ್ರೆಸ್ ಮತ್ತು ಅದರ ಜತೆಗೆ ಇರುವ ಪಕ್ಷಗಳಿಗೆ ಕಲ್ಲಿದ್ದಲು ಬಗ್ಗೆ ಮಾತನಾಡುವ ಯಾವುದೇ ನೈತಿಕತೆ ಇಲ್ಲ. ಮೋದಿ ಅವರ ಮಾರ್ಗದರ್ಶನದಲ್ಲಿ, ಮುಂದಿನ ದಿನಗಳಲ್ಲಿ ಕಲ್ಲಿದ್ದಲು ಉತ್ಪಾದನೆ ಮತ್ತು ಪೂರೈಕೆಯಲ್ಲಿ ಕಲ್ಲಿದ್ದಲು ಇಲಾಖೆಯು ದಾಖಲೆ ಬರೆಯಲಿದೆ.

ಲೇಖಕ: ಕೇಂದ್ರ ಸಂಸದೀಯ ವ್ಯವಹಾರ, ಗಣಿ ಹಾಗೂ ಕಲ್ಲಿದ್ದಲು ಸಚಿವ

ವೇದವ್ಯಾಸರ ಶಿವಪುರಾಣಸಾರ



ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿ 114

ಶಿವಲೋಕ ಸೇರಿದ ಗುಣನಿಧಿ

ಗುಣನಿಧಿಯನ್ನು ನರಕಕ್ಕೆ ಕರೆದೊಯ್ಯದಂತೆ ತಡೆದ ಶಿವಗಣರು 'ಎಲೈ ಯಮಭಟರೇ, ಪರಮ ಧಾರ್ಮಿಕನಾದ ಇವನನ್ನು ಬಿಡಿ. ಇವನು ದಂಡನೆಗೆ ಅರ್ಹನಾದವನಲ್ಲ. ಇವನ ಪಾಪಗಳೆಲ್ಲವೂ ಸುಟ್ಟು ಬೂದಿಯಾಗಿವೆ' ಎನ್ನುತ್ತಾರೆ. ಇದನ್ನು ಕೇಳಿ ಯಮಭಟರಿಗೆ ಆಶ್ಚರ್ಯವಾಗುತ್ತೆ. 'ಎಲೈ ಶಿವಗಣಗಳಿರಾ! ಇವನು ಬಹಳ ಕೆಟ್ಟ ಕೆಲಸಗಳನ್ನು ಮಾಡಿದವನು. ಇವನು ತನ್ನ ಕುಲದ ಆಚಾರವನ್ನೆಲ್ಲವನ್ನೂ ಬಿಟ್ಟು, ತಾಯಿತಂದೆಯರ ಮಾತನ್ನು ಕೇಳದೆ, ಸತ್ಯ-ಶೌಚಗಳನ್ನು ಮಾಡದವನು. ಈತನ ಹಿಂದಿನ ದುಷ್ಕೃತ್ಯ ಹಾಗಿರಲಿ. ಈಗ ಪ್ರತ್ಯಕ್ಷವಾಗಿಯೇ ನೋಡಿರಿ. ಶಿವನಿರ್ಮಾಲ್ಯವನ್ನು ಉಲ್ಲಂಘಿಸಿರುವನು. ನಿಮ್ಮಂಥವರು ಇವನನ್ನು ಮುಟ್ಟಲೂಬಾರದು' ಎನ್ನುತ್ತಾರೆ.

'ಶಿವನಿರ್ಮಾಲ್ಯವನ್ನು ಉಪಯೋಗಿಸುವವರು, ಅದನ್ನು ಕಡೆಗಣಿಸುವವರು ಮತ್ತು ನಿರ್ಮಾಲ್ಯವನ್ನು ನೀಡುವವರನ್ನು ಮುಟ್ಟಿದರೆ ಪಾಪವು ಲಭಿಸುವುದು. ವಿಷವನ್ನಾದರೂ ನೋಡಿ ಕುಡಿಯಬಹುದು. ಆದರೆ ಇಂಥವರನ್ನು ಮುಟ್ಟಬಾರದು. ಪ್ರಾಣ ಹೋಗುವಂಥ ಕಷ್ಟ ಏನೇ ಇದ್ದರೂ ಶಿವನ ಸ್ವತ್ತನ್ನು ಮುಟ್ಟಬಾರದು. ಅಂಥದರಲ್ಲಿ ಶಿವನ ನೈವೇದ್ಯವನ್ನು ಕದ್ದೊಯ್ಯುತ್ತಿದ್ದ ಇವನಿಗೆ ನರಕವೇ ಪ್ರಾಯಶ್ಚಿತ್ತ' ಎನ್ನುತ್ತಾರೆ ಯಮಕಿಂಕರರು.

ಯಮಭಟರ ಮಾತನ್ನು ಕೇಳಿ ಶಿವನ ಪಾರಿಷದರು ಪರಶಿವನ ಪದಕಮಲಗಳನ್ನು ಧ್ಯಾನಿಸುತ್ತಾ ಶಿವಕಿಂಕರರಿಗೆ ಹೇಳುತ್ತಾರೆ: 'ಎಲೈ ಯಮಕಿಂಕರರೇ, ಸೂಕ್ಷ್ಮದೃಷ್ಟಿಗಳು ಮಾತ್ರ ಗಮನಿಸಬಹುದಾದ, ಪರಮ ಸೂಕ್ಷ್ಮವಾದ ಶಿವಧರ್ಮಗಳು ಸ್ಥೂಲದೃಷ್ಟಿಯುಳ್ಳ ನಿಮ್ಮಂಥವರಿಗೆ ಗೋಚರವಾಗುವುದಿಲ್ಲ. ಈಗ ಪಾಪರಹಿತನಾಗಿರುವ ಗುಣನಿಧಿಯು ಮಾಡಿದ ಅಂತಹ ಪುಣ್ಯ ಕೆಲಸವೇನು ಎಂದಲ್ಲವೇ ನಿಮ್ಮ ಶಂಕೆ? ಸಾವಧಾನವಾಗಿ ಕೇಳಿರಿ. ಇವನು ರಾತ್ರಿ ತನ್ನ ಬಟ್ಟೆಯಂಚಿನಿಂದ ದೀಪದ ಬತ್ತಿಯನ್ನು ಮಾಡಿ ಬೆಳಗಿದ್ದರಿಂದ, ಅದುವರೆಗೂ ಲಿಂಗದ ಮೇಲೆ ಬೀಳುತ್ತಿದ್ದ ನೆರಳು ಹೋಗಲಾಡಿಸಲ್ಪಟ್ಟಿತು. ಇವನು ಮಾಡಿದ ಮತ್ತೊಂದು ದೊಡ್ಡ ಧರ್ಮವನ್ನೂ ಕೇಳಿರಿ. ಶಿವಪೂಜೆಯ ಕಾಲದಲ್ಲಿ ಭಕ್ತರು ಶಿವನಾಮಾವಳಿ ಕೀರ್ತನ ಮಾಡುತ್ತಿದ್ದಾಗ ಇವನು ಆ ಶಿವನಾಮಗಳನ್ನು ಆಲಿಸಲಿಲ್ಲವೇ? ಇದೇ ಅವನು ಮಾಡಿದ ಮತ್ತೊಂದು ಧರ್ಮ. ಶಿವರಾತ್ರಿಯ ಚತುರ್ದಶೀ ದಿವಸದಲ್ಲಿ ಭಕ್ತನು ವಿಧಿವತ್ತಾಗಿ ಪೂಜೆಮಾಡುತ್ತಿದ್ದುದನ್ನು ನೋಡಿದ್ದಾನೆ. ಅಲ್ಲಿಯವರೆಗೂ ಏನನ್ನೂ ತಿನ್ನದೆ ಉಪವಾಸವಿದ್ದು, ಶಿವನ ಸನ್ನಿಧಾನದಲ್ಲಿ ಸಂಯಮದಿಂದ ಕಾದಿದ್ದಾನೆ. ಈ ಪುಣ್ಯಪ್ರಭಾವದಿಂದ ಇವನು ಈಗ ನಮ್ಮೊಡನೆಯೇ ಶಿವಲೋಕಕ್ಕೆ ತೆರಳುವನು. ಅಲ್ಲದೆ ಕೆಲವು ಕಾಲ ಶಿವನ ಅನುಚರನಾಗಿ ಮಹಾಭೋಗಗಳನ್ನ ಅನುಭವಿಸುವನು. ಪಾಪಲೇಶವೂ ಇಲ್ಲದ ಗುಣನಿಧಿಯು ಮುಂದೆ ಕಳಿಂಗದೇಶದ ಅರಸನಾಗುವನು. ಇವನು ಈಗ ಶಿವನಿಗೆ ಬಹಳ ಬೇಕಾದವನಾಗಿದ್ದಾನೆ. ನೀವು ಬಂದ ದಾರೀ ಹಿಡಿದು ನಿಮ್ಮ ಲೋಕಕ್ಕೆ ತೆರಳಿರಿ' ಎಂದರು ಶಿವಗಣರು.

ಈ ಪ್ರಸಂಗವನ್ನು ಬ್ರಹ್ಮನು ನಾರದನಿಗೆ ಹೀಗೆ ವಿವರಿಸುತ್ತಾನೆ: 'ನಾರದ, ಶಿವದೂತರು ಹೇಳಿದ ಮಾತನ್ನು ಕೇಳಿ, ಆ ಯಮದೂತರು ತಮ್ಮ ಲೋಕಕ್ಕೆ ಹೊರಟುಹೋದರು. ನಡೆದ ವೃತ್ತಾಂತವನ್ನೆಲ್ಲ ಯಮನಿಗೆ ತಿಳಿಸಿದರು. ಇದಕ್ಕೆ ಯಮರಾಜ ತನ್ನ ಭಟರಿಗೆ 'ಎಲೈ ಭಟರಿರಾ, ಎಚ್ಚರಿಕೆಯಿಂದ ನನ್ನ ಮಾತನ್ನು ಕೇಳಿರಿ. ಅದನ್ನೇ ನನ್ನ ಅಪ್ಪಣೆ ಎಂದು ತಿಳಿದು ಪ್ರೀತಿಯಿಂದ ನೆರವೇರಿಸಿ. ಯಾರು ಪ್ರಪಂಚದಲ್ಲಿ ವಿಭೂತಿಯನ್ನು ತ್ರಿಪುಂಡ್ರವಾಗಿ ಧರಿಸಿರುವರೋ, ಅವರೆಲ್ಲರನ್ನೂ ನೀವು ಬಿಟ್ಟುಬಿಡಿ. ಎಂದಿಗೂ ಅವರನ್ನು ಇಲ್ಲಿಗೆ ಕರೆತರಬೇಕಾಗಿಲ್ಲ. ಯಾರು ಬಿಳಿದಾದ ವಿಭೂತಿಯನ್ನು ಹಣೆಗೆ ಹಾಕಿಕೊಳ್ಳುವರೋ, ಅಥವಾ ಮೈಗೆ ಹಚ್ಚಿಕೊಳ್ಳುವರೋ, ಅವರೆಲ್ಲರನ್ನೂ ನೀವು ಬಿಟ್ಟುಬಿಡಬೇಕು. ಎಂದಿಗೂ ನರಕಕ್ಕೆ ಕರೆತರಬಾರದು. ಶಿವನ ವೇಷವನ್ನು ಧರಿಸಿರುವರೆಂದಾಗಲೀ ಅಥವಾ ಮತ್ತಾವ ಕಾರಣದಿಂದಲಾದರೂ ಆಗಲಿ, ಅವರೆಲ್ಲರನ್ನೂ ಬಿಟ್ಟುಬಿಡಬೇಕಲ್ಲದೆ, ಇಲ್ಲಿಗೆ ಎಂದಿಗೂ ಕರೆದುಕೊಂಡು ಬರಬಾರದು. ಲೋಕದಲ್ಲಿ ಯಾರು ರುದ್ರಾಕ್ಷಿಗಳನ್ನು ಧರಿಸುವರೋ, ಯಾರು ಜಟೆಗಳನ್ನು ಬಿಟ್ಟಿರುವರೋ, ಅವರೆಲ್ಲರ ತಂಟೆಗೂ ಹೋಗಬೇಡಿ. ಎಂದಿಗೂ ಅವರನ್ನು ಇಲ್ಲಿಗೆ ಕರೆತರಲಾಗದು. ತಮ್ಮ ಹೊಟ್ಟೆಯನ್ನು ಹೊರೆದುಕೊಳ್ಳಲು ಯಾರು ಶಿವನ ವೇಷವನ್ನು ಧರಿಸುವರೋ, ಅಂಥವರನ್ನೂ ನೀವು ಬಿಟ್ಟುಬಿಡಬೇಕಲ್ಲದೆ ಇಲ್ಲಿಗೆ ಕರೆತರಬಾರದು' ಎಂದು ಆದೇಶಿಸುತ್ತಾನೆ.

ಅಭಾವಕ್ಕೆ ಕೇಂದ್ರದ ಅದಕ್ಷತೆಯೇ ಕಾರಣ

ಕೇಂದ್ರ ವಿದ್ಯುತ್ ಪ್ರಾಧಿಕಾರ ಬಿಡುಗಡೆ ಮಾಡಿದ ಅಂಕಿಸಂಖ್ಯೆ ಪ್ರಕಾರ, ವಿದ್ಯುತ್ ಬೇಡಿಕೆಯಲ್ಲಿನ ಹೆಚ್ಚಳವನ್ನು ಗಣನೆಗೆ ತೆಗೆದುಕೊಂಡು ಅಗತ್ಯ ವ್ಯವಸ್ಥೆ ಮಾಡಿಕೊಳ್ಳದೇ ಇದ್ದುದೇ ಬಿಕ್ಕಟ್ಟಿಗೆ ಕಾರಣ. ಕೋವಿಡ್-19 ಸಾಂಕ್ರಾಮಿಕದ ಎರಡನೇ ಅಲೆ ಸಂದರ್ಭದಲ್ಲಿ ಉಂಟಾದ ಆಮ್ಲಜನಕ ಬಿಕ್ಕಟ್ಟಿಗೆ ಈಗಿನ ಕಲ್ಲಿದ್ದಲು ಕೊರತೆಯನ್ನು ಹೋಲಿಸಬಹುದು. ಆಗಲೂ ಸರ್ಕಾರವು ನಿದ್ದೆ ಹೊಡೆಯುತ್ತಿತ್ತು ಮತ್ತು ಸರ್ಕಾರದ ಅಸಮರ್ಪಕ ನಿರ್ವಹಣೆಯ ಹೊಡೆತವು ಜನರ ಮೇಲೆ ಬಿತ್ತು

• ಪ್ರೊ. ಎಂ.ವಿ. ರಾಜೀವ್ ಗೌಡ

ಭಾರತವು ಜಗತ್ತಿನಲ್ಲಿಯೇ ಅತಿ ಹೆಚ್ಚು ಕಲ್ಲಿದ್ದಲು ಉತ್ಪಾದಿಸುವ ಎರಡನೇ ದೇಶ ಮತ್ತು ಅತಿ ಹೆಚ್ಚು ಕಲ್ಲಿದ್ದಲು ನಿಕ್ಷೇಪ ಹೊಂದಿರುವ ನಾಲ್ಕನೇ ದೇಶ. ಹೀಗಿದ್ದರೂ ಹಿಂದೆಂದೂ ಕಂಡರಿಯದಂತಹ ಕಲ್ಲಿದ್ದಲು ಬಿಕ್ಕಟ್ಟು ಸೃಷ್ಟಿಯಾಗಿದೆ. ಮಾರಕವಾಗಬಹುದಾದ ಬಿಸಿಗಾಳಿಯು ಉಂಟಾಗಿರುವ ಸಂದರ್ಭದಲ್ಲಿಯೇ ಕಲ್ಲಿದ್ದಲು ಬಿಕ್ಕಟ್ಟು ಕೂಡ ಎದುರಾಗಿದೆ ಮತ್ತು ಉಷ್ಣಾಂಶ ತಗ್ಗುವ ಲಕ್ಷಣಗಳು ಕಾಣಿಸುತ್ತಿಲ್ಲ. ಇಂತಹ ನಿರ್ಣಾಯಕ ಸಂದರ್ಭದಲ್ಲಿ, ವಿದ್ಯುತ್‌ನ ಲಭ್ಯತೆ ಜೀವನ್ಮರಣದ ಪ್ರಶ್ನೆಯಾಗಿದೆ. ಆದರೆ, ಕೇಂದ್ರ ಸರ್ಕಾರವು ಕಲ್ಲಿದ್ದಲು ಪೂರೈಕೆಯನ್ನು ದಕ್ಷವಾಗಿ ನಿಭಾಯಿಸುವಲ್ಲಿ ಅಸಮರ್ಥವಾಗಿದೆ. ಕೇಂದ್ರದ ದುಸ್ಸಾಹಸಗಳು ಮತ್ತು ಕಳಪೆ ನೀತಿಯಿಂದಾಗಿ ಕಲ್ಲಿದ್ದಲು ಬಿಕ್ಕಟ್ಟು ಸೃಷ್ಟಿಯಾಗಿದೆ.

ವಿದ್ಯುತ್ ಸ್ಥಾವರಗಳಿಗೆ ಕಲ್ಲಿದ್ದಲನ್ನು ತುರ್ತಾಗಿ ಸಾಗಿಸುವುದಕ್ಕಾಗಿ ಕಳೆದ ಮೂರು ವಾರಗಳಲ್ಲಿ 700ಕ್ಕೂ ಹೆಚ್ಚು ಪ್ರಯಾಣಿಕ ರೈಲುಗಳನ್ನು ರದ್ದುಪಡಿಸಲಾಗಿದೆ. ಇದರಿಂದಾಗಿ ಪ್ರಯಾಣಿಕರಿಗೆ ತೊಂದರೆಯಾಗಿದೆ ಮತ್ತು ಜನರ ಪ್ರಯಾಣದ ಯೋಜನೆಗಳು ಏರುಪೇರಾಗಿವೆ. ಜಾರ್ಖಂಡ್, ರಾಜಸ್ಥಾನ, ಪಂಜಾಬ್, ಹರಿಯಾಣ, ದೆಹಲಿ, ಮಹಾರಾಷ್ಟ್ರ, ಗುಜರಾತ್‌ನಂತಹ ರಾಜ್ಯಗಳಲ್ಲಿ ಅತ್ಯಂತ ಕಡಿಮೆ ಪ್ರಮಾಣದ ಕಲ್ಲಿದ್ದಲಷ್ಟೇ ಉಳಿದಿದೆ. ಈ ಎಲ್ಲ ರಾಜ್ಯಗಳ ಸರ್ಕಾರಗಳು ಕೇಂದ್ರದ ನೆರವಿನ ಮೇಲೆ ಅವಲಂಬಿತವಾಗಿವೆ. ಭಾರತಕ್ಕೆ ಕಲ್ಲಿದ್ದಲು ಕೊರತೆ ಕಾಡುವುದು ಇದೇ ಮೊದಲೇನೂ ಅಲ್ಲ. ದೊಡ್ಡ ಕಲ್ಲಿದ್ದಲು ಬಿಕ್ಕಟ್ಟು ಹತ್ತಿರದಲ್ಲಿಯೇ ಇದೆ ಎಂದು ಪರಿಣತರು 2021ರ ಅಕ್ಟೋಬರ್‌ನಲ್ಲಿ ಎಚ್ಚರಿಕೆ ನೀಡಿದ್ದರು. ಭಾರತಕ್ಕೆ ಸುಮಾರು 120 ಕೋಟಿ ಯೂನಿಟ್ ವಿದ್ಯುತ್ ಕೊರತೆಯಾಗಿದೆ. ಆದರೆ, ಕೇಂದ್ರ ಸರ್ಕಾರವು ಈ ಅನುಭವದಿಂದ ಪಾಠ ಕಲಿತಂತೆ ಕಾಣಿಸುತ್ತಿಲ್ಲ.

ಈಗಿನ ಬಿಕ್ಕಟ್ಟು ಹಿಂದಿನದಕ್ಕಿಂತಲೂ ತೀವ್ರವಾಗಿದೆ. ಪ್ರಸ್ತುತ, 173 ಉಷ್ಣ ವಿದ್ಯುತ್ ಸ್ಥಾವರಗಳ ಪೈಕಿ 108ರಲ್ಲಿ ಕಲ್ಲಿದ್ದಲು ಸಂಗ್ರಹವು ಅತ್ಯಂತ ಕೆಳಮಟ್ಟಕ್ಕೆ ಕುಸಿದಿದೆ. ಭಾರತದ ಕೇಂದ್ರ ವಿದ್ಯುತ್ ಪ್ರಾಧಿಕಾರದ ಪ್ರಕಾರ, ಇರಬೇಕಾದ ಕನಿಷ್ಠ ಸಂಗ್ರಹದ ಶೇ 32ರಷ್ಟು ಕಲ್ಲಿದ್ದಲು ಮಾತ್ರ ಇದೆ. 6.63 ಕೋಟಿ ಟನ್ ಸಂಗ್ರಹ ಇರಲೇಬೇಕು ಎಂಬುದು ನಿಯಮ. ದೇಶೀಯ ಕಲ್ಲಿದ್ದಲು ಬಳಸುವ 150 ವಿದ್ಯುತ್ ಸ್ಥಾವರಗಳ ಪೈಕಿ 85ರಲ್ಲಿನ ಕಲ್ಲಿದ್ದಲು ಸಂಗ್ರಹವು ಶೋಚನೀಯ ಮಟ್ಟಕ್ಕೆ ಕುಸಿದು ಬಿಕ್ಕಟ್ಟು ಇನ್ನಷ್ಟು ತೀವ್ರಗೊಳ್ಳುವಂತೆ ಮಾಡಿದೆ. ಈ ಸ್ಥಾವರಗಳಲ್ಲಿ ಅಗತ್ಯ ಸಂಗ್ರಹದ ಶೇ 25ರಷ್ಟಕ್ಕಿಂತಲೂ ಕಡಿಮೆ ಕಲ್ಲಿದ್ದಲು ಇದೆ.

ನಿರಾಕರಣೆಯು ಕೇಂದ್ರ ಸರ್ಕಾರದ ನೆಚ್ಚಿನ ಕಾರ್ಯತಂತ್ರವಾಗಿದೆ. ಇದೇ ಧಾಟಿಯಲ್ಲಿಯೇ, ಕೇಂದ್ರ ಕಲ್ಲಿದ್ದಲು ಮತ್ತು ಗಣಿಗಾರಿಕೆ ಸಚಿವರು ಪ್ರಶ್ನೆ ಕೇಳಿದಾಗಲೆಲ್ಲ ಕೊರತೆಯೇ ಇಲ್ಲ ಎಂದು ಉತ್ತರಿಸಿದ್ದಾರೆ. ಆದರೆ, ರಾಜ್ಯ ಸರ್ಕಾರಗಳು ಮತ್ತು ವಿದ್ಯುತ್ ಸ್ಥಾವರಗಳ ಹೇಳಿಕೆಗೆ ಸಚಿವರ ಹೇಳಿಕೆಯು ವಿರೋಧಾಭಾಸಕರವಾಗಿದೆ. ಅತಿಯಾದ ಕೊರತೆಯನ್ನು ನೀಗಿಸುವುದಕ್ಕಾಗಿ ಸರ್ಕಾರವು ಖಾಸಗಿ ಸಂಸ್ಥೆಗಳು ಮತ್ತು ವಿದೇಶದಿಂದ ತುರ್ತಾಗಿ ಕಲ್ಲಿದ್ದಲು ಖರೀದಿಸಬೇಕಾಯಿತು. ಹಾಗಾಗಿಯೇ ಕೆಲವು ಪ್ರಶ್ನೆಗಳು ಹುಟ್ಟಿಕೊಂಡಿವೆ. ಸರ್ಕಾರದ ಅಚ್ಚುಮೆಚ್ಚಿನ ಉದ್ಯಮಗಳಿಗೆ ಲಾಭ ಮಾಡಿಕೊಡುವ ಉದ್ದೇಶದಿಂದಲೇ ಬಿಕ್ಕಟ್ಟು ಸೃಷ್ಟಿಸಲಾಗಿದೆಯೇ ಎಂಬುದು ಅಂತಹ ಒಂದು ಪ್ರಶ್ನೆ. ಅಚ್ಚುಮೆಚ್ಚಿನ ಉದ್ಯಮಗಳಲ್ಲಿ ಒಂದು ಕಲ್ಲಿದ್ದಲು ಆಮದು ಕಂಪನಿಯಾಗಿದೆ ಮತ್ತು ಬಿಕ್ಕಟ್ಟಿನ ಸಂದರ್ಭದಲ್ಲಿ ಅಪಾರ ಲಾಭ ಮಾಡಿಕೊಂಡಿರಬಹುದು.

ಸರ್ಕಾರದ ಅದಕ್ಷತೆಯೇ ಈಗಿನ ಬಿಕ್ಕಟ್ಟಿಗೆ ಕಾರಣ ಎಂಬುದು ಹೆಚ್ಚು ಸಮಂಜಸವಾದ ಉತ್ತರ. ಕೇಂದ್ರ ವಿದ್ಯುತ್ ಪ್ರಾಧಿಕಾರ ಬಿಡುಗಡೆ ಮಾಡಿದ ಅಂಕಿಸಂಖ್ಯೆ ಪ್ರಕಾರ, ವಿದ್ಯುತ್ ಬೇಡಿಕೆಯಲ್ಲಿನ ಹೆಚ್ಚಳವನ್ನು ಗಣನೆಗೆ ತೆಗೆದುಕೊಂಡು ಅಗತ್ಯ ವ್ಯವಸ್ಥೆ ಮಾಡಿಕೊಳ್ಳದೇ ಇದ್ದುದೇ ಬಿಕ್ಕಟ್ಟಿಗೆ ಕಾರಣ. ಕೋವಿಡ್-19 ಸಾಂಕ್ರಾಮಿಕದ ಎರಡನೇ ಅಲೆ ಸಂದರ್ಭದಲ್ಲಿ ಉಂಟಾದ ಆಮ್ಲಜನಕ ಬಿಕ್ಕಟ್ಟಿಗೆ ಈಗಿನ ಕಲ್ಲಿದ್ದಲು ಕೊರತೆಯನ್ನು ಹೋಲಿಸಬಹುದು. ಆಗಲೂ ಸರ್ಕಾರವು ನಿದ್ದೆ ಹೊಡೆಯುತ್ತಿತ್ತು ಮತ್ತು ಸರ್ಕಾರದ ಅಸಮರ್ಪಕ ನಿರ್ವಹಣೆಯ ಹೊಡೆತವು ಜನರ ಮೇಲೆ ಬಿತ್ತು.

ನಿರಾಕರಣೆಯ ಜೊತೆಗೆ, ಲೋಪವನ್ನು ರಾಜ್ಯಗಳ ಮೇಲೆ ಹೊರಿಸುವುದು ಸರ್ಕಾರದ ಟೂಲ್‌ಕಿಟ್‌ನಲ್ಲಿರುವ ಎರಡನೇ ಮೆಚ್ಚಿನ ಕಾರ್ಯತಂತ್ರ. ಅಥವಾ ಇತರ ಸಚಿವಾಲಯಗಳ ಮೇಲೆ ಲೋಪ ಹೊರಿಸುವುದೂ ಇದೆ. ಕಲ್ಲಿದ್ದಲು ಸಾಗಿಸುವುದಕ್ಕೆ ರೈಲು ಗಾಡಿಗಳ ಲಭ್ಯತೆ ಇಲ್ಲದಿದ್ದುದೇ ಕೊರತೆಗೆ ಕಾರಣ ಎಂದು ಕೆಲವು ಅಧಿಕಾರಿಗಳು ಹೇಳಿದ್ದರು. ರೈಲ್ವೆಯು ಕೂಡ ಕೇಂದ್ರ ಸರ್ಕಾರದ ಅಧೀನದಲ್ಲಿಯೇ ಇರುವುದರಿಂದ ಇಂತಹ ನೆಪಗಳು ಸರ್ಕಾರದ ನೆರವಿಗೆ ಬರುವುದಿಲ್ಲ. ಕಲ್ಲಿದ್ದಲು ಕೊರತೆಯ ಸ್ಥಿತಿಗೆ ಕೇಂದ್ರ ಸರ್ಕಾರವೇ ಸಂಪೂರ್ಣವಾಗಿ ಹೊಣೆ.

ಕೋಲ್ ಇಂಡಿಯಾ ಲಿ.ನ ಅಸಮರ್ಪಕ ನಿರ್ವಹಣೆಯಲ್ಲಿ ಕೇಂದ್ರದ ಪಾತ್ರದ ಬಗ್ಗೆಯೂ ತನಿಖೆ ನಡೆಯಬೇಕಿದೆ. ಕೋಲ್ ಇಂಡಿಯಾದ ನಿಧಿಯನ್ನು ಸರ್ಕಾರದ ಹಣಕಾಸು ಕೊರತೆಯನ್ನು ನೀಗಿಸುವುದಕ್ಕಾಗಿ ವರ್ಗಾಯಿಸಲಾಗಿದೆ ಎಂದು ಕಲ್ಲಿದ್ದಲು ಇಲಾಖೆಯ ಕಾರ್ಯದರ್ಶಿಯಾಗಿದ್ದ ಅನಿಲ್ ಸ್ವರೂಪ್ ಅವರು ಎರಡು ವರ್ಷಗಳ ಹಿಂದೆ ಹೇಳಿದ್ದರು. ಹೆಚ್ಚು ಹೂಡಿಕೆ ಮಾಡುವ ಕಂಪನಿಯ ಪ್ರಯತ್ನಗಳ ಮೇಲೆ ಇದು ನೇರವಾದ ಪರಿಣಾಮ ಬೀರಿತು. ಬಳಕೆಯಾಗುವ ಒಟ್ಟು ಕಲ್ಲಿದ್ದಲಿನಲ್ಲಿ ಶೇ 50ರಷ್ಟನ್ನು ಕೇಂದ್ರ ಸರ್ಕಾರವೇ ಪೂರೈಸುತ್ತಿದೆ. ಕೋಲ್ ಇಂಡಿಯಾದ ಸಂಪನ್ಮೂಲವನ್ನು ಬತ್ತಿಸಿದ್ದರ ಪರಿಣಾಮವು ಇಡೀ ವಲಯದ ಮೇಲೆ ಪರೋಕ್ಷ ಪರಿಣಾಮ ಬೀರಿದೆ.

ಬಿಕ್ಕಟ್ಟಿನಿಂದಾಗಿ ಪೌರರು ಮತ್ತು ಉದ್ಯಮಗಳ ಮೇಲೆ ಆದ ಪರಿಣಾಮವು ವ್ಯಾಪಕವಾದ ಚರ್ಚೆಯ ವಿಷಯ. ರಾಜ್ಯಗಳ ಹಣಕಾಸಿನ ಮೇಲೆ ಕಲ್ಲಿದ್ದಲು ಕೊರತೆಯು ಬೀರಿದ ಪರಿಣಾಮದ ಬಗ್ಗೆ ಯಾರೂ ಮಾತೇ ಆಡಿಲ್ಲ. ಬೇಡಿಕೆ ಹೆಚ್ಚಳದಿಂದಾಗಿ ವಿದ್ಯುತ್ ದರದಲ್ಲಿನ ಏರಿಕೆಯು ರಾಜ್ಯಗಳ ಹಣಕಾಸು ಸ್ಥಿತಿಯ ಮೇಲೆ ತೀವ್ರವಾದ ಒತ್ತಡ ಸೃಷ್ಟಿಸುತ್ತದೆ. ದೇಶೀಯವಾದ ಕಲ್ಲಿದ್ದಲು ಪೂರೈಕೆಯು ದೊಡ್ಡ ಪ್ರಮಾಣದಲ್ಲಿ ಸಹಾಯಧನವನ್ನು ಹೊಂದಿದೆ. ಈಗ, ರಾಜ್ಯ ಸರ್ಕಾರಗಳು ತಮ್ಮ ಮೇಲಿನ ಹೊರೆಯನ್ನು ಗ್ರಾಹಕರಿಗೆ ವರ್ಗಾಯಿಸಲೇಬೇಕಾಗುತ್ತದೆ.

ದೇಶದಾದ್ಯಂತ ಕಾಣಿಸಿಕೊಂಡ ಬಿಸಿಗಾಳಿಯು ಹವಾಮಾನ ಬದಲಾವಣೆಯ ಸೂಚನೆ. ಬಿಸಿಗಾಳಿಯಿಂದ ಉಂಟಾಗುವ ಸಾವಿನ ಬವಣೆಯು, ಸುಡುವ ಉಷ್ಣತೆಯಿಂದ ರಕ್ಷಿಸಿಕೊಳ್ಳಲು ವಿದ್ಯುತ್ ಬಳಸಲು ಅಸಮರ್ಥರಾದ ಬಡ ಜನರು ಮತ್ತು ದುರ್ಬಲ ವರ್ಗಗಳ ಜನರಿಗೆ ತಟ್ಟುತ್ತದೆ. ವಿದ್ಯುತ್ ಉತ್ಪಾದನೆಗೆ ದೇಶವು ಮುಖ್ಯವಾಗಿ ಕಲ್ಲಿದ್ದಲಿನ ಮೇಲೆಯೇ ಅವಲಂಬಿತವಾಗಿರುವುದರಿಂದ, ಹವಾಮಾನ ಬದಲಾವಣೆ ತಡೆಯ ಜಾಗತಿಕ ಬದ್ಧತೆಗಳನ್ನು ಸಾಧಿಸಲು ಭಾರತಕ್ಕೆ ಹೆಚ್ಚಿನ ಸಮಯ ಬೇಕು ಎಂಬ ಎಚ್ಚರಿಕೆಯನ್ನೂ ಬಿಕ್ಕಟ್ಟು ನೀಡಿದೆ.

ಬಿಕ್ಕಟ್ಟು ಇದೆ ಎಂಬುದನ್ನು ಕೇಂದ್ರ ಸರ್ಕಾರವು ಒಪ್ಪಿಕೊಳ್ಳಬೇಕು ಮತ್ತು ಸಂಬಂಧಪಟ್ಟವರು ನೀಡುವ ಸಲಹೆಗಳನ್ನು ಅನುಸರಿಸಿ ಬಿಕ್ಕಟ್ಟು ಪರಿಹರಿಸಿಕೊಳ್ಳಬೇಕು. ಇಂತಹ ಬಿಕ್ಕಟ್ಟು ಮತ್ತೊಮ್ಮೆ ಕಾಡದಂತೆ ಕ್ರಮಗಳನ್ನು ಕೈಗೊಳ್ಳುವ ಅಗತ್ಯ ಇದೆ. ವಿಪತ್ತು ಮತ್ತು ತುರ್ತು ಸ್ಥಿತಿ ನಿಗಾ ಹಾಗೂ ಪ್ರತಿಸ್ಪಂದನೆ ಜಾಲಗಳನ್ನು ಸಕ್ರಿಯಗೊಳಿಸಬೇಕು. ಬಿಸಿಗಾಳಿಯು ನಿಧಾನಕ್ಕೆ ಜನರನ್ನು ಕೊಲ್ಲುತ್ತದೆ. ತಡೆಗಟ್ಟಬಹುದಾಗಿದ್ದ ಕಲ್ಲಿದ್ದಲು ಬಿಕ್ಕಟ್ಟಿನಿಂದ ಜನರು ಅನಗತ್ಯವಾಗಿ ಜೀವ ಕಳೆದುಕೊಳ್ಳುವುದನ್ನು ತಪ್ಪಿಸಲು ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಕ್ರಮಗಳನ್ನು ಕೈಗೊಳ್ಳಬೇಕು.

ಲೇಖಕ: ರಾಜ್ಯಸಭೆಯ ಮಾಜಿ ಸದಸ್ಯ, ಕಾಂಗ್ರೆಸ್ ಪಕ್ಷದ ಸಂಶೋಧನಾ ವಿಭಾಗದ ಅಧ್ಯಕ್ಷ

ಪದಬಂಧ 4950

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ

2.ಸಾಮಂತರಿಂದ ಅಧಿರಾಜನಿಗೆ ಸಲ್ಲುವ ಹಣ (2)
4.ಕೊನೆಗೆ ಮರವಿದ್ದಾಗ ಆವರಿಸಿದ ಕ್ಷಾಮ! (3)
5.ಸ್ವಂತ ಅನುಭವಕ್ಕೆ ಬಂದಿರುವ ತಿಳಿವು (4)
6.ನಡುವೆ ಪತ್ರ ಬಂದದಕ್ಕೇ ಈ ತೊಂದರೆ! (4)
7.ನಡುಗುವುದನ್ನ ನೋಡಿದಾಗ ಉಕ್ಕಿದ ಮಂದಹಾಸ (2)
9.ತರತಮ ಮಾಡಿದಾಗ ಆವರಿಸಿದ ಕತ್ತಲು (2)
13.ಕಳವಳ ಹೀಗೆ ಬಂದಿದೆ (4)
14.ಹಾರ ಹಿಡಿದುಕೊಂಡಿರುವ ದ್ವಾರಪಾಲಕ (4)
15.ದನಕರುಗಳ ಮೂತ್ರ (3)
16.ತಂಟೆಕೋರನಿವನು (2)

ಮೇಲಿಂದ ಕೆಳಕ್ಕೆ

1.ಗಾದೆಯಂತೆ, ಗಡಿಗೆ ತುಪ್ಪ ತಿನ್ನಲು ಮಾಡಬೇಕಾದ್ದು! (4)
2.ಕೈಯನ್ನು ತಟ್ಟುವಿಕೆ (5)
3.ಅನುಭೂತಿಗಾಗಿ ಧರಿಸಿರುವ ಭಸ್ಮ (3)
5.ಕಬ್ಬಿಣವನ್ನು ಆಕರ್ಷಿಸುವ ಗುಣ ಇದಕ್ಕಿದೆ (4)
8. ಆಚಾರ್ಯನಿಂದ ಮಹತ್ತರ ವಾದುದು ಬಂದಿದೆ (4)
10.ಅಳಿಯನನ್ನು ಹೀಗೆನ್ನಿ (5)
11.ಮರ ಬಳ್ಳಿಗಳೆರಡೂ ಇಲ್ಲಿವೆ (4)
12.ಪ್ರತಿಮೆಯ ಹತ್ತಿರವಿರುವ ಗುರುತು (3)



4949 ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ಆನಂದ 4.ನಗುಮೊಗ
6.ರಥೋತ್ಸವ 8.ಹಿಜರಿ
11.ರಿಕಾಪು 13.ದಿನಮಣಿ
17.ಗಡಿರುಗಾ
18.ಸುಯೋಗ

ಮೇಲಿಂದ ಕೆಳಕ್ಕೆ:
1.ಆಷಾಢ 2.ದನಗಾಹಿ
3.ಭೀಭತ್ಸ 5.ಗರ
7.ವರ್ಣನೆ 9.ರಿಪೇರಿ
10.ವರದಿ 12.ಪುಡಿಗಾಸು
14.ನಲ್ಲುಡಿ 15.ಣಿಗ
16.ಖಂಡುಗ

ಸುಡೊಕು 5336

	8			9		5		
6		5					1	
	9		1		5		7	6
		4	8		3		5	
	5					1		9
2				5			6	
1			9					
	3					6		1
8		6		3	1		9	

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5335 ಸುಡೊಕು

4	9	3	7	2	8	6	5	1
8	6	2	1	4	5	7	9	3
5	7	1	9	3	6	2	4	8
2	4	6	3	5	1	8	7	9
1	3	7	2	8	9	4	6	5
9	8	5	4	6	7	3	1	2
7	2	8	5	1	4	9	3	6
6	1	9	8	7	3	5	2	4
3	5	4	6	9	2	1	8	7

ಗುಂಡಣ್ಣ

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ

ಶನಿವಾರ ಮೇ 7, 2022

ಶ್ರೀಶುಭಕೃತ್ ನಾಮ ಸಂವತ್ಸರ ಉತ್ತರಾಯಣ - ವಸಂತ ಋತು ತಿಥಿ: ವೈಶಾಖ ಶುಕ್ಲ ಷಷ್ಠಿ ಗಂ. 14-57 ನಕ್ಷತ್ರ: ಪುನರ್ವಸು ಗಂ. 12-18 ಯೋಗ: ಶೂಲ ಗಂ. 19-58, ಕರಣ: ತೈತಿಲ ಗಂ. 14-53, ಮೇಷ ಮಾಸದ 23 ನೇ ದಿನ.

ರಾಹುಕಾಲ: ಬೆಳಿಗ್ಗೆ 09:00-10:30

ಸೂರ್ಯೋದಯ: 06-10 ಸೂರ್ಯಾಸ್ತ: 06-44

ಮುಸ್ಲಿಂ ದಿನಾಂಕ : 05 ಶವ್ವಾಲ್ ಅದೃಷ್ಟ ಸಂಖ್ಯೆ : 8, 11

ಮೇಷ: ಜೀವನದಲ್ಲಿ ಹೊಸದೊಂದು ಅಧ್ಯಾಯ ಶುರುವಾಗಲಿದೆ. ನಿಮ್ಮಲ್ಲಿ ಸುಪ್ತವಾಗಿ ಅಡಗಿರುವ ಪ್ರತಿಭೆ, ಕೌಶಲಗಳನ್ನು ಹೊರ ತೆಗೆಯಲು ಹೊಸದನ್ನು ಕಲಿಯಲು ಮುಂದಾಗುವಂತಾಗಲಿದೆ. ಕೃಷಿ ಕ್ಷೇತ್ರದಲ್ಲಿ ಸಾಧನೆ ತೋರುವಿರಿ.

ವೃಷಭ: ವ್ಯವಹಾರದಲ್ಲಿ ನಷ್ಟಗಳನ್ನು ಸುಧಾರಿಸಿಕೊಂಡು ಹೋಗುವ ಧೈರ್ಯ ಬೆಳೆಸಿಕೊಳ್ಳಿ. ವಿದೇಶಿ ಸಂಸ್ಥೆಗಳೊಡನೆ ಸಹಭಾಗಿತ್ವ ಒಪ್ಪಂದಗಳನ್ನು ಮಾಡಿಕೊಳ್ಳುವುದರಿಂದ ಹೆಚ್ಚಿನ ವರಮಾನ, ಸಮಾಜದಲ್ಲಿ ಉನ್ನತ ಸ್ಥಾನಮಾನ ನಿರೀಕ್ಷೆ.

ಮಿಥುನ: ಕಾನೂನಾತ್ಮಕ ಹೋರಾಟ ಅಥವಾ ಕೋರ್ಟು ವ್ಯವಹಾರಗಳ ಓಡಾಟ ಮುಕ್ತಾಯ. ಗೃಹೋಪಯೋಗಿ ವಸ್ತುಗಳನ್ನು ಕೊಳ್ಳುವ ಬಗ್ಗೆ ಮನೆಯಲ್ಲಿ ಚರ್ಚಿಸುವಿರಿ. ವೃತ್ತಿರಂಗದಲ್ಲಿ ಅದೃಷ್ಟ ಈ ದಿನ ನಿಮ್ಮ ಪಾಲಿಗಿರುವುದು.

ಕರ್ಕಾಟಕ: ರಾಜಕೀಯವಾಗಿ ಪ್ರಬಲಗೊಳ್ಳುವ ಅವಕಾಶಗಳು ಇಂದು ಹೆಚ್ಚಲಿದೆ. ಸಾಮಾಜಿಕ ವಲಯದಲ್ಲಿ ವರ್ಚಸ್ಸು ಬೆಳೆಯಲಿದೆ. ಆಫೀಸಿನ ಆಗುಹೋಗುಗಳ ಬಗ್ಗೆ ಗಮನವಿಟ್ಟುಕೊಳ್ಳಿ.

ಸಿಂಹ: ಬಂಧುಗಳು ಮತ್ತು ಸ್ನೇಹಿತರಿಂದ ಮಾರ್ಗದರ್ಶನಕ್ಕೇನು ಕೊರತೆ ಇರದು. ನಿಮ್ಮ ತೀವ್ರ ಪ್ರತಿಸ್ಪರ್ಧಿಯನ್ನು ಭೇಟಿ ಮಾಡುವ ಅವಕಾಶ ಬರಲಿದೆ. ಶ್ರೀ ಆಂಜನೇಯ ಸ್ವಾಮಿಯ ದರ್ಶನವು ಮನಸ್ಸಿಗೆ ಧೈರ್ಯವನ್ನು ತರುವುದು.

ಕನ್ಯಾ: ಸವಾಲಾಗಿರುವ ನಿಮ್ಮ ಮನದ ಯೋಜನೆಗಳನ್ನು ಕಾರ್ಯರೂಪಕ್ಕೆ ತರಲು ಇಂದು ಸನ್ನಿವೇಶಗಳು ಅನುಕೂಲವಾಗಲಿದೆ. ಮುಂದೆ ಸಾಗಬೇಕಾದ ದಾರಿಯನ್ನು ನಿರ್ಧರಿಸಲು ಮಾರ್ಗದರ್ಶನ ಪಡೆಯಬೇಕಾಗುವುದು.

ತುಲಾ: ಅಚ್ಚುಕಟ್ಟಾದ ಕೆಲಸಗಳಿಂದ ಅಧಿಕಾರಿ ವರ್ಗದವರಲ್ಲಿ ನಿಮ್ಮ ಮೇಲಿನ ವಿಶ್ವಾಸವನ್ನು ಇಮ್ಮಡಿಗೊಳಿಸಿಕೊಳ್ಳುವಿರಿ. ಬಟ್ಟೆ ವ್ಯಾಪಾರಿಗಳು ರಿಯಾಯಿತಿ ಮಾರಾಟಗಳಿಂದ ಹೆಚ್ಚಿನ ಲಾಭವನ್ನು ಹೊಂದುವಿರಿ.

ವೃಶ್ಚಿಕ: ಜನರ ಭಾವನೆಗಳಿಗೆ ಯಾವ ರೀತಿಯಲ್ಲಿ ಪ್ರತಿಕ್ರಿಯಿಸಬೇಕೆಂಬುದು ನಿಮಗೆ ತಿಳಿದಿದೆ. ಕೆಲಸಗಳು ಎಷ್ಟು ಕಷ್ಟವಾದರೂ ನೀವೆಂದೂ ಸೋಲುವುದಿಲ್ಲ. ಸತ್ಯದ ಹಾದಿಗೆ ಸದಾ ಅಡೆತಡೆಗಳಿರುತ್ತವೆ ಮರೆಯದಿರಿ.

ಧನು: ಇಂದಿನ ಪರಿಸ್ಥಿತಿ ನಿಮ್ಮ ಮನದ ಭಾವನೆಗಳನ್ನು ಇತರರೊಂದಿಗೆ ಹಂಚಿಕೊಳ್ಳುವಂತೆ ಪ್ರೇರೇಪಿಸುತ್ತದೆ. ವೃತ್ತಿ ಬದುಕಿನ ಗುರಿಗಳ ಬಗ್ಗೆ ಮಾಹಿತಿ ಪಡೆಯುವಿರಿ. ವೈದ್ಯಕೀಯ ವಿದ್ಯಾರ್ಥಿಗಳು ಪರಿಶ್ರಮ ಪಡಬೇಕಾಗುವುದು.

ಮಕರ: ಸ್ಟೇಷನರಿ ಹೋಲ್‌ಸೇಲ್ ವ್ಯಾಪಾರಿಗಳು ವ್ಯಾಪಾರ ವಿಸ್ತರಿಸುವ ಬಗ್ಗೆ ಮಾತುಕತೆ ನಡೆಸಿ. ವೃತ್ತಿಯಲ್ಲಿ ಬದಲಾವಣೆ ಮಾಡುವವರು ಲಕ್ಷ್ಮೀ ಶ್ರೀನಿವಾಸ ದೇವರ ಸೇವೆ ಮಾಡುವುದರಿಂದ ಅಭಿವೃದ್ಧಿ ಕಾಣಬಹುದು.

ಕುಂಭ: ಕಟ್ಟಡ ನಿರ್ಮಾಣದ ಕಾರ್ಮಿಕರಿಗೆ ಹೆಚ್ಚಿನ ಸಂಪಾದನೆಯ ಜೊತೆಯಲ್ಲಿ ಉಡುಗೊರೆ ಸಿಗುವ ಯೋಗ. ಕರಕುಶಲ ವಸ್ತುಗಳ ತಯಾರಕರು ತಮ್ಮ ಉತ್ತಮವಾದ ಕೆಲಸಗಳಿಂದ ಆದಾಯವನ್ನು ಹೆಚ್ಚಿಸಿಕೊಳ್ಳಬಹುದು.

ಮೀನ: ಯಂತ್ರೋಪಕರಣಗಳ ಮಾರಾಟಗಾರರಿಗೆ ಲಾಭ. ಆತುರದ ಸ್ವಭಾವವನ್ನು ಕೊಂಚ ಸುಧಾರಿಸಿಕೊಂಡು ಮತ್ತೊಬ್ಬರ ಭಾವನೆಗಳಿಗೆ ಹೇಗೆ ಪ್ರತಿಕ್ರಿಯಿಸಬೇಕೆಂಬುದನ್ನು ತಿಳಿದುಕೊಂಡರೆ ಉತ್ತಮ ವ್ಯಕ್ತಿಯಾಗುವಿರಿ.

ಷೇರುಪೇಟೆ ವಹಿವಾಟು 867



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	16,683
ಇಂದಿನ ಅಂತ್ಯ	16,411
▼	272
ದಿನದ ಕನಿಷ್ಠ	16,340

ವಿನಿಮಯ ದರ

$ ಡಾಲರ್	76.90
£ ಪೌಂಡ್	94.93
€ ಯುರೊ	81.30
¥ ಯೆನ್ (100ಕ್ಕೆ)	59

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100 ಮೊಟ್ಟೆಗೆ	₹370
12 ಮೊಟ್ಟೆಗೆ	₹54
ಮೈಸೂರು	
100 ಮೊಟ್ಟೆಗೆ	₹370

ಖಾದ್ಯ ತೈಲ ಮುಂಬೈ (10 ಕೆಜಿಗೆ)

ಶೇಂಗಾ (ರಿಫೈನ್ಡ್)	₹1630 (1645)
ಸೋಯಾ (ರಿಫೈನ್ಡ್)	₹1565 (1575)
ಸೂರ್ಯಕಾಂತಿ (ರಿಫೈನ್ಡ್)	₹1870 (1900)
ಪಾಮೋಲಿನ್	₹1548 (1555)

ರಾಮನಗರ ರೇಷ್ಮೆಗೂಡು ಧಾರಣೆ

ಮಿಶ್ರತಳಿ (ಸಿ.ಬಿ)	₹100-670
ದ್ವಿತಳಿ (ಬಿ.ವಿ)	₹166-744

ಎನ್.ಆರ್.ಪುರ ರಬ್ಬರ್ (ಪ್ರತಿ ಕೆ.ಜಿಗೆ)

ಆರ್‌ಎಸ್‌ಎಸ್-4	₹169
ಆರ್‌ಎಸ್‌ಎಸ್-5	₹163
ಗುಡ್ ಲಾಟ್	₹159

ಈರುಳ್ಳಿ ಧಾರಣೆ (ಕ್ವಿಂಟಲ್‌ಗೆ)

ದಪ್ಪ	₹1200-1300
ಮಧ್ಯಮ	₹700-1000
ಸಣ್ಣ	₹400-900

ಬಡ್ಡಿದರ ಹೆಚ್ಚಳ, ಕಚ್ಚಾ ತೈಲ ದರ ಏರಿಕೆ ಪರಿಣಾಮ

ಪೇಟೆಯಲ್ಲಿ ಮಾರಾಟದ ಒತ್ತಡ

ಮುಂಬೈ: ದೇಶದ ಷೇರುಪೇಟೆಗಳಲ್ಲಿ ಶುಕ್ರವಾರ ಅತಿಯಾದ ಮಾರಾಟದ ಒತ್ತಡ ಕಂಡುಬಂದು ಸೂಚ್ಯಂಕಗಳು ಇಳಿಕೆ ಕಂಡವು.

ಕೇಂದ್ರೀಯ ಬ್ಯಾಂಕ್‌ಗಳು ಬಡ್ಡಿ ದರ ಹೆಚ್ಚಳ ಮಾಡುತ್ತಿರುವುದರಿಂದ ಹೂಡಿಕೆದಾರರು ಷೇರುಪೇಟೆಗಳಿಂದ ಹಿಂದೆ ಸರಿಯುತ್ತಿದ್ದಾರೆ. ಹೀಗಾಗಿ ಜಾಗತಿಕ ಷೇರುಪೇಟೆಗಳಲ್ಲಿ ವಹಿವಾಟು ಇಳಿಕೆ ಕಂಡಿದ್ದು, ಅದರ ಪರಿಣಾಮವು ದೇಶಿ ಷೇರುಪೇಟೆಗಳಲ್ಲಿಯೂ ಕಂಡುಬಂತು.

ಕರೆನ್ಸಿ ವಿನಿಮಯ ಮಾರುಕಟ್ಟೆಯಲ್ಲಿ ರೂಪಾಯಿ ಮೌಲ್ಯ ಇಳಿಕೆ, ಕಚ್ಚಾ ತೈಲ ದರ ಏರಿಕೆ ಹಾಗೂ ವಿದೇಶಿ ಬಂಡವಾಳ ಹೊರಹರಿವು ಸಹ ಸೂಚ್ಯಂಕಗಳ ಇಳಿಕೆಗೆ ಕಾರಣವಾದವು.

ಮುಂಬೈ ಷೇರುಪೇಟೆ ಸಂವೇದಿ ಸೂಚ್ಯಂಕ ಸೆನ್ಸೆಕ್ಸ್ 867 ಅಂಶ ಇಳಿಕೆ ಕಂಡು 54,835 ಅಂಶಗಳಲ್ಲಿ ವಹಿವಾಟು ಅಂತ್ಯವಾಯಿತು. ರಾಷ್ಟ್ರೀಯ ಷೇರುಪೇಟೆ ಸೂಚ್ಯಂಕ ನಿಫ್ಟಿ 272 ಅಂಶ ಇಳಿಕೆಯಾಗಿ 16,411 ಅಂಶಗಳಿಗೆ ತಲುಪಿತು.

ವಾರದ ವಹಿವಾಟಿನಲ್ಲಿ ಸೆನ್ಸೆಕ್ಸ್ 2,225 ಅಂಶಗಳಷ್ಟು ಮತ್ತು ಎನ್‌ಎಸ್‌ಇ ನಿಫ್ಟಿ 691 ಅಂಶಗಳಷ್ಟು ಇಳಿಕೆ ಕಂಡಿವೆ.

ದಿನದ ವಹಿವಾಟು ಆರಂಭ ಆದಾಗಿನಿಂದಲೂ ಸೂಚ್ಯಂಕ ಇಳಿಮುಖವಾಗಿಯೇ ಇತ್ತು. ಕಚ್ಚಾ ತೈಲ ದರ ಏರಿಕೆಯಿಂದ ಹಣದುಬ್ಬರ ಇನ್ನಷ್ಟು ಏರಿಕೆ ಕಾಣುವ ಆತಂಕ ಎದುರಾಗಿದ್ದರಿಂದ ಮಾರಾಟದ ಒತ್ತಡ ತೀವ್ರಗೊಂಡಿತು ಎಂದು ಕೋಟಕ್ ಸೆಕ್ಯುರಿಟೀಸ್ ಲಿಮಿಟೆಡ್‌ನ ಡೆಪ್ಯುಟಿ ಉಪಾಧ್ಯಕ್ಷ ಅಮೋಲ್ ಅಠಾವಳೆ ಹೇಳಿದ್ದಾರೆ.

ಬಿಎಸ್‌ಇನಲ್ಲಿ ರಿಯಲ್ ಎಸ್ಟೇಟ್ ಸೂಚ್ಯಂಕ ಶೇ 3.53ರಷ್ಟು ಮತ್ತು ಲೋಹ ವಲಯದ ಸೂಚ್ಯಂಕ ಶೇ 3.10ರಷ್ಟು ಇಳಿಕೆ ಕಂಡಿದೆ.

ದಿನದ ವಹಿವಾಟಿನಲ್ಲಿ ಬಜಾಜ್ ಫೈನಾನ್ಸ್ ಷೇರು ಮೌಲ್ಯ ಶೇ 4.91ರಷ್ಟು ಇಳಿಕೆ ಕಂಡಿತು.

ಕರಗಿತು ₹ 4.47 ಲಕ್ಷ ಕೋಟಿ: ಮುಂಬೈ ಷೇರುಪೇಟೆಯಲ್ಲಿ ನಡೆದ ನಕಾರಾತ್ಮಕ ವಹಿವಾಟಿನಿಂದಾಗಿ ಹೂಡಿಕೆದಾರರ ಸಂಪತ್ತು ಮೌಲ್ಯವು ಒಂದೇ ದಿನ ₹ 4.47 ಲಕ್ಷ ಕೋಟಿಯಷ್ಟು ಕರಗಿತು. ಇದರಿಂದ ಷೇರುಪೇಟೆಯ ಒಟ್ಟಾರೆ ಬಂಡವಾಳ ಮೌಲ್ಯ ₹ 255.17 ಲಕ್ಷ ಕೋಟಿಗೆ ಇಳಿಕೆ ಆಯಿತು.

ಮುಖ್ಯಾಂಶಗಳು
- ಬಡ್ಡಿದರ ಹೆಚ್ಚಳ ಪರಿಣಾಮ
- ಚೀನಾದಲ್ಲಿ ಲಾಕ್‌ಡೌನ್
- ಕುಸಿದ ಸಂಪತ್ತು ಮೌಲ್ಯ

ರೂಪಾಯಿ ಮೌಲ್ಯ 55 ಪೈಸೆ ಇಳಿಕೆ

ಕರೆನ್ಸಿ ವಿನಿಮಯ ಮಾರುಕಟ್ಟೆಯಲ್ಲಿ ಅಮೆರಿಕದ ಡಾಲರ್ ಎದುರು ರೂಪಾಯಿ ಮೌಲ್ಯ 55 ಪೈಸೆ ಇಳಿಕೆ ಕಂಡಿದ್ದು ಒಂದು ಡಾಲರ್‌ಗೆ ₹ 76.90ರಂತೆ ವಿನಿಮಯಗೊಂಡಿತು.

ವಿದೇಶಿ ಬಂಡವಾಳ ಹೊರಹರಿವು ಮತ್ತು ಕಚ್ಚಾ ತೈಲ ದರ ಏರಿಕೆಯಿಂದಾಗಿ ರೂಪಾಯಿ ಮೌಲ್ಯ ಕುಸಿತ ಕಂಡಿದೆ.

ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಬ್ರೆಂಟ್ ಕಚ್ಚಾ ತೈಲ ದರ ಶೇ 2.20ರಷ್ಟು ಹೆಚ್ಚಾಗಿ ಒಂದು ಬ್ಯಾರಲ್‌ಗೆ 113.3 ಡಾಲರ್‌ಗಳಿಗೆ ಏರಿಕೆ ಆಯಿತು.

ಬ್ಯಾಟರಿ ಸೆಲ್‌ನಲ್ಲಿ ಲೋಪ?

ವಿದ್ಯುತ್ ಚಾಲಿತ ದ್ವಿಚಕ್ರ ವಾಹನಗಳಲ್ಲಿ ಬೆಂಕಿ ಪ್ರಕರಣ

ನವದೆಹಲಿ (ರಾಯಿಟರ್ಸ್): ವಿದ್ಯುತ್ ಚಾಲಿತ ಸ್ಕೂಟರ್‌ಗಳಿಗೆ ಈಚೆಗೆ ಬೆಂಕಿ ಹೊತ್ತಿಕೊಂಡಿದ್ದಕ್ಕೆ ಬ್ಯಾಟರಿ ಸೆಲ್‌ಗಳಲ್ಲಿ ಹಾಗೂ ಮಾಡ್ಯೂಲ್‌ಗಳಲ್ಲಿ ದೋಷ ಇದ್ದಿದ್ದೇ ಪ್ರಮುಖ ಕಾರಣ ಎಂಬುದು ಆರಂಭಿಕ ತನಿಖೆಯಿಂದ ಗೊತ್ತಾಗಿದೆ ಎಂದು ಮೂಲಗಳು ತಿಳಿಸಿವೆ.

ಓಲಾ ಎಲೆಕ್ಟ್ರಿಕ್ ಸೇರಿದಂತೆ ಮೂರು ಕಂಪನಿಗಳ ವಿದ್ಯುತ್ ಚಾಲಿತ ಸ್ಕೂಟರ್‌ಗಳಲ್ಲಿ ಬೆಂಕಿ ಹೊತ್ತಿಕೊಂಡ ಪ್ರಕರಣಗಳ ಬಗ್ಗೆ ತನಿಖೆ ನಡೆಸಲಾಗಿದೆ. 'ಓಲಾ ಸ್ಕೂಟರ್‌ಗೆ ಬೆಂಕಿ ಹೊತ್ತಿಕೊಂಡ ಪ್ರಕರಣದಲ್ಲಿ ಸೆಲ್‌ಗಳಲ್ಲಿ ಮತ್ತು ಬ್ಯಾಟರಿ ನಿರ್ವಹಣಾ ವ್ಯವಸ್ಥೆಯಲ್ಲಿ ಸಮಸ್ಯೆ ಇತ್ತು' ಎಂದು ಮೂಲವೊಂದು ಹೇಳಿದೆ. ತನಿಖೆಯ ಅಂತಿಮ ವರದಿಯು ಇನ್ನು ಎರಡು ವಾರಗಳಲ್ಲಿ ಸಿದ್ಧವಾಗಬಹುದು ಎನ್ನಲಾಗಿದೆ.

ಬೆಂಕಿಗೆ ಕಾರಣ ಏನು ಎಂಬುದನ್ನು ಪತ್ತೆ ಮಾಡಲು ತಾನು ಹೊರಗಿನ ತಜ್ಞ ಸಂಸ್ಥೆಯೊಂದನ್ನು ನೇಮಿಸಿರುವುದಾಗಿ, ಸರ್ಕಾರದ ಜೊತೆಯೂ ಕೆಲಸ ಮಾಡುತ್ತಿರುವುದಾಗಿ ಓಲಾ ಹೇಳಿದೆ. 'ತಜ್ಞರ ಪ್ರಾಥಮಿಕ ಪರಿಶೀಲನೆಯ ಪ್ರಕಾರ ಓಲಾದ ಬ್ಯಾಟರಿ ನಿರ್ವಹಣಾ ವ್ಯವಸ್ಥೆಯಲ್ಲಿ ಲೋಪ ಇರಲಿಲ್ಲ' ಎಂದು ಕಂಪನಿಯ ವಕ್ತಾರರು ತಿಳಿಸಿದ್ದಾರೆ.

ಕೇಂದ್ರ ಸರ್ಕಾರ ನಡೆಸುತ್ತಿರುವ ತನಿಖೆಯು ಒಕಿನಾವಾ ಮತ್ತು ಪ್ಯೂರ್‌ಇವಿ ಕಂಪನಿಗಳ ಸ್ಕೂಟರ್‌ಗಳನ್ನೂ ಒಳಗೊಂಡಿದೆ. ಒಕಿನಾವಾ ಸ್ಕೂಟರ್ ಪ್ರಕರಣದಲ್ಲಿ ಸೆಲ್ ಮತ್ತು ಬ್ಯಾಟರಿ ಮಾಡ್ಯೂಲ್‌ನಲ್ಲಿ ಸಮಸ್ಯೆ ಇತ್ತು. ಪ್ಯೂರ್‌ಇವಿ ಪ್ರಕರಣದಲ್ಲಿ ಬ್ಯಾಟರಿ ಕೇಸಿಂಗ್‌ನಲ್ಲಿ ಸಮಸ್ಯೆ ಇತ್ತು ಎಂದು ಮೂಲಗಳು ತಿಳಿಸಿವೆ. ಪ್ಯೂರ್‌ಇವಿ ಮತ್ತು ಒಕಿನಾವಾ ಕಡೆಯಿಂದ ಪ್ರತಿಕ್ರಿಯೆ ಲಭ್ಯವಾಗಿಲ್ಲ.

ಮುಖ್ಯಾಂಶಗಳು
- ತಜ್ಞ ಸಂಸ್ಥೆಯಿಂದ ಪರಿಶೀಲನೆ
- ಓಲಾ, ಪ್ಯೂರ್‌ಇವಿ, ಒಕಿನವಾ ಕಂಪನಿಗಳ ಸ್ಕೂಟರ್‌ಗಳ ಸಮಸ್ಯೆ

ರಿಲಯನ್ಸ್ ವರಮಾನ 100 ಬಿಲಿಯನ್ ಡಾಲರ್

ನವದೆಹಲಿ (ಪಿಟಿಐ): ಮುಕೇಶ್ ಅಂಬಾನಿ ನೇತೃತ್ವದ ರಿಲಯನ್ಸ್ ಇಂಡಸ್ಟ್ರೀಸ್ ಲಿಮಿಟೆಡ್ ಕಂಪನಿಯು ಮಾರ್ಚ್‌ಗೆ ಕೊನೆಗೊಂಡ ತ್ರೈಮಾಸಿಕದಲ್ಲಿ ಆದಾಯದಲ್ಲಿ ಶೇಕಡ 22.5ರಷ್ಟು ಏರಿಕೆ ಕಂಡಿದೆ.

ತೈಲ ಸಂಸ್ಕರಣೆಯಲ್ಲಿ ಲಾಭ ಹೆಚ್ಚಾಗಿದ್ದು, ದೂರಸಂಪರ್ಕ ಮತ್ತು ಡಿಜಿಟಲ್ ಸೇವೆಗಳಲ್ಲಿ ಸ್ಥಿರವಾದ ಬೆಳವಣಿಗೆ ಸಾಧ್ಯವಾಗಿದ್ದು ಈ ಹೆಚ್ಚಳಕ್ಕೆ ಕಾರಣ.

ಮಾರ್ಚ್ ತ್ರೈಮಾಸಿಕದಲ್ಲಿ ಕಂಪನಿಯ ನಿವ್ವಳ ಲಾಭವು ₹ 16,203 ಕೋಟಿಗೆ ಏರಿದೆ. ಹಿಂದಿನ ವರ್ಷದ ಇದೇ ಅವಧಿಯಲ್ಲಿ ಕಂಪನಿಯ ಲಾಭವು ₹ 13,227 ಕೋಟಿ ಆಗಿತ್ತು ಎಂದು ಷೇರುಪೇಟೆಗೆ ಮಾಹಿತಿ ನೀಡಿದೆ.

ಮಾರ್ಚ್ 31ಕ್ಕೆ ಕೊನೆಗೊಂಡ ಹಣಕಾಸು ವರ್ಷದಲ್ಲಿ ಕಂಪನಿಯ ನಿವ್ವಳ ಲಾಭವು ₹ 60,705 ಕೋಟಿ ಆಗಿದೆ. ಇಡೀ ವರ್ಷದಲ್ಲಿ ಕಂಪನಿಯ ಆದಾಯವು ₹ 7.92 ಲಕ್ಷ ಕೋಟಿ ಆಗಿದೆ (102 ಬಿಲಿಯನ್ ಡಾಲರ್). ವಾರ್ಷಿಕ 100 ಬಿಲಿಯನ್ ಡಾಲರ್‌ಗಿಂತ ಹೆಚ್ಚಿನ ವರಮಾನ ಕಂಡ ಭಾರತದ ಮೊದಲ ಕಂಪನಿ ರಿಲಯನ್ಸ್.

ಪ್ರತಿ ಗ್ರಾಹಕರಿಂದ ಬರುವ ಆದಾಯವು (ಎಆರ್‌ಪಿಯು) ಹೆಚ್ಚಳವಾದ ಕಾರಣ ಜಿಯೊ ಲಾಭವು ಮಾರ್ಚ್ ತ್ರೈಮಾಸಿಕದಲ್ಲಿ ಶೇ 24ರಷ್ಟು ಏರಿಕೆ ಕಂಡು, ₹ 4,173 ಕೋಟಿಗೆ ತಲುಪಿದೆ. ಇಡೀ ಆರ್ಥಿಕ ವರ್ಷದಲ್ಲಿ ಜಿಯೊ ₹ 14,854 ಕೋಟಿ ನಿವ್ವಳ ಲಾಭ ಗಳಿಸಿದೆ.

ಚಿನ್ನ ₹ 251 ಇಳಿಕೆ

ನವದೆಹಲಿ (ಪಿಟಿಐ): ಇಲ್ಲಿನ ಚಿನಿವಾರ ಪೇಟೆಯಲ್ಲಿ ಶುಕ್ರವಾರ ಚಿನ್ನದ ದರ 10ಗ್ರಾಂಗೆ ₹ 251ರಷ್ಟು ಇಳಿಕೆ ಕಂಡು ₹ 51,286ಕ್ಕೆ ತಲುಪಿತು.

ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಚಿನ್ನದ ದರ ಇಳಿಕೆ ಆಗಿರುವುದೇ ಇದಕ್ಕೆ ಕಾರಣ. ಬೆಳ್ಳಿ ಧಾರಣೆ ಕೆ.ಜಿಗೆ ₹ 1,080ರಷ್ಟು ಇಳಿಕೆ ಆಗಿದ್ದು, ₹ 62,436ರಂತೆ ಮಾರಾಟ ಆಯಿತು.

ಸುದ್ದಿ 2 ನಿಮಿಷ

ಕೆನರಾ ಬ್ಯಾಂಕ್ ಲಾಭ ಹೆಚ್ಚಳ

ಮುಂಬೈ/ಬೆಂಗಳೂರು (ಪಿಟಿಐ): ಕೆನರಾ ಬ್ಯಾಂಕ್ 2021–22ನೇ ಹಣಕಾಸು ವರ್ಷದ ನಾಲ್ಕನೇ ತ್ರೈಮಾಸಿಕದಲ್ಲಿ ₹ 1,666 ಕೋಟಿ ನಿವ್ವಳ ಲಾಭ ಗಳಿಸಿದೆ.

ಹಿಂದಿನ ಹಣಕಾಸು ವರ್ಷದ ಇದೇ ಅವಧಿಯಲ್ಲಿ ₹ 1,010 ಕೋಟಿ ಲಾಭ ಗಳಿಸಿತ್ತು. ಇದಕ್ಕೆ ಹೋಲಿಸಿದರೆ ಈ ಬಾರಿ ಲಾಭವು ಶೇಕಡ 64.90ರಷ್ಟು ಹೆಚ್ಚಾಗಿದೆ.

ಒಟ್ಟು ವರಮಾನವು ₹ 21,040 ಕೋಟಿಯಿಂದ ₹ 22,323 ಕೋಟಿಗೆ ಏರಿಕೆಯಾಗಿದೆ ಎಂದು ಷೇರುಪೇಟೆಗೆ ಮಾಹಿತಿ ನೀಡಿದೆ.

ಬಡ್ಡಿ ವರಮಾನದಲ್ಲಿ ಹೆಚ್ಚಳ ಹಾಗೂ ಸುಸ್ತಿ ಸಾಲದಿಂದ ಆಗಬಹುದಾದ ನಷ್ಟ ಭರಿಸಲು ತೆಗೆದಿರಿಸುವ ಮೊತ್ತದಲ್ಲಿ ಇಳಿಕೆ ಆಗಿರುವುದರಿಂದ ಈ ಪ್ರಮಾಣದ ಲಾಭ ಸಾಧ್ಯವಾಗಿದೆ ಎಂದು ಬ್ಯಾಂಕ್ ತಿಳಿಸಿದೆ.

ವಸೂಲಾಗದ ಸಾಲದ ಸರಾಸರಿ ಪ್ರಮಾಣವು ಶೇ 8.93ರಿಂದ ಶೇ 7.51ಕ್ಕೆ ಇಳಿಕೆ ಆಗಿದೆ. ನಿವ್ವಳ ಎನ್‌ಪಿಎ ಶೇ 3.82ರಿಂದ ಶೇ 2.65ಕ್ಕೆ ಇಳಿಕೆ ಕಂಡಿದೆ.

2021–22ನೇ ಹಣಕಾಸು ವರ್ಷಕ್ಕೆ ಬ್ಯಾಂಕ್‌ನ ಒಟ್ಟು ಲಾಭವು ₹ 5,678 ಕೋಟಿಗೆ ತಲುಪಿದೆ. ಹಿಂದಿನ ಹಣಕಾಸು ವರ್ಷಕ್ಕೆ ಹೋಲಿಸಿದರೆ ಲಾಭವು ಎರಡು ಪಟ್ಟಿಗೂ ಹೆಚ್ಚು ಏರಿಕೆ ಆಗಿದೆ.

ಬ್ಯಾಂಕ್‌ನ ಷೇರುದಾರರಿಗೆ ಮಾರ್ಚ್ 31ಕ್ಕೆ ಕೊನೆಗೊಂಡ ಆರ್ಥಿಕ ವರ್ಷಕ್ಕೆ ಪ್ರತಿ ಷೇರಿಗೆ ₹ 6.50ರಷ್ಟು ಡಿವಿಡೆಂಡ್ ನೀಡಲು ಬ್ಯಾಂಕ್‌ನ ಆಡಳಿತ ಮಂಡಳಿಯು ಶಿಫಾರಸು ಮಾಡಿದೆ. ಅಲ್ಲದೆ, 15 ದಿನಗಳ ವೇತನವನ್ನು ನೌಕರರಿಗೆ ಸಾಧನೆ ಆಧಾರಿತ ಉತ್ತೇಜನ ಕೊಡುಗೆಯಾಗಿ ನೀಡಲು ಆಡಳಿತ ಮಂಡಳಿ ಒಪ್ಪಿಗೆ ಸೂಚಿಸಿದೆ ಎಂದು ಪ್ರಕಟಣೆ ತಿಳಿಸಿದೆ.

Canara Bank

ಮೈಂಡ್‌ಟ್ರೀ ಜೊತೆ ಎಲ್ ಆ್ಯಂಡ್ ಟಿ ಇನ್ಫೊಟೆಕ್ ವಿಲೀನ ನಿರ್ಧಾರ

ಬೆಂಗಳೂರು (ರಾಯಿಟರ್ಸ್/ಪಿಟಿಐ): ಮೈಂಡ್‌ಟ್ರೀ ಲಿಮಿಟೆಡ್ ಜೊತೆಗೆ ತನ್ನ ಕಾರ್ಯಾಚರಣೆಗಳನ್ನು ವಿಲೀನಗೊಳಿಸುವುದಾಗಿ ಐ.ಟಿ. ಸೇವಾ ಕಂಪನಿ ಎಲ್ ಆ್ಯಂಡ್ ಟಿ ಇನ್ಫೊಟೆಕ್ (ಎಲ್‌ಟಿಐ) ಶುಕ್ರವಾರ ತಿಳಿಸಿದೆ.

ಈ ವಿಲೀನದ ಮೂಲಕ ಐ.ಟಿ. ಸೇವೆಗಳನ್ನು ನೀಡುವ ದೊಡ್ಡ ಕಂಪನಿ ಸೃಷ್ಟಿಯಾಗಲಿದೆ. ವಿಲೀನದ ಬಳಿಕ ಒಟ್ಟಾರೆ ವರಮಾನವು ₹ 26,600 ಕೋಟಿ ದಾಟಲಿದ್ದು, ದೇಶದ ಆರನೇ ಅತಿದೊಡ್ಡ ಮಾಹಿತಿ ತಂತ್ರಜ್ಞಾನ ಕಂಪನಿ ಸೃಷ್ಟಿಯಾಗಲಿದೆ ಎಂದು ಪ್ರಕಟಣೆಯಲ್ಲಿ ತಿಳಿಸಿದೆ.

ಹೊಸ ಕಂಪನಿಗೆ 'ಎಲ್‌ಟಿಐಮೈಂಡ್‌ಟ್ರೀ' ಎಂಬ ಹೆಸರು ಇಡಲಾಗುವುದು. ಒಪ್ಪಂದದ ಪ್ರಕಾರ, ಮೈಂಡ್‌ಟ್ರೀ ಕಂಪನಿಯ ಪ್ರತಿ 100 ಷೇರಿಗೆ ಎಲ್ ಆ್ಯಂಡ್ ಟಿ 73 ಷೇರುಗಳನ್ನು ನೀಡಲಿದೆ. ಈ ಒಪ್ಪಂದಕ್ಕೆ ಷೇರುದಾರರು ಮತ್ತು ಷೇರುಪೇಟೆಯ ನಿಯಂತ್ರಣ ಮಂಡಳಿಯ ಒಪ್ಪಿಗೆ ದೊರೆಯಬೇಕಿದೆ.

ಎಲ್ ಆ್ಯಂಡ್ ಟಿ ಕಂಪನಿಯು 2019ರಲ್ಲಿ ಮೈಂಡ್‌ಟ್ರೀ ಕಂಪನಿಯನ್ನು ಸ್ವಾಧೀನಪಡಿಸಿಕೊಂಡಿದೆ. ಎಲ್ ಆ್ಯಂಡ್ ಟಿ ಕಂಪನಿಯು ಮೈಂಡ್‌ಟ್ರೀನಲ್ಲಿ ಶೇ 60ರಷ್ಟು ಮತ್ತು ಎಲ್ ಆ್ಯಂಡ್ ಟಿ ಇನ್ಫೊಟೆಕ್‌ನಲ್ಲಿ ಶೇ 74ರಷ್ಟು ಷೇರುಪಾಲು ಹೊಂದಿದೆ.

ಶಿಯೋಮಿ ಹಣ ಜಪ್ತಿಗೆ ತಡೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಶಿಯೊಮಿ ಇಂಡಿಯಾ ಕಂಪನಿಗೆ ಸೇರಿದ ನಾಲ್ಕು ಬ್ಯಾಂಕ್ ಖಾತೆಗಳಲ್ಲಿ ₹ 5,551.27 ಕೋಟಿಯ ಬೃಹತ್ ಮೊತ್ತದ ಜಪ್ತಿ ಮಾಡುವಂತೆ ಜಾರಿ ನಿರ್ದೇಶನಾಲಯ (ಇಡಿ) ನೀಡಿದ್ದ ಆದೇಶಕ್ಕೆ ಹೈಕೋರ್ಟ್ ಮಧ್ಯಂತರ ತಡೆ ನೀಡಿದೆ.

ಈ ಕುರಿತಂತೆ ಬೆಂಗಳೂರಿನ ಮಾರತಹಳ್ಳಿಯ ಟೆಕ್ ಗ್ರಾಮದಲ್ಲಿರುವ ಶಿಯೊಮಿ ಕಂಪನಿ ಕಚೇರಿಯ ಅಧಿಕೃತ ಪ್ರತಿನಿಧಿ ಸಮೀರ್ ಬಿ.ಎಸ್. ರಾವ್ ಸಲ್ಲಿಸಿರುವ ರಿಟ್ ಅರ್ಜಿಯನ್ನು ನ್ಯಾಯಮೂರ್ತಿ ಹೇಮಂತ ಚಂದನಗೌಡರ ಅವರಿದ್ದ ರಜಾಕಾಲದ ಏಕಸದಸ್ಯ ನ್ಯಾಯಪೀಠ ಗುರುವಾರ (ಮೇ 5) ವಿಚಾರಣೆ ನಡೆಸಿ, ಪ್ರತಿವಾದಿಗಳಿಗೆ ತುರ್ತು ನೋಟಿಸ್ ಜಾರಿಗೊಳಿಸಲು ಆದೇಶಿಸಿದೆ.

'ಸದ್ಯದ ಮಟ್ಟಿಗೆ ಜಪ್ತಿಗೆ ಆದೇಶಿಸಲಾಗಿರುವ ಬ್ಯಾಂಕ್ ಖಾತೆಗಳಲ್ಲಿರುವ ಹಣವನ್ನು ಕಂಪನಿಯು ತನ್ನ ದೈನಂದಿನ ಖರ್ಚು ವೆಚ್ಚಗಳಿಗಾಗಿ ಬಳಸಬಹುದು' ಎಂದು ನ್ಯಾಯಪೀಠ ಮಧ್ಯಂತರ ಆದೇಶದಲ್ಲಿ ವಿವರಿಸಿದೆ.

ದೇಶದಾದ್ಯಂತ ಮಾರುಕಟ್ಟೆ ಧಾರಣೆ

ಏಲಕ್ಕಿ ಧಾರಣೆ		ಫ್ಯಾಕ್ಟರಿ	10169-20169	ರಾಶಿ	46509-48609
ಸಕಲೇಶಪುರ		ಹಳೆಚಾಲಿ	48099-49399	ತಟ್ಟಿಬೆಟ್ಟೆ	38249-44289
ಕೂಳೆ	430-450	ಹೊಸಚಾಲಿ	35599-38839	**ಶಿರಸಿ**	
ನಡುಗೋಲು	500-550	**ಪುತ್ತೂರು**		ಬೆಟ್ಟೆ	37499-45669
ರಾಶಿ	600-650	ಹೊಸತು	27500-45000	ಬಿಳಿಗೋಟು	17099-34199
ರಾಶಿ ಉತ್ತಮ	650-700	**ಶಿವಮೊಗ್ಗ**		ಚಾಲಿ	31389-40539
ಜರಡಿ	750-800	ಬೆಟ್ಟೆ	50070-53400	ರಾಶಿ	39839-50609
ಹೆರಕಿದ್ದು	1100-1150	ಗೊರಬಲು	19000-36699	**ಯಲ್ಲಾಪುರ**	
ಹಸಿರು ಸಾಧಾರಣ	600-700	ರಾಶಿ	44099-49569	ಆಪಿ	54695-56399
ಹಸಿರು ಉತ್ತಮ	900-950	ಸರಕು	56000-79699	ಬಿಳಿಗೋಟು	28899-33799
ಹಸಿರು ಅತಿ ಉತ್ತಮ	1200-1250	**ಸಿದ್ದಾಪುರ**		ಚಾಲಿ	37569-40401
ಕಾಳು ಮೆಣಸು	500	ಬಿಳಿಗೋಟು	23699-32399	ಕೋಕ	18899-30899
ಅಡಿಕೆ		ಕೋಕ	22360-32669	ಕೆಂಪುಗೋಟು	31699-34403
ಹೊಸನಗರ		ಹೊಸಚಾಲಿ	34569-39799	ರಾಶಿ	47310-54700
ಆಪಿ	53009-53009	ಕೆಂಪುಗೋಟು	29809-31299	ತಟ್ಟಿಬೆಟ್ಟೆ	37565-46899
ಬಿಳಿಗೋಟು	20569-27699				
ಚಾಲಿ	36929-38219				
ಕೆಂಪುಗೋಟು	33799-36559				
ರಾಶಿ	47899-50099				
ಸಿಪ್ಪೆಗೋಟು	18589-18589				
ಕುಮಟ					
ಚಿಪ್ಪು	28019-31119				
ಕೋಕ	19019-28889				

ಕಾಫಿ (50 ಕೆ.ಜಿಗೆ ₹ ಗಳಲ್ಲಿ)

	ಮೂಡಿಗೆರೆ ಮುದ್ರೆಮನೆ	ಹಾಸನ ಪ್ಲಾಂಟರ್ಸ್	ಅಲ್ಲಾನಾ	ನ್ಯೂಯಾರ್ಕ್
ಎಪಿ	16000	15900	16000	217.95 ಸೆಂಟ್ಸ್
ಎಸಿ	8900	8500	8575	
ಆರ್‌ಪಿ	9700	9700	9950	ಲಂಡನ್
ಆರ್‌ಸಿ	4500	4100	4400	2115ಡಾಲರ್ಸ್

ಶಿಕ್ಷಣಕ್ಕೆ ಷೇರು ಮೀಸಲಿಟ್ಟ ಜೊಮ್ಯಾಟೊ ಸಿಇಒ

ನವದೆಹಲಿ (ಪಿಟಿಐ): ಜೊಮ್ಯಾಟೊ ಕಂಪನಿಯ ಸಂಸ್ಥಾಪಕ ಹಾಗೂ ಸಿಇಒ ದೀಪಿಂದರ್ ಗೋಯಲ್ ಅವರು ಸರಿಸುಮಾರು ₹ 700 ಕೋಟಿ ಮೌಲ್ಯದ ಷೇರುಗಳನ್ನು ಜೊಮ್ಯಾಟೊ ಫ್ಯೂಚರ್ ಪ್ರತಿಷ್ಠಾನಕ್ಕೆ ನೀಡಲಿದ್ದಾರೆ. ಮನೆ ಬಾಗಿಲಿಗೆ ಆಹಾರ ವಸ್ತುಗಳನ್ನು ತಲುಪಿಸುವ ಕಂಪನಿಯ ವಿತರಕರ ಮಕ್ಕಳ ವಿದ್ಯಾಭ್ಯಾಸಕ್ಕೆ ನೆರವಾಗಲು ಇದನ್ನು ಬಳಸಿಕೊಳ್ಳಲಾಗುತ್ತದೆ.

ಜೊಮ್ಯಾಟೊ ಕಂಪನಿಯು ಷೇರುಪೇಟೆಯಲ್ಲಿ ನೋಂದಾಯಿತ ಆಗುವ ಮೊದಲು ಗೋಯಲ್ ಅವರಿಗೆ ಹೂಡಿಕೆದಾರರು ಮತ್ತು ಆಡಳಿತ ಮಂಡಳಿಯ ಕಡೆಯಿಂದ ಷೇರುಗಳು 'ನೌಕರರ ಷೇರು ಮಾಲೀಕತ್ವ ಯೋಜನೆ'ಯ (ಇಎಸ್‌ಒಪಿ) ಅಡಿಯಲ್ಲಿ ದೊರೆತಿತ್ತು.

ಈ ಷೇರುಗಳನ್ನು ಜೊಮ್ಯಾಟೊ ಫ್ಯೂಚರ್ ಪ್ರತಿಷ್ಠಾನಕ್ಕೆ ನೀಡಲಾಗುತ್ತದೆ. ಪ್ರತಿಷ್ಠಾನವು ಈ ಹಣವನ್ನು ವಿತರಕರ ಇಬ್ಬರು ಮಕ್ಕಳ ವಾರ್ಷಿಕ ಗರಿಷ್ಠ ₹ 50 ಸಾವಿರದವರೆಗಿನ ಶಿಕ್ಷಣ ವೆಚ್ಚಕ್ಕೆ ನೆರವಾಗಲು ಬಳಸಲಾಗುತ್ತದೆ. ಕಂಪನಿಯ ಜೊತೆ ಐದು ವರ್ಷಗಳಿಗಿಂತ ಹೆಚ್ಚಿನ ಅವಧಿಯಿಂದ ಕೆಲಸ ಮಾಡುತ್ತಿರುವ ವಿತರಕರ ಮಕ್ಕಳಿಗೆ ಈ ಪ್ರಯೋಜನ ಸಿಗಲಿದೆ.

10 ವರ್ಷ ಜೊಮ್ಯಾಟೊ ಕಂಪನಿಯಲ್ಲಿ ಕೆಲಸ ಮಾಡಿದರೆ ಅವರ ಮಕ್ಕಳ ವಾರ್ಷಿಕ ₹ 1 ಲಕ್ಷದವರೆಗಿನ ಶಿಕ್ಷಣದ ವೆಚ್ಚಕ್ಕೆ ನೆರವು ನೀಡಲಾಗುತ್ತದೆ ಎಂದು ಗೋಯಲ್ ಹೇಳಿದ್ದಾರೆ. ಮಹಿಳಾ ವಿತರಕರಿಗೆ 5–10 ವರ್ಷಗಳ ಮಾನದಂಡ ಇರುವುದಿಲ್ಲ, ಅವರು ಕಡಿಮೆ ಅವಧಿಯಿಂದ ಕರ್ತವ್ಯದಲ್ಲಿದ್ದರೂ ಪ್ರಯೋಜನ ಸಿಗಲಿದೆ. ಈ ವಿಚಾರವಾಗಿ ಪ್ರತಿಕ್ರಿಯೆ ನೀಡಲು ಜೊಮ್ಯಾಟೊ ವಕ್ತಾರರು ನಿರಾಕರಿಸಿದ್ದಾರೆ.

ಮುಂಬೈ ಧಾರಣೆ

ಶೇಂಗಾ 6-5-2022

ಜಾವಾ 70/80(ಹೊಸ)	10300-10350
ಜಾವಾ 80/90(ಹೊಸ)	9600-9650
ದಪ್ಪ ಮಧ್ಯಪ್ರದೇಶ(ಹೊಸ)	11000-11050
ದಪ್ಪ ಗುಜರಾತ್(ಹೊಸ)	10050-10100

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1640 (1650)
ಒಂದು ವಾರದ ಡೆಲಿವರಿ	1635 (1645)
ಸೋಯಾ ಕಚ್ಚಾ	1550 (1570)
ಪಾಮ್ ವಾರದ ಡೆಲಿವರಿ	1546 (1553)
ಸೂರ್ಯಕಾಂತಿ ಎಣ್ಣೆ ಕಚ್ಚಾ	1800 (1840)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10ಗ್ರಾಂ 51,450 (51,600)
ಬೆಳ್ಳಿ ಕೆ.ಜಿ 62,500 (63,300)

ಆವರಣದಲ್ಲಿ ಹಿಂದಿನ ದಿನದ ಧಾರಣೆ

ಪ್ರಜಾವಾಣಿ
ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

ಉದ್ಯೋಗಾವಕಾಶ

Accounts & Finance

ಎಂಎನ್‌ಸಿಗೆ ಅಕೌಂಟೆಂಟ್ ರಿಸೆಪ್ಷನಿಸ್ಟ್ ಆಫೀಸ್/ ಅಕೌಂಟ್ಸ್ ಅಸಿಸ್ಟೆಂಟ್ಸ್ ಕಂಪ್ಯೂಟರ್ ಆಪರೇಟರ್ಸ್ ಕ್ಲಾರ್ಕ್ಸ್ ಟೆಲಿಕಾಲರ್ಸ್ ಪರ್‌ಛೇಸ್/ ಸ್ಟೋರ್‌ಕೀಪರ್ಸ್. ರಮ್ಯ 7204367465/ 8050107101

General

ಕರ್ನಾಟಕದ್ಯಂತ MNC ಕಂಪನಿಗಳಿಗೆ SSLC ಮೇಲ್ಪಟ್ಟ 1986 ಯುವಕರು, ಯುವತಿಯರು ಬೇಕಾಗಿದ್ದಾರೆ. ವಸತಿಯೂಟವಿರುತ್ತದೆ. ಸಂಬಳ 16,000- 80000. 7760014526, 7795199673

ತಕ್ಷಣ ಬೇಕಾಗಿದ್ದಾರೆ. ಟಾಟಾಮೋಟಾರ್ಸ್, ಟಯೋಟಾ, ಬ್ರಿಟಾನಿಯಾ ಆನ್‌ಲೈನ್ ಕಂಪನಿಗಳಿಗೆ 10ನೇ,ಪಿಯುಸಿ, ಡಿಗ್ರಿ, ಡಿಪ್ಲೋಮಾದವರು 18,000- 56,000/- ವಸತಿಯೂಟದೊಂದಿಗೆ 8197650569, 7204396011

Wanted

ಕರ್ನಾಟಕದಾದ್ಯಂತ ಹೆಸರಾಂತ ಕಂಪನಿ, ಆಫೀಸ್ ಕೆಲಸಕ್ಕೆ ಯುವಕ/ ಯುವತಿಯರು ಬೇಕಾಗಿದ್ದಾರೆ. ವಸತಿಯೂಟದೊಂದಿಗೆ Salary+ot 17800/-68000/- 9538811223 9538811104

Part-Time Jobs

ಕರ್ನಾಟಕದ ಎಲ್ಲಾ ಭಾಗದವರಿಗೆ ಮನೆಯಿಂದಲೇ ಕುಳಿತು ಬುಕ್ ಬರೆಯುವ, ಫಾರಂ ತುಂಬುವ ಕೆಲಸ ಮಾಡಿ,ತಿಂಗಳಿಗೆ 18,000- 26,000/-ಸಂಪಾದಿಸಿ ಗೃಹಿಣಿಯರಿಗೆ,ವಿದ್ಯಾರ್ಥಿಗಳಿಗೆ, ವಯಸ್ಸಾದವರಿಗೂ ಅವಕಾಶ ಪಾರ್ಟ್-ಟೈಂ/ಫುಲ್-ಟೈಂ. 9353497350, 8904253623

ಕನ್ನಡ ಮತ್ತು ಇಂಗ್ಲೀಷ್ ಓದಲು,ಬರೆಯಲುಬರುವ ಯುವಕ/ಯುವತಿಯರಿಗೆ, ಗೃಹಿಣಿಯರಿಗೆ, ಮನೆಯಲ್ಲೆ ಕುಳಿತು,ಬುಕ್ ಬರೆಯುವ ಮೂಲಕ ತಿಂಗಳಿಗೆ 14,000- 16,000/-ರ ವರೆಗೆ ಸಂಪಾದಿಸಿ.(ಕೊರಿಯರ್ ಇದೆ).8884686861, 8884686860.

ಕನ್ನಡ ಮತ್ತುಇಂಗ್ಲೀಷ್ ಓದಲು,ಬರೆಯಲು ಬರುವ ಯುವಕ/ಯುವತಿಯರಿಗೆ,ಗೃಹಿಣಿಯರಿಗೆ ವಯಸ್ಸಾದವರು ಮನೆಯಲ್ಲೇ ಕುಳಿತು ನಾವು ಕೊಡುವ ಬುಕ್ ಬರೆಯುವ ಮೂಲಕ ತಿಂಗಳಿಗೆ 12,000- 15,000 ವರೆಗೆ ಸಂಪಾದಿಸಿ.ಕೊರಿಯರ್ ಸೌಲಭ್ಯವಿದೆ.8884777502, 8884777503

Marketing & Sales

DOCLAND SERVICES Ltd. requires experienced sales executives for all Karnataka districts. Salary upto 20,000 per month incentive perks. Call 9886291111 /9108446717

ಬಿಲ್ಡರ್ ಎಸೆನ್ಷಿಯಲ್

Water Proofing

ಲೀಕೇಜ್.. ಲೀಕೇಜ್.. ನಿಮ್ಮಮನೆ, ಕಛೇರಿಯ ಮೇಲ್ಛಾವಣಿ, ಸಂಪ್‌ಟ್ಯಾಂಕ್, ಬಾತ್‌ರೂಂ ಹಾಗೂ ಗೋಡೆಯ ಬಿರುಕುಗಳನ್ನು ನೂತನ ತಂತ್ರಜ್ಞಾನದಿಂದ ಸ್ಥಗಿತಗೊಳಿಸಲಾಗುವುದು. ಸಂಪರ್ಕಿಸಿ: 9880916988

ರಿಯಲ್ ಎಸ್ಟೇಟ್ ಸೆಲ್ಲಿಂಗ್

Sites

Basaweshwaranagar

PLOT For Sale Site No 1413, 40/70 South East Corner, Basveswar Nagar, Pb Road. Ph.No 9964263603

ಭವಿಷ್ಯ

Astrology

★||ವಶೀಕರಣ ಸ್ಪೆಷಲಿಸ್ಟ್||★ ಇಷ್ಟಪಟ್ಟವರು ನಿಮ್ಮಂತೆ ಆಗಲು ನೋಡುವ ಮೂಲಕ, ಮಾತನಾಡುವ ಮೂಲಕ, ಹೆಸರಿನ ಮೂಲಕ ಸ್ತ್ರೀವಶೀಕರಣ 27ನಿಮಿಷಗಳಲ್ಲಿ ಶಾಶ್ವತ_ಪರಿಹಾರ. 9900511008"

ಒಂದೇ ಕರೆಯಲ್ಲಿ100% ಗ್ಯಾರಂಟಿ ಶಾಶ್ವತ ಪರಿಹಾರ ಸ್ತ್ರೀಪುರುಷ ವಶೀಕರಣ ಸ್ಪೆಷಲಿಸ್ಟ್ ಪಂಡಿತ್. ಕೃಷ್ಣಪ್ರಸಾದ್:ಉಚಿತಭವಿಷ್ಯ ಖಚಿತಪರಿಹಾರ, ದಕ್ಷಿಣಕನ್ನಡ ಮಾಂತ್ರಿಕರು, ಶ್ರೀಕ್ಷೇತ್ರಹೊರನಾಡು: 7022443071

WEEKEND CORNER

ಯೋಗ ಹುಟ್ಟಿನಲ್ಲೇ ಬರುವುದು ಭಾಗ–1

ಅದೃಷ್ಟವೇ ಬೇರೆ, ಯೋಗವೇ ಬೇರೆ, ಮಕ್ಕಳ ತಂದೆತಾಯಂದಿರು ತಮ್ಮ ಜೀವನದಲ್ಲಿ ಧರ್ಮ, ನ್ಯಾಯ ಇತ್ಯಾಧಿ ಒಳ್ಳೆಯ ಕೆಲಸ ಮಾಡಿದ್ದರೆ ತಮ್ಮ ತಮ್ಮ ಮಕ್ಕಳು ನಿಜಕ್ಕೂ ಒಳ್ಳೇಯೋಗದಲ್ಲಿ ಜನಿಸುತ್ತರಾರೆ. ಯೋಗಕ್ಕೆ ಜಾತಿ, ಮತ ಭೇದವಿಲ್ಲ. ಬಡವ ಶ್ರೀಮಂತನೆಂಬ ಅಂತರವಿಲ್ಲ. ಒಳ್ಳೆ ಜನ್ಮ ನಕ್ಷತ್ರ ಅಥವಾ ರಾಶಿಯ ಕಾರಣವೂ ಇಲ್ಲ. ವಾಲ್ಮೀಕಿ ವ್ಯಾಸರು, ಕನಕದಾಸರು, ಶ್ರೀ ಕೃಷ್ಣ, ಶ್ರೀರಾಮ ಇವರಾರು ಬ್ರಾಹ್ಮಣರಲ್ಲ. ಆದರೇ ಅವರೆಲ್ಲ ಒಳ್ಳೇ ಯೋಗ ಪುರುಷರು. ಜಾತಕದಲ್ಲಿ ನಕ್ಷತ್ರ ಪ್ರಕಾರ 27 ಯೋಗಗಳಿವೆ. ಅದರಲ್ಲಿ 7 ಯೋಗಗಳು ನಿಷ್ಪ್ರಯೋಜಕ ಯೋಗ 1 ಅತಿಗಂಡ–ಯೋಗ 2 ಶುಲಯೋಗ 3 ಗಂಡಯೋಗ 4. ವ್ಯಾಘಾತ 5 ವ್ಯತಿಘಾತ ಯೋಗ 6 ಘರಿಘಯೋಗ 7 ವೈದ್ಯತಿಯೋಗದಲ್ಲಿ ಮಕ್ಕಳು ಜನಿಸಿದರೆ ಏನಾದರೂ ತೊಂದರೆ ಖಂಡಿತ. ಇದಕ್ಕೆ ಜನ್ಮ ಕೊಟ್ಟ ತಂದೆ–ತಾಯಿಯೇ ಕಾರಣ ತಂದೆಯಿಂದಾದರೆ ಮಗನಿಗೂ ತಾಯಿಯ ಪಾಪದಿಂದಾದರೆ ಮಗಳಿಗೂ ಕೆಟ್ಟ ಯೋಗ ಪ್ರಾಪ್ತವಾಗಬಹುದು. ಉದಾ:– ಒಬ್ಬ ತಾಯಿ ವೃಷಭ ಲಗ್ನ, ಅಶ್ವಿನಿ ನಕ್ಷತ್ರ 1ನೇ ಪಾದವಾಗಿದ್ದು ಮೇಷ ರಾಶಿಯಲ್ಲಿ ಜನಿಸಿ ಆಕೆಯ ಯೋಗ ವ್ಯಾಘಾತಯೋಗವಾಗಿತ್ತು ಆಕೆಯ ತಾಯಿಯಿಂದಲೆ ಶಾಪಪಡೆದಿದ್ದಳು. ಮುಂದೆ ಆಕೆ ದೊಡ್ಡವಳಾಗಿ ವಿವಾಹವಾದ ನಾಲ್ಕೇವರ್ಷ ಒಂದು ಗಂಡು, ಒಂದು ಹೆಣ್ಣು ಮಗುವಿಗೆ ಜನ್ಮಕೊಟ್ಟು ವಿಧವೆಯಾದಳು. 16–17 ವರ್ಷದ ಮಕ್ಕಳಿದ್ದರೂ ತನ್ನ ನಡತೆ, ಸ್ವಭಾವ ಬಿಟ್ಟಿಲ್ಲ, ಈಕೆ ಡಾಂಬಿಕಳು ಉಪಕಾರ ಕೇಡಿ, ಪರರನ್ನು ನಿಂದಿಸುವಳು. ಆನೇಕರಿಗೆ ಅನ್ಯಾಯ ಮಾಡಿದ್ದಾಳೆ, ಈಕೆಯ ಹೊಟ್ಟೆಯಲ್ಲಿ ಜನಿಸಿದ ಎರಡೂ ಮಕ್ಕಳಿಗೆ "ಸರ್ಪ"ದೋಷವಿದೆ, ಆದರೂ ಕೂಡಾ ಅವಿದ್ಯಾವಂತರೂ ಇವರೂ ಜನಿಸಿದ ಯೋಗವು ವ್ಯಾಘಾತ. ಇದು ಒಂದು ಕೆಟ್ಟಯೋಗ ಮಕ್ಕಳು ಒಳ್ಳೇ ಯೋಗದಲ್ಲಿ ಜನಿಸಬೇಕಾದೆ ತಂದೆ–ತಾಯಿ, ತಾತಾ–ಅಜ್ಜಿಯ ಒಳ್ಳೇ ಸಂಸ್ಕಾರವಂತರಾಗಿ ದೈವ ಜ್ಞಾನ ತಿಳಿಯಬೇಕು. ವಿನಾಕಾರಣ ನಾವೇನು ಪಾಪ ಮಾಡಿಲ್ಲ ನಮಗ್ಯಾಕೆ ಇಂಥಾ ಮಕ್ಕಳು ಎಂದು ಸುಮ್ಮನೆ ನೊಂದುಕೊಂಡರೆ ಸಾಲದು. ಒಮ್ಮೆ ಭೇಟಿ ಕೊಟ್ಟು ವಿವರ ತಿಳಿಯಿರಿ (ನಾಳೆ ಮುಂದುವರಿಯುತ್ತದೆ)

ಸ್ಪರ್ಧಾಮಿತ್ರ ACADEMY
IAS / KAS Prelims & Mains Exam
From May 9th Art & Culture Class
By: Srinivasa Rao (Hyderabad Faculty)
LIMITED SEATS ONLY
ADMISSION OPEN
Near Attiguppe Metro Station, opp. Maruti Medicals (338 Pillar) Vijayanagar, Bengaluru - 40.
9535111166 / 9535111199

ಪ್ರವಾಸ

Travel

09.07.2022ರಿಂದ 13ದಿನಗಳು ವಿಮಾನ ಮತ್ತು ಬಸ್ಸಿನಲ್ಲಿ ಚಾರುಧಾಮ,ಮಸ್ಸೂರಿ,ಮಾಣ, ಹರಿದ್ವಾರ್.40000/. 12ದಿನಗಳ ಅಹಮದಾಬಾದ್, ದ್ವಾರಕಾ,ಸೋಮಾನಾಥ್, ಉಜ್ಜಯಿನಿ,ಸರ್ದಾರ್ ಪ್ರತಿಮೆ 34000/. ವಿವರಗಳಿಗೆ:ಏಷ್ಯನ್ ಟ್ರಾವೆಲ್ ಲೈನ್ಸ್.164/3, ಆರ್.ವಿ.ರಸ್ತೆ(ಮಿನರ್ವ ಬಸ್ ಸ್ಟಾಪ್ ಎದುರು)ಬೆಂಗಳೂರು4. ಫೋನ್:08026565085/ 9480182865/ 8105657052.

17.06.2022 ಕಾಶಿ ಗಯಾ,ಅಯೋಧ್ಯ 7 ದಿನಗಳು. 12.05.2022 26.05.2022 ಧರ್ಮಸ್ಥಳ ಹೊರನಾಡು 4 ದಿನಗಳು 19.05.2022 ರಾಮೇಶ್ವರ,ಮದುರೈ,ಚಿದಂಬರಂ 6 ದಿನಗಳು ಜೈನ್ ಟ್ರಾವಲ್ಸ್ ಬೆಂಗಳೂರು-03. 9448402248 7022547922

ವಿಮಾನದಲ್ಲಿ 14.06.2022 7ದಿನಗಳು ಕಾಶಿ, ಅಯೋಧ್ಯ, ನೈಮಿಷ್ಯಾರಣ್ಯ,. 18.05.2022 5ದಿನಗಳು ರಾಮೇಶ್ವರಂ, ಕನ್ಯಾಕುಮಾರಿ. ಆರ್.ಗಾಂಧಿ ಟೂರ್ಸ್ (ರಿ) 9902433500/ 9945445809

Pilgrimage Tours

ಶ್ರೀಮಹಾಲಕ್ಷ್ಮಿ ಟ್ರಾವೆಲ್ಸ್.26/05/22 ಕಾಶಿ, ಜಾರ್ಖಂಡ್ ವೈದ್ಯನಾಥ, ಗಯ, ಬುದ್ಧಗಯ, ಅಯೋಧ್ಯ. 16/05/22 ಗುರುವಾಯೂರು, ಕೋಚಿನ್, ಅಲ್ಲೇಪ್ಪಿ, ಟ್ರವಂಡ್ರಮ್. 9591017782

ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.

ಜಾಹೀರಾತು ವ್ಯವಸ್ಥಾಪಕರು, ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

ಪ್ರಜಾವಾಣಿ
ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು
Log on to : https://homages.deccanherald.com
or
Scan QR code to access booking form

ರಾಮನಗರ ಚಿಕ್ಕಗಂಗವಾಡಿಯ ವಸಂತಕುಮಾರ್ ರವರ ಧರ್ಮಪತ್ನಿ
ಶ್ರೀಮತಿ ಸವಿತ
30–04–22 ರಂದು ದೈವಾದೀನರಾಗಿದ್ದು ಉತ್ತರ ಕ್ರಿಯಾಧಿಯನ್ನು 10–05–22 ರಂದು ಕನಕಪುರ ತಾಲ್ಲೂಕ್, ಹಾರೋಹಳ್ಳಿ ಹೋಬಳಿ, ಕೊಳ್ಳಿಗನಹಳ್ಳಿ ಗ್ರಾಮದಲ್ಲಿ ನೆರವೇರಿಸಲಾಗುವುದು, ಆಹ್ವಾನ ತಲುಪದವರು ಇದನ್ನೇ ಆಹ್ವಾನವೆಂದು ಬರುವುದು.
ಇಂತಿ ದುಃಖತಪ್ತರು: ಪತಿ–ವಸಂತಕುಮಾರ್ ಹಾಗೂ ಕುಟುಂಬವರ್ಗದವರು.

ಮೊದಲನೇ ವರ್ಷದ ಚಿರಸ್ಮರಣೆ



ಶ್ರೀ. ನಾರಾಯಣಸ್ವಾಮಿ ವಕೀಲರು
ನಿಧನ: 07.05.2021
ನಿಮ್ಮ ನೆನಪು ನಮ್ಮ ಹೃದಯಗಳಲ್ಲಿ ಸದಾಹಚ್ಚಹಸಿರಾಗುಳಿದಿದೆ, ಅನುದಿನವೂ, ಅನುಕ್ಷಣವೂ ನಿಮ್ಮ ಸ್ಮರಣೆಯೇ ನಮಗೆ ದಿವ್ಯಚೇತನವಾಗಿದೆ. ಸದಾ ನಿಮ್ಮನ್ನು ಸ್ಮರಿಸುವ ಧರ್ಮಪತ್ನಿ, ಮಕ್ಕಳು, ಅಳಿಯಂದಿರು ಮತ್ತು ಮೊಮ್ಮಕಳು.

ಪ್ರಥಮ ವರ್ಷದ ಪುಣ್ಯಸ್ಮರಣೆ

ಶ್ರೀಮತಿ ಕೆ. ಪಿ. ಗಾಯತ್ರಿದೇವಿ
ಜನನ: 23-10-1950 - ಮರಣ: 27-04-2021
ಮತ್ತು ಶ್ರೀಮಾನ್ ಪುಟ್ಟಸ್ವಾಮಿ ಎನ್.
ನಿವೃತ್ತ ಪೊಲೀಸ್ ಇನ್ಸ್‌ಪೆಕ್ಟರ್
ಜನನ: 10-06-1948 - ಮರಣ: 02-05-2021
ದಿನಾಂಕ : 08/05/2022 ರ ಭಾನುವಾರದಂದು
ಸ್ಥಳ : ಹನಿಯೂರು ಗ್ರಾಮ, ಚನ್ನಪಟ್ಟಣ.
ಇಂತಿ:
ಶ್ರೀ ಹೆಚ್.ಪಿ ವಿನೋದ್‌ಕುಮಾರ್ ಮತ್ತು ಶ್ರೀಮತಿ ಡಾ|| ಪದ್ಮ ಎಸ್.
ಬೇಬಿ ವೀರ ವೈಭವಿ ಹೆಚ್.ವಿ
ಗಿರಿನಗರ ಬೆಂಗಳೂರು. Ph: 9845118459.

ಪ್ರಜಾವಾಣಿ
EFFECTIVE FROM May 1, 2022
BOOK YOUR CLASSIFIEDS ADVERTISEMENT
PRAJAVANI ALL KARNATAKA CLASSIFIEDS PACKAGE RATES

Per word	Ordinary	Bold	Ordinary Semi Display	Bold Semi Display
	70	100	80	135
CD Per Sqcm	Single Col	Double Col	Multi Col	
	480	450	475	

SPECIAL OFFER

PAY	2	And	GET	1 Free
PAY	3	And	GET	2 Free
PAY	5	And	GET	5 Free

condition apply*
For More Details Contact:
Ph:080- 45557160 | 163 | 164 | M: 9880856233
9731810277 | 9901641752 | 9845114560 | 9886213331
dhclassifieds@deccanherald.co.in www.dhclassifieds.com

ಪ್ರಜಾವಾಣಿ ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು
ನಿಮ್ಮ ಪ್ರೀತಿಪಾತ್ರರ ಅಗಲಿಕೆಯನ್ನು ಶ್ರದ್ಧಾಂಜಲಿ ಜಾಹೀರಾತು ಮೂಲಕ ಪ್ರಕಟಿಸಲು ಅಥವಾ ನಿಮ್ಮ ಪ್ರೀತಿಪಾತ್ರರ ಸವಿನೆನಪಿಗೆ ಸಂತಾಪ ಸೂಚನೆ ಪ್ರಕಟಿಸಲು ಬಯಸುವಿರಾದರೆ, ನಮ್ಮ
ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ
ಪತ್ರಿಕೆಗಳಲ್ಲಿ ನಿಮ್ಮ ಜಾಹೀರಾತುಗಳನ್ನು ಪ್ರಕಟಿಸಲು ಅಗತ್ಯವಿರುವ ಎಲ್ಲ ಮಾರ್ಗದರ್ಶನ ನೀಡುತ್ತೇವೆ.
ದಯವಿಟ್ಟು ಸಂಪರ್ಕಿಸಿ:
Santhosh Kumar : 9880856233
Jerry : 9731810277 | Ravichandra : 9901641752
Vishal : 9845114560 | Anitha R: 9900428036
ನಿಮ್ಮ ಮಾರ್ಗದರ್ಶನಕ್ಕಾಗಿ ಕೆಲವು ಅನುಕೂಲಕರ ಫಾರ್ಮ್ಯಾಟ್ ಹಾಗೂ ಟೆಕ್ಸ್ಟ್ ಆಯ್ಕೆಗಳನ್ನು ಹೊಂದಿರುವ ಒಂದು ವೆಬ್‌ಸೈಟನ್ನು ಕೂಡ ನಾವು ಆರಂಭಿಸಿದ್ದೇವೆ. ದಯವಿಟ್ಟು ಲಾಗಿನ್ ಮಾಡಿರಿ
https://homages.deccanherald.com
ಅಥವಾ QR code ಸ್ಕ್ಯಾನ್ ಮಾಡಿ
ನಮ್ಮ ಆನ್‌ಲೈನ್ ಬುಕ್ಕಿಂಗ್ ಫಾರಂ ಪಡೆಯಿರಿ.

ಮೊದಲ ವಿಕೆಟ್‌ಗೆ ಶತಕದ ಜೊತೆಯಾಟವಾಡಿದ ವೃದ್ಧಿಮಾನ್ ಸಹಾ–ಶುಭಮನ್ ಆಟ ವ್ಯರ್ಥ

ಮಿಂಚಿದ ಸ್ಯಾಮ್ಸ್: ಗೆದ್ದ ಮುಂಬೈ

ಮುಂಬೈ (ಪಿಟಿಐ): ಸವಾಲಿನ ಮೊತ್ತದ ಗುರಿಯನ್ನು ಬೆನ್ನಟ್ಟಿದ ಬಲಿಷ್ಠ ಗುಜರಾತ್ ಟೈಟನ್ಸ್ ತಂಡ ಕೊನೆಯಲ್ಲಿ ಎಡವಿತು. ಕೊನೆಯ ಓವರ್‌ನಲ್ಲಿ ಡ್ಯಾನಿಯಲ್ ಸ್ಯಾಮ್ಸ್ ಮಾಡಿದ ಮ್ಯಾಜಿಕ್‌ನಿಂದ ಮುಂಬೈ ಇಂಡಿಯನ್ಸ್ ಜಯದ ಸಂಭ್ರಮದಲ್ಲಿ ಮಿಂದಿತು.

ಬ್ರೆಬೋರ್ನ್ ಕ್ರೀಡಾಂಗಣದಲ್ಲಿ ಶುಕ್ರವಾರ ರಾತ್ರಿ ನಡೆದ ಇಂಡಿಯನ್ ಪ್ರೀಮಿಯರ್ ಲೀಗ್ (ಐಪಿಎಲ್) ಕ್ರಿಕೆಟ್ ಟೂರ್ನಿಯ ಪಂದ್ಯದಲ್ಲಿ ಗುಜರಾತ್ ಟೈಟನ್ಸ್ ಎದುರು ಮುಂಬೈ ಇಂಡಿಯನ್ಸ್ 5 ರನ್‌ಗಳಿಂದ ಜಯ ಗಳಿಸಿತು.

178 ರನ್‌ಗಳ ಗುರಿ ಬೆನ್ನತ್ತಿದ ಟೈಟನ್ಸ್ 5 ವಿಕೆಟ್ ಕಳೆದುಕೊಂಡು 172 ರನ್ ಗಳಿಸಿತು. ಮೊದಲ ವಿಕೆಟ್‌ಗೆ ವೃದ್ಧಿಮಾನ್ ಸಹಾ ಮತ್ತು ಶುಭಮನ್ ಗಿಲ್ 73 ಎಸೆತಗಳಲ್ಲಿ 106 ರನ್ ಗಳಿಸಿ ಉತ್ತಮ ಅಡಿಪಾಯ ಹಾಕಿಕೊಟ್ಟರು. ನಾಯಕ ಹಾರ್ದಿಕ್ ಪಾಂಡ್ಯ ಮತ್ತು ಯುವ ಬ್ಯಾಟರ್ ಸಾಯ್ ಸುದರ್ಶನ್ ಕೂಡ ಉತ್ತಮ ಹೋರಾಟ ಪ್ರದರ್ಶಿಸಿ ನಿರೀಕ್ಷೆ ಮೂಡಿಸಿದರು.

19ನೇ ಓವರ್‌ನ 5ನೇ ಎಸೆತದಲ್ಲಿ ಸಿಕ್ಸರ್ ಸಿಡಿಸಿದ ಡೇವಿಡ್ ಮಿಲ್ಲರ್ ತಂಡವನ್ನು ಜಯದ ಸನಿಹ ಕೊಂಡೊಯ್ದರು. ಅಂತಿಮ ಓವರ್‌ನಲ್ಲಿ ಗೆಲುವಿಗೆ 9 ರನ್ ಬೇಕಾಗಿತ್ತು. ಡ್ಯಾನಿಯಲ್ ಸ್ಯಾಮ್ಸ್ ಚಾಕಚಕ್ಯ ಬೌಲಿಂಗ್ ಮಾಡಿ ಮುಂಬೈಗೆ ಜಯ ತಂದುಕೊಟ್ಟರು.

ಇಶಾನ್ ಕಿಶನ್, ರೋಹಿತ್ ಶರ್ಮಾ ಅಬ್ಬರ: ಟಾಸ್ ಗೆದ್ದ ಗುಜರಾತ್ ಫೀಲ್ಡಿಂಗ್ ಆಯ್ಕೆ ಮಾಡಿಕೊಂಡಿತ್ತು. ಆರಂಭದ ಜೋಡಿ ಇಶಾನ್ ಕಿಶನ್ ಮತ್ತು ರೋಹಿತ್ ಶರ್ಮಾ ಅವರ ಅಬ್ಬರ ಮತ್ತು ಆರನೇ ಕ್ರಮಾಂಕದ ಟಿಮ್ ಡೇವಿಡ್ ಅವರ ಸ್ಫೋಟಕ ಬ್ಯಾಟಿಂಗ್ ನೆರವಿನಿಂದ ಮುಂಬೈ ಇಂಡಿಯನ್ಸ್ 6 ವಿಕೆಟ್‌ಗಳಿಗೆ 177 ರನ್ ಗಳಿಸಿತು.

ಪಂದ್ಯ ಗೆದ್ದ ನಂತರ ಸಂಭ್ರಮಿಸಿದ ಡ್ಯಾನಿಯಲ್ ಸ್ಯಾಮ್ಸ್ (ಮಧ್ಯ) ಜೊತೆ ಸಂಭ್ರಮಿಸಿದ ಮುಂಬೈ ಇಂಡಿಯನ್ಸ್ ಆಟಗಾರರು –ಪಿಟಿಐ ಚಿತ್ರ

ಸತತ ಎಂಟು ಸೋಲುಗಳ ನಂತರ ಕಳೆದ ಪಂದ್ಯದಲ್ಲಿ ಮೊದಲ ಜಯ ಗಳಿಸಿದ್ದ ಮುಂಬೈ ತಂಡದ ಇಶಾನ್ ಕಿಶನ್ ಮತ್ತು ರೋಹಿತ್ ಶರ್ಮಾ ಮೊದಲ ವಿಕೆಟ್‌ಗೆ 45 ಎಸೆತಗಳಲ್ಲಿ 74 ರನ್ ಸೇರಿಸಿದರು. ಈ ಜೋಡಿ ವಾಪಸಾದ ನಂತರ ತಂಡ ದಿಢೀರ್ ಪತನ ಕಂಡಿತು. ಆದರೆ ಕೊನೆಯ ಓವರ್‌ಗಳಲ್ಲಿ ದಿಟ್ಟ ಆಟವಾಡಿದ ಟಿಮ್ ಡೇವಿಡ್ 21 ಎಸೆತಗಳಲ್ಲಿ 44 ರನ್ ಗಳಿಸಿ ಅಜೇಯರಾಗಿ ಉಳಿದರು. ಅವರ ಬ್ಯಾಟಿನಿಂದ ಎರಡು ಬೌಂಡರಿ ಮತ್ತು ನಾಲ್ಕು ಭರ್ಜರಿ ಸಿಕ್ಸರ್‌ಗಳು ಸಿಡಿದವು.

ಮೊದಲ ಓವರ್‌ನಲ್ಲಿ ತಾಳ್ಮೆಯಿಂದ ಆಡಿದ ಇಶಾನ್ ಮತ್ತು ರೋಹಿತ್ ಎರಡನೇ ಓವರ್‌ನಲ್ಲಿ ವೇಗವಾಗಿ ರನ್ ಗಳಿಸಲು ತೊಡಗಿದರು. ಅಲ್ಜರಿ ಜೋಸೆಫ್ ಅವರ ಮೊದಲ ಎರಡು ಎಸೆತಗಳಲ್ಲಿ ಬೌಂಡರಿ ಗಳಿಸಿದ ರೋಹಿತ್ ಶರ್ಮಾ ಕೊನೆಯ ಎಸೆತವನ್ನು ಸಿಕ್ಸರ್‌ಗೆ ಅಟ್ಟಿದರು. ನಂತರದ ಓವರ್‌ನಲ್ಲೂ ಸಿಕ್ಸರ್ ಸಿಡಿಸಿದ ಅವರು ನಾಲ್ಕನೇ ಓವರ್‌ನ ಮೊದಲ ಎರಡು ಎಸೆತಗಳಲ್ಲೂ ಬೌಂಡರಿ ಗಳಿಸಿದರು. ನಂತರದ ಓವರ್‌ನಲ್ಲಿ ಇಶಾನ್ ಕೂಡ ಅಬ್ಬರಿಸಿದರು. ಉತ್ತಮ ಲಯದಲ್ಲಿ ರೋಹಿತ್ ಶರ್ಮಾ ಅವರನ್ನು ಎಂಟನೇ ಓವರ್‌ನಲ್ಲಿ ರಶೀದ್ ಖಾನ್ ಔಟ್ ಮಾಡಿದರು. ರಿವರ್ಸ್ ಸ್ವೀಪ್ ಮಾಡಲು ಪ್ರಯತ್ನಿಸಿದ ರೋಹಿತ್ ಎಲ್‌ಬಿಡಬ್ಲ್ಯು ಬಲೆಗೆ ಬಿದ್ದರು. 111 ರನ್ ಗಳಿಸುವಷ್ಟರಲ್ಲಿ ತಂಡ ಮೂರು ವಿಕೆಟ್ ಕಳೆದುಕೊಂಡಿತು. ಪೊಲಾರ್ಡ್ 14 ಎಸೆತಗಳಲ್ಲಿ 4 ರನ್ ಗಳಿಸಿ ಮರಳಿದರು.

ಸ್ಕೋರ್ ಕಾರ್ಡ್

ಮುಂಬೈ ಇಂಡಿಯನ್ಸ್ 6ಕ್ಕೆ 177 (20 ಓವರ್)
ಇಶಾನ್ ಸಿ ರಶೀದ್ ಬಿ ಜೋಸೆಫ್ 45 (29 ಎ, 4x5, 6x1), ರೋಹಿತ್ ಎಲ್‌ಬಿಡಬ್ಲ್ಯು ಬಿ ರಶೀದ್ 43 (28 ಎ, 4x5, 6x2), ಸೂರ್ಯಕುಮಾರ್ ಸಿ ರಶೀದ್ ಬಿ ಸಾಂಗ್ವಾನ್ 13 (11 ಎ, 6x1), ತಿಲಕ್ ರನ್ ಔಟ್ (ಹಾರ್ದಿಕ್) 21 (16 ಎ, 4x2), ಪೊಲಾರ್ಡ್ ಬಿ ರಶೀದ್ 4 (14 ಎ), ಟಿಮ್ ಡೇವಿಡ್ ಔಟಗದೆ 44 (21 ಎ, 4x2, 6x4), ಡ್ಯಾನಿಯಲ್ ಸ್ಯಾಮ್ಸ್ ಸಿ ರಶೀದ್ ಬಿ ಫರ್ಗ್ಯುಸನ್ 0 (2 ಎ), ಮುರುಗನ್ ಅಶ್ವಿನ್ ಔಟಾಗದೆ 0 (0 ಎ)
ಇತರೆ (ಲೆಗ್‌ಬೈ 2, ನೋಬಾಲ್ 1, ವೈಡ್ 4) 7
ವಿಕೆಟ್ ಪತನ: 1-74 (ರೋಹಿತ್ ಶರ್ಮಾ, 7.3), 2-99 (ಸೂರ್ಯಕುಮಾರ್ ಯಾದವ್, 10.3), 3-111 (ಇಶಾನ್ ಕಿಶನ್, 11.6), 4-119 (ಕೀರನ್ ಪೊಲಾರ್ಡ್, 14.5), 5-157 (ತಿಲಕ್ ವರ್ಮಾ, 18.2), 6-164 (ಡ್ಯಾನಿಯಲ್ ಸ್ಯಾಮ್ಸ್, 18.6)
ಬೌಲಿಂಗ್: ಮೊಹಮ್ಮದ್ ಶಮಿ 4-0-42-0, ಅಲ್ಜರಿ ಜೋಸೆಫ್ 4-0-41-1, ರಶೀದ್ ಖಾನ್ 4-0-24-2, ಲಾಕಿ ಫರ್ಗ್ಯುಸನ್ 4-0-34-1, ಪ್ರದೀಪ್ ಸಾಂಗ್ವಾನ್ 3-0-23-1, ರಾಹುಲ್ ತೇವಾಟಿಯಾ 1-0-11-0

ಗುಜರಾತ್ ಟೈಟನ್ಸ್ 5ಕ್ಕೆ 172 (20 ಓವರ್)
ಸಹಾ ಸಿ ಸ್ಯಾಮ್ಸ್ ಬಿ ಅಶ್ವಿನ್ 55 (40ಎ, 4X6, 6X2), ಶುಭಮನ್ ಸಿ ಪೊಲಾರ್ಡ್ ಬಿ ಅಶ್ವಿನ್ 52 (36ಎ, 4X6, 6X2), ಹಾರ್ದಿಕ್ ರನೌಟ್ (ಇಶಾನ್) 24 (14ಎ, 4X4), ಸಾಯಿ ಸುದರ್ಶನ್ ಹಿಟ್‌ವಿಕೆಟ್ ಬಿ ಪೊಲಾರ್ಡ್ 14 (11ಎ, 4X1, 6X1), ಮಿಲ್ಲರ್ ಔಟಾಗದೆ 19 (14ಎ, 4X1, 6X1), ತೆವಾಟಿಯಾ ರನೌಟ್ (ತಿಲಕ್/ಇಶಾನ್) 3 (4ಎ), ರಶೀದ್ ಔಟಾಗದೆ 1 (1ಎ)
ಇತರೆ (ಲೆಗ್‌ಬೈ 3, ವೈಡ್ 1) 4
ವಿಕೆಟ್ ಪತನ: 1-106 (ಶುಭಮನ್ ಗಿಲ್, 12.1), 2-111 (ವೃದ್ಧಿಮಾನ್ ಸಹಾ, 12.6), 3-138 (ಸಾಯಿ ಸುದರ್ಶನ್, 15.6), 4-156 (ಹಾರ್ದಿಕ್ ಪಾಂಡ್ಯ, 17.4), 5-171 (ರಾಹುಲ್ ತೆವಾಟಿಯಾ, 19.3)
ಬೌಲಿಂಗ್: ಡ್ಯಾನಿಯಲ್ ಸ್ಯಾಮ್ಸ್ 3-0-18-0, ಜಸ್‌ಪ್ರೀತ್ ಬೂಮ್ರಾ 4-0-48-0, ಮುರುಗನ್ ಅಶ್ವಿನ್ 4-0-29-2, ರಿಲಿ ಮೆರೆಡಿತ್ 4-0-32-0, ಕುಮಾರ್ ಕಾರ್ತಿಕೇಯ 3-0-29-0, ಕೀರನ್ ಪೊಲಾರ್ಡ್ 2-0-13-1

ಫಲಿತಾಂಶ: ಮುಂಬೈ ಇಂಡಿಯನ್ಸ್‌ಗೆ ಐದು ರನ್‌ಗಳ ಜಯ

ಇಂದಿನ ಪಂದ್ಯಗಳು

ಪಂಜಾಬ್ ಕಿಂಗ್ಸ್– ರಾಜಸ್ಥಾನ ರಾಯಲ್ಸ್
ಸ್ಥಳ: ವಾಂಖೆಡೆ ಕ್ರೀಡಾಂಗಣ, ಮುಂಬೈ. ಆರಂಭ: ಮಧ್ಯಾಹ್ನ 3.30
ಲಖನೌ ಸೂಪರ್‌ಜೈಂಟ್ಸ್– ಕೋಲ್ಕತ್ತ ನೈಟ್‌ರೈಡರ್ಸ್
ಸ್ಥಳ: ಎಂಸಿಎ ಕ್ರೀಡಾಂಗಣ, ಪುಣೆ. ಆರಂಭ: ರಾತ್ರಿ 7.30

ಟಿಮ್ ಡೇವಿಡ್ 19ನೇ ಓವರ್‌ನಲ್ಲಿ ತಲಾ ಒಂದು ಸಿಕ್ಸರ್ ಮತ್ತು ಬೌಂಡರಿ ಗಳಿಸಿದರೆ ಕೊನೆಯ ಓವರ್‌ನಲ್ಲಿ 2 ಸಿಕ್ಸರ್‌ಗಳೊಂದಿಗೆ ಮಿಂಚಿದರು.

ಪಾಯಿಂಟ್ ಪಟ್ಟಿ

ತಂಡ	ಪಂದ್ಯ	ಗೆಲುವು	ಸೋಲು	ರದ್ದು	ಟೈ	ಅಂಕ	ರನ್‌ರೇಟ್
ಗುಜರಾತ್	11	8	3	0	0	16	0.120
ಲಖನೌ	10	7	3	0	0	14	0.397
ರಾಜಸ್ಥಾನ	10	6	4	0	0	12	0.340
ಬೆಂಗಳೂರು	11	6	5	0	0	12	-0.444
ಡೆಲ್ಲಿ	10	5	5	0	0	10	0.641
ಹೈದರಾಬಾದ್	10	5	5	0	0	10	0.325
ಪಂಜಾಬ್	10	5	5	0	0	10	-0.229
ಕೋಲ್ಕತ್ತ	10	4	6	0	0	8	0.060
ಚೆನ್ನೈ	10	3	7	0	0	6	-0.431
ಮುಂಬೈ	10	2	8	0	0	4	-0.725

*ಶುಕ್ರವಾರದ ಪಂದ್ಯದ ಅಂತ್ಯಕ್ಕೆ

ಐಪಿಎಲ್ ಮತ್ತು ಕ್ರೀಡಾ ಸುದ್ದಿಗಳ ವಿಸ್ತೃತ ವರದಿ, ಮಾಹಿತಿಗಾಗಿ ಭೇಟಿ ನೀಡಿ https://www.prajavani.net/cricket

ಆರೆಂಜ್ ಕ್ಯಾಪ್ (ಹೆಚ್ಚು ರನ್ ಗಳಿಸಿದವರು)

ಆಟಗಾರ	ತಂಡ	ರನ್
ಜೋಸ್ ಬಟ್ಲರ್	ರಾಜಸ್ಥಾನ	588
ರಾಹುಲ್	ಲಖನೌ	451
ಶಿಖರ್	ಹೈದರಾಬಾದ್	369

ಪರ್ಪಲ್ ಕ್ಯಾಪ್ (ಹೆಚ್ಚು ವಿಕೆಟ್ ಗಳಿಸಿದವರು)

ಆಟಗಾರ	ತಂಡ	ವಿಕೆಟ್
ಯಜುವೇಂದ್ರ	ರಾಜಸ್ಥಾನ	19
ಕುಲದೀಪ್	ಡೆಲ್ಲಿ	18
ರಬಾಡ	ಪಂಜಾಬ್	17

ಕೊರೊನಾ ಭೀತಿ ಬೇಡ, ಮುಂಜಾಗ್ರತೆ ಇರಲಿ

ಡೆಫಿಲಿಂಪಿಕ್ಸ್: ಕಂಚು ಗೆದ್ದ ವೇದಿಕಾ

ನವದೆಹಲಿ (ಪಿಟಿಐ): ವೇದಿಕಾ ಶರ್ಮಾ ಅವರು ಡೆಫಿಲಿಂಪಿಕ್ಸ್‌ನ ಶೂಟಿಂಗ್ ವಿಭಾಗದಲ್ಲಿ ಭಾರತಕ್ಕೆ ಮೂರನೇ ಪದಕ ಗೆದ್ದುಕೊಟ್ಟರು.

ಬ್ರೆಜಿಲ್‌ನ ಕ್ಯಾಕ್ಸಿಯಾಸ್ ಡು ಸುಲ್‌ನಲ್ಲು ನಡೆಯುತ್ತಿರುವ ಕೂಟದ ಮಹಿಳೆಯರ 10 ಮೀಟರ್ಸ್ ಏರ್ ಪಿಸ್ತೂಲ್‌ನಲ್ಲಿ ವೇದಿಕಾ ಕಂಚು ಜಯಿಸಿದರು.

ವೇದಿಕಾ 207.2 ಸ್ಕೋರ್ ದಾಖಲಿಸಿದರು. ಚಿನ್ನದ ಪದಕವು ಉಕ್ರೇನ್‌ನ ಇನ್ನಾ ಅಫೊಂಚೆಂಕೊ (236.3) ಅವರ ಪಾಲಾಯಿತು. ಚೀನಾ ತೈಪೆಯ ಕಾವೊ ಯಾ ಜು (232) ಬೆಳ್ಳಿ ಪದಕ ತಮ್ಮದಾಗಿಸಿಕೊಂಡರು. ಬ್ಯಾಡ್ಮಿಂಟನ್‌ನಲ್ಲಿ ಮಿಶ್ರ ವಿಭಾಗದ ತಂಡವು ಚಿನ್ನ ಗೆಲ್ಲುವುದರೊಂದಿಗೆ ಭಾರತ ಗೆದ್ದ ಪದಕಗಳ ಸಂಖ್ಯೆ ನಾಲ್ಕಕೇರಿದೆ.

ವೇದಿಕಾ ಶರ್ಮಾ– ಸಾಯ್ ಮೀಡಿಯಾ ಟ್ವಿಟರ್ ಚಿತ್ರ

ಮಕ್ಕಳ ಆಸ್ಪತ್ರೆ ರೇಡಿಯಾಲಜಿ ವಿಭಾಗಕ್ಕೆ ಹಣ ಸಂಗ್ರಹ

ಎಜಾಜ್ ‘10 ವಿಕೆಟ್ ಟಿ-ಶರ್ಟ್’ ಹರಾಜಿಗೆ

ವೆಲಿಂಗ್ಟನ್ (ರಾಯಿಟರ್ಸ್): ಟೆಸ್ಟ್ ಕ್ರಿಕೆಟ್ ಪಂದ್ಯದ ಇನಿಂಗ್ಸ್‌ವೊಂದರ ಎಲ್ಲ 10 ವಿಕೆಟ್ ಉರುಳಿಸಿದ ನ್ಯೂಜಿಲೆಂಡ್‌ನ ಎಜಾಜ್ ಪಟೇಲ್, ಅಪೂರ್ವ ಸಾಧನೆ ಮಾಡಿದ ಪಂದ್ಯದಲ್ಲಿ ಧರಿಸಿದ್ದ ಟಿ-ಶರ್ಟ್ ಹರಾಜು ಮಾಡಲಿದ್ದಾರೆ. ಆಕ್ಲೆಂಡ್‌ನ ಆಸ್ಪತ್ರೆಯೊಂದಕ್ಕಾಗಿ ಹಣ ಸಂಗ್ರಹಿಸುವುದಕ್ಕಾಗಿ ಅವರು ಈ ಕಾರ್ಯಕ್ಕೆ ಮುಂದಾಗಿದ್ದಾರೆ.

33 ವರ್ಷದ ಎಡಗೈ ಸ್ಪಿನ್ನರ್ ಕಳೆದ ವರ್ಷದ ಡಿಸೆಂಬರ್‌ನಲ್ಲಿ ಮುಂಬೈನ ವಾಂಖೆಡೆ ಕ್ರೀಡಾಂಗಣದಲ್ಲಿ ನಡೆದ ಭಾರತ ಎದುರಿನ ಪಂದ್ಯದಲ್ಲಿ ಅಪರೂಪದ ಸಾಧನೆ ಮಾಡಿದ್ದರು. ಇನಿಂಗ್ಸ್‌ನ ಎಲ್ಲ ವಿಕೆಟ್ ಗಳಿಸಿದ ವಿಶ್ವದ ಮೂರನೇ ಬೌಲರ್ ಎನಿಸಿಕೊಂಡಿದ್ದರು. ಇಂಗ್ಲೆಂಡ್‌ನ ಜಿಮ್ ಲೇಕರ್ ಮತ್ತು ಭಾರತದ ಅನಿಲ್ ಕುಂಬ್ಳೆ ಈ ಹಿಂದೆ ಈ ಸಾಧನೆ ಮಾಡಿದ್ದರು.

ಎಜಾಜ್ ಪಟೇಲ್ –ಎಎಫ್‌ಪಿ ಚಿತ್ರ

ನ್ಯೂಜಿಲೆಂಡ್‌ನ ಮಕ್ಕಳ ರಾಷ್ಟ್ರೀಯ ಆಸ್ಪತ್ರೆಯ ರೇಡಿಯಾಲಜಿ ವಿಭಾಗದ ಪ್ಲೇ ಥೆರಪಿಯಲ್ಲಿ ತೊಡಗಿಸಿಕೊಂಡಿರುವವರಿಗಾಗಿ ಹಣ ಸಂಗ್ರಹ ಮಾಡುವುದಾಗಿ ಎಜಾಜ್ ಅವರು ಇನ್‌ಸ್ಟಾಗ್ರಾಂ ಪೋಸ್ಟ್‌ನಲ್ಲಿ ವಿವರಿಸಿದ್ದಾರೆ.

ಹರಾಜು ಮಾಡುವ ಟಿ–ಶರ್ಟ್ ಮೇಲೆ ಭಾರತ ಪ್ರವಾಸದಲ್ಲಿದ್ದ ತಂಡದ ಎಲ್ಲ ಸದಸ್ಯರು ಸಹಿ ಮಾಡಿದ್ದಾರೆ. ಮುಂಬೈ ಟೆಸ್ಟ್ ನಂತರ ನಡೆದ ಸರಣಿಗಳಲ್ಲಿ ಎಜಾಜ್ ಪಟೇಲ್ ನ್ಯೂಜಿಲೆಂಡ್ ತಂಡದಲ್ಲಿ ಸ್ಥಾನ ಗಳಿಸಿರಲಿಲ್ಲ. ಮುಂದಿನ ತಿಂಗಳು ಇಂಗ್ಲೆಂಡ್‌ನಲ್ಲಿ ನಡೆಯಲಿರುವ ಸರಣಿಗೆ ಪ್ರಕಟಿಸಿರುವ ತಂಡದಲ್ಲಿ ಅವರ ಹೆಸರು ಇದೆ.

ಟೆನಿಸ್: ರಫೆಲ್ ನಡಾಲ್‌ಗೆ ಸೋಲುಣಿಸಿದ ಅಲ್ಕಾರಾಸ್

ಮ್ಯಾಡ್ರಿಡ್ (ರಾಯಿಟರ್ಸ್): ತನ್ನ ಆದರ್ಶದ ಆಟಗಾರ ರಫೆಲ್ ನಡಾಲ್ ಅವರಿಗೆ ಸೋಲುಣಿಸಿದ ಸ್ಪೇನ್‌ನ ಕಾರ್ಲೊಸ್ ಅಲ್ಕಾರಾಸ್, ಮ್ಯಾಡ್ರಿಡ್ ಓಪನ್ ಟೆನಿಸ್ ಟೂರ್ನಿಯ ಸೆಮಿಫೈನಲ್ ತಲುಪಿದ್ದಾರೆ.

ಶುಕ್ರವಾರ ನಡೆದ ಪುರುಷರ ಸಿಂಗಲ್ಸ್ ವಿಭಾಗದ ಕ್ವಾರ್ಟರ್‌ಫೈನಲ್ ಪಂದ್ಯದಲ್ಲಿ ಅಲ್ಕಾರಾಸ್ 6-2, 1-6, 6-3ರಿಂದ ತಮ್ಮದೇ ದೇಶದ ಆಟಗಾರನನ್ನು ಮಣಿಸಿದರು.



ಅಲ್ಕಾರಾಸ್

ನಾಲ್ಕರ ಘಟ್ಟದ ಪಂದ್ಯದಲ್ಲಿ ಅಲ್ಕಾರಾಸ್ ಅವರಿಗೆ ಸರ್ಬಿಯಾದ ನೊವಾಕ್ ಜೊಕೊವಿಚ್ ಸವಾಲು ಎದುರಾಗಿದೆ. ಎಂಟರ ಘಟ್ಟದ ಮತ್ತೊಂದು ಪಂದ್ಯದಲ್ಲಿ ಜೊಕೊವಿಚ್ 6-3, 6-4ರಿಂದ ಪೋಲೆಂಡ್‌ನ ಹುಬರ್ಟ್ ಹುರ್ಕಾಜ್ ಅವರನ್ನು ಸೋಲಿಸಿದರು.

ವಿಶ್ವ ಚೆಸ್: ಕೌಶಿಕ್‌ಗೆ ಪ್ರಶಸ್ತಿ

ರೋಡ್ಸ್, ಗ್ರೀಸ್ (ಪಿಟಿಐ): ಭಾರತದ ಅಶ್ವತ್ಥ್ ಕೌಶಿಕ್ ಇಲ್ಲಿ ನಡೆದ ವಿಶ್ವ ಕೆಡೆಟ್ಸ್ ಮತ್ತು ಯೂತ್ ರ್‍ಯಾಪಿಡ್ ಚೆಸ್ ಚಾಂಪಿಯನ್‌ಷಿಪ್‌ನ ಎಂಟು ವರ್ಷದೊಳಗಿನವರ ವಿಭಾಗದಲ್ಲಿ ಪ್ರಶಸ್ತಿ ಜಯಿಸಿದ್ದಾನೆ.

ಆರು ವರ್ಷದ ಕೌಶಿಕ್ ಚಾಂಪಿಯನ್‌ಷಿಪ್‌ನ ಒಂಬತ್ತು ಸುತ್ತುಗಳಲ್ಲಿ ಅಜೇಯವಾಗುಳಿದನು. ಒಟ್ಟು 8.5 ಪಾಯಿಂಟ್ಸ್ ಕಲೆಹಾಕಿದನು.

ವಾಲಿಬಾಲ್: ಐಸಿಎಫ್‌ಗೆ ಜಯ

ಸುಳ್ಯ: ಚೆನ್ನೈನ ಐಸಿಎಫ್ (ಇಂಟಿಗ್ರೇಟೆಡ್ ಕೋಚ್ ಫ್ಯಾಕ್ಟರಿ) ತಂಡ ಇಲ್ಲಿನ ಚೆನ್ನಕೇಶವ ದೇವಸ್ಥಾನದ ಆವರಣದಲ್ಲಿ ನಡೆಯುತ್ತಿರುವ ರಾಷ್ಟ್ರೀಯ ವಾಲಿಬಾಲ್ ಟೂರ್ನಿಯ ಮಹಿಳೆಯರ ವಿಭಾಗದ ಪಂದ್ಯದಲ್ಲಿ ಕರ್ನಾಟಕ ಕ್ಲಬ್ ತಂಡವನ್ನು ಸೋಲಿಸಿತು.

ಗುರುವಾರ ರಾತ್ರಿ ನಡೆದ ಹಣಾಹಣಿಯಲ್ಲಿ ಐಸಿಎಫ್ ತಂಡ ಮೊದಲ ಸೆಟ್ ಕಳೆದುಕೊಂಡರೂ ಬಳಿಕ ಚೇತರಿಸಿಕೊಂಡು 23-25, 25-19, 25-16, 25-11ರಲ್ಲಿ ಜಯ ಗಳಿಸಿತು. ಕರ್ನಾಟಕ ಕ್ಲಬ್ ತಂಡ ಆಡಿದ ಎರಡೂ ಪಂದ್ಯಗಳಲ್ಲಿ ಸೋಲು ಅನುಭವಿಸಿದೆ.

ಕರ್ನಾಟಕ ಕ್ಲಬ್ ನಾಯಕಿ ನಿತ್ಯಾ, ಪೂಜಾ ನರೇಂದ್ರನ್ ಉತ್ತಮ ಪ್ರದರ್ಶನದಿಂದ ಮೊದಲ ಸೆಟ್ ಗೆದ್ದುಕೊಂಡಿತು. ಎರಡನೇ ಸೆಟ್‌ನಿಂದ ಐಸಿಎಫ್ ಹಿಡಿತ ಸಾಧಿಸಿತು. ಸ್ಟ್ರೈಕರ್ ಸೋಯಾ, ನಾಯಕಿ ಸ್ವಾತಿ ಶಾಜಿ ಮತ್ತು ಅನೀಶಾ ಅವರ ಉತ್ತಮ ಪ್ರದರ್ಶನ ತೋರಿದರು.

ಉತ್ತರಪ್ರದೇಶ ಸರ್ಕಾರಕ್ಕೆ ಸುಪ್ರೀಂ ಕೋರ್ಟ್ ತರಾಟೆ

ನವದೆಹಲಿ: ಕಳೆದ ವರ್ಷ ಪ್ರಯಾಗ್‌ರಾಜ್‌ನ ಟಿ.ಬಿ. ಸಪ್ರು ಆಸ್ಪತ್ರೆಯಿಂದ ತಪ್ಪಿಸಿಕೊಂಡಿದ್ದ 82 ವರ್ಷದ ಕೊರೊನಾ ಸೋಂಕಿತ ರೋಗಿಯ ಪ್ರಕರಣಕ್ಕೆ ಸಂಬಂಧಿಸಿದಂತೆ ಸುಪ್ರೀಂ ಕೋರ್ಟ್ ಶುಕ್ರವಾರ ಉತ್ತರ ಪ್ರದೇಶ ಸರ್ಕಾರವನ್ನು ತರಾಟೆಗೆ ತೆಗೆದುಕೊಂಡಿದೆ.

‘ನ್ಯಾಯಾಂಗ ನಿಂದನೆ ಕ್ರಮ ಜರುಗಿಸು ವವರೆಗೂ ಕೋರ್ಟ್‌ನ ಆದೇಶಗಳನ್ನು ಪಾಲಿಸದಿರುವುದು ಉತ್ತರ ಪ್ರದೇಶ ಸರ್ಕಾರಕ್ಕೆ ಅಭ್ಯಾಸವಾಗಿ ಹೋಗಿದೆ’ ಎಂದು ಚಾಟಿ ಬೀಸಿರುವ ಮುಖ್ಯ ನ್ಯಾಯಮೂರ್ತಿ ಎನ್.ವಿ. ರಮಣ, ನ್ಯಾಯಮೂರ್ತಿಗಳಾದ ಕೃಷ್ಣ ಮುರಾರಿ ಮತ್ತು ಹಿಮಾ ಕೊಹ್ಲಿ ಅವರ ತ್ರಿಸದಸ್ಯ ಪೀಠ, ‘82 ವರ್ಷದ ವೃದ್ಧ ಆಸ್ಪತ್ರೆಯಿಂದ ನಾಪತ್ತೆಯಾಗಲು ಹೇಗೆ ಸಾಧ್ಯ? ಅವರಿಗೆ ನಡೆಯಲೂ ಸಾಧ್ಯವಾಗುವುದಿಲ್ಲ. ಹಾಗಿದ್ದರೆ ಅವರು ಎಲ್ಲಿ ಹೋದರು?’ ಎಂದು ಪ್ರಶ್ನೆ ಮಾಡಿದೆ.

ರಾಜ್ಯ ಸರ್ಕಾರದ ಪರವಾಗಿ ವಾದ ಮಂಡಿಸಿದ ವಕೀಲರು, ‘ಪ್ರಕರಣಕ್ಕೆ ಸಂಬಂಧಪಟ್ಟಂತೆ ರಾಜ್ಯ ಸರ್ಕಾರವು ಎಲ್ಲ ಕ್ರಮಗಳನ್ನು ತೆಗೆದುಕೊಂಡಿದ್ದು, ಈಗಾಗಲೇ ಅಂತ್ಯಸಂಸ್ಕಾರ ಆಗಿರುವವರ ವಿವರಗಳನ್ನೂ ಪರಿಶೀಲಿಸಲಾಗಿದೆ. ಆಸ್ಪತ್ರೆಯ ಸಿಬ್ಬಂದಿ ವಿರುದ್ಧ ಕ್ರಮ ಜರುಗಿಸಲಾಗಿದೆ’ ಎಂದು ತಿಳಿಸಿದರು. ಸದ್ಯ ನಾಪತ್ತೆಯಾದ ವೃದ್ಧನ ಪ್ರಕರಣ ಕುರಿತು ಅಲಹಾಬಾದ್ ಹೈಕೋರ್ಟ್ ನಡೆಸಲಿರುವ ಹೇಬಿಯಸ್ ಕಾರ್ಪಸ್ ವಿಚಾರಣೆಗೆ ತಡೆಯಾಜ್ಞೆ ನೀಡಿರುವ ಸುಪ್ರೀಂಕೋರ್ಟ್ ವೃದ್ಧನ ಕುಟುಂಬಕ್ಕೆ ₹50,000 ಪರಿಹಾರ ನೀಡುವಂತೆ ಸರ್ಕಾರಕ್ಕೆ ಸೂಚಿಸಿದೆ.

ಕೋವಿಡ್: 3,545 ಹೊಸ ಪ್ರಕರಣ–27 ಸಾವು

ನವದೆಹಲಿ(ಪಿಟಿಐ): ದೇಶದಲ್ಲಿ 3,545 ಹೊಸ ಕೋವಿಡ್ ಪ್ರಕರಣಗಳು ವರದಿಯಾಗಿವೆ. 27 ಸೋಂಕಿತರು ಮೃತಪಟ್ಟಿದ್ದಾರೆ ಎಂದು ಕೇಂದ್ರ ಆರೋಗ್ಯ ಸಚಿವಾಲಯ ಶುಕ್ರವಾರ ತಿಳಿಸಿದೆ. ಸಕ್ರಿಯ ಪ್ರಕರಣಗಳು19,-688ಕ್ಕೆ ಇಳಿಕೆಯಾಗಿದ್ದು, ಚೇತರಿಕೆ ಪ್ರಮಾಣ ಶೇ 98.74 ರಷ್ಟಿದೆ.

ರಾಷ್ಟ್ರೀಯ ಹಾಕಿ: ಕರ್ನಾಟಕ ಮಹಿಳೆಯರಿಗೆ ಗೆಲುವು

ಭೋಪಾಲ್ (ಪಿಟಿಐ): ಕರ್ನಾಟಕ, ಉತ್ತರ ಪ್ರದೇಶ ಮತ್ತು ದೆಹಲಿ ತಂಡಗಳು ಹಾಕಿ ಇಂಡಿಯಾ ಆಯೋಜಿಸಿರುವ ಮಹಿಳೆಯರ ರಾಷ್ಟ್ರೀಯ ಹಾಕಿ ಚಾಂಪಿಯನ್‌ಷಿಪ್‌ನಲ್ಲಿ ಶುಕ್ರವಾರ ಜಯ ಸಾಧಿಸಿದವು.

ಎಫ್ ಗುಂಪಿನ, ಉದ್ಘಾಟನಾ ಪಂದ್ಯದಲ್ಲಿ ಕರ್ನಾಟಕ ತಂಡ 10–0ಯಿಂದ ಅರುಣಾಚಲ್ ಪ್ರದೇಶವನ್ನು ಮಣಿಸಿತು. ತಮಿಳುನಾಡು 5–0ಯಿಂದ ಅಂಡಮಾನ್ ನಿಕೋಬಾರ್ ವಿರುದ್ಧ, ಉತ್ತರ ಪ್ರದೇಶ 8–0ಯಿಂದ ಗೋವಾ ವಿರುದ್ಧ ಜಯ ಸಾರಧಿಸಿತು.

ದೆಹಲಿ 13–0ಯಿಂದ ಗುಜರಾತ್ ವಿರುದ್ಧ ಗೆದ್ದಿತು.

ಅಣ್ವಸ್ತ್ರ ಬಳಸಲ್ಲ: ರಷ್ಯಾ ಸ್ಪಷ್ಟನೆ

ಮಾಸ್ಕೊ (ರಾಯಿಟರ್ಸ್): ಉಕ್ರೇನ್‌ನಲ್ಲಿನ ಸೇನಾ ಕಾರ್ಯಾಚರಣೆಯಲ್ಲಿ ಅಣ್ವಸ್ತ್ರ ಬಳಕೆಯ ಸಾಧ್ಯತೆಯನ್ನು ರಷ್ಯಾ ಶುಕ್ರವಾರ ತಳ್ಳಿಹಾಕಿದೆ.

ವರದಿಗಾರರೊಂದಿಗೆ ಮಾತನಾಡಿದ ರಷ್ಯಾ ವಿದೇಶಾಂಗ ಸಚಿವಾಲಯದ ವಕ್ತಾರ ಅಲೆಕ್ಸಿ ನೈಜೆವ್ ‘ರಷ್ಯಾದಿಂದ ಅಣ್ವಸ್ತ್ರಗಳ ಬಳಕೆ ಸಾಧ್ಯತೆ ಮತ್ತು ಅದರ ಅಪಾಯದ ಬಗ್ಗೆ ಪಾಶ್ಚಾತ್ಯ ಉನ್ನತ ಅಧಿಕಾರಿಗಳ ನಡುವಿನ ಚರ್ಚೆಯು ವಿಶೇಷ ಸೇನಾ ಕಾರ್ಯಾಚರಣೆಗೆ ಅನ್ವಯಿಸುವುದಿಲ್ಲ’ ಎಂದು ಸ್ಪಷ್ಟಪಡಿಸಿದ್ದಾರೆ.

ಎರಡು ದಿನಗಳ ಹಿಂದಷ್ಟೇ ಅಣ್ವಸ್ತ್ರಗಳನ್ನು ಸಾಗಿಸುವ ಇಸ್ಕಾಂಡರ್ ಕ್ಷಿಪಣಿಗಳ ದಾಳಿಯ ಅಣಕು ಅಭ್ಯಾಸ ನಡೆಸಿರುವುದಾಗಿ ರಷ್ಯಾ ರಕ್ಷಣಾ ಸಚಿವಾಲಯ ಹೇಳಿಕೆ ನೀಡಿದ ಬೆನ್ನಲ್ಲೇ, ವಿದೇಶಾಂಗ ಸಚಿವಾಲಯದಿಂದ ಈ ಸ್ಪಷ್ಟನೆ ಹೊರಬಿದ್ದಿದೆ.

ಅಮೆರಿಕದ ಕೇಂದ್ರೀಯ ಗುಪ್ತಚರ ಸಂಸ್ಥೆ (ಸಿಐಎ) ನಿರ್ದೇಶಕ ವಿಲಿಯಂ ಬರ್ನ್ಸ್ ‘ಕಳೆದ ಏಪ್ರಿಲ್ 14ರಂದು ಉಕ್ರೇನ್‌ನಲ್ಲಿ ರಷ್ಯಾಕ್ಕೆ ಆಗಿರುವ ಹಿನ್ನಡೆಗಳನ್ನು ಗಮನಿಸಿದರೆ, ರಷ್ಯಾವು ಯುದ್ಧತಂತ್ರದ ಅಣ್ವಸ್ತ್ರಗಳು ಅಥವಾ ಕಡಿಮೆ ಪರಿಣಾಮದ ಅಣ್ವಸ್ತ್ರಗಳ ಸಂಭಾವ್ಯ ದಾಳಿಯ ಮೊರೆ ಹೋಗುವ ಬೆದರಿಕೆಯನ್ನು ನಮ್ಮಲ್ಲಿ ಯಾರೂ ಲಘುವಾಗಿ ತೆಗೆದುಕೊಳ್ಳುವುದಿಲ್ಲ’ ಎಂದು ಹೇಳಿದ್ದಾರೆ.

ವಿಜಯ ದಿನಕ್ಕಾಗಿ ಮರಿಯುಪೋಲ್ ವಶ: ‘ಮೇ 9ರ ವಿಜಯ ದಿನ’ಕ್ಕಾಗಿ ರಷ್ಯಾ, ಮರಿಯುಪೋಲ್ ಮತ್ತು ಅಲ್ಲಿನ ಬೃಹತ್ ಉಕ್ಕಿನ ಸ್ಥಾವರವನ್ನು ತೆಕ್ಕೆಗೆ ತೆಗೆದುಕೊಳ್ಳಲು ಬಯಸುತ್ತಿದೆ. ಸ್ಥಾವರದ ಮೇಲೆ ಬಾಂಬ್ ಮತ್ತು ಶೆಲ್ ದಾಳಿಯನ್ನು ರಷ್ಯಾ ಪಡೆಗಳು ಮುಂದುವರಿಸಿವೆ ಎಂದು ಬ್ರಿಟನ್ ಸೇನೆ ಶುಕ್ರವಾರ ಹೇಳಿದೆ.

ಬೃಹತ್ ಶಸ್ತ್ರಕೋಠಿ ಧ್ವಂಸ: ಉಕ್ರೇನ್‌ನ ಕ್ರಾಮರೊಸ್ಕಿಯಲ್ಲಿನ ಯುದ್ಧೋಪಕರಣಗಳ ಬೃಹತ್ ಶಸ್ತ್ರ ಕೋಠಿಯನ್ನು ಕ್ಷಿಪಣಿ ದಾಳಿಯಿಂದ ಧ್ವಂಸಗೊಳಿಸಲಾಗಿದೆ. ಪೂರ್ವ ಲುಹಾನ್‌ಸ್ಕ್‌ನಲ್ಲಿ ಉಕ್ರೇನ್‌ನ ಸುಖೊಯ್-25 ಮತ್ತು ಮಿಗ್-29 ಯುದ್ಧ ವಿಮಾನಗಳನ್ನು ಹೊಡೆದುರುಳಿಸಲಾಗಿದೆ ರಷ್ಯಾ ರಕ್ಷಣಾ ಸಚಿವಾಲಯ ತಿಳಿಸಿದೆ.

ಮುಂದುವರಿದ ಶಸ್ತ್ರಾಸ್ತ್ರ ಪೂರೈಕೆ: ಕ್ರೇನ್‌ಗೆ ಪಾಶ್ಚಾತ್ಯ ರಾಷ್ಟ್ರಗಳಿಂದ ಶಸ್ತ್ರಾಸ್ತ್ರಗಳ ಪೂರೈಕೆ ಮುಂದುವರಿದಿದ್ದು, ನೆದರ್‌ಲೆಂಡ್ ಐದುಹೊವಿಟ್ಜರ್ ಫಿರಂಗಿಗಳನ್ನು ಕೊಡುವ ವಾಗ್ದಾನ ಮಾಡಿದ ಬೆನ್ನಲ್ಲೇ, ಜರ್ಮನಿಯು ಸ್ವಯಂಚಾಲಿತ ಏಳು ಹೊವಿಟ್ಜರ್ ಫಿರಂಗಿಗಳನ್ನು ಒದಗಿಸಲಿದೆ ಎಂದು ಜರ್ಮನಿಯ ರಕ್ಷಣಾ ಸಚಿವ ಕ್ರಿಸ್ಟೀನ್ ಲ್ಯಾಂಬ್ರೆಕ್ಟ್ ಶುಕ್ರವಾರ ಹೇಳಿದ್ದಾರೆ.

‘ಭಾರತ ಶಾಂತಿ ಪರ, ಗೆಲುವಿನ ಕಡೆಗಲ್ಲ’

ವಿಶ್ವಸಂಸ್ಥೆ (ಪಿಟಿಐ): ‘ರಷ್ಯಾ-ಉಕ್ರೇನ್ ಸಂಘರ್ಷದಲ್ಲಿ ನಾವು ವಿಜಯದ ಕಡೆಗೆ ಇರುವುದಿಲ್ಲ’ ಎಂದು ಭಾರತ ವಿಶ್ವಸಂಸ್ಥೆಯ ಭದ್ರತಾ ಮಂಡಳಿಯಲ್ಲಿ ಪ್ರತಿಪಾದಿಸಿದೆ.

ಭದ್ರತಾ ಮಂಡಳಿಯಲ್ಲಿ ಗುರುವಾರ ಮಾತನಾಡಿದ ಭಾರತದ ಕಾಯಂ ಪ್ರತಿನಿಧಿ ಟಿ.ಎಸ್. ತಿರುಮೂರ್ತಿ, ‘ಭಾರತವು ಶಾಂತಿಯ ಕಡೆಗಿದೆ. ಈ ಸಂಘರ್ಷದಲ್ಲಿ ವಿಜಯದ ಭಾಗವಾಗುವುದಿಲ್ಲ. ಭಾರತವು ಯುದ್ಧ ನಿಲ್ಲಿಸಲು ಮತ್ತು ಮಾತುಕತೆ ಹಾಗೂ ರಾಜತಾಂತ್ರಿಕತೆ ಮಾರ್ಗ ಅನುಸರಿಸಲು ಆರಂಭದಿಂದಲೂ ನಿರಂತರ ಕರೆ ನೀಡುತ್ತಿದೆ’ ಎಂದು ಪುನರುಚ್ಚರಿಸಿದರು.

ನಿರ್ಣಯ: ಉಕ್ರೇನ್–ರಷ್ಯಾ ನಡುವಣ ಯುದ್ಧಕ್ಕೆ ಶಾಂತಿಯುತ ಪರಿಹಾರ ಕಂಡುಕೊಳ್ಳಬೇಕು ಎಂಬ ನಿರ್ಣಯವನ್ನು ವಿಶ್ವಸಂಸ್ಥೆಯ ಭದ್ರತಾ ಮಂಡಳಿಯ ಸರ್ವಾನುಮತದಿಂದ ಶುಕ್ರವಾರ ತೆಗೆದುಕೊಂಡಿದೆ.

ಕೋವಿಡ್‌ನಿಂದಾಗಿ ಸಾವು: ಡಬ್ಲ್ಯುಎಚ್‌ಒ ವರದಿಗೆ ಆಕ್ಷೇಪ

ಕೇವಡಿಯಾ, ಗುಜರಾತ್ (ಪಿಟಿಐ): ಕೋವಿಡ್‌ನಿಂದಾಗಿ ಭಾರತದಲ್ಲಿ 2020–21ರಲ್ಲಿ 47 ಲಕ್ಷ ಮಂದಿ ಸಾವನ್ನಪ್ಪಿದ್ದಾರೆ ಎಂಬುದಾಗಿ ವಿಶ್ವ ಆರೋಗ್ಯ ಸಂಸ್ಥೆಯ (ಡಬ್ಲ್ಯುಎಚ್‌ಒ) ವರದಿ ಬಗ್ಗೆ ಇಲ್ಲಿ ನಡೆಯುತ್ತಿರುವ ‘ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಕೇಂದ್ರೀಯ ಮಂಡಳಿ’ಯ (ಸಿಸಿಎಚ್‌ಎಫ್‌ಡಬ್ಲ್ಯು) 14ನೇ ಸಮಾವೇಶದಲ್ಲಿ ಭಾರಿ ಆಕ್ಷೇಪ ವ್ಯಕ್ತವಾಯಿತು. ಸಮಾವೇಶವನ್ನು ಉದ್ದೇಶಿಸಿ ಮಾತನಾಡಿದ ಪ್ರಮುಖರು ಈ ವರದಿ ಆಧಾರ ರಹಿತ ಎಂದು ಟೀಕಿಸಿ ರುವುದಾಗಿ ಮೂಲಗಳು ಹೇಳಿವೆ. ಕೋವಿಡ್‌ನಿಂದಾಗಿ ವಿಶ್ವದಲ್ಲಿ ಮೃತಪಟ್ಟವರ ಕುರಿತ ವರದಿಯನ್ನು ಡಬ್ಲ್ಯುಎಚ್‌ಒ ಗುರುವಾರ ಬಿಡುಗಡೆ ಮಾಡಿತ್ತು. ಈ ವರದಿಗೆ ಭಾರತ ಆಕ್ಷೇಪ ವ್ಯಕ್ತಪಡಿಸಿತ್ತು.

ಸಂಕ್ಷಿಪ್ತ ಸುದ್ದಿ

ಭಾರತದ ಪರ್ವತಾರೋಹಿ ನಿಧನ

ಕಠ್ಮಂಡು (ಎಎಫ್‌ಪಿ): ನೇಪಾಳದ ಕಾಂಚನ್‌ಜುಂಗಾ ಪರ್ವತವನ್ನು ಏರುವ ವೇಳೆ, 26,900 ಅಡಿ ಎತ್ತರದಲ್ಲಿ ಭಾರತ ಮೂಲದ ನಾರಾಯಣ ಅಯ್ಯರ್ (52) ಎಂಬುವವರು ಮೃತಪಟ್ಟಿದ್ದಾರೆ.

ಈ ಕುರಿತು ಮಾಹಿತಿ ನೀಡಿದ ಪರ್ವಾತಾರೋಹಣ ಆಯೋಜಕ ಸಂಸ್ಥೆಯ ಪ್ರವರ್ತಕ ನಿವೇಶ್ ಕರ್ಕಿ, ‘ಅಯ್ಯರ್ ಅವರು ನಿಧಾನವಾಗಿ ಪರ್ವತವನ್ನು ಏರುತ್ತಿದ್ದರು. ಅವರ ನೆರವಿಗೆಂದು ಇಬ್ಬರು ಮಾರ್ಗದರ್ಶಕರನ್ನು ನೇಮಿಸಲಾಗಿತ್ತು. ಅವರು ತುಂಬಾ ದಣಿದಿದ್ದರಿಂದ ಪರ್ವತವನ್ನು ಏರಲಾಗದೇ ಕುಸಿದು ಬಿದ್ದರು’ ಎಂದು ಹೇಳಿದರು.

‘ಅಯ್ಯರ್ ಅವರ ಕುಟುಂಬಕ್ಕೆ ಅವರ ಸಾವಿನ ವಿಷಯ ತಿಳಿಸಲಾಗಿದ್ದು, ಅವರ ಮೃತ ದೇಹ ಪಡೆಯಲು ಎಲ್ಲ ತಯಾರಿ ಮಾಡಿಕೊಳ್ಳಲಾಗುತ್ತಿದೆ’ ಎಂದು ಕರ್ಕಿ ಅವರು ತಿಳಿಸಿದರು.

ನೇಪಾಳವು ಕಾಂಚನ್‌ಜುಂಗಾ ಪರ್ವತಾರೋಹಣಕ್ಕೆ ಈ ವರ್ಷ ಒಟ್ಟು 68 ಪ್ರವಾಸಿಗರಿಗೆ ಅನುಮತಿ ನೀಡಿದ್ದು, ಪರ್ವತಾರೋಹಣದ ವೇಳೆ ಸಾವನ್ನಪ್ಪಿದವರಲ್ಲಿ ಅಯ್ಯರ್ ಮೂರನೆಯವರಾಗಿದ್ದಾರೆ.

ಹಿಜ್ಬುಲ್ ಕಮಾಂಡರ್ ಸೇರಿ ಮೂವರು ಉಗ್ರರ ಹತ್ಯೆ

ಶ್ರೀನಗರ: ದಕ್ಷಿಣ ಕಾಶ್ಮೀರದ ಅನಂತನಾಗ್ ಜಿಲ್ಲೆಯಲ್ಲಿ ಶುಕ್ರವಾರ ಭದ್ರತಾ ಪಡೆಗಳು ಹಾಗೂ ಉಗ್ರರ ನಡುವಿನ ಗುಂಡಿನ ಚಕಮಕಿಯಲ್ಲಿ ಹಿಜ್ಬುಲ್-ಮುಜಾಹಿದ್ದೀನ್(ಎಚ್‌ಎಂ) ಸಂಘಟನೆಯ ಅತ್ಯುನ್ನತ ಕಮಾಂಡರ್ ಸೇರಿ ಮೂವರು ಉಗ್ರರು ಹತರಾಗಿದ್ದಾರೆ.

ಹಿಜ್ಬುಲ್ ಮುಜಾಹಿದ್ದೀನ್ ಕಮಾಂಡರ್ ಮೊಹಮ್ಮದ್ ಅಶ್ರಫ್ ಖಾನ್ ಅಲಿಯಾಸ್ ಮೌಲ್ವಿ (57), ಸ್ಥಳೀಯ ಉಗ್ರರಾದ ರೋಷನ್ ಜಮೀರ್ ಹಾಗೂ ರಫಿಕ್ ಅಹ್ಮದ್ ಹತ್ಯೆಯಾದವರು.

ಬ್ರಿಟನ್: ಸ್ಥಳೀಯ ಚುನಾವಣೆ, ಆಡಳಿತ ಪಕ್ಷಕ್ಕೆ ಹಿನ್ನಡೆ

ಲಂಡನ್ (ಪಿಟಿಐ): ಬ್ರಿಟನ್‌ನ ಸ್ಥಳೀಯ ಸಂಸ್ಥೆಗಳಿಗೆ ನಡೆದಿದ್ದ ಚುನಾವಣೆಯ ಆರಂಭಿಕ ಫಲಿತಾಂಶದ ಪ್ರಕಾರ, ಪ್ರಧಾನಿ ಬೋರಿಸ್ ಜಾನ್ಸನ್ ನೇತೃತ್ವದ ಕನ್ಸರ್‌ವೇಟಿವ್ ಪಕ್ಷಕ್ಕೆ ಹಿನ್ನಡೆಯಾಗಿದೆ.

ಕೆಲ ಪ್ರಮುಖ ಕ್ಷೇತ್ರಗಳನ್ನೂ ಸೇರಿದಂತೆ ಪ್ರತಿಪಕ್ಷ ಲೇಬರ್ ಪಾರ್ಟಿ ಮುನ್ನಡೆ ಸಾಧಿಸಿದೆ.

‘ದೇಶದ್ರೋಹ ಪ್ರಕರಣ ದಾಖಲಿಸಲು ಆಧಾರ ಇಲ್ಲ’

ಮುಂಬೈ(ಪಿಟಿಐ): ‘ ಪಕ್ಷೇತರ ಸಂಸದೆ ನವನೀತ್ ಕೌರ್ ಮತ್ತು ಅವರ ಪತಿ, ಶಾಸಕ ರವಿ ರಾಣಾ ಅವರು ವಾಕ್ ಸ್ವಾತಂತ್ರ್ಯದ ಗೆರೆಯನ್ನು ದಾಟಿದ್ದಾರೆ ಎಂಬುದರಲ್ಲಿ ಯಾವುದೇ ಅನುಮಾನವಿಲ್ಲ. ಆದರೆ, ಅವಹೇಳನಕಾರಿ ಮತ್ತು ಆಕ್ಷೇಪಾರ್ಹ ಹೇಳಿಕೆಗಳ ಆಧಾರದ ಮೇಲೆ ಅವರ ವಿರುದ್ಧ ದೇಶದ್ರೋಹದ ಪ್ರಕರಣ ದಾಖಲಿಸಲು ಆಗುವುದಿಲ್ಲ' ಎಂದು ದಂಪತಿಗೆ ಜಾಮೀನು ನೀಡಿದ ಸಂದರ್ಭದಲ್ಲಿ ವಿಶೇಷ ನ್ಯಾಯಾಲಯ ಹೇಳಿದೆ.ದೇಶದ್ರೋಹದ ಪ್ರಕರಣದಲ್ಲಿ ಒಂದು ವಾರಕ್ಕಿಂತ ಹೆಚ್ಚು ಕಾಲ ಸೆರೆವಾಸದಲ್ಲಿದ್ದ ನವನೀತ್ ಕೌರ್ ಮತ್ತು ಅವರ ಪತಿ ರವಿ ರಾಣಾ ಅವರಿಗೆ ಬುಧವಾರ ಜಾಮೀನು ದೊರಕಿತ್ತು. ಈ ಜಾಮೀನಿನ ಆದೇಶದ ಸಾರಾಂಶವು ಶುಕ್ರವಾರ ಬಿಡುಗಡೆಯಾಗಿದೆ.

ದೆಹಲಿ: ಬೆಳಿಗ್ಗೆ 3ರವರೆಗೂ ಮದ್ಯ ಮಾರಾಟ

ನವದೆಹಲಿ (ಪಿಟಿಐ): ರಾಷ್ಟ್ರ ರಾಜಧಾನಿ ದೆಹಲಿಯಲ್ಲಿ ಬೆಳಗಿನ ಜಾವ 3 ಗಂಟೆಯವರೆಗೂ ಮದ್ಯ ಮಾರಾಟಕ್ಕೆ ಬಾರ್ ಮತ್ತು ರೆಸ್ಟೋರೆಂಟ್‌ಗಳಿಗೆ ಅವಕಾಶವನ್ನು ಕಲ್ಪಿಸುವ ನಿಟ್ಟಿನಲ್ಲಿ ದೆಹಲಿ ಸರ್ಕಾರ ತೀರ್ಮಾನಿಸಿದೆ.

ಈ ಸಂಬಂಧ ಅಬಕಾರಿ ಇಲಾಖೆಗೆ ಸರ್ಕಾರ ಅಗತ್ಯ ಸೂಚನೆ ನೀಡಿದೆ.

ಕಾಂಗ್ರೆಸ್‌ನಿಂದ ವಾಗ್ದಾಳಿ

ನವದೆಹಲಿ: ಕೋವಿಡ್‌ನಿಂದಾಗಿ 2020–21ನೇ ಸಾಲಿನಲ್ಲಿ ಭಾರತದಲ್ಲಿ ಸಂಭವಿಸಿರುವ ಸಾವುಗಳ ಕುರಿತು ವಿಶ್ವ ಆರೋಗ್ಯ ಸಂಸ್ಥೆ ಬಿಡುಗಡೆ ಮಾಡಿರುವ ವರದಿಯ ಹಿನ್ನೆಲೆಯಲ್ಲಿ, ಕಾಂಗ್ರೆಸ್ ಪಕ್ಷ ಕೇಂದ್ರ ಸರ್ಕಾರದ ವಿರುದ್ಧ ಶುಕ್ರವಾರ ವಾಗ್ದಾಳಿ ನಡೆಸಿದೆ.

‘ಕೋವಿಡ್‌ನಿಂದಾಗಿ ದೇಶದಲ್ಲಿ ಸಂಭವಿಸಿರುವ ಸಾವುಗಳ ನಿಖರ ಮಾಹಿತಿ ಕಲೆ ಹಾಕಲು ಎಲ್ಲ ಪಕ್ಷಗಳ ಸದಸ್ಯರನ್ನು ಒಳಗೊಂಡ ಸಮಿತಿಯೊಂದನ್ನು ರಚಿಸಬೇಕು’ ಎಂದು ಕಾಂಗ್ರೆಸ್‌ನ ಹಲವು ಮುಖಂಡರು ಆಗ್ರಹಿಸಿದ್ದಾರೆ. ‘ಸಂತ್ರಸ್ತರ ಕುಟುಂಬಗಳಿಗೆ ₹ 4 ಲಕ್ಷ ಪರಿಹಾರ ನೀಡಬೇಕು’ ಎಂದೂ ಒತ್ತಾಯಿಸಿದ್ದಾರೆ. ‘ಕೋವಿಡ್‌ನಿಂದಾಗಿ 47 ಲಕ್ಷ ಭಾರತೀಯರು ಮೃತಪಟ್ಟಿದ್ದಾರೆ. ಕೇಂದ್ರ ಸರ್ಕಾರ ಹೇಳಿರುವಂತೆ 4.8 ಲಕ್ಷ ಮಂದಿಯಲ್ಲ. ಮೋದಿ ಸುಳ್ಳು ಹೇಳಬಹುದು, ವಿಜ್ಞಾನ ಸುಳ್ಳು ಹೇಳುವುದಿಲ್ಲ’ ಎಂದು ರಾಹುಲ್ ಗಾಂಧಿ ಟ್ವೀಟ್ ಮಾಡಿದ್ದಾರೆ.

ಸೃಜನಾತ್ಮಕ ದೃಶ್ಯೀಕರಣ. ಹಾರ್ಲಿಕ್ಸ್ ದೈನಂದಿನ ಆಹಾರದ ಭಾಗವಾಗಿ ಸೇವಿಸಬೇಕಾದ ಪೌಷ್ಟಿಕ ಪಾನೀಯವಾಗಿದೆ.

ಏಷ್ಯನ್ ಗೇಮ್ಸ್ ಮುಂದೂಡಿಕೆಗೆ ಸಂತಸ

ಅಥ್ಲೀಟ್ಸ್, ಫೆಡರೇಷನ್ ಅಧಿಕಾರಿಗಳಿಂದ ಸ್ವಾಗತ; ಸಾಮರ್ಥ್ಯ ವೃದ್ಧಿಯ ಭರವಸೆ

ಏಷ್ಯನ್ ಗೇಮ್ಸ್‌ಗೆ ಸಿದ್ಧಗೊಂಡಿರುವ ಅಥ್ಲೆಟಿಕ್ ಕ್ರೀಡಾಂಗಣ –ಎಎಫ್‌ಪಿ ಚಿತ್ರ

ನವದೆಹಲಿ (ಪಿಟಿಐ): ಈ ವರ್ಷ ನಡೆಯಬೇಕಾಗಿದ್ದ ಏಷ್ಯನ್ ಗೇಮ್ಸ್ ಮುಂದೂಡಿರುವುದಕ್ಕೆ ಭಾರತದ ಟ್ರ್ಯಾಕ್ ಮತ್ತು ಫೀಲ್ಡ್ ಅಥ್ಲೀಟ್ಸ್ ಹಾಗೂ ಭಾರತ ಅಥ್ಲೆಟಿಕ್ ಫೆಡರೇಷನ್ ಅಧಿಕಾರಿಗಳು ಸಂತಸ ವ್ಯಕ್ತಪಡಿಸಿದ್ದಾರೆ.

ಸೆಪ್ಟೆಂಬರ್ 10ರಿಂದ 25ರ ವರೆಗೆ ಚೀನಾದ ಹಾಂಗ್ಜುವಿನಲ್ಲಿ ಏಷ್ಯನ್ ಗೇಮ್ಸ್ ಆಯೋಜಿಸಲು ನಿರ್ಧರಿಸಲಾಗಿತ್ತು. ಆದರೆ ಚೀನಾದಲ್ಲಿ ಕೋವಿಡ್ ಪ್ರಕರಣಗಳು ಏರುಗತಿಯಲ್ಲಿ ಸಾಗುತ್ತಿರುವ ಕಾರಣ ಕ್ರೀಡಾಕೂಟವನ್ನು ಅನಿರ್ದಿಷ್ಟ ಅವಧಿಗೆ ಮುಂದೂಡಲು ಏಷ್ಯಾ ಒಲಿಂಪಿಕ್ ಸಮಿತಿ ಶುಕ್ರವಾರ ನಿರ್ಧರಿಸಿತ್ತು. ಮುಂದೂಡಿಕೆಯಿಂದಾಗಿ ಅಭ್ಯಾಸಕ್ಕೆ ಹೆಚ್ಚು ಕಾಲಾವಕಾಶ ಸಿಗಲಿದ್ದು ಇದು ಸಾಮರ್ಥ್ಯ ವೃದ್ಧಿಸಲು ನೆರವಾಗಲಿದೆ ಎಂದು ಕ್ರೀಡಾಪಟುಗಳು ಮತ್ತು ಅಧಿಕಾರಿಗಳು ಅಭಿಪ್ರಾಯಪಟ್ಟಿದ್ದಾರೆ.

ಈ ವರ್ಷದ ಡಿಸೆಂಬರ್ 20ರಿಂದ ಚೀನಾದಲ್ಲಿ ನಿಗದಿಯಾಗಿದ್ದ ಏಷ್ಯನ್ ಯೂತ್ ಗೇಮ್ಸ್‌ಅನ್ನು ರದ್ದುಗೊಳಿಸಲಾಗಿದೆ. ಈ ಕ್ರೀಡಾಕೂಟವು 2025ಕ್ಕೆ ತಾಷ್ಕೆಂಟ್‌ನಲ್ಲಿ ನಡೆಯಲಿದೆ.

ಈ ವರ್ಷ ಪ್ರಮುಖ ಮೂರು ಕ್ರೀಡಾಕೂಟಗಳಲ್ಲಿ ಭಾಗವಹಿಸುವ ಸವಾಲು ಅಥ್ಲೀಟ್‌ಗಳಲ್ಲಿ ಇತ್ತು. ಜುಲೈ 15ರಿಂದ 24ರ ವರೆಗೆ ಅಮೆರಿಕದ ಯೂಜಿನ್‌ನಲ್ಲಿ ವಿಶ್ವ ಅಥ್ಲೆಟಿಕ್ ಚಾಂಪಿಯನ್‌ಷಿಪ್, ಜುಲೈ 28ರಿಂದ ಆಗಸ್ಟ್ 8ರ ವರೆಗೆ ಬರ್ಮಿಂಗ್‌ಹ್ಯಾಂನಲ್ಲಿ ಕಾಮನ್‌ವೆಲ್ತ್ ಗೇಮ್ಸ್, ಸೆಪ್ಟೆಂಬರ್‌ನಲ್ಲಿ ಏಷ್ಯನ್ ಗೇಮ್ಸ್‌ಗೆ ದಿನಾಂಕಗಳು ನಿಗದಿಯಾಗಿದ್ದವು. ಇದು ಟ್ರ್ಯಾಕ್ ಮತ್ತು ಫೀಲ್ಡ್ ಅಥ್ಲೀಟ್‌ಗಳಿಗೆ ಸವಾಲಾಗಿತ್ತು. ಏಷ್ಯನ್ ಗೇಮ್ಸ್ ಮುಂದೂಡಿರುವುದರಿಂದ ಅವರ ಮೇಲಿನ ಭಾರ ಕಡಿಮೆಯಾದಂತಾಗಿದೆ.

‘ಒಂದು ವರ್ಷದಲ್ಲಿ ಒಬ್ಬ ಅಥ್ಲೀಟ್ ಹಲವು ಬಾರಿ ಗರಿಷ್ಠ ಸಾಧನೆ ತೋರಲು ಸಾಧ್ಯವಿಲ್ಲ. ಮೂರು ಕೂಟಗಳು ಜೊತೆಜೊತೆಯಾಗಿ ಬಂದರೆ ಕ್ರೀಡಾಪಟುಗಳ ಸಾಮರ್ಥ್ಯದ ಮೇಲೆ ದುಷ್ಪರಿಣಾಮ ಬೀರಬಹುದು. ಆದ್ದರಿಂದ ಏಷ್ಯನ್ ಗೇಮ್ಸ್ ಮುಂದೂಡಿರುವುದು ಒಳ್ಳೆಯ ಬೆಳವಣಿಗೆ’ ಎಂದು ಭಾರತ ಅಥ್ಲೆಟಿಕ್ ಫೆಡರೇಷನ್ ಅಧ್ಯಕ್ಷ ಆದಿಲ್ ಸುಮರಿವಾಲ ಅಭಿಪ್ರಾಯಪಟ್ಟಿದ್ದಾರೆ.

ಏಷ್ಯನ್ ಗೇಮ್ಸ್‌ನ ಅಥ್ಲೆಟಿಕ್ಸ್‌ನಲ್ಲಿ ಭಾರತಕ್ಕೆ ಈ ವರೆಗೆ ಹೆಚ್ಚು ಪದಕಗಳು ಬಂದಿವೆ. ಭಾರತ ಒಟ್ಟಾರೆ ಗಳಿಸಿರುವ 672 ಪದಕಗಳ ಪೈಕಿ 254 ಪದಕಗಳು ಟ್ರ್ಯಾಕ್ ಮತ್ತು ಫೀಲ್ಡ್ ಸ್ಪರ್ಧೆಗಳಲ್ಲಿ ಲಭಿಸಿವೆ. ಇಂಡೊನೇಷ್ಯಾದಲ್ಲಿ 2018ರಲ್ಲಿ ನಡೆದಿದ್ದ ಕೂಟದಲ್ಲಿ ದೇಶಕ್ಕೆ ಒಟ್ಟು 70 ಪದಕಗಳು ಬಂದಿದ್ದವು. ಈ ಪೈಕಿ 20 ಅಥ್ಲೆಟಿಕ್ಸ್‌ನ ಕೊಡುಗೆ ಯಾಗಿತ್ತು. 8 ಚಿನ್ನ, 9 ಬೆಳ್ಳಿ ಮತ್ತು 3 ಕಂಚಿನ ಪದಕಗಳು ಆ ವರ್ಷ ಬಂದಿದ್ದವು.

‘ಅಥ್ಲೀಟ್‌ಗಳು ಏಷ್ಯನ್ ಗೇಮ್ಸ್‌ಗೆ ಸಜ್ಜಾಗಿದ್ದರು. ಆದರೂ ಕೂಟ ಮುಂದೂಡಿರುವುದರಿಂದ ಅವರ ಒತ್ತಡ ಕಡಿಮೆಯಾಗಿದೆ’ ಎಂದು ಭಾರತದ ಮುಖ್ಯ ಕೋಚ್ ರಾಧಾ ಕೃಷ್ಣನ್ ನಾಯರ್ ಹೇಳಿದರು. ಲಾಂಗ್ ಜಂಪ್ ಅಥ್ಲೀಟ್ ಎಂ.ಶ್ರೀಶಂಕರ್ ಕೂಡ ಇದೇ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ. ‘ಈಗ, ಕಾಮನ್‌ವೆಲ್ತ್ ಗೇಮ್ಸ್ ಮತ್ತು ವಿಶ್ವ ಚಾಂಪಿಯನ್‌ಷಿಪ್‌ಗೆ ಒತ್ತು ನೀಡಲು ಪ್ರಯತ್ನಿಸಬಹುದು’ ಎಂದು ಅವರು ಹೇಳಿದ್ದಾರೆ.

ಐಒಎ ಅಸಮಾಧಾನ

ಗೇಮ್ಸ್ ಮುಂದೂಡುವ ಏಷ್ಯಾ ಒಲಿಂಪಿಕ್ಸ್ ಸಮಿತಿಯ ನಿರ್ಧಾರಕ್ಕೆ ಭಾರತ ಒಲಿಂಪಿಕ್ಸ್ ಸಂಸ್ಥೆ ಅಸಮಾಧಾನ ವ್ಯಕ್ತಪಡಿಸಿದೆ. ‘ಯಾವುದೇ ಪ್ರಮುಖ ಕೂಟವು ಮುಂದೂಡಿಕೆಯಾದಾಗ ಅಥ್ಲೀಟ್‌ಗಳಿಗೆ ನಿರಾಸೆಯಾಗುತ್ತದೆ. ಅವರ ವಯಸ್ಸು ವರ್ಷ ಅಥವಾ ಕೆಲವು ತಿಂಗಳುಗಳಷ್ಟು ಹೆಚ್ಚಾಗುತ್ತದೆ’ ಎಂದು ಐಒಎ ಪ್ರಧಾನ ಕಾರ್ಯದರ್ಶಿ ರಾಜೀವ್ ಮೆಹ್ತಾ ಹೇಳಿದ್ದಾರೆ.

ಸ್ಕ್ವಾಷ್: ಸೌರವ್‌ಗೆ ಮಣಿದ ಯೂಸೆಫ್

ನ್ಯೂಯಾರ್ಕ್ (ಪಿಟಿಐ): ವೃತ್ತಿಪರ ಸ್ಕ್ವಾಷ್ ಟೂರ್‌ನಲ್ಲಿ ಭಾರತದ ಸೌರವ್ ಘೋಷಾಲ್ ಅಮೋಘ ಸಾಧನೆ ಮಾಡಿದ್ದಾರೆ. ಟೂರ್ನಮೆಂಟ್ ಆಫ್ ಚಾಂಪಿಯನ್ಸ್‌ನಲ್ಲಿ ಅವರು ತಮಗಿಂತ ಹೆಚ್ಚಿನ ರ‍್ಯಾಂಕಿಂಗ್ ಹೊಂದಿರುವ ಈಜಿಪ್ಟ್‌ನ ಯೂಸೆಫ್ ಇಬ್ರಾಹಿಂ ವಿರುದ್ಧದ ಪಂದ್ಯದಲ್ಲಿ ಅವರು ಭರ್ಜರಿ ಜಯ ಗಳಿಸಿದರು.

ಈ ಮೂಲಕ ಟೂರ್‌ನ ಸೆಮಿಫೈನಲ್ ಪ್ರವೇಶಿಸಿದ ಅವರು 3 ವರ್ಷಗಳಲ್ಲಿ ವೈಯಕ್ತಿಕ ಗರಿಷ್ಠ ಸಾಧನೆ ಮಾಡಿದರು. ವಿಶ್ವ ಕ್ರಮಾಂಕದಲ್ಲಿ 17ನೇ ಸ್ಥಾನದಲ್ಲಿರುವ ಸೌರವ್ ಉತ್ತಮ ಆರಂಭ ಕಂಡಿದ್ದರು. ನಂತರ ಎದುರಾಳಿ ಆಧಿಪತ್ಯ ಸ್ಥಾಪಿಸಿದರು. ಆದರೆ ತಿರುಗೇಟು ನೀಡಿದ ಸೌರವ್ 11-8, 7-11, 9-11, 11-6, 11-9ರಲ್ಲಿ ಪಂದ್ಯ ಗೆದ್ದುಕೊಂಡರು.

ಗ್ರ್ಯಾಂಡ್ ಸೆಂಟ್ರಲ್ ಟರ್ಮಿನಲ್‌ನಲ್ಲಿ ನಡೆದ ಹಣಾಹಣಿಯಲ್ಲಿ ವಯಸ್ಸಿನಲ್ಲಿ ತಮಗಿಂತ ಸಣ್ಣವರಾಗಿರುವ ಯೂಸೆಫ್ ಇಬ್ರಾಹಿಂ ಎದುರು ತಮ್ಮೆಲ್ಲ ಸಾಮರ್ಥ್ಯವನ್ನು ಹೊರಗೆಡವಿದರು. ನಾಲ್ಕರ ಘಟ್ಟದಲ್ಲಿ ಅವರು ಮೂರನೇ ಶ್ರೇಯಾಂಕದ ಪೆರು ಆಟಗಾರ ಡೀಗೊ ಎಲಿಯಾಸ್ ವಿರುದ್ಧ ಸೆಣಸಲಿದ್ದಾರೆ.

‘ಇದು ಅತ್ಯಂತ ಖುಷಿ ನೀಡಿದ ಜಯವಾಗಿದೆ. ಈ ದಿನವನ್ನು ಮರೆಯಲು ಸಾಧ್ಯವಿಲ್ಲ’ ಎಂದು ಘೋಷಾಲ್ ಹೇಳಿರುವುದಾಗಿ ವೃತ್ತಿಪರ ಸ್ಕ್ವ್ಯಾಷ್ ಸಂಸ್ಥೆ (ಪಿಎಸ್ಎ) ತಿಳಿಸಿದೆ.

ಸ್ಕೇಟಿಂಗ್: ಸಿದ್ಧಾರ್ಥ್, ಏಕಾಂಶ್ ಮಿಂಚು

ಏಕಾಂಶ್ ಕುಮಾರ್

ಸಿದ್ಧಾರ್ಥ್ ಜಯಕುಮಾರ್

ಬೆಂಗಳೂರು: ಕರ್ನಾಟಕದ ಸಿದ್ಧಾರ್ಥ್ ಜಯ ಕುಮಾರ್ ಮತ್ತು ಏಕಾಂಶ್ ಕುಮಾರ್ ಅವರು ಮೊಹಾಲಿಯಲ್ಲಿ ಇತ್ತೀಚೆಗೆ ನಡೆದ ರಾಷ್ಟ್ರಮಟ್ಟದ ರೋಲರ್ ಸ್ಕೇಟಿಂಗ್ ಗೇಮ್ಸ್‌ನಲ್ಲಿ ತಲಾ ಮೂರು ಮತ್ತು ಎರಡು ಚಿನ್ನದ ಪದಕಗಳನ್ನು ಗೆದ್ದುಕೊಂಡಿದ್ದಾರೆ.

ಸಿದ್ಧಾರ್ಥ್ ಸಹೋದರ ಚಿನ್ಮಯ್ ಒಂದು ಬೆಳ್ಳಿ ಪದಕ ಗೆದ್ದುಕೊಂಡಿದ್ದಾರೆ. ಸಿದ್ಧಾರ್ಥ್ ಮತ್ತು ಚಿನ್ಮಯ್ ಅವರು ರಾಘವೇಂದ್ರ ಮತ್ತು ಆನಂದ್ ಅವರಲ್ಲಿ ತರಬೇತಿ ಪಡೆಯುತ್ತಿದ್ದಾರೆ.

ಎರಡು ಚಿನ್ನ ಮತ್ತು ಒಂದು ಕಂಚು ಜಯಿಸಿರುವ ಏಕಾಂಶ್ ಬೆಂಗಳೂರಿನ ಹೊಸಕೆರೆಹಳ್ಳಿಯ ನವೀನ್ ಕುಮಾರ್ ಮತ್ತು ಸೌಮ್ಯಾ ಅವರ ಪುತ್ರ. ಏಕಾಂಶ್, ಪ್ರತೀಕ್ ರಾಜ ಬಳಿ ತರಬೇತಿ ಪಡೆಯುತ್ತಿದ್ದಾರೆ.



ಮೊದಲ ಬಾರಿಗೆ ಕ್ಯಾನೆ ಫಿಲ್ಮ್ ಮಾರುಕಟ್ಟೆಯಲ್ಲಿ ಗೌರವಯುತ ದೇಶವಾಗಿ ಭಾರತ ಆಯ್ಕೆಯಾಗಿದೆ!

ಟೇಕ್ವಾಂಡೊ: ಪದಾಧಿಕಾರಿಗಳ ಆಯ್ಕೆಗೆ ಫೆಡರೇಷನ್‌ಗೆ ಸೂಚನೆ

ನವದೆಹಲಿ: ಟೇಕ್ವಾಂಡೊ ಫೆಡರೇಷನ್‌ನ ಕಾರ್ಯಕಾರಿ ಸಮಿತಿ ಪದಾಧಿಕಾರಿಗಳ ಆಯ್ಕೆಗೆ ಚುನಾವಣೆ ನಡೆಸುವಂತೆ ದೆಹಲಿ ಹೈಕೋರ್ಟ್ ಶುಕ್ರವಾರ ಸೂಚನೆ ನೀಡಿದೆ. ರಾಷ್ಟ್ರೀಯ ಕ್ರೀಡಾ ಫೆಡರೇಷನ್‌ಗೆ ಟೇಕ್ವಾಂಡೊ ಸಂಸ್ಥೆಯನ್ನು ಸೇರಿಸಲು ಸೂಕ್ತ ಕ್ರಮ ಕೈಗೊಳ್ಳುವಂತೆ ಕೇಂದ್ರ ಸರ್ಕಾರಕ್ಕೆ ನ್ಯಾಯಾಲಯ ಸೂಚಿಸಿದೆ.

ಟೇಕ್ವಾಂಡೊ ಫೆಡರೇಷನ್ ಚುನಾವಣೆ ನಡೆಸುವುದಕ್ಕೆ ಸಂಬಂಧಿಸಿ ಆಯುಕ್ತ ಮತ್ತು ಚುನಾವಣಾಧಿಕಾರಿಯನ್ನಾಗಿ ನಿವೃತ್ತ ನ್ಯಾಯಮೂರ್ತಿಯೊಬ್ಬರನ್ನು ಈಚೆಗೆ ನೇಮಕ ಮಾಡಲಾಗಿತ್ತು. ಅವರ ಸಮಕ್ಷಮದಲ್ಲಿ, ಇಬ್ಬರು ಟೇಕ್ವಾಂಡೊ ಆಟಗಾರರ ಅರ್ಜಿಯ ವಿಚಾರಣೆಯನ್ನು ನ್ಯಾಯಮೂರ್ತಿ ರೇಕಾ ಪಳ್ಳಿ ನಡೆಸಿದ್ದರು.

ಟೇಕ್ವಾಂಡೊಗೆ ಸೂಕ್ತ ಫೆಡರೇಷನ್ ಇಲ್ಲ. ಇದರಿಂದಾಗಿ ಕ್ರೀಡಾಪಟುಗಳು ತೊಂದರೆಗೆ ಒಳಗಾಗಿದ್ದಾರೆ. ಅಂತರರಾಷ್ಟ್ರೀಯ ಮಟ್ಟದ ಟೂರ್ನಿಗಳಲ್ಲಿ ದೇಶವನ್ನು ಪ್ರತಿನಿಧಿಸಲು ಅವರಿಗೆ ಸಾಧ್ಯವಾಗುತ್ತಿಲ್ಲ. ಆದ್ದರಿಂದ ಎರಡು ತಿಂಗಳ ಒಳಗೆ ಚುನಾವಣೆ ನಡೆಸಬೇಕು ಎಂದು ಅವರು ನಿರ್ದೇಶನ ನೀಡಿದರು.

ಬೆಂಗಳೂರಿನಲ್ಲಿ ಶುಕ್ರವಾರ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಟಿಸಿಎಸ್ ಬೆಂಗಳೂರು ವಿಶ್ವ 10ಕೆ ಸ್ಪರ್ಧೆಯ ಟೀಶರ್ಟ್ ಮತ್ತು ಕೌಂಟ್‌ಡೌನ್ ಗಡಿಯಾರವನ್ನು ಅನಾವರಣಗೊಳಿಸಲಾಯಿತು. ಈ ಸಂದರ್ಭದಲ್ಲಿ (ಎಡದಿಂದ) ಸೀಕೊ ಇಂಡಿಯಾದ ಮಾರ್ಕೆಟಿಂಗ್ ಮುಖ್ಯಸ್ಥ ರಾಜೇಶ್ ಪಟೇಲ್, ಟಿಸಿಎಸ್‌ನ ರಿಸೋರ್ಸ್ ಮ್ಯಾನೇಜ್‌ಮೆಂಟ್ ಗ್ರೂಪ್ ಮುಖ್ಯಸ್ಥ ಇಎಸ್ ಚಕ್ರವರ್ತಿ, ಐಡಿಎಫ್‌ಸಿ ಫಸ್ಟ್ ಬ್ಯಾಂಕ್‌ನ ಮುಖ್ಯ ಮಾರ್ಕೆಟಿಂಗ್ ಅಧಿಕಾರಿ ಟಿ.ವಿ.ನಾರಾಯಣ, ಅಥ್ಲೀಟ್ ಟಿ. ಗೋಪಿ, ಟಿಸಿಎಸ್ ಬೆಂಗಳೂರು ಕೇಂದ್ರ ಮುಖ್ಯಸ್ಥ ಸುನಿಲ್ ದೇಶಪಾಂಡೆ ಎಸಿಐಸಿಎಸ್ ರನಿಂಗ್ ಕ್ಲಬ್‌ನ ಕೋಚ್ ದೀಪಾ ನಾಯಕ್ ಹಾಜರಿದ್ದರು.

10ಕೆ: ಶ್ರೀನು, ಪಾರುಲ್ ಆಕರ್ಷಣೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಶ್ರೀನು ಭುಗತಾ ಮತ್ತು ಪಾರುಲ್ ಚೌಧರಿ ಅವರು ಟಿಸಿಎಸ್ ಬೆಂಗಳೂರು ವಿಶ್ವ 10ಕೆಯಲ್ಲಿ ಭಾರತದ ಎಲೀಟ್ ಪುರುಷ ಮತ್ತು ಮಹಿಳೆಯರ ವಿಭಾಗದಲ್ಲಿ ಪ್ರಮುಖ ಸ್ಪರ್ಧಿಗಳಾಗಿದ್ದಾರೆ.

ಸ್ಪರ್ಧೆಯ ಪ್ರಾಯೋಜಕ ಸಂಸ್ಥೆ ಪ್ರೊಕ್ಯಾಮ್ ಇಂಟರ್‌ನ್ಯಾಷನಲ್ ಶುಕ್ರವಾರ ಇಲ್ಲಿ ಆಯೋಜಿಸಿದ್ದ ‘ಕೌಂಟ್‌ಡೌನ್ ಬಿಗಿನ್ಸ್’ ಕಾರ್ಯಕ್ರಮದಲ್ಲಿ ಈ ಕುರಿತು ಪ್ರಕಟಿಸಲಾಯಿತು. ಕಂಠೀರವ ಕ್ರೀಡಾಂಗಣದಲ್ಲಿ ಇದೇ 15ರಂದು 10ಕೆ ನಡೆ ಯಲಿದೆ. ಸ್ಪರ್ಧೆಯ ಕೌಂಟ್‌ಡೌನ್ ಗಡಿಯಾರ ಮತ್ತು ಎಸಿಐಸಿಎಸ್‌ನ ಫಿನಿಶರ್ ಜೆರ್ಸಿ ಇದೇ ವೇಳೆ ಅನಾವರಣಗೊಳಿಸಲಾಯಿತು. ಏಷ್ಯನ್ ಮ್ಯಾರಥಾನ್ ವಿಜೇತ ಟಿ. ಗೋಪಿ ಮತ್ತಿತರರಿದ್ದರು.



ಸಮಂತಾ ಈಗ ‘ಯಶೋದಾ’

ಸಿನಿ ಹನಿ

ಶ್ರೀದೇವಿ ಮೂವೀಸ್ ಬ್ಯಾನರ್‌ನಲ್ಲಿ ನಿರ್ಮಾಣವಾಗಿರುವ, ನಟಿ ಸಮಂತಾ ರುತ್‌ಪ್ರಭು ಅಭಿನಯದ ‘ಯಶೋದಾ’ ಸಿನಿಮಾದ ಫಸ್ಟ್ ಗ್ಲಿಮ್ಸ್ ಬಿಡುಗಡೆಯಾಗಿದೆ. ನಾಯಕಿ ಪ್ರಧಾನದ ಈ ಸಿನಿಮಾದಲ್ಲಿ ಸಮಂತಾ ‘ಯಶೋದ’ ಪಾತ್ರದಲ್ಲಿ ಕಾಣಿಸಿಕೊಂಡಿದ್ದು, ಸದ್ಯ ಚಿತ್ರೀಕರಣದ ಜೊತೆಗೆ ಪೋಸ್ಟ್ ಪ್ರೊಡಕ್ಷನ್ ಕೆಲಸಗಳಲ್ಲಿ ಚಿತ್ರತಂಡ ತೊಡಗಿಸಿಕೊಂಡಿದೆ.

ಶ್ರೀದೇವಿ ಪ್ರೊಡಕ್ಷನ್‌ನ 14ನೇ ಸಿನಿಮಾ ಇದಾಗಿದ್ದು, ಹರಿ ಮತ್ತು ಹರೀಶ್ ಈ ಚಿತ್ರಕ್ಕೆ ಆ್ಯಕ್ಷನ್ ಕಟ್ ಹೇಳಿದ್ದಾರೆ. ಶಿವಲೆಂಕಾ ಕೃಷ್ಣಪ್ರಸಾದ್ ಈ ಸಿನಿಮಾವನ್ನು ನಿರ್ಮಿಸಿದ್ದಾರೆ. ‘ಚಿತ್ರದ ಕ್ಲೈಮ್ಯಾಕ್ಸ್ ಹಂತವನ್ನು ಕೊಡೈಕೆನಾಲ್‌ನಲ್ಲಿ ಚಿತ್ರೀಕರಿಸಿದ್ದೇವೆ. ಶೇ 80ರಷ್ಟು ಚಿತ್ರೀಕರಣ ಪೂರ್ಣಗೊಂಡಿದ್ದು, ಹೈದರಾಬಾದ್‌ನಲ್ಲಿ ಕೊನೆಯ ಶೆಡ್ಯೂಲ್ ನಡೆಯುತ್ತಿದೆ. ಜೂನ್ 1ಕ್ಕೆ ಚಿತ್ರೀಕರಣ ಪೂರ್ಣಗೊಳಿಸಲಿದ್ದೇವೆ. ಇಡೀ ಸಿನಿಮಾದಲ್ಲಿ ಗ್ರಾಫಿಕ್ಸ್ ಪ್ರಮುಖ ಪಾತ್ರ ವಹಿಸಲಿದೆ’ ಎನ್ನುತ್ತಾರೆ ಕೃಷ್ಣಪ್ರಸಾದ್.

ತೆಲುಗು ಜೊತೆಗೆ ತಮಿಳು, ಕನ್ನಡ, ಮಲಯಾಳಂ ಮತ್ತು ಹಿಂದಿಯಲ್ಲಿ ಈ ಸಿನಿಮಾ ಆ.12ರಂದು ಬಿಡುಗಡೆಯಾಗಲಿದೆ. ಚಿತ್ರದಲ್ಲಿ ಸ್ಟಾರ್ ನಟರ ದಂಡೇ ಇದೆ. ವರಲಕ್ಷ್ಮೀ ಶರತ್‌ಕುಮಾರ್, ಉಣ್ಣಿ ಮುಕುಂದನ್, ರಾವ್ ರಮೇಶ್, ಮುರಳಿ ಶರ್ಮಾ, ಸಂಪತ್ ರಾಜ್, ಶತ್ರು, ಮಧುರಿಮಾ, ಕಲ್ಪಿಕಾ ಗಣೇಶ್, ದಿವ್ಯಾ ಶ್ರೀಪಾದ್, ಪ್ರಿಯಾಂಕಾ ಶರ್ಮಾ ಮುಂತಾದವರು ತಾರಾಬಳಗದಲ್ಲಿದ್ದಾರೆ.

ಮಣಿಶರ್ಮಾ ಸಂಗೀತ ಚಿತ್ರಕ್ಕಿದ್ದು, ಪಲ್ಲುಗ್ ಚಿನ್ನರಾಯನ, ಡಾ. ಚಲ್ಲ ಭಾಗ್ಯಲಕ್ಷ್ಮಿ ಸಂಭಾಷಣೆ, ಚಂದ್ರಬೋಸ್ ರಾಮಜೋಗಯ್ಯ ಶಾಸ್ತ್ರಿ ಸಾಹಿತ್ಯ, ಎಂ. ಸುಕುಮಾರ್ ಛಾಯಾಗ್ರಹಣ ಚಿತ್ರಕ್ಕಿದೆ. ಮಾರ್ತಾಂಡ್ ವೆಂಕಟೇಶ್ ಸಂಕಲನ ಮಾಡುತ್ತಿದ್ದಾರೆ.

ಮನೆಯ ಒಳಗಡೆ ಅಂದದ, ಪರಿಮಳ ಬೀರುವ ಹೂವುಗಳನ್ನು ಇರಿಸುವುದರಿಂದ ಮನೆಯೊಳಗಿನ ಅಂದ ಹೆಚ್ಚುವ ಜೊತೆಗೆ ಮನೆಯಲ್ಲಿರುವವರ ಮನಸ್ಸು ಆಹ್ಲಾದಕರವಾಗಿರುತ್ತದೆ

ಮನೆಯ ಅಂದಕ್ಕೆ ಹೂವಿನ ಅಲಂಕಾರ

ಆತ್ರೇಯ

ಮನೆಯ ಅಲಂಕಾರ, ನಮ್ಮ ಅಭಿರುಚಿ, ಆಸಕ್ತಿ ಅಷ್ಟೇ ಅಲ್ಲ, ಮನಸ್ಸಿನ ಭಾವಗಳ ಪ್ರತಿಬಿಂಬವಾಗಿರಬೇಕು. ಅದಕ್ಕೆ ಏನು ಮಾಡಬಹುದು?

ಬಹಳ ಸರಳ. ಮನೆಯನ್ನು ಸ್ವಚ್ಛಗೊಳಿಸಿ. ಚೆಲ್ಲಾಪಿಲ್ಲಿಯಾಗಿರುವ ವಸ್ತುಗಳನ್ನೆಲ್ಲ ಒಪ್ಪ ಓರಣವಾಗಿಡಿ. ಜೊತೆಗೆ, ಅರಳಿರುವ ಒಂದಿಷ್ಟು ತಾಜಾ ಹೂವುಗಳನ್ನು ಮನೆಯ ಪ್ರಮುಖ ಭಾಗಗಳ ಬಳಿ ಕುಂಡಗಳಲ್ಲಿ ಜೋಡಿಸಿಡಿ. ಇಷ್ಟು ಮಾಡಿದರೆ ಮನೆಯ ಅಂದವೂ ಹೆಚ್ಚುತ್ತದೆ. ಮನೆಯೊಳಗೆ ಆಹ್ಲಾದಕರ ವಾತಾವರಣ ನಿರ್ಮಾಣವಾಗಿ, ಮನಸ್ಸು ಪ್ರಫುಲ್ಲವಾಗುತ್ತದೆ!

ಅಷ್ಟೇ ಅಲ್ಲ, ಲಿವಿಂಗ್ ರೂಮ್, ಬೆಡ್ ರೂಮ್ ಸೇರಿದಂತೆ ಮನೆಯ ಎಲ್ಲ ಕೋಣೆಗಳನ್ನೂ ಇಂಥ ಪರಿಮಳ ಬೀರುವ ತಾಜಾ ಹೂವುಗಳಿಂದ ಅಲಂಕರಿಸಿದರೆ, ಆಯಾ ಕೊಠಡಿಯ ವಾತಾವರಣವೂ ತಾಜಾ ಆಗುತ್ತದೆ. ಕೊಠಡಿಯಲ್ಲಿರುವವರ ಮನಸ್ಸು ಹೂವಿನಂತೆ ಅರಳುತ್ತದೆ.

ಲಿವಿಂಗ್ ರೂಮ್

ಇದು ಮನೆಯ ಪ್ರಮುಖ ಜಾಗ. ಹೆಚ್ಚು ಸಮಯ ಕಳೆಯುವ ಸ್ಥಳ. ಅಷ್ಟೇ ಅಲ್ಲ, ನಿಮ್ಮ ಸೃಜನಶೀಲತೆ ಹೆಚ್ಚಿಸುವ ತಾಣ. ಇಂಥ ಕೊಠಡಿಗಳು ಸ್ವಲ್ಪ ದೊಡ್ಡದಾಗಿರುತ್ತವೆ. ಈ ಸ್ಥಳಗಳಿಗೆ ತುಂಬಾ ಪ್ರಕಾಶಮಾನ ಬಣ್ಣವಿರುವ, ಅಂದವಾದ ಗಾತ್ರದಲ್ಲಿ ಅಗಲವಿರುವ ಹೂವುಗಳನ್ನು ಆಯ್ಕೆ ಮಾಡಬಹುದು. ಈ ಕೊಠಡಿಯಲ್ಲಿ ನೀವು ಕುಳಿತಿರುವ ಟೇಬಲ್ ಮಧ್ಯೆ ಒಂದು ವ್ಯಾಸ್ ಇಟ್ಟು, ಅದರಲ್ಲಿ ಕೆಂಪು ಗುಲಾಬಿಗಳನ್ನೋ ಅಥವಾ ಸೂರ್ಯಕಾಂತಿ ಹೂವುಗಳನ್ನೋ ಜೋಡಿಸಿಡಿ. ಒಂದೊಮ್ಮೆ ನಿಮ್ಮ ಕೋಣೆಯ ಗೋಡೆಗಳ ಬಣ್ಣ ತಿಳಿಯಾಗಿದ್ದರೆ ಪ್ರಖರ ಬಣ್ಣದ ಹೂವುಗಳನ್ನು ಜೋಡಿಸಿ. ಅದಕ್ಕೆ ವಿರುದ್ಧವಾಗಿದ್ದರೆ ತಿಳಿ ಬಣ್ಣಗಳ ಹೂವುಗಳಿಂದ ಕೋಣೆಯನ್ನು ಅಲಂಕರಿಸಿ.

ಕೆಲಸ ಮಾಡುವ ಕೊಠಡಿ

ನೀವು ಕೆಲಸ ಮಾಡುವ ಕೊಠಡಿಯಲ್ಲಿ ಹೆಚ್ಚು ಪರಿಮಳಯುಕ್ತ ಹೂವುಗಳನ್ನು ಬಳಸಬೇಡಿ. ಏಕೆಂದರೆ ನಿಮ್ಮನ್ನು ಭೇಟಿಯಾಗಲು ಬರುವ ಅತಿಥಿಗಳಿಗೆ ಕೆಲವು ಹೂಗಳ ಸುಗಂಧ ಅಲರ್ಜಿ ಉಂಟು ಮಾಡಬಹುದು.

ಇದರ ಜೊತೆಗೆ, ಅಲ್ಲಲ್ಲಿ ಅಗಲವಾದ ಪಾತ್ರೆಯಲ್ಲಿ ನೀರು ತುಂಬಿಸಿಟ್ಟು, ಅದರಲ್ಲಿ ಗುಲಾಬಿಯ ಪಕಳೆಗಳನ್ನು ಹಾಕಿ. ಆ ಪಾತ್ರೆಯ ಸುತ್ತ ಮಲ್ಲಿಗೆ, ಚೆಂಡುಹೂವು ಮತ್ತು ಇತರೆ ಸಣ್ಣ ಸಣ್ಣ ಹೂವುಗಳಿಂದ ಅಲಂಕರಿಸಬಹುದು. ರಾತ್ರಿ ವೇಳೆ ಇದೇ ನೀರಿನಲ್ಲಿ ಪುಟ್ಟ ಪುಟ್ಟ ಬೌಲ್‌ಗಳಲ್ಲಿ ಮೇಣದಬತ್ತಿ ಇಟ್ಟು, ಬೆಳಗಿಸಿ ಅವುಗಳನ್ನು ತೇಲಿಸಬಹುದು.

ಗುಲಾಬಿಗಳು, ಟ್ಯುಲಿಪ್‌ಗಳು, ಕಾರ್ನೇಷನ್‌ಗಳು, ಡೈಸಿಗಳು, ಚೆಂಡುಹೂವು, ಸೂರ್ಯಕಾಂತಿ, ಗಾರ್ಡೇನಿಯಾ,, ಟ್ಯೂಬ್‌ರೋಸ್, ಲಿಲ್ಲಿಗಳು ನಿಮ್ಮ ಮನೆಯನ್ನು ಇನ್ನಷ್ಟು ಸುಂದರಗೊಳಿಸುತ್ತವೆ. ಲಿಲ್ಲಿಗಳಿಗೆ ಮುತ್ತಿಕೊಳ್ಳುವ ದುಂಬಿಗಳನ್ನು ನೋಡುವುದೇ ಚಂದ. ಈ ಹೂವಿನ ಅಲಂಕಾರ, ನಿಮ್ಮ ಮನೆ, ಕಚೇರಿಗೆ ಬರುವ ಅತಿಥಿಗಳಿಗೆ ಉತ್ತಮ ಆತಿಥ್ಯವನ್ನು ನೀಡುತ್ತವೆ.

ಮಲಗುವ ಕೋಣೆ

ಮಲಗುವ ಕೋಣೆ ಎಂದರೆ, ಅದು ವಿಶ್ರಾಂತಿ ಪಡೆಯುವ ಸ್ಥಳ. ಈ ಕೋಣೆಯಲ್ಲಿ ತಿಳಿ ಹಳದಿ, ಗುಲಾಬಿ ಅಥವಾ ಲ್ಯಾವೆಂಡರ್‌ನಂತಹ ಹಿತವಾದ ಬಣ್ಣಗಳಿರುವ ಹೂವುಗಳನ್ನು ಆಯ್ಕೆ ಮಾಡಿ, ಕೋಣೆಯ ಪ್ರಮುಖ ಭಾಗಗಳಲ್ಲಿ ಜೋಡಿಸಿಡಿ. ಇವೆಲ್ಲ ‘ಸುಗಂಧ ಚಿಕಿತ್ಸೆ’ಯಲ್ಲಿ ಬಳಸುವ ಹೂವುಗಳು. ಇಲ್ಲಿ ಹೂವಿನ ನೋಟ ಮತ್ತು ಪರಿಮಳ ಎರಡೂ ನಿಮ್ಮನ್ನು ಆಕರ್ಷಿಸುವಂತಿದ್ದರೆ, ಕೋಣೆಯ ವಾತಾವರಣವೂ ಸುಂದರವಾಗಿರುತ್ತದೆ.

ಸುಗಂಧ ಬೀರುವುದು ಹೂವು ಮಾತ್ರವಲ್ಲ, ಲ್ಯಾವೆಂಡರ್, ಕ್ಯಾಮೊಮೈಲ್‌ನಂತಹ ಲಘು ಪರಿಮಳ ಸೂಸುವ ಸಸ್ಯಗಳೂ ಇವೆ. ಅಂಥವನ್ನು ಕೊಠಡಿಯೊಳಗೆ ಬೆಳೆಸಬಹುದು. ಕೆಂಪುಗುಲಾಬಿಯಂತಹ ಹೂವುಗಳು ಕೋಣೆಗೆ ‘ರೊಮ್ಯಾಂಟಿಕ್’ ನೋಟ ನೀಡುತ್ತವೆ. ನೆನಪಿಡಿ; ಪ್ರತಿ ದಿನ ಹೂವುಗಳನ್ನು ಬದಲಾಯಿಸಬೇಕು. ಕೋಣೆಯಲ್ಲಿ ಗಾಳಿ ಬೆಳಕು ಚೆನ್ನಾಗಿರಬೇಕು.

ಸ್ನಾನದ ಕೋಣೆಯಲ್ಲಿ ಗುಲಾಬಿ ಬಣ್ಣದ ಆರ್ಕಿಡ್‌ಗಳನ್ನು ಇಡಿ. ಅದರ ನೋಟವೇ ದಿನಪೂರ್ತಿ ನಿಮ್ಮ ಮನಸ್ಸನ್ನು ಪ್ರಫುಲ್ಲವಾಗಿ ಇಡುತ್ತದೆ. ಆರ್ಕಿಡ್‌ಗಳನ್ನು ಸಿಂಕ್ ಅಥವಾ ಸ್ನಾನದ ತೊಟ್ಟಿಯ ಬಳಿ ಇರಿಸಬಹುದು. ಹಳದಿ, ಬಿಳಿ ಮತ್ತು ಗುಲಾಬಿ ಬಣ್ಣ ಸೇರಿದಂತೆ ವಿವಿಧ ಬಣ್ಣಗಳಲ್ಲಿ ಆರ್ಕಿಡ್‌ಗಳಿವೆ. ಒಂದೊಂದು ಬಣ್ಣದ ಆರ್ಕಿಡ್‌ಗಳು ಮನಸ್ಸನ್ನು ಒಂದೊಂದು ರೀತಿ ಆರೈಕೆ ಮಾಡುತ್ತವೆ. ❖

DINE-IN | TAKEAWAY | ORDER ONLINE
DOWNLOAD OUR NEW APP FOR EXCLUSIVE OFFERS
Prices may vary basis channels: dine-in, delivery or takeaway, or the store or pizza selected. Free Pepsi will be served in 2 fountain glasses or 1 pet bottle to be given away, depending on the restaurant and the channel. Prices are exclusive of taxes. Taxes applicable on prices post discount. Images shown are for illustration purpose only. For more details visit pizzahut.co.in. Pepsi is a registered trademark of PepsiCo, Inc. Carbonated Water (Sweetened Carbonated Water). Pepsi contains caffeine. *T&C Apply.

ಮಕ್ಕಳೊಂದಿಗೆ ಪ್ರವಾಸಕ್ಕೆ ಹೋಗುವ ಮುನ್ನ...

ರೇಷ್ಮಾ

'ಅಮ್ಮಾ, ಬೇಸಿಗೆ ರಜೆ ಬಂತು. ಎಲ್ಲಾದ್ರೂ ಟ್ರಿಪ್ ಹೋಗೋಣ ನಡಿಯಮ್ಮ...' ಪರೀಕ್ಷೆ ಮುಗಿಸಿ ಬಂದ ಶಾರ್ವರಿ, ಅಮ್ಮನ ಎದುರು 'ಪ್ರವಾಸ'ದ ಬೇಡಿಕೆ ಇಟ್ಟಳು. ಸುಧೀರ್, ಅಕ್ಕನ ಮಾತಿಗೆ ದನಿಗೂಡಿಸುತ್ತಾ 'ಎಲ್ಲಾದರೂ ದೂರದ ಊರಿಗೆ ಪ್ರವಾಸ ಹೋಗೋಣ' ಎಂದು ಅಪ್ಪನ ಎದುರು ಬೇಡಿಕೆ ಇಟ್ಟ.

ಪರೀಕ್ಷೆಗಳು ಮುಗಿದು, ಬೇಸಿಗೆ ರಜೆ ಆರಂಭವಾಗಿದ್ದು, ಬಹುತೇಕ ಎಲ್ಲರ ಮನೆಯಲ್ಲೂ ಮಕ್ಕಳು ಹೀಗೆ ಪೋಷಕರ ಎದುರು ಟ್ರಿಪ್ ಹೋಗುವ ಬೇಡಿಕೆ ಇಡುತ್ತಿದ್ದಾರೆ. ಶಾಲೆ, ಹೋಮ್‌ವರ್ಕ್, ಪರೀಕ್ಷೆ, ಎರಡು ವರ್ಷಗಳ ಕೊರೊನಾ – ಲಾಕ್‌ಡೌನ್ ಕಾಟದಿಂದ ಬೇಸತ್ತಿರುವ ಮಕ್ಕಳು ಪ್ರವಾಸ ಹೊರಡಲು ತುದಿಗಾಲಲ್ಲಿ ನಿಂತಿದ್ದಾರೆ. ಅಂಥದ್ದೇ ಬೇಸರ ಅನುಭವಿಸಿರುವ ಪೋಷಕರು ಮಕ್ಕಳೊಂದಿಗೆ ಸುತ್ತಾಡಲು ತಯಾರಾಗಿದ್ದಾರೆ.

ಮಕ್ಕಳಿಗೆ ಟ್ರಿಪ್ ಹೋಗುವ ಸಂತಸವಾದರೆ, ಅವರನ್ನು ಸಂಭಾಳಿಸಿಕೊಂಡು ಹೋಗುವ ಪೋಷಕರು, ಒಂದಷ್ಟು ಸಿದ್ಧತೆಯೊಂದಿಗೆ ತೆರಳಬೇಕು. ಹೋಗುವ ಜಾಗ, ಮಕ್ಕಳಿಗೆ ಅಗತ್ಯವಾದ ತಿನಿಸು, ಮಕ್ಕಳು ಸಣ್ಣರಾದರೆ ಅಗತ್ಯವಾದ ಔಷಧ ಪರಿಕರಗಳು, ಆಟದ ಸಾಮಾನು, ನೀರಿನ ಬಾಟಲಿ, ಟಿಶ್ಯೂ ಹೀಗೆ... ಅಗತ್ಯವೆನ್ನುವ ಎಲ್ಲ ವಸ್ತುಗಳನ್ನು ಹೊಂದಿಸಿಕೊಂಡೇ ಹೊರಡಬೇಕು. ಇದು ಒಂದು ರೀತಿಯ ಸವಾಲು. ಆದರೆ, ಪ್ರಯಾಣಕ್ಕೂ ಮುನ್ನ, ಸಣ್ಣದೊಂದು ಯೋಜನೆ ಸಿದ್ಧಪಡಿಸಿಕೊಂಡು, ಹೊಂದಾಣಿಕೆಯೊಂದಿಗೆ ಒಬ್ಬೊಬ್ಬರು ಒಂದೊಂದು ಜವಾಬ್ದಾರಿ ವಹಿಸಿಕೊಂಡರೆ ಪ್ರಯಾಣ, ಪ್ರವಾಸ ಪ್ರಯಾಸವಿಲ್ಲದೇ ಪೂರ್ಣಗೊಳ್ಳುತ್ತದೆ. ಮಕ್ಕಳೊಂದಿಗೆ ಪೋಷಕರು ಪ್ರವಾಸದ ಸವಿಯನ್ನು ಅನುಭವಿಸಬಹುದು. ಹಾಗಾದರೆ, ಏನೇನು ಸಿದ್ಧತೆ ಬೇಕು?

ಸ್ಥಳ ಆಯ್ಕೆ ಮುಖ್ಯ

ಮಕ್ಕಳೊಂದಿಗೆ ಪ್ರವಾಸಕ್ಕೆ ಹೋಗುವಾಗ, ಅವರು ಇಷ್ಟಪಡುವಂತಹ ಕಡಲು, ಜಲಪಾತ, ಪ್ರಾಣಿಸಂಗ್ರಹಾಲಯ ಇಂಥ ಜಾಗಗಳನ್ನು ಆಯ್ಕೆ ಮಾಡಿಕೊಳ್ಳಿ. ನಿಮಗಿಷ್ಟ ಅಂತ ದೇವಾಲಯ, ಮ್ಯೂಸಿಯಂನಂತಹ ಸ್ಥಳಗಳನ್ನು ಆಯ್ಕೆ ಮಾಡಬೇಡಿ. ಅನೇಕ ಮಕ್ಕಳಿಗೆ ಇಂತಹ ಜಾಗಗಳು ಇಷ್ಟವಾಗುವುದಿಲ್ಲ. ಮಕ್ಕಳು ಇಷ್ಟಪಡುವ ಜಾಗಕ್ಕೆ ಕರೆದುಕೊಂಡು ಹೋದಾಗ ಖುಷಿಯಾಗುತ್ತಾರೆ. ಪ್ರವಾಸವೂ ಸುಖವಾಗಿರುತ್ತದೆ. ಪೋಷಕರ ಮೇಲೆ ಹೆಚ್ಚು ಒತ್ತಡವೂ ಇರುವುದಿಲ್ಲ. ಈ ಹಿನ್ನೆಲೆಯಲ್ಲಿ ಪ್ರವಾಸ ಆಯೋಜನೆಗೂ ಮೊದಲು ಮಕ್ಕಳೊಂದಿಗೆ 'ನಿಮಗೆ ಎಂತಹ ಜಾಗಗಳು ಇಷ್ಟ' ಎಂದು ಕೇಳಿ ತಿಳಿದುಕೊಳ್ಳಿ.

ಸುರಕ್ಷತೆಗೆ ಆದ್ಯತೆ ನೀಡಿ

ಪ್ರವಾಸದಲ್ಲಿ ನಿಮ್ಮ ಸಂಭ್ರಮಕ್ಕಿಂತ, ಮಕ್ಕಳ ಸಂತಸ ಮತ್ತು ಸುರಕ್ಷತೆ ಎರಡೂ ಮುಖ್ಯ. ಕುಟುಂಬದವರೆಲ್ಲರೂ ಸೇರಿ ಪ್ರವಾಸಕ್ಕೆ ಹೋಗುವಾಗ ಸಂಭ್ರಮ ತುಸು ಹೆಚ್ಚೇ ಇರುತ್ತದೆ. ಅಂತಹ ಸಮಯದಲ್ಲಿ, ಸಂಭ್ರಮಕ್ಕೆ ಕೊಂಚ ಬ್ರೇಕ್ ಹಾಕಿ, ಮಕ್ಕಳ ಬಗ್ಗೆ ಜಾಗ್ರತೆ ವಹಿಸಿ. ಪ್ರವಾಸಿತಾಣ, ಹೋಟೆಲ್ ಕೊಠಡಿಗಳು, ದೋಣಿ ಅಥವಾ ತೆಪ್ಪದಲ್ಲಿ ಹೋಗುವಾಗ, ಸಮುದ್ರದ ಬಳಿ, ವಾಹನದಲ್ಲಿ ಹೋಗುವಾಗ ಮಕ್ಕಳ ಬಗ್ಗೆಯೇ ಹೆಚ್ಚು ಗಮನವಿರಲಿ. ಸ್ಥಳ, ವಾತಾವರಣ ಬದಲಾದಾಗ ಮಕ್ಕಳಿಗೆ ಆರೋಗ್ಯ ಏರುಪೇರಾಗಬಹುದು. ಅವರಿಗೆ ಬೇರೆ ರೀತಿಯ ಕಿರಿಕಿರಿಗಳೂ ಆಗಬಹುದು. ಅದನ್ನು ಗುರುತಿಸಿ, ತಕ್ಷಣ ಸರಿಪಡಿಸಿ, ಅವರೊಟ್ಟಿಗೆ ಹೆಚ್ಚು ಸಮಯ ಕಳೆಯಿರಿ.

ಮೊದಲೇ ಸ್ಥಳದ ಪರಿಚಯ ಮಾಡಿಕೊಳ್ಳಿ

ಮಕ್ಕಳೊಂದಿಗೆ ಬೇರೆ ಊರಿಗೆ ಪ್ರವಾಸಕ್ಕೆ ಹೋಗುವ ಮೊದಲು ನೀವು ಹೋಗುವ ಸ್ಥಳದ ಬಗ್ಗೆ ಸರಿಯಾದ ವಿವರಗಳನ್ನು ಕಲೆ ಹಾಕಿ. ಅಲ್ಲಿ ನಿಮ್ಮ ಮಗುವಿಗೆ ಬೇಕಾದ ಆಹಾರ ಪದಾರ್ಥಗಳು ಸಿಗುವುದೇ, ಉಳಿದುಕೊಳ್ಳುವ ವ್ಯವಸ್ಥೆ, ತುರ್ತು ಪರಿಸ್ಥಿತಿಯಲ್ಲಿ ಮಗುವಿಗೆ ಆರೋಗ್ಯ ಸಮಸ್ಯೆಯಾದರೆ ಹತ್ತಿರದಲ್ಲೇ ಆಸ್ಪತ್ರೆ ಇದೆಯೇ, ಆ ಜಾಗದ ವಾತಾವರಣ ಮಗುವಿಗೆ ಹೊಂದಿಕೆಯಾಗುತ್ತದೆಯೇ ಹೀಗೆ ಪ್ರತಿಯೊಂದು ಮಾಹಿತಿಯನ್ನು ಮೊದಲೇ ಕಲೆ ಹಾಕಿ ನಂತರ ಪ್ರವಾಸ ಆಯೋಜಿಸಿ.

ರೋಡ್ ಟ್ರಿಪ್ ಬೆಸ್ಟ್

ಮಕ್ಕಳು ಹೆಚ್ಚು 'ರೋಡ್‌ಟ್ರಿಪ್' ಅನ್ನು ಎಂಜಾಯ್ ಮಾಡ್ತಾರೆ. ವಾಹನದಲ್ಲಿ ಹೋಗುವಾಗ ಕಿಟಕಿಯಾಚೆ ಮುಖವಿರಿಸಿ ನೋಡುತ್ತಾ ಖುಷಿ ಪಡುತ್ತಾರೆ. ಹಾಗಾಗಿ, ರಸ್ತೆ ಮೇಲೆ ಅದರಲ್ಲೂ ಸಾಧ್ಯವಾದಷ್ಟು ಸ್ವಂತ ವಾಹನದಲ್ಲಿ ಹೋಗಲು ಅನುಕೂಲವಾಗುವಂತಹ ಪ್ರವಾಸಿ ತಾಣಗಳನ್ನು ಆಯ್ಕೆ ಮಾಡಿಕೊಳ್ಳಿ. ವಿಮಾನ ಅಥವಾ ರೈಲಿನಲ್ಲಿ ದೂರದೂರಿಗೆ ಪ್ರವಾಸಕ್ಕೆ ಹೋಗುವುದಕ್ಕೆ ಆದಷ್ಟು ಕಡಿವಾಣ ಹಾಕಿ. ಇದು ಮಕ್ಕಳ ಕಾಳಜಿಯ ಜೊತೆಗೆ, ಸದ್ಯದ ಆರ್ಥಿಕ ಪರಿಸ್ಥಿತಿಯಲ್ಲಿ ಖರ್ಚು ಉಳಿತಾಯದ ದೃಷ್ಟಿಯಿಂದಲೂ ಉತ್ತಮ.

ತಿನ್ನುವ ಹಾಗೂ ಆಟದ ವಸ್ತುಗಳಿರಲಿ

ಹಲವು ಗಂಟೆಗಳ ಕಾಲ ಪ್ರಯಾಣ ಎಂದರೆ ಮಕ್ಕಳಿಗೆ ವಿಶ್ರಾಂತಿ ಇಲ್ಲದಂತಾಗುತ್ತದೆ. ಅಂತಹ ಸಮಯದಲ್ಲಿ ಅವರನ್ನು ಬ್ಯುಸಿಯಾಗಿಡಲು ಒಂದಿಷ್ಟು ಆಟದ ವಸ್ತುಗಳನ್ನು ಜೊತೆಯಾಗಿ ತೆಗೆದುಕೊಂಡು ಹೋಗಿ. ಭಾರವಿಲ್ಲದ ಹಗುರವಾದ ಆಟದ ಸಾಮಗ್ರಿಗಳನ್ನು ಬ್ಯಾಗ್‌ನಲ್ಲಿ ತುಂಬಿಸಿ ಅದನ್ನು ಹಿಡಿದುಕೊಳ್ಳಲು ಕೊಡಿ. ಇದರೊಂದಿಗೆ ತಿನ್ನಲು ಆರೋಗ್ಯಕ್ಕೆ ಹಿತ ಎನ್ನಿಸುವ ಒಂದಿಷ್ಟು ಸ್ನ್ಯಾಕ್ಸ್ ಕೂಡ ಜೊತೆಯಾಗಲಿ. ಇದರಿಂದ ಮಕ್ಕಳು ದಾರಿ ನಡುವೆ ಹಸಿವು ಎಂದು ಕಿರಿಕಿರಿ ಮಾಡುವುದನ್ನು ತಪ್ಪಿಸಬಹುದು. ಅಲ್ಲಲ್ಲೇ ಇಳಿದು ಹೋಟೆಲ್‌ಗೆ ಹೋಗುವುದು ತಪ್ಪುತ್ತದೆ. ಹಣ, ಸಮಯ ಎರಡೂ ಉಳಿತಾಯವಾಗುತ್ತದೆ.

ಗ್ಯಾಜೆಟ್ ಬಳಕೆಗೆ ಕಡಿವಾಣ ಹಾಕಿ

ಸ್ನೇಹಿತರು ಹಾಗೂ ಕುಟುಂಬದವರೆಲ್ಲರೂ ಸೇರಿ ಅಪರೂಪಕ್ಕೆ ಪ್ರವಾಸಕ್ಕೆ ಹೋಗುವಾಗ ನೀವು ಎಂಜಾಯ್ ಮಾಡಬೇಕು ಎಂಬ ಕಾರಣಕ್ಕೆ ಮಕ್ಕಳಿಗೆ ಗ್ಯಾಜೆಟ್ ಕೊಟ್ಟು ಕೂರಿಸಬೇಡಿ. ಸಾಧ್ಯವಾದಷ್ಟು ಮಕ್ಕಳನ್ನೂ ನಿಮ್ಮ ಸಂತಸದಲ್ಲಿ ಭಾಗಿಯಾಗಲು ಬಿಡಿ. ಪ್ರವಾಸದ ಮೇಲೆ ಸಾಧ್ಯವಾದಷ್ಟು ಗ್ಯಾಜೆಟ್‌ಗಳಿಂದ ದೂರವಿರುವುದು ಬಹಳ ಮುಖ್ಯ.

ಏನಿದು 'ಮೇಡ್ ಇನ್ ಬೆಂಗಳೂರು'?

ಸ್ಟಾರ್ಟ್‌ಅಪ್‌ಗಳ ಕಥೆ ಹೇಳಲಿದೆ 'ಮೇಡ್ ಇನ್ ಬೆಂಗಳೂರು'.

ಈ ಚಿತ್ರದಲ್ಲಿ ನವಪ್ರತಿಭೆ ಮಧುಸೂದನ್ ಗೋವಿಂದ್ ನಾಯಕನಾಗಿ ನಟಿಸಿದ್ದಾರೆ. ಹಿರಿಯ ನಟರಾದ ಸಾಯಿಕುಮಾರ್, ಪ್ರಕಾಶ್ ಬೆಳವಾಡಿ ಮೊದಲಾದವರು ಈ ಚಿತ್ರಕ್ಕೆ ಬಣ್ಣ ಹಚ್ಚಿದ್ದಾರೆ.

ಲಕ್ಷಾಂತರ ಕನಸುಗಳನ್ನು ಮುಗ್ಧ ಕಣ್ಣುಗಳಲ್ಲಿ ಹೊತ್ತಿರುವ ಮೂವರು ಯುವಕರ ಕಥೆಯ ಈ ಚಿತ್ರದಲ್ಲಿ ಮಧುಸೂದನ್ ಗೋವಿಂದ್ ಅವರ ಜೊತೆಗೆ ಪುನೀತ್ ಮಾಂಜಾ, ವಂಶೀಧರ, ಹಿಮಾಂಶಿ ವರ್ಮಾ, ಶಂಕರಮೂರ್ತಿ, ಜೋರ್ಡ್ ಇಂಡಿಯನ್ ಖ್ಯಾತಿಯ ವಿನೀತ್ ಕುಮಾರ, ಹಿರಿಯ ನಟರಾದ ಮಂದೀಪ್ ರೈ, ಸುಧಾ ಬೆಳವಾಡಿ, ಮಂಜುನಾಥ್ ಹೆಗ್ಡೆ, ರಮೇಶ್ ಭಟ್, ಅನುರಾಗ್ ಪುತ್ತಿಗೆ ಮೊದಲಾದವರು ನಟಿಸಿದ್ದಾರೆ.

ಉದ್ಯಮಿ ಬಾಲಕೃಷ್ಣ ಬಿ.ಎಸ್. ಅವರು 'ರಜನಿ ಥರ್ಸ್ಡೆ ಸ್ಟೋರೀಸ್' ಲಾಂಛನದಲ್ಲಿ ಈ ಚಿತ್ರವನ್ನು ನಿರ್ಮಿಸಿದ್ದು, ಪ್ರದೀಪ್ ಕೆ.ಶಾಸ್ತ್ರಿ ಅವರು ಕಥೆ ಬರೆದು ನಿರ್ದೇಶಿಸಿದ್ದಾರೆ. ಅಶ್ವಿನ್ ಪಿ. ಕುಮಾರ ಅವರ ಸಂಗೀತ ನಿರ್ದೇಶನ, ಭಜರಂಗ್ ಕೋಣಥಮ್ ಅವರ ಛಾಯಾಗ್ರಹಣ ಹಾಗೂ ಹಲವಾರು ಕಲಾತಂತ್ರಜ್ಞರ ಪರಿಶ್ರಮ 'ಮೇಡ್ ಇನ್ ಬೆಂಗಳೂರು' ಚಿತ್ರದಲ್ಲಿದೆ.

ಕನ್ನಡಕ್ಕೊಂದು 'ಸಿನಿಬಜಾರ್'

'ಸಿನಿಬಜಾರ್' ಆ್ಯಪ್ ಬಿಡುಗಡೆ

ಕನ್ನಡದಲ್ಲಿ ಕನ್ನಡಕ್ಕೊಂದು ಹೊಸ ಒಟಿಟಿ ಆ್ಯಪ್ ಬಂದಿದೆ. 'ಸಿನಿಬಜಾರ್' ಅದರ ಹೆಸರು. ಭಾಸ್ಕರ ವೆಂಕಟೇಶ್ ಮತ್ತು ಕರ್ನಾಟಕ ಚಲನಚಿತ್ರ ವಾಣಿಜ್ಯ ಮಂಡಳಿ ಉಪಾಧ್ಯಕ್ಷ ಉಮೇಶ್ ಬಣಕಾರ್ ಈ ಆ್ಯಪ್‌ನ ಪ್ರವರ್ತಕರು.

'ಪ್ರತಿ ಸಿನಿಮಾ ವೀಕ್ಷಣೆಗೆ ₹ 25ರಿಂದ 30 ವೆಚ್ಚವಾಗಲಿದೆ. ವೀಕ್ಷಕರ ಪ್ರಮಾಣವೂ ಇದರಲ್ಲೇ ಗೊತ್ತಾಗಲಿದೆ. ಪ್ರದರ್ಶನ, ಧ್ವನಿ ಪರಿಣಾಮಕ್ಕೆ ಸರಿಯಾದ ತಂತ್ರಜ್ಞಾನ ಬಳಸಿದ್ದೇವೆ. ಈ ಆ್ಯಪ್ ಮೂಲಕವೇ ನಿರ್ಮಾಪಕರು ತಮ್ಮ ಚಿತ್ರ ಬಿಡುಗಡೆ ಮಾಡಬಹುದು. ಈಗಾಗಲೇ ಬಿಡುಗಡೆ ಆಗಿರುವ ಚಿತ್ರಗಳೂ ಭಂಡಾರದಲ್ಲಿವೆ' ಎಂದು ಭಾಸ್ಕರ್ ವೆಂಕಟೇಶ್ ಹೇಳಿದರು.

'ಭಾಸ್ಕರ್ ನನ್ನನ್ನು ಸಂಪರ್ಕಿಸಿ ಈ ಬಗ್ಗೆ ಮಾಹಿತಿ ನೀಡಿದಾಗ ಇದರಿಂದ ನಿರ್ಮಾಪಕರಿಗೆ ಹಾಗೂ ನೋಡುಗರಿಗೆ ಅನುಕೂಲವಿದೆ ಎಂದು ತಿಳಿಯಿತು. ನಾನು ಭಾಸ್ಕರ್ ಅವರ ಜೊತೆ ಈ ಪ್ರಯತ್ನಕ್ಕೆ ಕೈ ಜೋಡಿಸಿದ್ದೇನೆ' ಎಂದರು ಉಮೇಶ್ ಬಣಕಾರ್.

ಸುಧಾಕರ್ ಅವರು ಈ ಆ್ಯಪ್ ಅನ್ನು ಅಭಿವೃದ್ಧಿಪಡಿಸಿದ್ದಾರೆ. ಕರ್ನಾಟಕ ಚಲನಚಿತ್ರ ವಾಣಿಜ್ಯ ಮಂಡಳಿ ಅಧ್ಯಕ್ಷರಾದ ಡಿ.ಆರ್. ಜೈರಾಜ್, ಉಪಾಧ್ಯಕ್ಷ ನಾಗಣ್ಣ, ಕರ್ನಾಟಕ ಚಲನಚಿತ್ರ ನಿರ್ಮಾಪಕರ ಸಂಘದ ಅಧ್ಯಕ್ಷ ಪ್ರವೀಣ್ ಕುಮಾರ್, ನಟ ಶ್ರೀನಗರ ಕಿಟ್ಟಿ, ನಿರ್ದೇಶಕರಾದ ರವಿಶ್ರೀವತ್ಸ, ಗಿರಿರಾಜ್ ಭಾಗವಹಿಸಿದ್ದರು.

ಪ್ರಿಯಾಂಕಾ ಉಪೇಂದ್ರ @50

ಪ್ರಿಯಾಂಕಾ ಉಪೇಂದ್ರ

ಪೊಲೀಸ್ ಪೇದೆ, ಖಡಕ್ ಪೊಲೀಸ್ ಅಧಿಕಾರಿ ಹೀಗೆ ಹಲವು ಪಾತ್ರಗಳಿಗೆ ಬಣ್ಣಹಚ್ಚಿ ಸಾಲು ಸಾಲು ಆ್ಯಕ್ಷನ್ ಚಿತ್ರಗಳಲ್ಲಿ ತೆರೆಯ ಮೇಲೆ ಮಿಂಚಿದ್ದ ನಟಿ ಪ್ರಿಯಾಂಕಾ ಉಪೇಂದ್ರ ಅವರ 50ನೇ ಸಿನಿಮಾ ಶೀಘ್ರದಲ್ಲೇ ಸೆಟ್ಟೇರಲಿದೆ.

'ಡಿಟೆಕ್ಟಿವ್ ತೀಕ್ಷ್ಣ' ಪ್ರಿಯಾಂಕ ಅವರ 50ನೇ ಸಿನಿಮಾವಷ್ಟೇ ಅಲ್ಲ, ಬದಲಾಗಿ ಇದೊಂದು ಬಿಗ್‌ಬಜೆಟ್ ಪ್ಯಾನ್ ಇಂಡಿಯಾ ಸಿನಿಮಾ ಎನ್ನುವುದೂ ವಿಶೇಷ. ಜೂನ್‌ನಿಂದ ಚಿತ್ರದ ಚಿತ್ರೀಕರಣ ಆರಂಭವಾಗಲಿದ್ದು, ಸಿನಿಮಾವು ಕನ್ನಡ ಸೇರಿದಂತೆ ಏಳು ಭಾಷೆಗಳಲ್ಲಿ ತೆರೆಕಾಣಲಿದೆ. ತ್ರಿವಿಕ್ರಮ ರಘು ನಿರ್ದೇಶನದ ಚೊಚ್ಚಲ ಚಿತ್ರದಲ್ಲಿ ಪ್ರಿಯಾಂಕಾ ಅವರು ಡಿಟೆಕ್ಟಿವ್ ತೀಕ್ಷ್ಣ ಎಂಬ ಪಾತ್ರವನ್ನು ಮಾಡಲಿದ್ದಾರೆ. ರಘು ಅವರೇ ಕಥೆ, ಚಿತ್ರಕಥೆ ಹಾಗೂ ಸಂಭಾಷಣೆ ಬರೆದಿದ್ದಾರೆ. ಪುತ್ತೂರಿನ ಪುರುಷೋತ್ತಮ ಬಿ. ಕೊಯ್ಯೂರು ಬಂಡವಾಳ ಹೂಡುತ್ತಿದ್ದಾರೆ.

ದಕ್ಷಿಣ ಭಾರತದ ಖ್ಯಾತ ಕಲಾವಿದರೊಬ್ಬರು ಖಳನಾಗಿ ಕಾಣಿಸಿಕೊಳ್ಳಲಿದ್ದಾರೆ ಎಂದಷ್ಟೇ ಚಿತ್ರತಂಡವು ಮಾಹಿತಿ ನೀಡಿದೆ. ಎರಡು ಭಾಗಗಳಲ್ಲಿ ಚಿತ್ರವು ತೆರೆಕಾಣಲಿದ್ದು, ಬಹುಭಾಷಾ ನಟರು ತಾರಾಬಳಗದಲ್ಲಿ ಇರಲಿದ್ದಾರೆ. ಕರ್ನಾಟಕ, ಮಹಾರಾಷ್ಟ್ರ, ಕೇರಳ, ರಾಜಸ್ಥಾನ, ಗೋವಾ ಹೀಗೆ ಹಲವೆಡೆ 120 ದಿನ ಚಿತ್ರೀಕರಣ ನಡೆಸಲು ತಂಡವು ಯೋಜನೆ ರೂಪಿಸಿಕೊಂಡಿದೆ. ವರ್ಷಾಂತ್ಯಕ್ಕೆ ಸಿನಿಮಾ ಬಿಡುಗಡೆ ಮಾಡಲು ತಂಡ ನಿರ್ಧರಿಸಿದ್ದು, ಇದೇ 12ರಂದು ಅದ್ದೂರಿಯಾಗಿ ಮೋಷನ್ ಪೋಸ್ಟರ್ ಹಾಗೂ ಶೀರ್ಷಿಕೆ ಅನಾವರಣ ಕಾರ್ಯಕ್ರಮವನ್ನು ನಿಗದಿಪಡಿಸಿದೆ. ಮನುದಾಸಪ್ಪ ಛಾಯಾಗ್ರಹಣ, ವಿನೋದ್-ಶಿವು ಸಾಹಸ ನಿರ್ದೇಶನ ಚಿತ್ರಕ್ಕಿದೆ.

ಸಿನಿ ಹನಿ

ಶುರುವಾಗಿದೆ 'ಕೇದಾರನಾಥ್ ಕುರಿಫಾರಂ'

ನಟ ಮಡೆನೂರು ಮನು ಪ್ರಧಾನ ಪಾತ್ರದಲ್ಲಿ ನಟಿಸುತ್ತಿರುವ 'ಕೇದಾರನಾಥ್ ಕುರಿಫಾರಂ' ಇತ್ತೀಚೆಗೆ ಸೆಟ್ಟೇರಿದೆ. ಮೊದಲ ಸನ್ನಿವೇಶಕ್ಕೆ ಖ್ಯಾತನಟ ವಸಿಷ್ಠ ಸಿಂಹ ಆರಂಭ ಫಲಕ ತೋರಿದರು. ನಿರ್ಮಾಪಕ ಪದ್ಮನಾಭ ಕ್ಯಾಮೆರಾ ಚಾಲನೆ ಮಾಡಿದರು. ನಿರ್ದೇಶಕರಾದ ಸಂತು ಹಾಗೂ ಚೇತನ್ ಕುಮಾರ್ ಆ್ಯಕ್ಷನ್ ಕಟ್ ಹೇಳಿದರು.

ಜೆ.ಕೆ.ಮೂವೀಸ್ ಲಾಂಛನದಲ್ಲಿ ನಟರಾಜ್ ಕೆ.ಎಂ. ಈ ಚಿತ್ರ ನಿರ್ಮಾಣ ಮಾಡುತ್ತಿದ್ದಾರೆ. ಕಾಮಿಡಿ ಕಥಾಹಂದರ ಹೊಂದಿರುವ ಈ ಚಿತ್ರಕ್ಕೆ ರಾಜೇಶ್ ಸಾಲುಂಡಿ ಕಥೆ, ಚಿತ್ರಕಥೆ ಬರೆದಿದ್ದು, ಶ್ರೀನಿವಾಸ್ ಸಾಗರ್ ನಿರ್ದೇಶನ ಮಾಡುತ್ತಿದ್ದಾರೆ. ಈ ಹಿಂದೆ 'ಶಿರಾಲಿ ಕ್ರಾಸ್' ಚಿತ್ರ ನಿರ್ದೇಶಿಸಿರುವ ನಿರ್ದೇಶಕರಿಗೆ ಇದು ಎರಡನೇ ಚಿತ್ರ.

ಮೂರು ಹಾಡುಗಳಿರುವ ಈ ಚಿತ್ರಕ್ಕೆ ಸನ್ನಿಧಾತ್ ಸಂಗೀತ ನೀಡುತ್ತಿದ್ದಾರೆ. ರಾಕೇಶ್ ಛಾಯಾಗ್ರಹಣ ಹಾಗೂ ಅರ್ಜುನ್ ಕಿಟ್ಟು ಸಂಕಲನ ಈ ಚಿತ್ರಕ್ಕಿದೆ.

ಶಿವಾನಿ, ಕರಿಸುಬ್ಬು, ಟೆನ್ನಿಸ್ ಕೃಷ್ಣ, ಮುತ್ತುರಾಜ್ (ಕಾಮಿಡಿ ಕಿಲಾಡಿ), ಸುನಂದಾ ಹೊಸಪೇಟೆ, ಮಜಾಭಾರತ ನಿಂಗ್ ರಾಜ್ ತಾರಾಬಳಗದಲ್ಲಿದ್ದಾರೆ.

ಪ್ರಜಾವಾಣಿ
ಜನಸ್ಪಂದನ
ಸಿಟಿಜ಼ನ್ಸ್ ಫಾರ್ ಚೇಂಜ್
ನೀವು ಪುಲಿಕೇಶಿನಗರ ವಿಧಾನಸಭಾ ಕ್ಷೇತ್ರದ ನಿವಾಸಿಯೇ?

ಶ್ರೀ ಅಖಂಡ ಶ್ರೀನಿವಾಸ ಮೂರ್ತಿ

ನಿಮ್ಮ ಸಮಸ್ಯೆಗಳಿಗೆ ದನಿ ನೀಡಲು ಪ್ರಜಾವಾಣಿ ಮತ್ತು ಡೆಕ್ಕನ್ ಹೆರಾಲ್ಡ್ ಆಯೋಜಿಸಿರುವ ಜನಸ್ಪಂಧನ ಕಾರ್ಯಕ್ರಮದಲ್ಲಿ ಭಾಗವಹಿಸಿ. ನಿಮ್ಮ ಕ್ಷೇತ್ರದ ಶಾಸಕರೊಂದಿಗೆ, ಬಿಬಿಎಂಪಿ, ಜಲಮಂಡಳಿ, ಬೆಸ್ಕಾಂ, ಪೊಲೀಸ್ ಹಾಗೂ ಇನ್ನಿತರ ಇಲಾಖೆಗಳ ಅಧಿಕಾರಿಗಳೂ ಉಪಸ್ಥಿತರಿದ್ದು, ನಿಮ್ಮ ಅಹವಾಲುಗಳಿಗೆ ಕಿವಿಯಾಗಲಿದ್ದಾರೆ. ನಿಮ್ಮ ಸಮಸ್ಯೆಗಳನ್ನು ಬಗೆಹರಿಸಿಕೊಳ್ಳಿ.

- ಟ್ರಾಫಿಕ್
- ಕಸ ವಿಲೇವಾರಿ
- ನೀರು ಸರಬರಾಜು
- ರಸ್ತೆ ಗುಂಡಿಗಳು

ಕಾರ್ಯಕ್ರಮದ ದಿನಾಂಕ: 07/05/2022, ಶನಿವಾರ
ಸಮಯ: ಬೆಳಿಗ್ಗೆ 10 ರಿಂದ ಮಧ್ಯಾಹ್ನ 1 ರವರೆಗೆ
(ನೊಂದಣಿ: ಬೆಳಿಗ್ಗೆ 9 ರಿಂದ, ಪ್ರವೇಶ ಉಚಿತ)
ಸ್ಥಳ: ಪಾನಿ ಪುರಿ ಮೈದಾನ, ಸರ್ಕಾರಿ ಕಾಲೇಜು ಎದುರು,
#2, 1ನೇ ಅಡ್ಡ ರಸ್ತೆ, ಗಣೇಶ ಬ್ಲಾಕ್, ಸುಲ್ತಾನಪಾಳ್ಯ, ಪುಲಿಕೇಶಿನಗರ.
ಸಂಪರ್ಕಕ್ಕೆ:
ಗಿರೀಶ್: 9916667466

ಪ್ರಜಾವಾಣಿ ಶನಿವಾರ, 7 ಮೇ 2022
ಭೂಮಿಕಾ
ಮಹಿಳೆಯ ಆಪ್ತ ಸಂಗಾತಿ

ಸಾಸಿವೆ ಎಣ್ಣೆ ಹಾಗೂ ಶುಂಠಿ ಕುದಿಸಿ ಕಷಾಯ ತಯಾರಿಸಿ ಹಚ್ಚಿದರೆ ಗಂಟುನೋವು ಬೇಗ ಗುಣವಾಗುತ್ತದೆ.

ಅಮ್ಮನಿಗೆ ಋಣಿಯಾಗುವುದೆಂದರೆ...

ನಿಮಗ ಗೊತ್ತದ, ನಾಳೆ, ಮೇ ಎರಡನೆಯ ಭಾನುವಾರ 50 ದೇಶಗಳೊಳಗ ಅಮ್ಮಂದಿರ ದಿನವನ್ನು ಆಚರಿಸ್ತಾರ. ತಮ್ಮ ಅಮ್ಮಂದಿರಿಗೆ, ತಾಯ್ತನ ಉಣಿಸಿದವರಿಗೆ ಉಡುಗೊರೆಗಳನ್ನು ಕೊಟ್ಟು ಕೃತಜ್ಞರಾಗಿರುವುದನ್ನು ಸೂಚಿಸ್ತಾರ. ಖರೇ ಕೃತಜ್ಞರಾಗೂದು ಹೆಂಗ ಗೊತ್ತದ ಏನು?

ವಿಶ್ವ ಅಮ್ಮಂದಿರ ದಿನ ಮೇ 8

ರಶ್ಮಿ ಎಸ್.

ಮೈ ಅಮ್ಮಾ ಕೊ ಖುಷ್ ರಖನೆ ಪೈದಾ ಹುವಿ ಹೂಂ (ನಾ ಅಮ್ಮಗ ಖುಷಿಯಿಂದಿರಿಸಾಕ ಹುಟ್ಟೇನಿ) ಹಿಂಗ ಅರ್ನಿ ನನ್ನ ಸಲ್ಯಾಗ ಮೂರು ವರ್ಷಗಳ ಹಿಂದ ಹಾಡು ಕಟ್ಟಿ ಹಾಡಿದ್ಲು. ಭೂಮಿ, ನಾ ಹಾಡೂದಿಲ್ಲ. ಆದ್ರ ಖುಷಿಯಾಗಿಟ್ಟಿರ್ತೀನಿ ಅಂದಿದ್ಲು. ಭೂಮಿ ಹುಟ್ಟಿದಾಗಲೇ ನನ್ನೊಳಗೂ ಒಬ್ಬ ಅಮ್ಮ ಹುಟ್ಟಿದ್ಲು.

ಅಲ್ಲೀತನಾನೂ ಅಮ್ಮ, ಮೊಮ್ಮಾ, ದೊಡ್ಡಮ್ಮ, ಚಿಕ್ಕಮ್ಮ ಈ ನಾಲ್ಕು ಜನರ ಅಂತಃಕರುಣೆ ಉಂಡು ಬೆಳದಿದ್ದು ನನಗ ನೋಡಾಕ ಸಿಕ್ಕ ಭಾವಗಳು ಹಲವು. ಅಮ್ಮನ ಕಾಳಜಿ, ಮೊಮ್ಮಾನ ವಾತ್ಸಲ್ಯ, ದೊಡ್ಡಮ್ಮನಿಂದ ಸಂಸ್ಕಾರ, ಚಿಕ್ಕಮ್ಮನಿಂದ ಅಂತಃಕರುಣೆ.

ನಮ್ಮೆಲ್ಲಾರ ಬದುಕಿನಾಗೂ ಹಿಂಗ ಜೈವಿಕ ಅಮ್ಮ ಬಿಟ್ರ, ಭೌತಿಕ, ಬೌದ್ಧಿಕ, ಆಧ್ಯಾತ್ಮಿಕವಾಗಿ ಹಲವಾರು ತಾಯಂದಿರು ಇದ್ದೇ ಇರ್ತಾರ. ನಮ್ಮ ವಿಭಿನ್ನ ವ್ಯಕ್ತಿತ್ವವನ್ನು ಹುಟ್ಟುಹಾಕಿರ್ತಾರ. ಆದ್ರ ಇವರೆಲ್ಲರಿಗೂ ನಾವು ಕೃತಜ್ಞರಾಗಿರಬೇಕು ಹಂಗ ಕೃತಜ್ಞರದೀವಿ ಅನ್ನೂದನ್ನು ಅಭಿವ್ಯಕ್ತಿ ಪಡಿಸಬೇಕು. ಅವರೊಳಗೊಂದು ಆನಂದದ ಲಹರಿ ಹುಟ್ಟಿ, ಅದು ಮಾನಸ ಸರೋವರದಿಂದ ಒಂದೆರಡು ಕಂಬನಿಯ ಪಸೆ ಕಣ್ತುಂಬುವಂತೆ ಮಾಡಬೇಕು. ಆ ಕಣ್ಣಪಸೆಗೆ ಮುಗುಳ್ನಗೆಯ ಮೆರುಗೂ ಮೂಡಿಸಿರಬೇಕು.

ತಾಯ್ತನದ ಯಾನ ಒಂಬತ್ತು ತಿಂಗಳದ್ದು. ಆದ್ರ ತಾಯ್ತನ ಹೊತ್ತು ಹೆತ್ತವರ ಸ್ವತ್ತು ಮಾತ್ರ ಅಲ್ಲ. ಗರ್ಭಿಣಿಯಾದಾಗ ತಾಯ್ತನದ ಒತ್ತಡ ಶುರುವಾಗಿರ್ತದ. ಮೊದಲು ನಮ್ಮ ವ್ಯಕ್ತಿತ್ವದೊಳಗ ಗೊಂದಲಗಳು ಹುಟ್ತಾವ. ಕಿರಿಕಿರಿಯಾಗ್ತಿರ್ತದ. ದೇಹದ ಆಕಾರ, ಗಾತ್ರ, ತೂಕ ಎಲ್ಲಾ ಬದಲಾಗ್ತಿರ್ತದ. ಅಲ್ಲೀತನಾನೂ ನಮ್ಮ ಗುರುತಾಗಿದ್ದ ಕೃಷಾಂಗಿ, ಸಿಂಹಕಟಿ, ಕೃಷ್ಣವೇಣಿ, ಎಲ್ಲವೂ ಬದಲಾವಣೆ ಜಗದ ನಿಯಮ ಅನ್ನೂಹಂಗ ಬದಲಾಗ್ತಿರ್ತಾವ.

ಮಗು ಒಳಮೂಡುವ, ಹೊರುವ ಸುಖವನ್ನು ವಿಜ್ರಂಭಿಸಿರುವಷ್ಟೇ ಕಕ್ಕುಲಾತಿಯಿಂದ ಆ ದಿನಗಳ ಗೊಂದಲ, ಒತ್ತಡಗಳನ್ನು ಯಾರೂ ಹೇಳುವುದಿಲ್ಲ. ಅದು ಹೊಸ ತಾಯಂದಿರ ಅನುಭವದ ಬುತ್ತಿಯೇ ಆಗಿರುತ್ತದೆ. ಇನ್ನು ಹೆತ್ತ ಮೇಲಿನ ಒತ್ತಡಗಳಂತೂ ಬ್ಯಾರೇನ ಇರ್ತಾವ. ಕೆಲಸ ಮಾಡುವ ತಾಯಂದಿರಾಗಿದ್ರಂತೂ ಇಡೀ ಕುಟುಂಬನೆ ಬೆಂಬಲಕ್ಕ ನಿಲ್ಲಬೇಕು. ಇಲ್ಲಾಂದ್ರ ಮಗುವಿನ ತ್ಯಾಗ, ಅಮ್ಮನ ಬಲಿದಾನ ಇವೆರಡರ ಸಂಘರ್ಷದೊಳಗ ಅಮ್ಮನೊಳಗೊಂದು ಅಪರಾಧಿ ಭಾವ ಸ್ಥಾಯಿ ಆಗ್ತದ.

ಅಮ್ಮ ಅಂದ್ಕೂಡಲೆ ನಾವು ಹೇಳುದು, ಮಮತೆಯ ಮಡಿಲು, ಕಡಲು, ಕ್ಷಮಯಾಧರಿತ್ರಿ, ಪ್ರೀತಿಯ ಅಕ್ಷಯ ಪಾತ್ರಿ.. ಹಿಂಗ ಏನೆಲ್ಲ ಹೇಳ್ಕೊಂತ, ಬಾರಾಖೂನ್ ಮಾಫ್ ಮಾಡುವ ಒತ್ತಡ ಸೃಷ್ಟಿಸಿಯೇ ಬಿಡ್ತೀವಿ. ಅದರೊಳಗೂ ನಮ್ಮ ಗಾದೆಮಾತುಗಳೂ ಹಂಗೆನೆ, ಅಂಗಾಲಿಗೆ ಹೇಸಿಗಿ ಇಲ್ಲ, ಕರುಳಿಗೆ ನಾಚಿಕಿ ಇಲ್ಲ.. ಅಂತೆಲ್ಲ ಹೇಳ್ತಾವ. ಸದ್ಯಕ್ಕ ನಾವು ನಮ್ಮಮ್ಮನ್ನ, ನಮ್ಮನ್ನ ಇಂಥ ಚೌಕಟ್ಟಿನಿಂದಾಚೆ ತರಬೇಕಾಗೇದ. ಅಮ್ಮ ಅಂದ್ರ ದೇವತೆಯಲ್ಲ, ನಮ್ಹಂಗ ಒಂದು ಜೀವ. ಕಷ್ಟ ಸುಖ ಉಂಡು, ಸುಖವನ್ನೇ ತೋರಿದ ಜೀವ. ಮುನಿಸು ನುಂಗಿ, ಮುಗುಳು ತೋರಿದ ಜೀವ. ಅದಕ್ಕ ಹಿಂಗ ವರ್ಷಕ್ಕ ಒಮ್ಮೆ ಒಂದಷ್ಟು ಹೂ, ಒಂದಷ್ಟು ಉಡುಗೊರೆ ಕೊಟ್ರ ನಮ್ಮ ಋಣ ತೀರಿಸಿದ್ಹಂಗ ಆಯ್ತೇನು?

ಇಷ್ಟಕ್ಕೂ ಈ ಋಣ ಸಂದಾಯದ ಹಿಂದ ಒಂದು ಕೊಳ್ಳುಬಾಕುತನ ಬೆಳೆಸುವ ಹುನ್ನಾರನೇ ಐತಿ. ಬಂಗಾರ ತೊಗೊರಿ, ವಜ್ರ ಕೊಡ್ರಿ, ಪ್ರಯಾಣಕ್ಕ ಕರಕೊಂಡು ಹೋಗ್ರಿ, ಉಡುಸ್ರಿ, ತೊಡಸ್ರಿ, ಚಂದಗಾಣಸ್ರಿ, ಉಣಸ್ರಿ, ಕೆಲಸಕ್ಕ ಅನುವು ಆಗುಹಂಗ ವಾಷಿಂಗ್ ಮಷಿನ್ ಕೊಡಸ್ರಿ, ಕೆಲಸ ಮುಗಿಸಿ ಹೈರಾಣಾಗಿದ್ರ ಮಲಗಾಕ ಒಂದು ಮೆತ್ತನೆಯ ಗಾದಿ ಕೊಡಸ್ರಿ.. ಹಿಂಗ ಕೊಡಸ್ರಿ... ಕೊಡಸ್ರಿ... ಕೊಡಸ್ರಿ.. ಒಟ್ನಾಗ ಖರ್ಚು ಮಾಡ್ರಿ ಅಂತ ಜಾಹೀರಾತು ಹೇಳ್ತಾವ. ಪ್ರೀತಿ ಜಾಹೀರು ಮಾಡಾಕ ಹಿಂಗ ಕೊಡು ಕೊಳ್ಳುವಿಕೆ ಇರಬೇಕು. ಖರೆ, ಇವೆಲ್ಲ ಕೊಡಸೂದ್ರಿಂದ ಅಮ್ಮನ ಋಣ ಸಂದಾಯ ಸಾಧ್ಯ ಆಗ್ತದೇನು? ಮತ್ತ ಏನು ಮಾಡ್ಬೇಕು?

ಅಮ್ಮನ ಇಷ್ಟಾನಿಷ್ಟಗಳನ್ನು ಅರಿಯೂದು ಅದ ಅಲ್ಲ, ಅದೊಂದು ಅದ್ಭುತ ಯಾನ. ಯಾವಾಗ ಅಕಿನ್ನ ಕಣ್ಣಾಗ ಮಿಂಚು ಮೂಡ್ತದ, ಮಳಿ ಬರ್ತದ ಅನ್ನೂದು ಗೊತ್ತಿರಬೇಕು. ನಮ್ಮನ್ನ ನಾವು ಸಮಾಧಾನದಾಗ ಇರಿಸಿಕೊಂಡು, ಸಂತೋಷದಿಂದ ಬದುಕೂದು ಕಲೀಬೇಕು. ಅವಾಗ ತಾಯಿ ಹೊಟ್ಟಿ ತಣ್ಣಗ ಇರ್ತದ. ಅಷ್ಟೇ ಅಲ್ಲ, ಹಂಗೇ ಅವರೂ ಸಮಾಧಾನದಿಂದ ಇರೂಹಂಗ, ಬದುಕು ಆನಂದಿಸುವಂಥ ವಾತಾವರಣ ಸೃಷ್ಟಿಸಬೇಕು.

ಮಾತು ಬರುವ ಮೊದಲು, ನಮ್ಮ ನಗಿ, ನಮ್ಮ ಅಳು, ನಮ್ಮ ಹಸಿವು, ನಮ್ಮ ಹೊಲಸು ಎಲ್ಲವೂ ಆಪ್ತ ಆಗಿರ್ತದ. ದೊಡ್ಡವರಾದ್ಹಂಗ ಆದಂಗ, ಅವರಿಗೆ ನಮ್ಮಿಂದ ನಿರೀಕ್ಷೆಗಳೇ ಬದಲಾಗ್ತಿರ್ತಾವ. ಕೆಲವೊಮ್ಮೆ ನಮ್ಮನ್ನ ನೇಪಥ್ಯಕ್ಕ ತಳ್ಳಿ ತಮ್ಮ ನಿರೀಕ್ಷೆಗಳನ್ನೇ ಪ್ರೀತಿಸುವಷ್ಟು ಅತಿರೇಕನೂ ಕಾಣ್ತದ. ಅದಕ್ಕೇ ಅವರನ್ನು ಅರ್ಥ ಮಾಡಿಕೊಳ್ಳುವ ಯಾನದೊಳಗ ನಾವು ತೊಡಗಿಸಿಕೊಳ್ಳಬೇಕು. ಅಮ್ಮ ಮತ್ತು ಮಕ್ಕಳ ನಡುವೆ ಯಾವಾಗಲೂ ಒಂದು ತಲೆಮಾರಿನ ಅಂತರ ಇರ್ತದ. ತಾನು ಖರೆ ಅನ್ನೂದು ಅವ್ವನ ವಾದ ಆದ್ರ, ತಾನೇ ಖರೆ ಅನ್ನೂದು ಮಕ್ಕಳ ಮಾತಾಗಿರ್ತದ. ಇವೆರಡರ ನಡುವಿನ ಸಂಘರ್ಷ ಕಡಿಮಿಯಾಗಿಸೂದು, ಅವರೊಂದಿಗೆ ಸಮಯ ಕಳಿಯೂದು, ಕರೆಮಾಡಿ ಮಾತಾಡೂದು, ವಿಡಿಯೊ ಕಾಲ್‌ನಾಗ ಪರಸ್ಪರ ನೋಡೂದು, ಏನರೆ ಹೇಳೂಮುಂದ ಸಂಯಮದಿಂದ ಕೇಳೂದು.. ಇವೆಲ್ಲ ಬಹುಶಃ ನಾವು ಕೊಡಿಸುವ ಬಂಗಾರ, ವಜ್ರಕ್ಕಿಂತಲೂ ಹೆಚ್ಚಿನ ಸಂತೋಷ ನೀಡ್ತಾವ. ಆದ್ರ ಅವು ಬ್ಯಾಡಂತಲ್ಲ. ಅವೂ ಬೇಕು. ಅಮ್ಮನ ಹುಟ್ಟುಹಬ್ಬ, ವಿವಾಹ ವಾರ್ಷಿಕೋತ್ಸವ, ಇವೆಲ್ಲ ಇಂಥ ಉಡುಗೊರೆ ಕೊಡಾಕಂತ ಇರುವ ಸಂದರ್ಭಗಳು.

ಜಗತ್ತಿನ ಎಲ್ಲ ಸಂಪತ್ತಿರುವಾಗಲೂ ಮಕ್ಕಳು ಸಣ್ಣೋರಿದ್ದಾಗ, ಚಿತ್ರ ಬರೆದು, ಕ್ರೆಯಾನ್ಸ್‌ನಿಂದ ಬಣ್ಣ ತುಂಬಿ ಮಾಡಿ ಕೊಡುವ ಕಾರ್ಡ್‌ನಿಂದ, ನಾವು ಅವರ ಮಡಿಲಿಗೆ ಇಡುವ ಪುಟ್ಟ ಮಕ್ಕಳವರೆಗೂ ಎಲ್ಲವನ್ನೂ ಆನಂದಿಸುವ ಸ್ಥಿತಿ, ಅವರೊಳಗ ಚಿರಸ್ಥಾಯಿ ಆಗಿರ್ತದ. ಇದು ಉಡುಗೊರೆ ಕೊಡುವ ದಿನ. ಉಡುಗೊರೆಯಾಗಿ, ಅಮ್ಮಾಗ ಖುಷಿಯಿಂದಿರಿಸಾಕ ನಮ್ಮ ಹುಟ್ಟು ಅನ್ನೂದು ಇಡೀ ಜೀವನಯಾನ ಆಗಬೇಕು. ಅದಕ್ಕ, ಅಮ್ಮನ ಹಿಂದಿರುವ ಒಂದು ಜೀವದ ಇಷ್ಟಾನಿಷ್ಟಗಳನ್ನೂ ಗೌರವಿಸುವ, ಗಮನಿಸುವ ಅಂತಃಕರುಣೆಯನ್ನು, ಅದೇ ತಾಯ್ತನವನ್ನ ನಾವೂ ಬೆಳಸ್ಕೊಬೇಕು. ಅದೇ ಅವರಿಗೆ ಕೊಡುವ ಉಡುಗೊರೆ.

ಹುಬ್ಬಿನ ಹೊಟ್ಟಿಗೆ ಪರಿಹಾರ

ವಲ್ಲರಿ

ಸೌಂದರ್ಯ

ಮಹಿಳೆಯರು ಸೌಂದರ್ಯ ಪ್ರಿಯರು. ಮುಖದ ಅಂದ ಚೆಂದಕ್ಕೆ ವಿವಿಧ ರೀತಿಯ ಪ್ರಯತ್ನಗಳನ್ನು ಮಾಡುತ್ತಿರುತ್ತಾರೆ. ಅದರಲ್ಲೂ 'ಹುಬ್ಬ'ನ್ನು ಆರೋಗ್ಯವಾಗಿಟ್ಟುಕೊಳ್ಳಲು ತುಂಬಾ ಕಾಳಜಿ ವಹಿಸುತ್ತಾರೆ. ಏಕೆಂದರೆ, ಹುಬ್ಬುಗಳು ವದನಕ್ಕೆ ಮೆರುಗು ನೀಡುವುದಲ್ಲದೇ, ಕಣ್ಣುಗಳನ್ನು ರಕ್ಷಿಸುವಲ್ಲಿ ಸಹಕಾರಿಯಾಗಿವೆ.

ಇಂಥ ಹುಬ್ಬುಗಳಿಗೆ ಹೊಟ್ಟಿನ(ಡ್ಯಾಂಡ್ರಫ್) ಸಮಸ್ಯೆ ತೀವ್ರವಾಗಿ ಕಾಡುತ್ತದೆ. ಇದರಿಂದ ಮುಖದ ಸೌಂದರ್ಯ ಕುಂದುವ ಜೊತೆಗೆ, ಕಿರಿ ಕಿರಿ ಉಂಟು ಮಾಡುತ್ತದೆ.

ಈ ಸಮಸ್ಯೆಗೆ ಕಾರಣವೇನು?

ತಲೆ ಹೊಟ್ಟಿನ ಸಮಸ್ಯೆ ಇರುವವರಲ್ಲಿ, ತಲೆಯಲ್ಲಿಯಾಗುವ ಸೋರಿಯಾಸಿಸ್(ಸ್ಕಾಲ್ಪ್), ಒಣಚರ್ಮ, ದೇಹದಲ್ಲಿ ಸೋರಿಯಾಸಿಸ್ ಇರುವವರಲ್ಲಿ ಹುಬ್ಬಿನ ಹೊಟ್ಟಿನ ಸಮಸ್ಯೆ ಕಾಣಿಸಿಕೊಳ್ಳುತ್ತದೆ. ಈ ಸಮಸ್ಯೆಗಳಿರುವವರು ಸರಿಯಾದ ಚಿಕಿತ್ಸೆ ತಗೆದುಕೊಂಡರೆ, ಹುಬ್ಬಿನ ಹೊಟ್ಟು ಕಡಿಮೆಯಾಗುತ್ತದೆ.

ಹುಬ್ಬಿನಲ್ಲಿ ಹೊಟ್ಟಾಗಿದ್ದರೆ, ತುರಿಕೆ/ ನವೆ ಬರುತ್ತದೆ. ಸ್ವಲ್ಪ ಉರಿ ಉರಿ ಕಾಣಿಸಿಕೊಳ್ಳುತ್ತದೆ. ಇದು ದೀರ್ಘಕಾಲ ಇರುತ್ತದೆ. ದೇಹದ ಯಾವುದೇ ಭಾಗದಲ್ಲಿ ಚರ್ಮದ ಸಮಸ್ಯೆ ಇದ್ದರೂ, ಹುಬ್ಬಿನಲ್ಲಿ ಈ ಸಮಸ್ಯೆ ಕಾಣಿಸಿಕೊಳ್ಳುತ್ತದೆ.

ಪರಿಹಾರಗಳು

- ಶುಭ್ರವಾದ ಬಟ್ಟೆಯನ್ನು ತಂಪಾದ ನೀರಿನಲ್ಲಿ ಅದ್ದಿ ಹಿಂಡಿ ಹುಬ್ಬುಗಳನ್ನು ಸೂಕ್ಷ್ಮವಾಗಿ ಸವರುತ್ತಿರಿ. ಈ ರೀತಿ ಪ್ರತಿನಿತ್ಯ 15 ನಿಮಿಷಗಳ ಕಾಲ ಮಾಡಿ.
- ತೆಂಗಿನಕಾಯಿ ನೀರು, ಬೆಣ್ಣೆಹಣ್ಣು, ಟೀ ಟ್ರೀ ತರಹದ ನೈಸರ್ಗಿಕ ತೈಲವನ್ನು ಹುಬ್ಬುಗಳಿಗೆ ಹಚ್ಚುವುದರಿಂದ ಹೊಟ್ಟಾಗುವುದನ್ನು ತಪ್ಪಿಸಬಹುದು.
- ಹುಬ್ಬುಗಳಿಗೆ ಆಲಿವ್ ಎಣ್ಣೆ ಹಚ್ಚಿ ಕೆಲ ಕಾಲ ನುಣುಪಾಗಿ ಮಸಾಜ್ ಮಾಡಿ. ನಂತರ ತೊಳೆಯಿರಿ.

ಆಹಾರವೂ ಮುಖ್ಯ

- ದೇಹದ ಇತರ ಭಾಗಗಳಲ್ಲಿ ಚರ್ಮದ ಸಮಸ್ಯೆ ಇದ್ದರೆ, ಕೇವಲ ಹುಬ್ಬಿನ ಚಿಕಿತ್ಸೆಯಿಂದ ಪ್ರಯೋಜನವಾಗುವುದಿಲ್ಲ. ಹಾಗಾಗಿ, ಚರ್ಮದ ಸಮಸ್ಯೆಗೂ ಚಿಕಿತ್ಸೆ ಪಡೆಯುವ ಅಗತ್ಯವಿದೆ.
- ಚಿಕಿತ್ಸೆಯ ಜೊತೆಗೆ, ಹೆಚ್ಚು ದ್ರವಾಂಶ, ತೈಲಾಂಶವಿರುವ (ಬಾದಾಮಿ, ಶೇಂಗಾ.. ಇತ್ಯಾದಿ) ಆಹಾರ ಸೇವಿಸಬೇಕು.
- ಒಂದು ಚಮಚ ಅರಿಸಿನವನ್ನು ಬಿಸಿಹಾಲು ಅಥವಾ ಬಿಸಿ ನೀರಿಗೆ ಹಾಕಿ ಕುಡಿಯಬಹುದು.
- ಚಳಿ ಮತ್ತು ಮಳೆಗಾಲದಲ್ಲಿ ಈ ಸಮಸ್ಯೆ ಹೆಚ್ಚಾಗಿ ಕಾಣಿಸಿಕೊಳ್ಳುತ್ತದೆ. ಹಾಗಾಗಿ, ಆ ಕಾಲಗಳಿಗೆ ಮುನ್ನವೇ ಎಚ್ಚರಿಕೆ ಕ್ರಮಗಳನ್ನು ತೆಗೆದುಕೊಳ್ಳವುದು ಒಳ್ಳೆಯದು.

ಎಚ್ಚರಿಕೆ ಕ್ರಮಗಳು

- ಹುಬ್ಬು ಕಣ್ಣಿನ ಮೇಲ್ಭಾಗದಲ್ಲಿರುವುದರಿಂದ, ಯಾವುದೇ ಚಿಕಿತ್ಸೆ ಮಾಡಿಕೊಳ್ಳುವಾಗ ಎಚ್ಚರಿಕೆ ಇರಬೇಕು. ಕಣ್ಣಿಗೆ ಬೀಳದಂತೆ ರಕ್ಷಣೆ ಮಾಡಿಕೊಳ್ಳಬೇಕು.
- ಮುಖ ತೊಳೆಯಲು ಬಳಸುವ ಸೋಪ್, ಫೇಸ್‌ವಾಷ್, ಮೇಕಪ್‌ಗೆ(ಪ್ರಸಾಧನ) ಬಳಸುವ ಕ್ರೀಮ್‌ಗಳನ್ನು, 'ನಮಗೆ ಅಲರ್ಜಿ ಆಗುತ್ತೆಯೇ' ಎಂಬುದನ್ನೂ ಪರೀಕ್ಷಿಸಿ ನಂತರ ಬಳಸಬೇಕು.
- ಚರ್ಮದ ಅಲರ್ಜಿ ಸಮಸ್ಯೆ ಇದ್ದವರಿಗೆ ಈ ಹುಬ್ಬಿನ ಹೊಟ್ಟಿನ ಸಮಸ್ಯೆ ಹೆಚ್ಚು ಬಾಧಿಸುತ್ತದೆ. ಈ ಬಗ್ಗೆಯೂ ಎಚ್ಚರವಿರಬೇಕು.

(ಪೂರಕ ಮಾಹಿತಿ: ಡಾ. ವಸುಂಧರಾ ಭೂಪತಿ)

ಗರ್ಭಧಾರಣೆಯನ್ನು ನೈಸರ್ಗಿಕವಾಗಿ ತಡೆಗಟ್ಟುವ ವಿಧಾನ ಯಾವುದು?

ಸ್ಪಂದನ

ಡಾ. ವೀಣಾ ಎಸ್. ಭಟ್

1. ನ್ಯಾಚುರಲ್ ಬರ್ತ್ ಕಂಟ್ರೋಲ್ ಹೇಗೆ? ನಮ್ಮ ಮಗುವಿಗೆ ಇನ್ನೂ 1 ವರ್ಷ, 1 ತಿಂಗಳು. ಇನ್ನೊಂದು ಮಗು ಪಡೆಯಲು ಪ್ರಯತ್ನ ಮಾಡಬಹುದೇ?

ಹೆಸರು, ಊರು ಬೇಡ

ನಿಮ್ಮ ಮಗುವಿಗೆ ಕೇವಲ 1 ವರ್ಷವಾಗಿರುವುದರಿಂದ ಇನ್ನೊಂದು ಮಗು ಪಡೆಯಲು ಇನ್ನೂ ಕನಿಷ್ಠ 2 ವರ್ಷವಾದರೂ ಅಂತರವಿರುವುದು ಒಳ್ಳೆಯದು. ಶೇ 60ಕ್ಕೂ ಹೆಚ್ಚು ಜನ ಒಂದು ಮಗುವಾಗಿ ಇನ್ನೊಂದು ಮಗು ಬೇಡವೆಂದು ಅಂದುಕೊಳ್ಳುತ್ತಿರುವಾಗಲೇ ಗರ್ಭ ಧರಿಸಿಬಿಡುತ್ತಾರೆ.

ಎರಡು ಮಕ್ಕಳ ನಡುವೆ 2 ರಿಂದ 3 ವರ್ಷವಾದರೂ ಅಂತರವಿಡಲು ತಾತ್ಕಾಲಿಕವಾಗಿ ಗರ್ಭಧಾರಣೆ ತಡೆಗಟ್ಟುವುದಕ್ಕಾಗಿ ಹಲವು ವಿಧಾನಗಳಿವೆ. ನೈಸರ್ಗಿಕ ವಿಧಾನಗಳಾದ ಋತುಫಲಪ್ರದ ದಿನಗಳಲ್ಲಿ (ಪ್ರತಿ ಋತುಚಕ್ರದ 8 ರಿಂದ 18ನೇ ದಿನಗಳವರೆಗೆ) ಲೈಂಗಿಕ ಸಂಪರ್ಕ ಮಾಡದಿರುವುದು, ನಿಮ್ಮ ಪತಿ ಕೂಡ ಲೈಂಗಿಕ ಸಂಪರ್ಕದ ಸಮಯದಲ್ಲಿ ವೀರ್ಯವನ್ನು ದೇಹದ ಹೊರಗೆ ಬಿಡುವುದರಿಂದ ಗರ್ಭಧಾರಣೆಯಾಗುವುದಿಲ್ಲ. ಬ್ಯಾರಿಯರ್ ವಿಧಾನಗಳಾದ - ಪುರುಷರ ಕಾಂಡೋಮ್ ಬಳಕೆ ಲೈಂಗಿಕ ಸಂಪರ್ಕದ ಸಮಯದಲ್ಲಿ ವೀರ್ಯವನ್ನು ಸಂಗ್ರಹಿಸಿಟ್ಟು ಗರ್ಭಧಾರಣೆ ತಡೆಗಟ್ಟುತ್ತದೆ. ಮಹಿಳೆಯರ ಡಯಾಫ್ರಮ್ ಬಳಕೆ - ಹೆಣ್ಣುಮಕ್ಕಳು ಗರ್ಭಕೊರಳನ್ನು ಸುತ್ತುವರೆಯುವಂತೆ ತೆಳುಪೊರೆಯಂತಹ ಡಯಾಫ್ರಮ್ ಬಳಸಬಹುದಾದರೂ ನಮ್ಮ ದೇಶದಲ್ಲಿ ಹೆಚ್ಚು ಬಳಕೆಯಲ್ಲಿಲ್ಲ. ಇನ್ನು ವೀರ್ಯನಾಶಕಗಳನ್ನು ಕೂಡ ಬಳಸಬಹುದು. ಇವುಗಳಲ್ಲಿ – ಜೆಲ್ಲಿ, ಕ್ರೀಮ್, ಪೆಸರಿ, ಮಾತ್ರೆಗಳ ರೂಪದಲ್ಲಿ ಲಭ್ಯವಿರುವ ಇವುಗಳನ್ನು ಲೈಂಗಿಕ ಸಂಪರ್ಕಕ್ಕೆ ಮುಂಚೆ ಯೋನಿದ್ವಾರದ ಬಳಿ ಇಟ್ಟುಕೊಳ್ಳಬೇಕು. ಗರ್ಭಕೋಶದ ಒಳಗಡೆ ಇಡುವ ಉಪಕರಣಗಳಾದ ಕಾಪರ್–ಟಿ (3 ರಿಂದ 5 ವರ್ಷಗಳು), ಪ್ರೊಜೆಸ್ಟಿರಾನ್ ಹಾರ್ಮೋನ್ ಹೊಂದಿರುವ ಎಲ್‌ಎನ್‌ಜಿಐಯುಡಿ (5 ವರ್ಷಗಳ ದೀರ್ಘಕಾಲ) ಬಳಸುವುದು. ಹಾರ್ಮೋನುಗಳನ್ನು ಹೊಂದಿರುವ ಮಾತ್ರೆಗಳು (ಓಸಿ ಪಿಲ್ಸ್), 3 ತಿಂಗಳಿಗೊಮ್ಮೆ ತೆಗೆದುಕೊಳ್ಳುವ ಹಾರ್ಮೋನು ಇಂಜೆಕ್ಷನ್‌ಗಳು (ಡಿಎಂಪಿಎ ಇತ್ಯಾದಿ), ಹಾರ್ಮೋನ್ ಇಂಪ್ಲಾಂಟ್‌ಗಳು ಕೂಡ ಪ್ರಚಲಿತದಲ್ಲಿದೆ. ನಿಮಗೆ ಯಾವುದು ಸೂಕ್ತವೆನಿಸುತ್ತದೆಯೋ ಅದರ ಸಾಧಕ ಬಾಧಕಗಳನ್ನು ಅರಿತುಕೊಂಡು ಬಳಸುವುದು ಒಳ್ಳೆಯದು. ಕಾಪರ್–ಟಿ ನಿಮಗೆ ಹೆಚ್ಚೇನು ದುಷ್ಪರಿಣಾಮ ಕೊಡದಂತಹ ಸಾಧನವಾದ್ದರಿಂದ ಇದನ್ನೇ ನೀವು ಬಳಸಬಹುದು. ಅದು ಸರಿಹೋಗದಿದ್ದಲ್ಲಿ ವೈದ್ಯರ ಸಲಹೆಯ ಮೇರೆಗೆ ನೀವು ಬೇರೆ ವಿಧಾನಗಳನ್ನು ಅನುಸರಿಸಿ.

ಇನ್ನಷ್ಟು ಪ್ರಶ್ನೋತ್ತರಗಳಿಗೆ prajavani.net ನೋಡಿ

ಸ್ಪಂದನ...

ಮುಟ್ಟು, ಗರ್ಭಧಾರಣೆ, ಋತುಬಂಧ, ಹಾರ್ಮೋನ್ ಮುಂತಾದ ಸಮಸ್ಯೆಗಳಿದ್ದರೆ ಪ್ರಶ್ನೆಗಳನ್ನು ನಮಗೆ ಕಳುಹಿಸಬಹುದು. ನಿಮ್ಮ ಪ್ರಶ್ನೆಗಳಿಗೆ ಪ್ರಸೂತಿ ಮತ್ತು ಸ್ತ್ರೀರೋಗ ತಜ್ಞೆ ಡಾ. ವೀಣಾ ಎಸ್. ಭಟ್ ಅವರು ಉತ್ತರಿಸಲಿದ್ದಾರೆ. ಪ್ರಶ್ನೆಗಳನ್ನು bhoomika@prajavani.co.in ಗೆ ಕಳಿಸಬಹುದು.